# ಕರ್ನಾಟಕ ವಿಧಾನಪರಿಷತ್ತಿನ ನಡವಳಿಕೆಗಳು
# KARNATAKA LEGISLATIVE COUNCIL DEBATES

ಅಧಿಕೃತ ವರದಿ

OFFICIAL REPORT

೧೨೮ನೇ ಅಧಿವೇಶನ

128th Session

(27ನೇ ಏಪ್ರಿಲ್ 2015)

**(27th APRIL 2015)**

ಸಂಪುಟ ೪೩೨ ಕ್ರಮಾಂಕ (೩)

Volume 432 No. (3)

ಕರ್ನಾಟಕ ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

**Karnataka Legislature Secretariat, Bengaluru**

# ಕರ್ನಾಟಕ ವಿಧಾನಪರಿಷತ್ತಿನ ನಡವಳಿಕೆಗಳು
# KARNATAKA LEGISLATIVE COUNCIL DEBATES

ಅಧಿಕೃತ ವರದಿ

OFFICIAL REPORT

೧೨೮ನೇ ಅಧಿವೇಶನ

128th Session

(27ನೇ ಏಪ್ರಿಲ್ 2015)

**(27th APRIL 2015)**

ಸಂಪುಟ ೪೩೨ ಕ್ರಮಾಂಕ (೩)

Volume 432 No. (3)

ಕರ್ನಾಟಕ ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

**Karnataka Legislature Secretariat, Bengaluru**

# ಕರ್ನಾಟಕ ವಿಧಾನ ಪರಿಷತ್ತು

ಸೋಮವಾರ,

27ನೇ ಏಪ್ರಿಲ್ 2015

## ವಿಷಯಾನುಕ್ರಮಣಿಕೆ


1. ಸಂತಾಪ ಸೂಚನೆ 3–8

ನೆರೆಯ ರಾಜ್ಯವಾದ ನೇಪಾಳ ಹಾಗೂ ಉತ್ತರ ಭಾರತದ ರಾಜ್ಯಗಳಲ್ಲಿ ಸಂಭವಿಸಿದ ಭೀಕರ ಭೂಕಂಪದಲ್ಲಿ 2,500ಕ್ಕಿಂತಲೂ ಅಧಿಕ ಜನರು ದುರ್ಮರಣಕ್ಕೀಡಾಗಿರುವ ಬಗ್ಗೆ.

ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು)
ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧಪಕ್ಷದ ನಾಯಕರು)
ಶ್ರೀ ಬಸವರಾಜ ಹೊರಟ್ಟಿ
ಶ್ರೀ ವಿ.ಎಸ್. ಉಗ್ರಪ್ಪ
ಶ್ರೀ ಬಿ. ರಾಮಕೃಷ್ಣ

2. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯ 9–15

(ಅ) ಸದನದ ಕಲಾಪವನ್ನು ವೀಕ್ಷಿಸಲು ಸಾರ್ವಜನಿಕರನ್ನು ಬಿಡದಿರುವ ಬಗ್ಗೆ.

ಶ್ರೀ ಅರುಣ್ ಶಹಾಪುರ್
ಶ್ರೀ ವೈ.ಎ. ನಾರಾಯಣಸ್ವಾಮಿ
ಶ್ರೀ ವಿ. ಸೋಮಣ್ಣ
ಶ್ರೀ ಕೆ.ಎಸ್. ಈಶ್ವರಪ್ಪ
ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು)
ಶ್ರೀ ವೀರಣ್ಣ ಮತ್ತಿಕಟ್ಟಿ
ಶ್ರೀ ಆರ್.ವಿ. ವೆಂಕಟೇಶ್
ಶ್ರೀ ಕೆ.ಬಿ. ಶಾಣಪ್ಪ
ಶ್ರೀ ಗೋ. ಮಧುಸೂದನ್
ಶ್ರೀ ವಿ.ಎಸ್. ಉಗ್ರಪ್ಪ
ಶ್ರೀ ನಾರಾಯಣ ಸಾ ಭಾಂಡಗೆ

(ಆ) ಉಡುಪಿಯಲ್ಲಿ ಆಸ್ಪತ್ರೆ ನಿರ್ಮಾಣದ ಗುತ್ತಿಗೆ ಮೊತ್ತ ಪಾವತಿಸುವ ಕುರಿತು

ಕ್ಯಾಪ್ಟನ್ ಗಣೇಶ್ ಕಾರ್ಣಿಕ್
ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು)

(ಇ) ನಾರ್ವೆ ಮಾದರಿಯ ಗೋಡೆ ನಿರ್ಮಾಣದಿಂದ ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳ ಗ್ರಾಮಗಳನ್ನು ರಕ್ಷಿಸಬಹುದಾಗಿದೆ ಎಂಬ ವರದಿಯ ಕುರಿತು.

ಶ್ರೀ ಅರುಣ್ ಶಹಾಪುರ್
ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು)

**3. ಸಚಿವರ ಹೇಳಿಕೆ** 15–16

ತುಮಕೂರು ಜಿಲ್ಲೆ,ತುರುವೇಕೆರೆ ತಾಲ್ಲೂಕಿನ ಮಲ್ಲಘಟ್ಟ ಕೆರೆಯ ಮೀನುಪಾಶವಾರು ಹಕ್ಕನ್ನು 5 ವರ್ಷಗಳ ಅವಧಿಗೆ ಮೀನುಗಾರರ ಸಹಕಾರ ಸಂಘ (ನಿ) ಮಲ್ಲಘಟ್ಟ, ತುರುವೇಕೆರೆ ತಾಲ್ಲೂಕು ಸಂಘಕ್ಕೆ ನೇರ ಗುತ್ತಿಗೆ ನೀಡುವ ಬಗ್ಗೆ.

ಶ್ರೀ ಕೆ. ಅಭಯಚಂದ್ರ (ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು)

**4. ನಿಲುವಳಿ ಸೂಚನೆ** 17–37

ವಿಧಾನ ಪರಿಷತ್ತಿನ ಸೃಷ್ಟಿಕರ್ತ  ವಿಧಾನ ಸಭೆ ಎಂದು ಕಾನೂನು ಸಚಿವರು ನೀಡಿರುವ ಹೇಳಿಕೆ ಬಗ್ಗೆ.

ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧಪಕ್ಷದ ನಾಯಕರು)
ಶ್ರೀ ಬಸವರಾಜ ಹೊರಟ್ಟಿ
ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು)
ಶ್ರೀ ವಿ. ಸೋಮಣ್ಣ
ಶ್ರೀ ಕೆ.ಬಿ. ಶಾಣಪ್ಪ
ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು)
ಶ್ರೀ ಜಗ್ಗೇಶ್
ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
ಶ್ರೀ ರಾಮಚಂದ್ರಗೌಡ
ಶ್ರೀ ವಿ.ಎಸ್. ಉಗ್ರಪ್ಪ
ಶ್ರೀ ಗೋ. ಮಧುಸೂದನ್

**5. ಸಚಿವರ ಹೇಳಿಕೆ** 38–40

ಗೋಪಾಡಿ ಗ್ರಾಮದ ಬೆರ್ಕಿಕಡು ಎಂಬಲ್ಲಿ ಅಪರಿಚಿತರು ಇಂದಿರಾ ಎಂಬುವರ ಮೇಲೆ ಲೈಂಗಿಕ ಆಕ್ರಮಣ ನಡೆಸಿ ಕೊಲೆ ಮಾಡಿರುವ ಬಗ್ಗೆ.

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು)

**6. ಶಾಸನ ರಚನೆ** 41–142

ವಿಧೇಯಕಗಳ ಪರ್ಯಾಲೋಚನೆ, ಅಂಗೀಕಾರ ಮತ್ತು ಪರಿಶೀಲನಾ ಸಮಿತಿಗೆ ಒಪ್ಪಿಸುವ ಬಗ್ಗೆ.

ಕರ್ನಾಟಕ ನಗರಪಾಲಿಕೆಗಳ (ತಿದ್ದುಪಡಿ) ವಿಧೇಯಕ 2015ರ
ಮುಂದುವರೆದ ಚರ್ಚೆ

ಶ್ರೀ ಇ. ಕೃಷ್ಣಪ್ಪ
ಶ್ರೀ ರಾಮಚಂದ್ರಗೌಡ
ಶ್ರೀ ವಿ.ಎಸ್. ಉಗ್ರಪ್ಪ
ಶ್ರೀ ವಿ. ಸೋಮಣ್ಣ
ಶ್ರೀ ಬಸವರಾಜ ಹೊರಟ್ಟಿ
ಶ್ರೀ ಜಗ್ಗೇಶ್
ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
ಶ್ರೀ ಸಿದ್ದರಾಮಯ್ಯ
ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು
ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು)
ಶ್ರೀ ಗೋ. ಮಧುಸೂದನ್

(ವಿಧೇಯಕವನ್ನು ಪರಿಶೀಲನಾ ಸಮಿತಿಗೆ ಒಪ್ಪಿಸಲಾಯಿತು)

~~~~~~~~~~~~~~~~~~~~~~
~~~~~~~~~~~~~~~~~~~~~~

ಕರ್ನಾಟಕ ವಿಧಾನ ಪರಿಷತ್ತು

*ಸೋಮವಾರ, 27ನೇ ಏಪ್ರಿಲ್ 2015*

ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಪೂರ್ವಾಹ್ನ 11 ಗಂಟೆ 35 ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿ (ಶ್ರೀ ಡಿ.ಹೆಚ್. ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.

~~~~~~~
~~~~~~~

## 1. ಸಂತಾಪ ಸೂಚನೆ

"ನೆರೆಯ ರಾಜ್ಯವಾದ ನೇಪಾಳ ಹಾಗೂ ಉತ್ತರ ಭಾರತದ ರಾಜ್ಯಗಳಲ್ಲಿ ಸಂಭವಿಸಿದ ಭೀಕರ ಭೂಕಂಪನದಲ್ಲಿ 2,500ಕ್ಕಿಂತಲೂ ಅಧಿಕ ಜನರು ದುರ್ಮರಣಕ್ಕೀಡಾಗಿರುವ ಬಗ್ಗೆ."

– – – –

**ಸಭಾಪತಿಯವರು:–** ನೆರೆಯ ರಾಷ್ಟ್ರವಾದ ನೇಪಾಳ ಹಾಗೂ ಉತ್ತರ ಭಾರತದ ರಾಜ್ಯಗಳಲ್ಲಿ ಮೊನ್ನೆ ಶನಿವಾರ, ದಿನಾಂಕ: 25–04–2015 ರಂಧು ಸಂಭವಿಸಿದ ಭೀಕರ ಭೂಕಂಪನದಲ್ಲಿ 2,500ಕ್ಕಿಂತಲೂ ಅಧಿಕ ಜನರು ದುರ್ಮರಣಕ್ಕೀಡಾಗಿರುವುದು ಅತ್ಯಂತ ಭೀಕರ ದುರಂತವಾಗಿರುತ್ತದೆ. ಲಕ್ಷಾಂತರ ಜನರು ನಿರ್ವಸಿತರಾಗಿರುತ್ತಾರೆ. ಈ ಸಂದರ್ಭದಲ್ಲಿ ಭಾರತ ಸರ್ಕಾರವು ಅಪರೇಷನ್ ಮೈತ್ರಿ ಮೂಲಕ ನಿರಂತರ ನೆರವು ಹಾಗೂ ಸಹಾಯ ಹಸ್ತ ನೀಡಿ ನಮ್ಮ ದೇಶದ ಸೈನಿಕರು ಹಗಲಿರುಳು ಶ್ರಮಿಸುತ್ತಿರುವರು.

ಪ್ರಕೃತಿ ವಿಕೋಪದಿಂದು ಸಾವಿಗೀಡಾದ ನಾಗರೀಕರ ಹಾಗೂ ಮಕ್ಕಳ ಕುಟುಂಬವರ್ಗದವರಿಗೆ ದುಃಖ ಹಾಗೂ ನೋವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲೆಂದು ಈ ಸದನದ ಮೂಲಕ ಪ್ರಾರ್ಥಿಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ದಿನಾಂಕ:25.04.2015ರಂದು ಶನಿವಾರ ಬೆಳಿಗ್ಗೆ 11:56 ಗಂಟೆಗೆ ನೆರೆಯ ನೇಪಾಳ ದೇಶದಲ್ಲಿ ಸಂಭವಿಸಿರುವಂತಹ ಭೀಕರ ಭೂಕಂಪ ನಿಜವಾಗಿಯೂ ಇಡೀ ಮನುಕುಲವನ್ನೇ ಆತಂಕಕ್ಕೆ ಒಡ್ಡುವಂತಹ ಒಂದು ಭಯಾನಕ ಧಾರುಣ ಸ್ಥಿತಿಯನ್ನು ಉಂಟುಮಾಡಿದೆ. 'ಭಾರತ ಎಂದರೆ ನೇಪಾಳ; ನೇಪಾಳ ಎಂದರೆ ಭಾರತ' ಎನ್ನುವಂತಹ ಒಂದು ಭಾವನಾತ್ಮಕವಾದಂತಹ ಸಂಬಂಧವಿರುವುದರಿಂದ ಈ ಘಟನೆಯಿಂದಾಗಿ ನಮ್ಮ ರಾಷ್ಟ್ರದ 130 ಕೋಟಿ ಜನತೆಗೆ ಬಹಳಷ್ಟು ಆಘಾತ ಉಂಟಾಗಿದೆ. ಸುಮಾರು 3480ಕ್ಕೂ ಹೆಚ್ಚು ಜನರು ಈ ದುರಂತದಲ್ಲಿ ಮೃತಪಟ್ಟಿದ್ದಾರೆ ಎನ್ನುವಂತಹ ಅಂಶ ಈ ದಿನ ಬೆಳಿಗ್ಗೆ ದೃಶ್ಯ ಮಾಧ್ಯಮದಲ್ಲಿ ವರದಿಯಾಗಿದ್ದು, 5000ಕ್ಕಿಂತ ಹೆಚ್ಚು ಜನರು ಈ ದುರಂತದಲ್ಲಿ ಗಾಯಗೊಂಡಿರುವುದಾಗಿ ಅಂದಾಜಿಸಲಾಗಿದೆ.

ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ತಿಳಿಸಿರುವಂತೆ ನಮ್ಮ ಭಾರತ ದೇಶದ ಜೊತೆಗೆ ನೇಪಾಳ ದೇಶ ಬಹಳಷ್ಟು ಭಾವನಾತ್ಮಕ ಸಂಬಂಧವನ್ನು ಹೊಂದಿರುವಂತಹ ಸಂದರ್ಭದಲ್ಲಿ ನೇಪಾಳದಲ್ಲಿ ಸಂಭವಿಸಿರುವಂತಹ ಈ ದುರಂತದಿಂದ ನಮ್ಮೆಲ್ಲರಿಗೂ ಆತಂಕ ಉಂಟಾಗಿದ್ದು, ಅವರ ದುಃಖದಲ್ಲಿ ನಾವು ಸಹ ಭಾಗಿಯಾಗಿದ್ದೇವೆ. ಅದರ ಜೊತೆಗೆ ನಮ್ಮ ದೇಶದ ಬಿಹಾರ, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳದಲ್ಲಿಯೂ ಸಹ ಭೂಕಂಪ ಸಂಭವಿಸಿದ್ದು, ಬಿಹಾರದಲ್ಲಿ 45 ಜನ, ಉತ್ತರ ಪ್ರದೇಶದಲ್ಲಿ 8 ಜನ, ಪಶ್ಚಿಮ ಬಂಗಾಳದಲ್ಲಿ 3 ಜನ ಸಾವನ್ನಪ್ಪಿದ್ದಾರೆ. ಹೀಗಾಗಿ ಈ ಭೂಕಂಪ ಪರಿಸ್ಥಿತಿ ನೇಪಾಳಕ್ಕೆ ಮಾತ್ರ ಸೀಮಿತವಾಗಿಲ್ಲ, ನಮ್ಮ ದೇಶದಲ್ಲಿಯೂ ಇದರ ಪರಿಣಾಮ ಉಂಟಾಗಿದ್ದು, ಅಲ್ಲಿ ನಮ್ಮ ಕರ್ನಾಟಕದ ಸುಮಾರು 200 ಜನರು ಸಿಕ್ಕಿಕೊಂಡಿದ್ದಂತಹ ಸಂದರ್ಭದಲ್ಲಿ ಅವರನ್ನು ವಾಪಸ್ ಕರೆತರುವಂತಹ ಕೆಲಸವನ್ನು ನಮ್ಮ ರಾಜ್ಯ ಸರ್ಕಾರ ಬಹಳ ನಿಷ್ಠೆಯಿಂದ ಮಾಡಿದೆ ಎನ್ನುವಂತಹ ವಿಚಾರವನ್ನು ಈ ಸಂದರ್ಭದಲ್ಲಿ ನಾನು ಸದನದ ಗಮನಕ್ಕೆ ತರಬಯಸುತ್ತೇನೆ.

ರಕ್ಷಣಾ ಕಾರ್ಯದ ಉಸ್ತುವಾರಿಗಾಗಿ ಈಗಾಗಲೇ ಶ್ರೀ ಪಂಕಜ್ ಕುಮಾರ್ ಪಾಂಡೆ ಐ.ಎ.ಎಸ್. ಮತ್ತು ಶ್ರೀ ಉಮೇಶ್ ಐ.ಪಿ.ಎಸ್. ಅಧಿಕಾರಿಗಳನ್ನು ಕಳುಹಿಸಲಾಗಿದ್ದು, ಅವರು ಭಾನುವಾರ ಸಂಜೆಯ ವೇಳೆಗೆ ನೇಪಾಳವನ್ನು ತಲುಪಿದ್ದಾರೆ. 10 ಜನ ಪರಿಣಿತ ವೈದ್ಯರನ್ನು ಹಾಗೂ ಸುಮಾರು 200 ಕಿಲೋ ಗ್ರಾಂನಷ್ಟು ಔಷಧಿಗಳನ್ನು ಸಹ ನಮ್ಮ ಸರ್ಕಾರದ ವತಿಯಿಂದ ನೇಪಾಳಕ್ಕೆ ಕಳುಹಿಸಿಕೊಟ್ಟಿದೆ. ಅಲ್ಲಿ ಸಿಕ್ಕಿಕೊಂಡು ಆತಂಕಕ್ಕೊಳಗಾಗಿದ್ದ ಕನ್ನಡಿಗರನ್ನು ರೈಲು ಮತ್ತು ವಿಮಾನದ ಮುಖಾಂತರ ಕರ್ನಾಟಕ ಭವನಕ್ಕೆ ಕರೆಸಿಕೊಂಡು ಅಲ್ಲಿ ಅವರಿಗೆ ಮತ್ತೇನು ವ್ಯವಸ್ಥೆಯನ್ನು ಮಾಡಬೇಕೋ ಆ ಎಲ್ಲ ವ್ಯವಸ್ಥೆಗಳನ್ನು ಸರ್ಕಾರ ಸುಸಂಬದ್ಧವಾಗಿ ಅತ್ಯುತ್ತಮ ರೀತಿಯಿಂದ ಮಾಡುತ್ತಿದ್ದು, ಪ್ರತಿಯೊಬ್ಬ ಕನ್ನಡಿಗರು ಸಹ ಸುರಕ್ಷಿತವಾಗಿ ರಾಜ್ಯಕ್ಕೆ ಮರಳಲಿಕ್ಕೆ ಕೂಡ ನಮ್ಮ ಸರ್ಕಾರ ಕ್ರಮ ಕೈಗೊಂಡಿದೆ.

ಭಾರತ ಸರ್ಕಾರವು ಕೂಡ ಅತ್ಯುತ್ತಮವಾದಂತಹ ಸಹಾಯ ಸಹಕಾರ ನೀಡಿರುವುದನ್ನು ನಾವು ಇಲ್ಲಿ ನೆನಪಿಸಿಕೊಳ್ಳಬಯಸುತ್ತೇನೆ. ಏಕೆಂದರೆ, ಇಡೀ ಐರೋಪ್ಯ ಒಕ್ಕೂಟವೇ ಇದರಲ್ಲಿ ಭಾಗಿಯಾಗಿ ಬಹಳಷ್ಟು ತಜ್ಞರನ್ನು ಕಳುಹಿಸಿಕೊಟ್ಟಿದ್ದಾರೆ, ಹಾಗೂ ಐರೋಪ್ಯ ಒಕ್ಕೂಟದ ಅಮೇರಿಕಾ ಮತ್ತು ಇಂಗ್ಲೆಂಡ್ ರಕ್ಷಣಾ ಸಾಮಗ್ರಿಗಳನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಒದಗಿಸಿಸುವಂತಹ ಒಂದು ವ್ಯವಸ್ಥೆ ಮಾಡಿದೆ. ಇಡೀ ಪ್ರಪಂಚದ ಇಂತಹ ದಾರುಣಿ ಪರಿಸ್ಥಿತಿಯಲ್ಲಿ ಸಹಾನುಭೂತಿಯನ್ನು ವ್ಯಕ್ತಪಡಿಸಿದ್ದಾರಷ್ಟೇ ಅಲ್ಲದೆ, ಎಲ್ಲಾ ರೀತಿಯ ಸಹಾಯವನ್ನು ಒದಗಿಸುವುದಕ್ಕೆ ಪ್ರಾಮಾಣಿಕವಾದಂತಹ ಪ್ರಯತ್ನ ಕೂಡ ಮಾಡಿದ್ದಾರೆ. ಇಷ್ಟೇ ಅಲ್ಲದೆ ಅಲ್ಲಿ ಮೇಲಿಂದ ಮೇಲೆ ಕಂಪನ ಕೂಡಾ ಉಂಟಾಗಿದೆ. ಯಾರೂ ಕೂಡ ತಮ್ಮ ಮನೆಯಲ್ಲಿ ಇರಲಾರದಂತಹ ಪರಿಸ್ಥಿತಿ ಉದ್ಭವಿಸಿದೆ. ಇವತ್ತು ಪ್ರತಿಯೊಬ್ಬರು ಕೊರೆಯುವ

ಚಳಿಯಲ್ಲಿಯೇ ರಸ್ತೆಯಲ್ಲಿ ವಾಸ ಮಾಡುವಂತಹ ಪರಿಸ್ಥಿತಿ ಉಂಟಾಗಿದೆ. ಅಲ್ಲಿ ಪುನಃ ಸುಮಾರು 47 ಭಾರಿ ಕಂಪನಗಳಾಗಿದೆ. ಆ ದೃಷ್ಟಿಯಿಂದ ಜನರು ಬಹಳಷ್ಟು ಭಯಭೀತರಾಗಿದ್ದಾರೆ. ಇಡೀ ದೇಶವೇ ಇವತ್ತು ಆತಂಕದಲ್ಲಿದೆ. ತುರ್ತು ಪರಿಸ್ಥಿತಿಯನ್ನು ಜಾರಿ ಮಾಡುವಂತಹ ಸ್ಥಿತಿ ಅಲ್ಲಿ ಉದ್ಭವಿಸಿದೆ ಎಂಬ ಮಾತನ್ನು ವ್ಯಕ್ತಪಡಿಸುತ್ತಾ, ಇಂತಹ ಒಂದು ಧಾರುಣವಾದ ಸ್ಥಿತಿಯಲ್ಲಿ ಸದನದಲ್ಲಿರುವಂತಹ ಎಲ್ಲಾ ಮಾನ್ಯ ಸದಸ್ಯರು ಈ ಒಂದು ವಿಚಾರದಲ್ಲಿ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಾ, ಮೃತರ ಆತ್ಮಕ್ಕೆ ಭಗವಂತ ಸದ್ಗತಿಯನ್ನು ನೀಡಲೆಂದು ಹಾಗೂ ಅವರ ಅಗಲಿಕೆಯ ನೋವನ್ನು ಸಹಿಸುವಂತಹ ಶಕ್ತಿ ಅವರ ಕುಟುಂಬ ವರ್ಗದವರಿಗೆ ಹಾಗೂ ಅವರ ಹಿತೈಷಿಗಳಿಗೆ ನೀಡಲೆಂದು ನಾನು ಭಗವಂತನಲ್ಲಿ ಪ್ರಾರ್ಥಿಸುವುದರ ಜೊತೆಗೆ, ಈ ಒಂದು ಪರಿಸ್ಥಿತಿಯಲ್ಲಿ ಪ್ರಪಂಚದ ಎಲ್ಲಾ ರಾಷ್ಟ್ರಗಳು, ವಿಶೇಷವಾಗಿ ನಮ್ಮ ರಾಷ್ಟ್ರ ಈಗಾಗಲೇ ಸಾಕಷ್ಟು ಸಹಾಯ ಮಾಡಿದೆ, ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಸಹಾಯ ಮಾಡಿ ಸಂಕಷ್ಟದಲ್ಲಿರುವಂತಹ ನೇಪಾಳಿಯರಿಗೆ ಸಹಾಯ ಮಾಡುವಂತಹ ಕೆಲಸವಾಗಲಿ ಎಂದು ತಮ್ಮ ಮುಖಾಂತರ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಭೂಕಂಪವಾಗಿರುವಂತಹ ದೃಶ್ಯಗಳನ್ನು ದೂರದರ್ಶನದಲ್ಲಿ ನೋಡಿದಾಗ ಇಂತಹ ದೃಶ್ಯಗಳನ್ನು ನಮ್ಮ ಕಣ್ಣುಗಳು ನೋಡುತ್ತಿವೆಯೆಲ್ಲಾ ಎಂದು ತುಂಬಾ ದುಃಖವಾಗುತ್ತಿತ್ತು. ನೇಪಾಳದಲ್ಲಿ ಪಶುಪತಿನಾಥನ ಸನ್ನಿಧಿಯಲ್ಲಿ ಈ ರೀತಿಯಾಗಿರುವಂತಹ ದುರ್ಘಟನೆ ಏತಕ್ಕೆ ಈ ರೀತಿಯಾಯಿತು ಎಂದು ಆ ಭಗವಂತನನ್ನೇ ನಾವು ಪ್ರಶ್ನೆ ಕೇಳಬೇಕಾಗುತ್ತದೆ. ಈ ಒಂದು ಭಾರಿ ಭೂಕಂಪದಿಂದ ಆಗಿರುವಂತಹ ಸಾವು, ನೋವನ್ನು ಯಾವ ರೀತಿ ಸಹಿಸಬೇಕೆಂದು ನನಗಂತೂ ಅರ್ಥವಾಗುತ್ತಿಲ್ಲ. ನಿಜ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ನಮ್ಮ ಕರ್ತವ್ಯವನ್ನು ಮಾಡುವ ದಿಕ್ಕಿನಲ್ಲಿ ಸಾಕಷ್ಟು ಪ್ರಯತ್ನಗಳನ್ನು ಮಾಡಿದೆ. ಕೇಂದ್ರಸರ್ಕಾರ ಯೆಮನ್‌ನಲ್ಲಿ ನಡೆದಂತಹ ದುರಂತವಿರಬಹುದು, ಅಥವಾ ನೇಪಾಳದಲ್ಲಿ ನಡೆದಂತಹ ದುರಂತವಿರಬಹುದು, ಈ ಎರಡೂ ದುರಂತಗಳ ಬಗ್ಗೆ ತಕ್ಷಣ ಅದು ಆಹಾರವನ್ನು ಕೊಡುವ ದಿಕ್ಕಿನಲ್ಲಿರಬಹುದು, ಬೇರೆ ಬೇರೆ ಪರಿಹಾರಗಳನ್ನು ಒದಗಿಸುವಂತಹ ಕೆಲಸವನ್ನು ಕೇಂದ್ರ ಸರ್ಕಾರ ಮಾಡಿದೆ. ಅದೇ ರೀತಿ ಆಪರೇಶನ್ ಮೈತ್ರಿ. ಅಂದರೆ, ಬೇರೆ ಬೇರೆ ರಾಷ್ಟ್ರಗಳಿಗೆ ಈ ರೀತಿಯ ಸಂದರ್ಭ ಬಂದಾಗ ಯಾವ ರೀತಿ ನೆರವು ಕೊಡಬೇಕೆಂಬ ಪ್ರಯತ್ನವನ್ನು ಮಾಡುತ್ತಿರುವುದು ಈ ಸಂದರ್ಭದಲ್ಲಿ ಶ್ಲಾಘನೀಯ. ಅದೇ ರೀತಿ ಕರ್ನಾಟಕ ರಾಜ್ಯ ಸರ್ಕಾರವು ಕೂಡ ಇಬ್ಬರು ಹಿರಿಯ ಅಧಿಕಾರಿಗಳನ್ನು ಜೊತೆಗೆ ಹತ್ತು ಜನ ವೈದ್ಯರನ್ನು ಸಹ ಕಳುಹಿಸಿ ನಾವು ನಿಮ್ಮ ಜೊತೆಗೆ ಇದ್ದೇವೆ ನಿಮ್ಮ ನೋವನ್ನು ಭರಿಸುವ ದಿಕ್ಕಿನಲ್ಲಿ ಖಂಡಿತ ನಾವು ನಿಮ್ಮ ಜೊತೆಗೆ ಸಹಕಾರ ಕೊಡುತ್ತೇವೆ ಎನ್ನುವ ಮಾನವೀಯತೆ ಕೆಲಸವನ್ನು ಮಾಡುತ್ತಿರುವಂತಹ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರವನ್ನು ಈ ಸಂದರ್ಭದಲ್ಲಿ

ನಾನು ಖಂಡಿತವಾಗಿಯೂ ಶ್ಲಾಘಿಸುತ್ತೇನೆ. ಎಷ್ಟರಮಟ್ಟಿಗೆ ಎಂದರೆ ಬೆಂಗಳೂರಿನ ಪುಷ್ಪಾನಾಯಕ್ ಎಂಬ ಒಬ್ಬ ಮಹಿಳೆ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಇಂಡಿಯನ್ ಏರ್‌ಫೋರ್ಸ್‌ನವರು 24 ಗಂಟೆಯೊಳಗೆ ನೇಪಾಳದಿಂದ ಬೆಂಗಳೂರಿಗೆ ಕರೆದುಕೊಂಡು ಬರುತ್ತಾರೆಂದು ನಾನು ಕಲ್ಪನೆ ಕೂಡ ಮಾಡಿಕೊಂಡಿರಲಿಲ್ಲ. ಆ ರೀತಿ ಸಹಾಯ ಸಿಕ್ಕಿರುವುದು ನಿಜಕ್ಕೂ ಕೂಡ ನಾವು ಮೆಚ್ಚಬೇಕು ಎಂಬ ಅಂಶವನ್ನು ಕೂಡ ಅವರು ಪ್ರಸ್ತಾಪ ಮಾಡಿದ್ದಾರೆ. ನಾವು ಇಲ್ಲಿ ಎಷ್ಟೇ ಬಾಯಿ ಮಾತಿನಲ್ಲಿ ಹೇಳಿದರೂ ಅದು ಸಾಕಾಗುವುದಿಲ್ಲ. ನಾವು ಸ್ವತಃ ಶಾರೀರಿಕವಾಗಿ ಅಲ್ಲಿಗೆ ಹೋಗಿ ಸೇವೆ ಮಾಡಬೇಕು, ಆ ದಿಕ್ಕಿನಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಈಗಾಗಲೇ ಬೇರೆ ಬೇರೆ ಭಾಗದಿಂದ ಸಾವಿರಾರು ಸ್ವಯಂ ಸೇವಕರು ಅಲ್ಲಿಗೆ ಹೋಗಿ ಅಲ್ಲಿರುವಂತಹ ಸಂತ್ರಸ್ತರಿಗೆ ಸಹಾಯ ಮಾಡುವ ರೀತಿಯಲ್ಲಿ ಪ್ರಯತ್ನ ನಡೆಸುತ್ತಿದ್ದಾರೆ. ಎಲ್ಲಾ ದುರಂತದ ಸಂದರ್ಭದಲ್ಲಿಯೂ ಮಾಡುತ್ತಿದ್ದಾರೆ, ಈ ಭಾರಿಯು ಸಹ ಆರ್‌ಎಸ್‌ಎಸ್ ಈ ಕೆಲಸ ಮಾಡುತ್ತಿರುವುದು ನಿಜಕ್ಕೂ ಕೂಡ ಶ್ಲಾಘನೀಯ. ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ರಾಜ್ಯ ಸರ್ಕಾರ ಇರಬಹುದು, ಕೇಂದ್ರ ಸರ್ಕಾರ ಇರಬಹುದು, ಇಲ್ಲಿ ಏನೇನು ನೆರವನ್ನು ಕೊಡಬೇಕು ಆ ಎಲ್ಲಾ ನೆರವನ್ನು ಪೂರ್ಣ ಪ್ರಮಾಣದಲ್ಲಿ ಕೊಡುತ್ತಾರೆಂಬ ನಂಬಿಕೆ ನನಗಿದೆ. ಆದರೆ ವೈಯಕ್ತಿಕವಾಗಿ ಮತ್ತು ಕರ್ನಾಟಕ ರಾಜ್ಯದ ವಿಧಾನ ಪರಿಷತ್ತಿನ ಎಲ್ಲಾ ಸದಸ್ಯರು ಕೂಡ ಈ ಒಂದು ಪರಿಹಾರ ನಿಧಿಗೋಸ್ಕರ ನಾವೆಲ್ಲರೂ ಅಂದರೆ ಭಾರತೀಯ ಜನತಾ ಪಕ್ಷದ ಸದಸ್ಯರೆಲ್ಲರೂ ಒಂದು ತಿಂಗಳ ಸಂಬಳವನ್ನು ಪರಿಹಾರವಾಗಿ ಕೊಡಬೇಕೆಂದು ನಾವು ಈಗಾಗಲೇ ತೀರ್ಮಾನ ಮಾಡಿದ್ದೇವೆ. ಈ ಸಂದರ್ಭದಲ್ಲಿ ನಮ್ಮ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ನಾವೆಲ್ಲಾ ಶಾಸಕರು ನಮ್ಮ ನಮ್ಮ ಕ್ಷೇತ್ರಗಳಲ್ಲಿ ಈ ಪರಿಹಾರ ನಿಧಿಯನ್ನು ಸಂಗ್ರಹ ಮಾಡುವ ದಿಕ್ಕಿನಲ್ಲಿ ನಾವು ಖಂಡಿತ ಪ್ರಯತ್ನವನ್ನು ಮಾಡಿ, ಆ ಸಂತ್ರಸ್ತರು ಏನಿದ್ದಾರೆ ಅವರ ನೆರವಿಗೆ ಬರಬೇಕಾದಂತಹ ಕರ್ತವ್ಯ ನಮ್ಮದು. ಏಕೆಂದರೆ, ಭಾರತ ಮತ್ತು ನೇಪಾಳ ನಾವಿಬ್ಬರೂ ಒಂದೇ ಸಂಸ್ಕೃತಿಯನ್ನು ಅನುಸರಿಸುತ್ತೇವೆ. ವಿಶೇಷವಾಗಿ ಪಶುಪತಿನಾಥನ ದರ್ಶನಕ್ಕೆ ಹಿಂದೂ ಸಂಸ್ಕೃತಿಯ ನಾವೆಲ್ಲರೂ ಅನೇಕ ಸಲ ಹೋಗಿ ಬಂದಿದ್ದೇವೆ. ನೇಪಾಳದ ಪಶುಪತಿನಾಥನ ದೇವಸ್ಥಾನದಲ್ಲಿ ಕರ್ನಾಟಕದವರೇ ಒಬ್ಬರು ಅರ್ಚಕರಿದ್ದಾರೆ. ಇಷ್ಟು ಭೀಕರವಾದಂತಹ ಭೂಕಂಪ ಅಲ್ಲಿ ಇಷ್ಟರ ಮಟ್ಟಿಗೆ ಆಗುತ್ತದೆಯೆಂದು ಯಾರೂ ಸಹ ಕನಸು ಮನಸ್ಸಿನಲ್ಲಿಯೂ ಎಣಿಸಿರಲಿಲ್ಲ. ಹಾಗಾಗಿ ಪತ್ರಿಕೆಗಳಲ್ಲಿ ಹಾಗೂ ದೂರದರ್ಶನದಲ್ಲಿ ಪ್ರಸಾರವಾಗಿರುವುದನ್ನು ನಾವು ನೋಡಿದ್ದೇವೆ, ಈಗೇನು ಭೂಕಂಪ ಆಗಿದೆ ಅದು ಕಡಿಮೆ ಭೂಕಂಪ. ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಭೂಕಂಪ ಆಗುವಂತಹ ಸಂಭವ ಇದೆ ಎಂದು ಪತ್ರಿಕೆಯಲ್ಲಿ ನಾವು ಓದಿದಾಗ ಭಯ ಆಗುತ್ತದೆ. ಆದುದರಿಂದ ನಾವು ಭಗವಂತನಲ್ಲಿ ಇಷ್ಟು ಮಾತ್ರ ಪ್ರಾರ್ಥನೆ ಮಾಡಬಹುದು, ಭಗವಂತ ಈಗ ಕೊಟ್ಟಿರುವಂತಹ ತೊಂದರೆಯೇ ಸಾಕು, ಇನ್ನೂ ತೊಂದರೆ ಖಂಡಿತ ಕೊಡಬೇಡ, ಆಗಿದ್ದು ಆಗಿ ಹೋಗಿದೆ, ಈಗೇನು ತೊಂದರೆಯಾಗಿದೆ,

ತೊಂದರೆಯಾಗಿರುವಂತಹ ಸಂತ್ರಸ್ತರಿಗೆ ನೆರವಾಗುವಂತಹ ನಿಟ್ಟಿನಲ್ಲಿ ನಾವೆಲ್ಲರೂ ಪ್ರಯತ್ನವನ್ನು ಮಾಡೋಣವೆಂದು ಈ ಸಂದರ್ಭದಲ್ಲಿ ಮೃತಪಟ್ಟವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ನೊಂದವರಿಗೆ ಏನೇನು ಸಹಾಯ ಮಾಡಬಹುದು ಆ ಎಲ್ಲಾ ಸಹಾಯವನ್ನು ಮಾಡುವ ನಿಟ್ಟಿನಲ್ಲಿ ನಮ್ಮ ಕರ್ತವ್ಯವನ್ನು ನಾವು ಮಾಡೋಣವೆಂದು ಹೇಳುತ್ತಾ, ತಾವೇನು ಸಂತಾಪ ಸೂಚನೆಯನ್ನು ತಂದಿದ್ದೀರಿ ಇದಕ್ಕೆ ನನ್ನ ಬೆಂಬಲವನ್ನು ಸೂಚಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಉಗ್ರಪ್ಪನವರು ವೈಯಕ್ತಿಕವಾಗಿ ಒಂದು ಮಾತನ್ನು ತಿಳಿಸುತ್ತೇನೆಂದು ನನಗೆ ಒಂದು ಚೀಟಿ ಕಳಿಸಿದ್ದಾರೆ. ಏಕೆಂದರೆ ಎಲ್ಲರ ಪರವಾಗಿ ಅವರು ಮಾತನಾಡುವುದಕ್ಕೆ ಬರುವುದಿಲ್ಲ. ಹಾಗಾಗಿ ಅವರು ತಮ್ಮ ಒಂದು ತಿಂಗಳ ಸಂಬಳವನ್ನು ಈ ಪರಿಹಾರ ನಿಧಿಗೆ ಕೊಡುತ್ತೇನೆಂದು ಹೇಳಿದರು ಹಾಗಾಗಿ ನಾನು ಅವರಿಗೆ ಮಾತನಾಡಿ ಎಂದು ಹೇಳಿದೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಈಗಾಗಲೇ ನಮ್ಮ ಪಕ್ಷದಲ್ಲಿಯೇ ಒಂದು ತಿಂಗಳ ಸಂಬಳ ಕೊಡುವುದಕ್ಕೆ ನಿರ್ಧಾರವನ್ನು ಮಾಡಲಾಗಿದೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಸದನದ ಎಲ್ಲಾ ಮಾನ್ಯ ಸದಸ್ಯರುಗಳು ಒಂದು ತಿಂಗಳ ಸಂಬಳ ಕೊಡೋಣವೆಂದು ತೀರ್ಮಾನ ಮಾಡೋಣ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಪಕ್ಷ, ಬಿಜೆಪಿ ಪಕ್ಷ ಹಾಗೂ ಜೆ.ಡಿ.ಎಸ್ ಪಕ್ಷದ ಮಾನ್ಯ ಸದಸ್ಯರುಗಳೆಲ್ಲರೂ ಅಂದರೆ ಈ ಸದನದ ಎಲ್ಲಾ ಮಾನ್ಯ ಸದಸ್ಯರು ಒಂದು ತಿಂಗಳ ಸಂಬಳವನ್ನು ಭೂಕಂಪದ ಸಂತ್ರಸ್ತರ ನೆರವಿಗೆ ಕೊಡೋಣವೆಂಬ ತೀರ್ಮಾನವನ್ನು ತೆಗೆದುಕೊಳ್ಳೋಣ ಎಂಬ ಮಾತನ್ನು ಹೇಳುವುದರ ಜೊತೆಗೆ, ಕಾಶ್ಮೀರದಲ್ಲಿ ಪ್ರವಾಹ ದುರಂತವಾದಾಗ ಕೆಳಮನೆಯ ಮತ್ತು ಮೇಲ್ಮನೆಯ ಎಲ್ಲಾ ಶಾಸಕರು ಒಂದು ತಿಂಗಳ ವೇತನವನ್ನು ಕೊಟ್ಟಿದ್ದೇವೆ. ನೇಪಾಳಕ್ಕೂ ಹಾಗೂ ಭಾರತಕ್ಕೂ ಭಾವನಾತ್ಮಕವಾದಂತ ಸಂಬಂಧ ಏನಿದೆ ಅದು ಹೇಳಲು ಅಸಾಧ್ಯವಾದಂತಹ ಸಂಬಂಧ. ನೇಪಾಳ ಎಂದರೆ ಭಾರತ, ಭಾರತ ಎಂದರೆ ನೇಪಾಳ ಎನ್ನುವಷ್ಟರ ಮಟ್ಟಿಗೆ ಭಾವನಾತ್ಮಕವಾದಂತಹ ಸಂಬಂಧ ಇರುವಂತಹ ಸಂದರ್ಭದಲ್ಲಿ ನಮ್ಮ ಸದನದ ಎಲ್ಲಾ ಸದಸ್ಯರು ಒಂದು ತಿಂಗಳ ಸಂಬಳವನ್ನು ಕೊಡುವುದಕ್ಕೆ ನಿರ್ಧಾರ ಕೈಗೊಂಡಿದ್ದೇವೆ ಎಂದು ತಮ್ಮ ಮುಖಾಂತರ ತಿಳಿಸಲಿಚ್ಛಿಸುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:–** ಎರಡೂ ಸದನದ ಎಲ್ಲಾ ಸದಸ್ಯರು ಒಂದು ತಿಂಗಳ ವೇತನವನ್ನು ಭೂಕಂಪದ ಸಂತ್ರಸ್ತರ ನಿಧಿಗೆ ಕೊಡುವುದಕ್ಕೆ ತೀರ್ಮಾನ ಮಾಡಿದ್ದಾರೆ ಎನ್ನುವುದರ ಬಗ್ಗೆ ಒಂದು ಮಂಡನೆಯನ್ನು ಮಾಡಿ.

**ಸಭಾಪತಿಯವರು:–** ನಾನು ಮಂಡನೆ ಮಾಡಿಸುತ್ತೇನೆ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ನಾನು ತಮಗೆ ಏಕೆ ಚೀಟಿ ಕಳುಹಿಸಿದೆ ಎಂದರೆ, ಎಲ್ಲಾ ಸದಸ್ಯರು ಒಂದು ತಿಂಗಳ ವೇತನವನ್ನು ಭೂಕಂಪದ ಸಂತ್ರಸ್ತರ ನಿಧಿಗೆ ಕೊಡುವುದಕ್ಕೆ ತೀರ್ಮಾನ ಮಾಡಿದ್ದಾರೆ. ಇವತ್ತಿನ ದಿವಸ ಮನುಕುಲದ ಮೇಲೆ ಪ್ರಕೃತಿ ವಿಕೋಪಗೊಂಡಿದೆ. ಹಾಗಾಗಿ ಶಾಸಕರ ಜೊತೆಗೆ ಸರ್ಕಾರಿ ನೌಕರರು ಸಹ ಸಹಾಯ ಹಸ್ತವನ್ನು ನೀಡಿ, ತಮ್ಮ ಒಂದು ದಿವಸದ ಸಂಬಳವನ್ನು ಕೊಡುವುದರ ಬಗ್ಗೆ ಸರ್ಕಾರ ಚಿಂತನೆ ಮಾಡುವುದು ಸೂಕ್ತವೆಂದು ನಾನು ಭಾವಿಸುತ್ತೇನೆ.

**ಸಭಾಪತಿಯವರು:–** ಅದನ್ನು ನಾವು ಹೇಳುವುದಕ್ಕೆ ಬರುವುದಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ಹಿರಿಯ ಪತ್ರಕರ್ತರಾದಂತಹ ಶ್ರೀ ಶಿವಕುಮಾರ್ ಅವರ ಕುಟುಂಬದವರು ನೇಪಾಳದ ಕೊಕ್ನಾದಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ಆದಕಾರಣ ಸರ್ಕಾರ ಆ ದಿಕ್ಕಿನಲ್ಲಿ ಗಮನಹರಿಸಿ ಶಿವಕುಮಾರ್‌ರವರ ಕುಟುಂಬದವರನ್ನು ರಕ್ಷಣೆ ಮಾಡುವ ದಿಕ್ಕಿನಲ್ಲಿ ಪ್ರಯತ್ನ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಬಯಸುತ್ತೇನೆ.

**ಶ್ರೀ ಬಿ. ರಾಮಕೃಷ್ಣ:–** ಮಾನ್ಯ ಸಭಾಪತಿಯವರೇ, ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರುಗಳು ಸಹ ಪರಿಹಾರ ನಿಧಿಗೆ ತಮ್ಮ ಒಂದು ತಿಂಗಳ ಸಂಬಳವನ್ನು ಕೊಡುತ್ತಾರೆಂದು ತಿಳಿಸಿದರೆ ಸಾಕು.

**ಸಭಾಪತಿಯವರು:–** ಮಾನ್ಯ ಸಭಾ ನಾಯಕರು, ವಿರೋಧ ಪಕ್ಷದ ನಾಯಕರು, ಮಾನ್ಯ ಬಸವರಾಜ ಹೊರಟ್ಟಿಯವರು ಎಲ್ಲಾ ಸದಸ್ಯರ ಬಾವನೆಗಳಿಗೆ ಸ್ಪಂದಿಸುತ್ತಾ, ನಾನು ನಮ್ಮ ಸದನದ ಎಲ್ಲಾ ಸದಸ್ಯರು ತಮ್ಮ ಒಂದು ತಿಂಗಳ ಸಂಬಳವನ್ನು ಈ ಪರಿಹಾರ ನಿಧಿಗೆ ಕೊಡಬೇಕೆನ್ನುವುದರ ಬಗ್ಗೆ ಈ ಸಭೆಯ ಒಪ್ಪಿಗೆ ಇದೆಯೆಂದು ನಾನು ಭಾವಿಸುತ್ತೇನೆ. ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ ಅವರುಗಳ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ. ದಿವಂಗತರುಗಳಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು
ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಿದರು.)

2. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯ

ಅ) ಸದನದ ಕಲಾಪವನ್ನು ವೀಕ್ಷಿಸಲು ಸಾರ್ವಜನಿಕರನ್ನು ಬಿಡದಿರುವ ಬಗ್ಗೆ

**ಶ್ರೀ ಅರುಣಾ ಶಹಾಪೂರ:–** ಮಾನ್ಯ ಸಭಾಪತಿಗಳೇ, ವಿಧಾನಸೌಧದ ಗ್ಯಾಲರಿಗೆ ಸದನದ ಕಲಾಪವನ್ನು ವೀಕ್ಷಿಸಲು ಸಾರ್ವಜನಿಕರನ್ನು ಬಿಡುತ್ತಿಲ್ಲ.

**(ಗೊಂದಲ)**

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಯಾರನ್ನೂ ಒಳಗೆ ಬಿಡುತ್ತಿಲ್ಲ.

**(ಗೊಂದಲ)**

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಗಳೇ, ಇದು ವಿಶೇಷ ಅಧಿವೇಶನ ಆಗಿರುವುದರಿಂದ ಗ್ಯಾಲರಿಗೆ ಸಾರ್ವಜನಿಕರನ್ನು ಬಿಡುತ್ತಿಲ್ಲವೆಂದು ಸಚಿವಾಲಯದ ಅಧಿಕಾರಿಗಳು ಹೇಳಿದರು.

**ಸಭಾಪತಿಯವರು:–** 4 ಜನ ಸದಸ್ಯರಿಗಿಂತ ಹೆಚ್ಚಿಗೆ ಮಾತನಾಡಿದಲ್ಲಿ ಅದು ರೆಕಾರ್ಡ್ ಆಗುವುದಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಈಗ ಸರ್ಕಾರ ಕಿವುಡರ ಹಾಗೆ ಕುಳಿತುಕೊಳ್ಳುವುದು ಬೇಡ, ಸದಸ್ಯರು ಕೇಳುವ ಪ್ರಶ್ನೆಗಳಿಗೆ ಉತ್ತರ ಕೊಡಿ. ನಮ್ಮೆಲ್ಲ ನಾಗರೀಕರು ಸದನದ ಕಲಾಪಗಳನ್ನು ನೋಡಬೇಕೆಂದು ಬಯಸುವ ಸಂದರ್ಭದಲ್ಲಿ ಅವರನ್ನು ಏಕೆ ಒಳಗೆ ಬಿಡುತ್ತಿಲ್ಲ, ಅಂತಹ ಎಮರ್ಜೆನ್ಸಿ ಏನಿದೆ? ಅದಕ್ಕೆ ಸರ್ಕಾರ ಉತ್ತರ ನೀಡಬೇಕು.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ವಿರೋಧ ಪಕ್ಷದ ನಾಯಕರು ಹೇಳಿದ್ದು ನನಗೆ ಅರ್ಥ ಆಗಿದೆ. ಹೀಗೆ ಎಲ್ಲರೂ ಎದ್ದು ನಿಂತು ಮಾತನಾಡಿದರೆ ನನಗೆ ಕೇಳುವುದಿಲ್ಲ. ಒಬ್ಬರಾದ ಮೇಲೆ ಒಬ್ಬರು ಮಾತನಾಡಿ, ಒಮ್ಮೆಲೆ 10 ಜನ ಮಾತನಾಡಿದರೆ ಹೇಗೆ?

**ಸಭಾಪತಿಯವರು:–** ಈಗ ನಾನು ಈ ವಿಷಯವನ್ನು ಗಮನಿಸಿದೆನು. ಗ್ಯಾಲರಿಗೆ ಸಾರ್ವಜನಿಕರನ್ನು ಬಿಡುವುದು ಬಿಡದೇ ಇರುವುದು ಸರ್ಕಾರಕ್ಕೆ ಸಂಬಂಧ ಪಟ್ಟ ವಿಚಾರವಲ್ಲ. ವಿಧಾನಮಂಡಲದ ಅಧಿಕಾರಿ ವರ್ಗದಲ್ಲಿ ಮಾರ್ಷಲ್ ಅವರು ಈ ರೀತಿ ತೀರ್ಮಾನ ಮಾಡಿರುತ್ತಾರೆ. ಆದರೆ ನಾನು ಈಗ ಅವರಿಗೆ ಹೇಳಿರುವ ಹಿನ್ನೆಲೆಯಲ್ಲಿ ಕಾನೂನು ಪ್ರಕಾರ ಏನೇನು ಮುನ್ನೆಚ್ಚರಿಕೆ

ಕ್ರಮಗಳನ್ನು ಕೈಗೊಳ್ಳಬೇಕು ಅದನ್ನೆಲ್ಲ ಕೈಗೊಂಡು ಸಾರ್ವಜನಿಕರನ್ನು ಇನ್ನು ಮುಂದೆ ಗ್ಯಾಲರಿಗೆ ಬಿಡಲಾಗುವುದು.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಈಗಾಗಲೇ ತಾವು ಕ್ರಮ ಕೈಗೊಳ್ಳುವುದಾಗಿ ಹೇಳಿದ ಮೇಲೆ ಈ ವಿಚಾರ ಮುಗಿಯಿತು. ಇದರಲ್ಲಿ ಸರ್ಕಾರದ ಯಾವುದೇ ಪಾತ್ರವಿಲ್ಲ. ಇಡೀ ಸದನವನ್ನು ನಿಯಂತ್ರಿಸುವ ಜವಾಬ್ದಾರಿ ತಮ್ಮ ಮೇಲಿದೆ. ತಾವು ಪೀಠದಿಂದ ಆದೇಶ ಮಾಡಿದ ರೀತ್ಯಾ ನಾವೆಲ್ಲ ನಡೆದುಕೊಂಡು ಹೋಗುತ್ತೇವೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಸರ್ಕಾರ ಹೇಳುತ್ತೆ, ಇದು ನನ್ನ ಜವಾಬ್ದಾರಿಯಲ್ಲ ಎಂದು ಸಭಾಪತಿಗಳು ಹೇಳುತ್ತಾರೆ., ಹಾಗಾದರೆ ಇದರ ಜವಾಬ್ದಾರಿ ಯಾರದ್ದು?

**ಸಭಾಪತಿಯವರು:–** ವಿಧಾನಮಂಡಲದ ಅಧಿಕಾರಿಗಳು ಮಾರ್ಷಲ್ ಅಂದರೆ ಪೊಲೀಸಿನವರ ಜವಾಬ್ದಾರಿ ಇದು. ಪೊಲೀಸಿನ ಹಿರಿಯ ಅಧಿಕಾರಿಯನ್ನು ಇಲ್ಲಿನ ಮಾರ್ಷಲ್ ಆಗಿ ನೇಮಕ ಮಾಡಲಾಗುವುದು. ಎರಡು ಕಡೆಯ ಮಾರ್ಷಲ್‌ಗಳು ಸೇರಿ ಈ ರೀತಿಯ ತೀರ್ಮಾನ ಮಾಡಿರುವ ಬಗ್ಗೆ ನನಗೆ ಸುದ್ದಿ ಬಂದಿದೆ. ಆದರೆ ನಾನು ಈಗ ಅವರಿಗೆ ಹೇಳಿರುವ ಹಿನ್ನೆಲೆಯಲ್ಲಿ ಕಾನೂನು ಪ್ರಕಾರ ಏನೇನು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಅದನ್ನೆಲ್ಲ ಕೈಗೊಂಡು ಸಾರ್ವಜನಿಕರನ್ನು ಇನ್ನು ಮುಂದೆ ಗ್ಯಾಲರಿಗೆ ಬಿಡಲಾಗುವುದು.

**ಶ್ರೀ ಕೆ.ಎಸ್. ಈಶ್ವರಪ್ಪ:–** ಇದು ಪ್ರಜಾಪ್ರಭುತ್ವದ ವ್ಯವಸ್ಥೆ. ವಿಧಾನ ಪರಿಷತ್ತು ನಡೆಯುತ್ತಿರುವ ಸಂದರ್ಭದಲ್ಲಿ ಕಲಾಪ ನೋಡುವುದು ಇಡೀ ರಾಜ್ಯದ ಜನರ ಹಕ್ಕು. ಅದನ್ನು ಕಿತ್ತುಕೊಳ್ಳುವ ಅಧಿಕಾರ ಇವರಿಗೆ ಇಲ್ಲ. ಈ ರೀತಿ ಸೂಚನೆ ಕೊಡುವ ಪರಿಸ್ಥಿತಿ ಏಕೆ ಬಂತು. ಇದೇನು ಸರ್ವಾಧಿಕಾರದ ಸರ್ಕಾರವೇ? ಪೊಲೀಸರ ಸರ್ಕಾರವೇ?

**(ಗೊಂದಲ)**

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಗಳೇ, ಒಂದು ಕಾಲದಲ್ಲಿ ಸದಸ್ಯರನ್ನು ಒಳಗೆ ಬಿಡದೇ ಇದ್ದದ್ದು ಇತಿಹಾಸವಾಗಿದೆ. ನಾನೇನು ಇದರ ಪರವಾಗಿ ಇಲ್ಲ ಆದರೆ ನಡೆದ ಘಟನೆ ಹೇಳುತ್ತಿದ್ದೇನೆ.

**ಶ್ರೀ ಆರ್.ವಿ. ವೆಂಕಟೇಶ್:–** ಸುರಕ್ಷತೆಯ ದೃಷ್ಟಿಯಿಂದ ಪೊಲೀಸಿನವರು ಕೈಗೊಂಡ ಕ್ರಮದ ಬಗ್ಗೆ ಸರ್ಕಾರ ಏನು ಮಾಡಲು ಸಾಧ್ಯ?

**ಶ್ರೀ ಕೆ.ಎಸ್. ಈಶ್ವರಪ್ಪ:–** ಭದ್ರತೆಯ ಹೊಣೆ ಸರ್ಕಾರದ್ದು.,

**(ಗೊಂದಲ)**

**(ಈ ಹಂತದಲ್ಲಿ ನಡೆದ ಚರ್ಚೆಯನ್ನು ಸಭಾಪತಿಯವರ ಆದೇಶದಂತೆ ದಾಖಲಿಸಿರುವುದಿಲ್ಲ.)**

**ಸಭಾಪತಿಯವರು:–** ಈಗ ನಾನು ವಿಷಯ ಸಂಗ್ರಹ ಮಾಡಿರುವ ಪ್ರಕಾರ 20ನೇ ತಾರೀಖಿನಂದು ಕರೆದಿದ್ದ ವಿಶೇಷ ಅಧಿವೇಶನಕ್ಕೆ ಸಾರ್ವಜನಿಕರ ಪ್ರವೇಶವನ್ನು ನಿಷೇಧಿಸಲಾಗಿತ್ತು., ಆದರೆ ನಿನ್ನೆ ಮತ್ತು ಇವತ್ತು ನಿರ್ಬಂಧ ಇಲ್ಲದಿದ್ದರೂ ಸಹ ಜನ ಯಾರು ಬರುತ್ತಿಲ್ಲವೆಂದು ಪೊಲೀಸಿನವರು ಹೇಳುತ್ತಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):–** ಮಾನ್ಯ ಸಭಾಪತಿಗಳೇ, ತಾವೇ ಹೇಳಿದಂತೆ ಮೊದಲ ದಿವಸದ ವಿಶೇಷ ಅಧಿವೇಶನಕ್ಕೆ ಸಾರ್ವಜನಿಕರ ಪ್ರವೇಶವನ್ನು ನಿಷೇಧಿಸಲಾಗಿತ್ತು., ಆದರೆ ನಿನ್ನೆ ಮತ್ತು ಇವತ್ತು ಮಾರ್ಷಲ್ ಅಲೋ ಮಾಡಿದ್ದಾರೆ. ಆದರೂ ಸಹ ಜನ ಯಾರು ಬರುತ್ತಿಲ್ಲ. ಇವರಿಗೆ ಜನರನ್ನು ತಂದು ಕೂರಿಸಬೇಕೆಂದು ಹೇಳಬೇಕು. ಈ ಮಾತನ್ನು ನಾನು ಹೇಳುತ್ತಿಲ್ಲ ಸಭಾಪತಿಯವರು ಹೇಳಿದ್ದು, ಅವರು ಸುಳ್ಳು ಹೇಳುತ್ತಾರೆಯೇ? I have gathered the information.

**(ಗೊಂದಲ)**

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಗಳೇ, you are the custodian of this House. ಯಾರನ್ನು ಸದನಕ್ಕೆ ಬಿಡಬೇಕು ಯಾರನ್ನು ಬಿಡಬಾರದು ಎಂದು ನಿರ್ಣಯಿಸುವ ಮಾರ್ಷಲ್ ಅವರು ನಿಮ್ಮ ಅಧೀನದಲ್ಲಿಯೇ ಕೆಲಸ ಮಾಡುತ್ತಾರೆ. They are not the authority to guide you. ವಿಧಾನಸೌಧದ ಹೊರಗಡೆಯೇ ಜನರನ್ನು ಒಳಗೆ ಬಿಡದಿದ್ದರೆ ಏನು ಮಾಡಲು ಸಾಧ್ಯ? ಗೇಟ್‌ನಲ್ಲಿ ಸಾವಿರಾರು ಜನರು ನಿಂತಿದ್ದಾರೆ ಯಾರನ್ನು ಒಳಕ್ಕೆ ಬಿಡುತ್ತಿಲ್ಲ, ಸದನಕ್ಕೆ ಯಾರು ಬರುತ್ತಿಲ್ಲ ಎಂದರೆ ಹೇಗೆ? ನಮ್ಮ ಪಿಎ ಗಳನ್ನೇ ಒಳಕ್ಕೆ ಬಿಟ್ಟಿರುವುದಿಲ್ಲ. Why they are misleading the House? ಮೊದಲನೇ ದಿವಸ ಗದ್ದಲ ಆಗುತ್ತದೆ, ಯಾರಾದರೂ ಬಂದು ಕೂಡುತ್ತಾರೆ ಎನ್ನುವ ಕಾರಣದಿಂದ ಸಾರ್ವಜನಿಕರನ್ನು ಬಿಟ್ಟಿರಲಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಗಳೇ, all restrictions have been removed.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಗಳೇ, whether the Government has announced it through this House?

**ಸಭಾಪತಿಯವರು:–** ಈ ವಿಚಾರದ ಬಗ್ಗೆ ಇಲ್ಲಿಗೆ ಚರ್ಚೆ ಸಾಕು.

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಗಳೇ, if the Government says "all restrictions have been removed", it is implied that restrictions were imposed earlier.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಗಳೇ, ಇದು ವಿಶೇಷವಾದ ವಿಚಾರ. ಗ್ಯಾಲರಿಗೆ ಸಾರ್ವಜನಿಕರಿಗೆ ಪ್ರವೇಶದ ಅವಕಾಶ ನೀಡುವ ಅಧಿಕಾರ ಇರುವುದು ತಮಗೆ.

(12–00 ಗಂಟೆ)

ಈ ಸದನದಲ್ಲಿ ಏನೇ ನಡೆದರು ಸಹ ತಮ್ಮ ನಿರ್ದೇಶನದಂತೆ ಈ ಸದನ ನಡೆಯಬೇಕಾಗಿರುವುದು. ಇದನ್ನು ರೂಲ್ಸ್ ಮತ್ತು Kaul and Shakdher ನಲ್ಲಿ ತಿಳಿಸಲಾಗಿದೆ. ಇಲ್ಲಿ ಯಾರು ಬರುತ್ತಾರೆ, ಯಾರು ಹೋಗುತ್ತಾರೆ, ಏನೇ ಘಟನಾವಳಿಗಳು ನಡೆದರೂ ಸಹ ನಿಮ್ಮ ನಿರ್ದೇಶನದ ರೀತಿಯಲ್ಲಿಯೇ ನಡೆಯಬೇಕು. ಗೇಟ್‌ನಲ್ಲಿ ಜನರನ್ನು ಒಳಗೆ ಬಿಡುತ್ತಿಲ್ಲ ಎಂದು ಅವರು ಹೇಳಿದರು. ನನ್ನ ಹತ್ತಿರ ಬಂದಂಥವರಿಗೆ ಪಾಸ್ ಕೊಡಿಸಲಾಗಿದೆ. ಯಾರ ಹತ್ತಿರ ಪಾಸ್ ಇದೆ ಅವರನ್ನು ಒಳಗೆ ಬಿಡಲಾಗಿದೆ. ನಾನು ಎಲ್ಲರಿಗೂ ತಿಳಿಸಬಯಸುವುದು, ಯಾರಿಗೆ ಪಾಸ್ ಕೊಡಲಾಗಿದೆ ಅವರನ್ನು ಒಳಗೆ ಬಿಡಲಾಗುತ್ತಿದೆ. ಇದರಲ್ಲಿ ಸರ್ಕಾರದ ಪಾತ್ರ ಏನು ಇಲ್ಲ ಎಂದು ನಾನು ಕಾನೂನಿನ ಹಿನ್ನೆಲೆಯಲ್ಲಿ ಹೇಳಬಯಸುತ್ತೇನೆ.

**ಶ್ರೀ ಅರುಣ ಶಹಾಪೂರ:–** ಮಾನ್ಯ ಸಭಾಪತಿಗಳೆ, ನಾನು ಪತ್ರ ಕೊಟ್ಟಿರುವಂತಹ, ನಾನು ಪಾಸ್ ಕೊಟ್ಟಿರುವಂತಹ ಜನರಿಗೆ ಒಳಗೆ ಬಿಟ್ಟಿರುವುದಿಲ್ಲ. ಮೊದಲನೆಯ ಮತ್ತು ಎರಡನೆಯ ಸದನ ನಡೆಯುವಾಗ ನನ್ನ ಕ್ಷೇತ್ರದ ಜನರಿಗೆ ನಾನು ಪತ್ರ ಕೊಟ್ಟಿದ್ದೇನೆ. ಇವತ್ತು ಒಳಗೆ ಬಿಡಬಾರದು ಎನ್ನುವ ಸೂಚನೆ ಇದೆ ಅದಕ್ಕಾಗಿ ಒಳಗೆ ಬಿಡುವುದಿಲ್ಲ ಎಂದು ಹೇಳಿ ವಾಪಸ್ ಕಳುಹಿಸಿದ್ದಾರೆ. ಇದರಿಂದ ನನ್ನ ಕ್ಷೇತ್ರದಿಂದ ಬಂದ ಜನರು ಅತೃಪ್ತರಾಗಿ ನನ್ನ ಜೊತೆ ಜಗಳ ಮಾಡಿಕೊಂಡು ಹೋಗಿದ್ದಾರೆ. ಈಗ ಸದಸ್ಯರು ಹೇಳಿರುವುದು ನಿಜವಾಗಿದ್ದರೆ, ನಾವು ವಿರೋಧ ಪಕ್ಷದವರು ಪತ್ರ ಕೊಟ್ಟಿರುವುದರಿಂದ

ಬಿಟ್ಟಿಲ್ಲವೇ? ಅವರು ಆಡಳಿತ ಪಕ್ಷದವರು ಅದಕ್ಕೆ ಅವರು ಪಾಸ್ ಕೊಟ್ಟಿರುವ ಜನರನ್ನು ಒಳಗೆ ಬಿಟ್ಟಿದ್ದಾರೆಯೇ ಎನ್ನುವುದು ಸ್ಪಷ್ಟವಾಗಬೇಕು.

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):–** ಎಲ್ಲರನ್ನು ಒಳಗೆ ಬಿಟ್ಟಿದ್ದಾರೆ.

**ಶ್ರೀ ನಾರಾಯಣ ಸಾ. ಭಾಂಡಗೆ:–** ಮಾನ್ಯ ಸಭಾಪತಿಗಳೆ, ನಮ್ಮ ಜನರನ್ನು ಬಿಟ್ಟಿರುವುದಿಲ್ಲ. ಕೇವಲ ಉಗ್ರಪ್ಪನವರ ಕಡೆಯಿಂದ ಬಂದವರಿಗೆ ಮಾತ್ರ ಬಿಟ್ಟಿದ್ದಾರೆ.

**ಆ) ಉಡುಪಿಯಲ್ಲಿ ಆಸ್ಪತ್ರೆ ನಿರ್ಮಾಣದ ಗುತ್ತಿಗೆ ಮೊತ್ತ ಪಾವತಿಸುವ ಕುರಿತು.**

---------

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕೆಎಚ್ಎಸ್ಡಿಪಿ/ಕೆಎಚ್ಎಸ್ಡಿಆರ್‌ಪಿ ಯೋಜನೆಯನ್ವಯ 1998ರಲ್ಲಿ ಉಡುಪಿಯಲ್ಲಿ ತಾಲ್ಲೂಕು ಮಟ್ಟದ ಆಸ್ಪತ್ರೆಯ ನಿರ್ಮಾಣದ ಕುರಿತಾಗಿ ಗುತ್ತಿಗೆದಾರರೊಂದಿಗೆ ಒಪ್ಪಂದ ಮಾಡಿಕೊಂಡಿದ್ದು, ಈ ಸಂಬಂಧ ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರು 1998ರಲ್ಲಿ ತಾಲ್ಲೂಕು ಮಟ್ಟದ ಆಸ್ಪತ್ರೆಯ ನಿರ್ಮಾಣದ ಕೆಲಸವನ್ನು ಟೆಂಡರ್ ಪ್ರಕ್ರಿಯೆ ಮುಖಾಂತರ ವಹಿಸಿ ಒಟ್ಟು ರೂ. 3.60 ಕೋಟಿ ಮೊತ್ತದ ಕಾಮಗಾರಿಯನ್ನು ಪ್ರಾರಂಬಿಸಿದ್ದರು. ಈ ಹಂತದಲ್ಲಿ ಉಡುಪಿ ತಾಲ್ಲೂಕು ಜಿಲ್ಲೆಯಾಗಿ ಉನ್ನತೀಕರಣಗೊಂಡಿರುವುದನ್ನು ಪರಿಗಣಿಸಿ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಇಂಜಿನಿಯರಿಂಗ್ ವಿಭಾಗ ಇದೇ ಗುತ್ತಿಗೆದಾರರ ಮೂಲಕ ಜಿಲ್ಲಾ ಆಸ್ಪತ್ರೆಯ ನಿರ್ಮಾಣಕ್ಕಾಗಿ ಸುಮಾರು 14.3 ಕೋಟಿ ರೂಪಾಯಿಯ ಹೆಚ್ಚುವರಿ ಕಾಮಗಾರಿಯನ್ನು ಮಾಡಿಸಿದ್ದು 2001ರಲ್ಲಿ ಕಾಮಗಾರಿಯು ತೃಪ್ತಿಕರವಾಗಿ ಪೂರ್ಣಗೊಂಡಿದ್ದು ಗುತ್ತಿಗೆದಾರರು ಕಟ್ಟಡವನ್ನು ಇಲಾಖೆಗೆ ಹಸ್ತಾಂತರಿಸಿದ್ದು ಅಂದೇ ಅಧಿಕೃತವಾಗಿ ಕಾರ್ಯನಿರ್ವಹಿಸುತ್ತಿದೆ. ಆದರೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಗುತ್ತಿಗೆದಾರರಿಗೆ ಇದುವರೆಗೂ ಹಣವನ್ನು ಪಾವತಿಸಿರುವುದಿಲ್ಲ. ಮಾನ್ಯ ನ್ಯಾಯಾಲಯವು 03–09–2010, 19–01–2011 ಹಾಗೂ 09–01–2014ರಲ್ಲಿ ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರಿಗೆ 18% ಬಡ್ಡಿಯನ್ನು ಸೇರಿಸಿ ಬಾಕಿ ಪಾವತಿಸುವಂತೆ ಆದೇಶ ನೀಡಿದ್ದರೂ ಇದರಿಂದ ಸರ್ಕಾರದ ಮೇಲೆ ನಿತ್ಯ ಆರ್ಥಿಕ ನಷ್ಟ ಉಂಟಾಗುತ್ತಿರುವುದರಿಂದ ಗುತ್ತಿಗೆದಾರರಿಗೆ ಕೂಡಲೇ ಬಾಕಿ ಹಣ ಪಾವತಿಸುವಂತೆ ಹಾಗೂ 16 ವರ್ಷಗಳ ಈ ಸಮಸ್ಯೆಗೆ ಪರಿಹಾರಕಂಡುಕೊಳ್ಳುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಲೋಕೋಪಯೋಗಿ ಇಲಾಖೆಯಿಂದ ಮಾಹಿತಿ ತರಿಸಿಕೊಂಡು ಉತ್ತರವನ್ನು ಕೊಡಲಾಗುತ್ತದೆ.

**ಇ) ನಾರ್ವೆ ಮಾದರಿಯ ಗೋಡೆ ನಿರ್ಮಾಣದಿಂದ ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳ ಗ್ರಾಮಗಳನ್ನು ರಕ್ಷಿಸಬಹುದಾಗಿದೆ ಎಂಬ ವರದಿ ಕುರಿತು**

---------

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಆಲಮಟ್ಟಿ ಹಿನ್ನೀರಿನಿಂದ ಮುಳುಗಡೆಯಾಗಿ ಭಾದಿತಗೊಳ್ಳುವ ಗ್ರಾಮಗಳನ್ನು ರಕ್ಷಿಸುವ ಸಂಬಂಧ ನಾರ್ವೆ ಮಾದರಿ ತಡೆಗೋಡೆಯನ್ನು ನಿರ್ಮಿಸುವ ಕುರಿತು ಕನ್ನಡಪ್ರಭ ದಿನ ಪತ್ರಿಕೆಯಲ್ಲಿ ವರದಿಯಾಗಿದೆ. ಸರ್ಕಾರವು ಭಾರತೀಯ ವಿಜ್ಞಾನ ಸಂಸ್ಥೆಯ ಪ್ರಾಧ್ಯಾಪಕರಾದ ಪ್ರೊ: ಶ್ರೀನಿವಾಸಮೂರ್ತಿ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿತ್ತು. ಸದರಿ ಸಮಿತಿಯು ವರದಿಯನ್ನು ತಯಾರಿಸಿ ಸಲ್ಲಿಸಿದ್ದು ನಾರ್ವೆ ಮಾದರಿ ಗೋಡೆಯನ್ನು ನಿರ್ಮಿಸಲು ಅಂದಾಜು 500 ಕೋಟಿ ರೂಪಾಯಿಗಳು ಖರ್ಚಾಗುತ್ತದೆ ಎಂದು ತಿಳಿಸಿರುತ್ತದೆ. ಆಲಮಟ್ಟಿ ಅಣೆಕಟ್ಟಿನಲ್ಲಿ ಹಾಲಿ 519.60 ಮೀಟರ್‌ಗೆ ನೀರನ್ನು ನಿಲ್ಲಿಸಲಾಗುತ್ತಿದೆ. ಅಣೆಕಟ್ಟಿನ ಎತ್ತರವನ್ನು 524.225 ಮೀಟರ್‌ಗೆ ಹೆಚ್ಚಳ ಮಾಡುವುದರಿಂದ ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳ 22 ಗ್ರಾಮಗಳು ಮುಳುಗಡೆಯಾಗಲಿವೆ. ನಾರ್ವೆ ಮಾದರಿಯ ಗೋಡೆಯ ನಿರ್ಮಾಣದಿಂದ ಬಾಗಲಕೋಟೆ ಹಾಗೂ ವಿಜಯಪುರ ಜಿಲ್ಲೆಯ 12 ಗ್ರಾಮಗಳನ್ನು ರಕ್ಷಿಸಬಹುದಾಗಿದೆ ಎಂದು ವರದಿಯಾಗಿದೆ. ಈ ಯೋಜನೆಯ ವಿವರಗಳೇನು? ನಾರ್ವೆ ಮಾದರಿಯ ಗೋಡೆಯ ನಿರ್ಮಾಣದಿಂದ ಎಷ್ಟು ಪ್ರಮಾಣದ ನೀರು ಹಿಂದೆ ಸರಿಯುವುದು? ಆ ನೀರಿನಿಂದ ಭಾದಿತಗೊಳ್ಳುವ ಜಮೀನಿನ ಪ್ರಮಾಣವೆಷ್ಟು? ಈ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಕ್ಕೆ ಅನುಷ್ಠಾನಕ್ಕೆ ವಿಳಂಬ ಅಥವಾ ಆಗುವ ವ್ಯತಿರಿಕ್ತ ಪರಿಣಾಮಗಳೇನು ಎನ್ನುವ ವಿಷಯಗಳು ಸಾರ್ವಜನಿಕವಾಗಿ ಚರ್ಚೆಯಾಗುತ್ತಿದ್ದು, ಈ ವಿಷಯದ ವಿವರಗಳನ್ನು ಹಾಗೂ ಸರ್ಕಾರದ ಉತ್ತರವನ್ನು ನೀಡಬೇಕೆಂದು ಸರ್ಕಾರವನ್ನುಕೋರುತ್ತೇನೆ.

**ಶ್ರೀ ಎ.ಬಿ. ಪಾಟೀಲ್ (ಜಲಸಂಪನ್ಮೂಲ ಸಚಿವರು):– ಮಾನ್ಯ ಸಭಾಪತಿಗಳೆ,** ಇದು ಎರಡು ವಿಷಯಗಳನ್ನು ಒಳಗೊಂಡಿದೆ. ಆಲಮಟ್ಟಿ ಅಣೆಕಟ್ಟಿನ ಹಿನ್ನೀರಿನಿಂದ ಸುಮಾರು ಒಂದು ಲಕ್ಷ ಎಕರೆ ಜಮೀನು ಮುಳಗಡೆಯಾಗುತ್ತದೆ. ಆ ಮುಳಗಡೆಯಾಗುವುದನ್ನು ಎಷ್ಟು ಸಾಧ್ಯ ಅಷ್ಟು ಕಡಿಮೆ ಮಾಡಲು ಪ್ರಕ್ರಿಯೆ ಪ್ರಾರಂಭ ಮಾಡಿದ್ದೇವೆ. ಜಾಗತಿಕ ಮಟ್ಟದ expression ಕರೆದಿದ್ದೇವೆ. ಅದರ RFP (Request For Proposal) ಮಾಡುವ ಹಂತದಲ್ಲಿದ್ದೇವೆ. ಎರಡನೆಯದಾಗಿ, ನಮ್ಮಲ್ಲಿಯೇ ಇರುವ Prof. ಶ್ರೀನಿವಾಸ್ ಮೂರ್ತಿ ಎನ್ನುವವರು ಹಿನ್ನೀರಿನಿಂದ ಮುಳಗಡೆಯಾಗುತ್ತಿರುವ 22 ಗ್ರಾಮಗಳಿಗೆ ಭೇಟಿ ಕೊಟ್ಟು ಇವುಗಳಲ್ಲಿ ಯಾವುದಾದರೂ ಗ್ರಾಮವನ್ನು ರಕ್ಷಿಸಲು ಸಾಧ್ಯವೇ ಎನ್ನುವ ಕೆಲಸದಲ್ಲಿ

ಅವರು ತೊಡಗಿದ್ದಾರೆ. ಅವರು ವರದಿಯನ್ನು ಇನ್ನು ನಮಗೆ ಕೊಟ್ಟಿರುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆಯುವ UKP High Level Committee ಮುಂದೆ ಅವರು ವರದಿಯನ್ನು presentation ಮಾಡುವವರಿದ್ದಾರೆ. ಅವರು ವರದಿ ಕೊಟ್ಟ ಮೇಲೆ ಅದರ ಸಾಧಕ–ಬಾಧಕಗಳನ್ನು ತಿಳಿದುಕೊಂಡು ಮುಂದಿನ ಹೆಜ್ಜೆಯನ್ನು ನಾವು ಇಡುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದರಿಂದ ವಿಳಂಬವಾಗುತ್ತದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ ಇದರಿಂದ ವಿಳಂಬವಾಗುವುದಿಲ್ಲ, ಬೇಗ ಕೆಲಸ ಮಾಡಲು ಇದರಿಂದ ಸಾಧ್ಯವಾಗುತ್ತದೆ. ಇದು ಪರಿಶೀಲನೆಯ ಹಂತದಲ್ಲಿದೆ. High Level Committee ಯಲ್ಲಿ ಅದರ ಸ್ಪಷ್ಟವಾದ ಚಿತ್ರಣ ಬರುತ್ತದೆ.

**ಸಭಾಪತಿಯವರು:–** ಮಾನ್ಯ ಟಿ.ಎ. ಶರವಣರವರು ನೋಟಿಸ್ ಕೊಟ್ಟು ಗೈರು ಹಾಜರಾಗಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:–** ನನಗೆ ಅವಕಾಶ ಕೊಡಿ.

**ಸಭಾಪತಿಯವರು:–** ನಮ್ಮ ನಿಯಮಗಳ ಪ್ರಕಾರ ಮೂರು ಶೂನ್ಯವೇಳೆ ನೋಟಿಸ್‌ಗಳಿಗೆ ಅವಕಾಶವನ್ನು ಕೊಡಲಾಗುತ್ತದೆ. ಮೊದಲು ಬಂದಿರುವ ಮೊದಲ ಮೂರು ನೋಟಿಸ್‌ಗಳನ್ನು note ಮಾಡಲು ಹೇಳಿದೆ. ಆ ಮೂರು ನೋಟಿಸ್‌ಗಳಿಗೆ ಅವಕಾಶ ಕೊಟ್ಟಿದ್ದೇನೆ. ನಾಲ್ಕನೇ ನೋಟಿಸ್‌ಗೆ ಅವಕಾಶ ಕೊಡಲು ಆಗುವುದಿಲ್ಲ. ದಯಮಾಡಿ ಕ್ಷಮಿಸಬೇಕು.

## 3. <u>ಸಚಿವರ ಹೇಳಿಕೆ</u>

**ವಿಷಯ: ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕಿನ ಮಲ್ಲಘಟ್ಟ ಕೆರೆಯ ಮೀನು ಪಾಶುವಾರು ಹಕ್ಕನ್ನು 5 ವರ್ಷಗಳ ಅವಧಿಗೆ ಮೀನುಗಾರರ ಸಹಕಾರ ಸಂಘ (ನಿ) ಮಲ್ಲಘಟ್ಟ, ತುರುವೇಕೆರೆ ತಾಲ್ಲೂಕು ಸಂಘಕ್ಕೆ ನೇರಗುತ್ತಿಗೆ ನೀಡುವ ಬಗ್ಗೆ.**

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು) (ಯುವ ಸಬಲೀಕರಣ ಮತ್ತು ಕ್ರೀಡಾ ಮತ್ತು ಮೀನುಗಾರಿಕೆ ಸಚಿವರ ಪರವಾಗಿ):–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) ಇವರು ನಿಯಮ 330ಎ ರ ಮೇರೆಗೆ ನೀಡಿರುವ ಸೂಚನೆಗೆ ಸರ್ಕಾರದ ಹೇಳಿಕೆಯು ಈ ಕೆಳಕಂಡಂತೆ ಇರುತ್ತದೆ.

"ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕಿನ ಮಲ್ಲಘಟ್ಟ ಕೆರೆಯ ಮೀನು ಪಾಶುವಾರು ಹಕ್ಕನ್ನು 2014–15ನೇ ಸಾಲಿನಿಂದ 5 ವರ್ಷಗಳ ಅವಧಿಗೆ ಅಂದರೆ ದಿನಾಂಕ: 01–07–2014 ರಿಂದ 30–06–2019 ರವರೆಗೆ ಮೀನುಗಾರರ ಸಹಕಾರ ಸಂಘ (ನಿ), ಮಲ್ಲಘಟ್ಟ, ತುರುವೇಕೆರೆ ತಾಲ್ಲೂಕು ಈ ಸಂಘಕ್ಕೆ ನೇರ ಗುತ್ತಿಗೆ ಮುಖಾಂತರ ಗುತ್ತಿಗೆಗೆ ನೀಡಿ ಆದೇಶಿಸಲಾಗಿದೆ.

ಸದರಿ ಸಂಘದವರು ದಿನಾಂಕ: 13–04–2015 ರಂದು ಅಕ್ರಮವಾಗಿ ಮೀನು ಹಿಡಿದವರ ಮೇಲೆ ಪೊಲೀಸರಿಗೆ ದೂರು ನೀಡಿದ್ದು, ದಿನಾಂಕ: 14–04–2015 ರಂದು ತುರುವೇಕೆರೆ ಪೊಲೀಸ್ ಠಾಣೆಯಿಂದ ಸ್ವೀಕೃತಿ ನೀಡಲಾಗಿದೆ.

ದಿನಾಂಕ: 16–04–2015 ರಂದು ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–2), ತುವೇಕೆರೆ ಇವರು ತುರುವೇಕೆರೆ ಪೊಲೀಸ್ ಠಾಣೆಗೆ ದೂರು ನೀಡಿ ಕದ್ದು ಮೀನು ಹಿಡಿಯುತ್ತಿರುವ ಬಗೆಗೆ ತೆಗೆದ ವಿಡಿಯೋ ಚಿತ್ರೀಕರಣದ ಸಿ.ಡಿ. ಲಗತ್ತಿಸಿ ಕಾನೂನು ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

ದಿನಾಂಕ: 16–04–2015 ರಂದು ಸಂಜೆ 4.00 ಗಂಟೆಗೆ ಫಿರ್ಯಾದುದಾರರು ಠಾಣೆಗೆ ಹಾಜರಾಗಿ ನೀಡಿದ ಕಂಪ್ಯೂಟರ್ ಮುದ್ರಿತ ದೂರು ಮತ್ತು ಸಿ.ಡಿ.ಯನ್ನು ಠಾಣೆ ಮೊಕದ್ದಮೆ ಸಂಖ್ಯೆ 64/15 ಕಲಂ 379 ಐಪಿ ರೀತ್ಯಾ ಪ್ರಕರಣ ದಾಖಲಿಸಲಾಗಿದೆ.

ಸದರಿ ಸಂಘದವರು ವಿಷಯದ ಕುರಿತು ಸಿವಿಲ್ ಜಡ್ಜ್ ನ್ಯಾಯಾಲಯ, ತುರುವೇಕೆರೆ, ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಓ.ಎಸ್. ಸಂಖ್ಯೆ: 114/2014 ರಲ್ಲಿ ಮೊಕದ್ದಮೆ ದಾಖಲಿಸಿದ್ದು, ನ್ಯಾಯಾಲಯವು ಮಧ್ಯಂತರ ಆದೇಶ ನೀಡಿ ಮುಂದಿನ ಆದೇಶದವರೆಗೆ ಪ್ರತಿವಾದಿಗಳು ಮೀನು ಹಿಡಿಯದಂತೆ ತಾತ್ಕಾಲಿಕ ತಡೆ ಆದೇಶ ನೀಡಿದೆ."

## 4. ನಿಲುವಳಿ ಸೂಚನೆ

**ವಿಷಯ: ವಿಧಾನ ಪರಿಷತ್ತಿನ ಸೃಷ್ಟಿಕರ್ತ ವಿಧಾನಸಭೆ ಎಂದು ಕಾನೂನು ಸಚಿವರು ನೀಡಿರುವ ಹೇಳಿಕೆ ಬಗ್ಗೆ.**

---------

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ಸಂವಿಧಾನಾತ್ಮಕವಾಗಿ ಸೃಷ್ಟಿಸಿದ ಹಾಗೂ ರಾಷ್ಟ್ರದಲ್ಲಿಯೇ ಅತ್ಯಂತ ಹಿರಿತನ ಇರುವ ಕರ್ನಾಟಕ ವಿಧಾನ ಪರಿಷತ್ತಿನ ಅಸ್ತಿತ್ವದ ಕುರಿತಾಗಿ ಸದನ ನಡೆಯುತ್ತಿರುವ ಈ ಸಂದರ್ಭದಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಮಾನ್ಯ ಶ್ರೀ ಟಿ.ಬಿ. ಜಯಚಂದ್ರರವರ ಪ್ರಜಾಪ್ರಭುತ್ವ ವಿರೋಧಿ ಹಾಗೂ ಸಂವಿಧಾನ ವಿರೋಧಿ ಹೇಳಿಕೆಗಳು ಸಾರ್ವಜನಿಕವಾಗಿ ಪ್ರಕಟವಾಗುತ್ತಿರುವ ಹಿನ್ನೆಲೆಯಲ್ಲಿ, ಮಾನ್ಯ ಕಾನೂನು ಸಚಿವರು ಯಾವ ಉದ್ದೇಶದಿಂದ ಈ ರೀತಿಯ ಹೇಳಿಕೆಯನ್ನು ಕೊಟ್ಟಿದ್ದಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಏಕೆಂದರೆ ಕರ್ನಾಟಕ ರಾಜ್ಯದ ವಿಧಾನ ಪರಿಷತ್ತಿನ ಬಗ್ಗೆ ಹಗುರವಾದ ಭಾವನೆಗಳು ಬರುವ ರೀತಿಯಲ್ಲಿ ಮಾನ್ಯ ಜಯಚಂದ್ರರವರು ಹೇಳಿಕೆಗಳನ್ನು ಕೊಡುತ್ತಿದ್ದಾರೆ. "ವಿಧಾನ ಪರಿಷತ್ತಿನ ಸೃಷ್ಟಿಕರ್ತ ವಿಧಾನಸಭೆ" ಎಂದು ಈ ರೀತಿಯ ಹೇಳಿಕೆ ಕೊಟ್ಟು ವಿಧಾನಸಭೆಯಿಂದ ವಿಧಾನಪರಿಷತ್ತು ಸೃಷ್ಟಿಯಾಗಿದೆ ಎನ್ನುವ ಅರ್ಥ ಅವರ ಮಾತಿನಿಂದ ಬರುತ್ತದೆ. ಮಾನ್ಯ ಕಾನೂನು ಸಚಿವರು ಕಾನೂನು ತಜ್ಞರು ಆಗಿದ್ದಾರೆ ಮತ್ತು ಕಾನೂನು ಸಚಿವರು ಆಗಿದ್ದಾರೆ. ನಾನು ಕಾನೂನು ತಜ್ಞನೂ ಅಲ್ಲ, ಕಾನೂನು ಮಂತ್ರಿಯೂ ಅಲ್ಲ. ಆದರೆ ವಿಧಾನಸಭೆ-ವಿಧಾನಪರಿಷತ್ತು ಯಾರ ಸೃಷ್ಟಿಯಲ್ಲ. ಇವು ಸಂವಿಧಾನದ ಸೃಷ್ಟಿ. ಸಂವಿಧಾನದ ಸೃಷ್ಟಿಯನ್ನು ಪ್ರಶ್ನೆ ಮಾಡುವ ಅಧಿಕಾರ ಯಾರಿಗೂ ಇಲ್ಲ. ನಿಮಗೂ ಕೂಡಾ ಇಲ್ಲ.

**ಶ್ರೀ ಅಲ್ಲಮಪ್ರಭು ಪಾಟೀಲ್:-** ಮಾನ್ಯ ಸಭಾಪತಿಗಳೆ,

**(ಗೊಂದಲ)**

**ಡಾ. ಸಿ.ಎನ್. ಅಶ್ವಥ್ ನಾರಾಯಣ:-** ನಮ್ಮವರು- ನಿಮ್ಮವರು ಎಲ್ಲರೂ ಸುಮ್ಮನೆ ಕುಳಿತು ಕೇಳುತ್ತಿದ್ದಾರೆ. ನೀವು ಕುಳಿತುಕೊಳ್ಳಿ. ಬಾಕಿಯವರೆಲ್ಲರೂ ಸುಮ್ಮನೆ ಕುಳಿತ್ತಿಲ್ಲವೇ? ನೀವು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಅವರು ಉತ್ತರ ಕೊಡಲಿ ಎಂದು ಅವರ ಪರವಾಗಿ ಕೇಳುತ್ತಿದ್ದೇನೆ. ಇದು ಭಾರತೀಯ ಜನತಾ ಪಕ್ಷದ ಪ್ರಶ್ನೆ ಅಲ್ಲ.

**ಶ್ರೀ ನಾಗರಾಜು ಎಸ್. (ಸಂದೇಶ್ ನಾಗರಾಜ್):–** ಈಗಲೇ ರಾಜೀನಾಮೆ ಕೊಟ್ಟು ಹೊರಟು ಹೋಗಿಬಿಡುತ್ತಾರಲ್ಲ, ಹಾಗೆ ಈಗಲೇ ಹೊರಟು ಹೋಗಿ ಬಿಡಲಿ. ಅವರು ಕೊಟ್ಟು ಹೋಗಲಿ.

**(ಗೊಂದಲ)**

**ಶ್ರೀ ಸೀತಾರಾಂ ಎಂ.ಆರ್.:–** ಅವರಿಗೆ ಪೂರಕವಾಗಿ ಮಾತನಾಡಿರುವುದು. ಅವರು ಸಭಾತ್ಯಾಗ ಮಾಡುತ್ತಾರೆ ಎಂದಲ್ಲ, ಅವರಿಗೆ ಸಮರ್ಥನೆ ಮಾಡಿರುವುದು. ಅವರು ಉತ್ತರ ಹೇಳಲಿ ಎಂದು ಹೇಳಿರುವುದು. ಅದಕ್ಕೆ ಮೇಲೆ ಬಿದ್ದರೆ ಏನು ಪ್ರಯೋಜನ?

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ನನ್ನ ವಿನಂತಿ ಏನೆಂದರೆ, ಅವರು ಹೇಳಿಕೆ ಕೊಟ್ಟಿದ್ದಾರೋ ಇಲ್ಲವೊ ಗೊತ್ತಿಲ್ಲ. ಪತ್ರಿಕೆಗಳಲ್ಲಿ ಪ್ರಕಟವಾದ ವಿಚಾರಗಳಿಂದ ಹೇಳುತ್ತಿದ್ದೇವೆ. ಅದರ ಮೇಲೆ ಚರ್ಚೆ ಮಾಡಿದಾಗ ಸರ್ಕಾರಕ್ಕೆ ಉತ್ತರ ಹೇಳುವ ಅಧಿಕಾರ ಇರುವುದರಿಂದ ಉತ್ತರ ಹೇಳಲಿ. ಇದೊಂದು ಸಾರಿ ಈ ರೀತಿಯ ಗೊಂದಲಮಯ ವಾತಾವರಣ ತಿಳಿಯಾಗಬೇಕು ಮತ್ತು ಸ್ಪಷ್ಟ ಅಭಿಪ್ರಾಯ ಬರಬೇಕೆಂಬ ದೃಷ್ಟಿಯಿಂದ pursue ಮಾಡಿದ್ದೇವೆ. ದಯಮಾಡಿ ನಾವು ಹೇಳುವುದನ್ನು ಸರ್ಕಾರ ಕೇಳಲಿ, ನಂತರ ಉತ್ತರ ಹೇಳುವ ಅಧಿಕಾರ ಇದೆ.

**ಸಭಾಪತಿಯವರು:–** ಇದೊಂದು ಸ್ವಲ್ಪ ಎಲ್ಲರ ಮನಸ್ಸಿನಲ್ಲಿ ಕಿರಿಕಿರಿಯಾಗುವ ಒಂದು ತರಹದ ಸ್ವಭಾವದ ವಿಷಯವಾಗಿದ್ದು, ಇದರ ಬಗ್ಗೆ ಉದ್ವೇಗಕ್ಕೆ ಒಳಗಾಗಿ ಚರ್ಚೆ ಮಾಡಿದರೆ ಚರ್ಚೆ ಎಲ್ಲಿಗೋ ಹೋಗಿಬಿಡುತ್ತದೆ. ಮಾನ್ಯ ಹೊರಟ್ಟಿಯವರು ಹೇಳಿದಂತೆ ನೇರ ಮತ್ತು ಸಮಾಧಾನವಾಗಿ ಮಾತನಾಡೋಣ. ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಹೊರಟ್ಟಿಯವರು ಮಾತನಾಡಲಿ. ಸರ್ಕಾರದ ಪರವಾಗಿ ಕಾನೂನು ಸಚಿವರು ಹಾಜರಿದ್ದು ಅವರು ಏನು ಹೇಳುತ್ತಾರೋ, ಅದನ್ನು ಕೇಳಿ ಮುಗಿಸೋಣ. ವಿಪಕ್ಷ ನಾಯಕರು ಎರಡು ನಿಮಿಷ ಮಾತನಾಡಲಿ.

**(ಗೊಂದಲ)**

**ಶ್ರೀ ಆರ್.ವಿ. ವೆಂಕಟೇಶ್:–** ಅವರು ಪತ್ರಿಕೆಗಳಲ್ಲಿ ಅದು–ಇದು ಬಂದಿದೆ ಎಂದು ಮಾತನಾಡುತ್ತಾರೆ, ಅದಕ್ಕೆ ಉತ್ತರ ಕೊಟ್ಟುಕೊಂಡು ಹೋಗಬೇಕೆ?

**ಶ್ರೀ ಬಸವರಾಜ ಹೊರಟ್ಟಿ:–** ಇದರ ಬಗ್ಗೆ ಕ್ಲಿಯರ್ ಆಗಲಿ, ಇದರಿಂದ ಅವರಿಗೂ ನಮಗೂ ಕ್ಲಿಯರ್ ಆಗುತ್ತದೆ.

**ಶ್ರೀ ಟಿ.ಬಿ. ಜಯಚಂದ್ರ:–** ನೋಟೀಸ್ ಕೊಟ್ಟಿರುವುದು ಸರ್ಕಾರಕ್ಕೆ ಬಂದಿದೆ. ಇದರ ಬಗ್ಗೆ ಚರ್ಚೆ ನಡೆಯಬೇಕು ಎಂದರೆ ನನ್ನದೇನೂ ತಕರಾರಿಲ್ಲ. ಆದರೆ ವಸ್ತುಸ್ಥಿತಿ ಏನು ಎಂಬುದನ್ನು ......

**ಶ್ರೀ ಬಸವರಾಜ ಹೊರಟ್ಟಿ:–** ಅವರು ವಸ್ತುಸ್ಥಿತಿ ಹೇಳಲಿ, ನಾವು ಅದರ ಬಗ್ಗೆ ಟೀಕೆ ಮಾಡುವುದಿಲ್ಲ, ಅವರನ್ನು embarrass ಮಾಡುವುದಿಲ್ಲ. ಇದರ ಬಗ್ಗೆ politely ಚರ್ಚೆಯಾಗಲಿ. ಇದರಲ್ಲಿ ತಪ್ಪೇನಿಲ್ಲ. ಸಹಕಾರ ಮಾಡಬೇಕು.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ವಿಜಯವಾಣಿ ಪತ್ರಿಕೆಯಲ್ಲಿ ಬಂದಿರುವ ಬಗ್ಗೆ ಗಮನಕ್ಕೆ ತರುತ್ತಿದ್ದು, ಇದನ್ನು ಪೂರ್ಣ ಓದದೇ ನಮ್ಮೆಲ್ಲರಿಗೂ ಅಘಾತವಾಗುವ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದರಲ್ಲಿ "ಜನರಿಂದ ಆಯ್ಕೆಯಾದ ವಿಧಾನ ಸಭಾ ಸದಸ್ಯರು ಒಪ್ಪಿದ ಮಸೂದೆ ಬಗ್ಗೆ ಚರ್ಚಿಸಿ, ಸಲಹೆ ನೀಡುವುದು ಪರಿಷತ್ತಿನ ಕೆಲಸ" ಎಂದಿದೆ. ಅಂದರೆ ಇಲ್ಲಿ ನಮಗೆ ಬೇರೆ ಏನೂ ಉದ್ಯೋಗ ಇಲ್ಲ. ವಿಧಾನ ಸಭೆಯಲ್ಲಿ ತೀರ್ಮಾನವಾಗಿ ಬಂದಮೇಲೆ ಸಲಹೆ ಕೊಡುವುದು, ಆ ಸಲಹೆಯನ್ನು ಒಪ್ಪಿಕೊಳ್ಳುವುದು ಅವರಿಗೆ ಸಂಬಂಧಪಟ್ಟಿದ್ದು ಎಂದಾಗಿದೆ. ಇದು ಮಾನ್ಯ ಜಯಚಂದ್ರರವರ ಉವಾಚ ಎಂದು ಪತ್ರಿಕೆಯಲ್ಲಿ ಬಂದಿದೆ. ಇನ್ನೊಂದು ಏನೆಂದರೆ ವಿಧಾನ ಸಭೆ ಪರಿಷತ್ತಿನ ಬ್ರಹ್ಮ ಎಂದು ಶೀರ್ಷಿಕೆ ಬಂದಿದೆ. ಅದರಲ್ಲಿ 'ವಿಧಾನ ಸಭೆಯಲ್ಲಿ ಅಂಗೀಕರಿಸಿದ ಮಸೂದೆ ಬಗ್ಗೆ ಚರ್ಚಿಸಿ ಸಲಹೆ ಕೊಡುವ ಕೆಲಸವನ್ನು ಪರಿಷತ್ತು ಮಾಡಬೇಕೆಂದು ಸಚಿವ ಡಿ.ಬಿ. ಜಯಚಂದ್ರ ಇಲ್ಲಿ ಶನಿವಾರ ಎಚ್ಚರಿಸಿದರು' ಎಂದು ಪ್ರಜಾವಾಣಿಯಲ್ಲಿ ಬಂದಿದೆ. ಇದರ ಬಗ್ಗೆ ಉತ್ತರ ಕೊಡಬೇಕೆಂದರೆ ಹೇಳಲಿ. ಅವರು ಎಚ್ಚರಿಕೆಯನ್ನು ಕೊಡಲಿ, dictate ಮಾಡಲಿ, ಸರ್ವಾಧಿಕಾರಿ ಧೋರಣೆ ಮಾಡಲಿ, ಅವರು ಏನು ಬೇಕಾದರೂ ಮಾಡಲಿ.

**ಶ್ರೀ ಬಸವರಾಜ ಹೊರಟ್ಟಿ:–** ತಾವು ಆ ಕಡೆ ಮಾತನಾಡಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಆ ಕಡೆ ಮಾತನಾಡುವುದು ಸರಿ, ನಾನು ಈ ಕಡೆ ನೋಡಿದರೆ ಸ್ವಲ್ಪ ಅವರ heart ಗೆ touch ಆಗಲಿ ಎಂದು ಹೇಳುತ್ತಿದ್ದೇನೆ. ಬೇರೆ ಏನೂ ಉದ್ದೇಶ ಇಲ್ಲ. ಉದಯವಾಣಿ ಪತ್ರಿಕೆಯಲ್ಲಿ ಮಾನ್ಯ ಜಯಚಂದ್ರರವರು ಹಾಗೂ ಮಾನ್ಯ ಸಭಾಪತಿಯವರ ಫೋಟೋಗಳು ಬಂದಿದ್ದು, ಅದರಲ್ಲಿ 'ವಿಧಾನ ಪರಿಷತ್ತು ತನ್ನ ಸೃಷ್ಟಿಕರ್ತನಾದ ವಿಧಾನ ಸಭೆಗೆ ಒಂದು ಸಲಹಾ ಸಂಸ್ಥೆಯಾಗಿ ಕೆಲಸ

ಮಾಡಬೇಕೆ ಹೊರತು, ಸವಾರಿ ಮಾಡುವಂತಿಲ್ಲ. ವಿಧಾನ ಪರಿಷತ್ತು ರಾಜಕೀಯಕ್ಕೆ ಬಳಕೆಯಾದರೆ ಅದರ ರದ್ದತಿಯ ಚಿಂತನೆಗೆ ಬರಬಹುದು' ಎಂದಿದೆ. ಶ್ರೀ ಡಿ.ಬಿ. ಜಯಚಂದ್ರರ ಫೋಟೋ ಸಮೇತ ಬಂದಿದೆ. ಮಾನ್ಯ ಸಭಾಪತಿಯವರು 'ಭಾರತದ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ರಾಜ್ಯದ ವಿಧಾನ ಪರಿಷತ್ತು ಅತ್ಯಂತ ಹಿರಿಯದಾಗಿದ್ದು, ಪರಿಷತ್ತಿನಲ್ಲಿ ತಜ್ಞರಿರುವುದರಿಂದ ಚರ್ಚೆಗೆ ಸಾಕಷ್ಟು ಅವಕಾಶಗಳಿವೆ, ಇದನ್ನು ರದ್ದುಗೊಳಿಸುವ ಚರ್ಚೆಯೇ ಸರಿಯಲ್ಲ' ಎಂದು ಅವರ ಫೋಟೋ ಸಮೇತ ಬಂದಿದೆ. ಅವರು ಹೇಳಿಕೆ ಕೊಟ್ಟಿದ್ದಾರೋ ಇಲ್ಲವೋ ಎಂದು ಮಾನ್ಯ ಸಭಾಪತಿಯವರೇ ಹೇಳಬೇಕು. ನನಗೆ ಗೊತ್ತಿಲ್ಲ!. ಇದು ಪತ್ರಿಕೆಗಳಲ್ಲಿ ಬಂದಿದೆ. ಮಾನ್ಯ ಸಚಿವರು ಮುಕ್ಕಾಲು ಪಾಲು ಹೇಳಿಕೆ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಈಗ ಮಾನ್ಯ ಸಭಾಪತಿಯವರಾದರೂ ಹೇಳಬೇಕಾಗುತ್ತದೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೇ, .....

**ಶ್ರೀ ಕೆ.ಎಸ್. ಈಶ್ವರಪ್ಪ:–** ಇಲ್ಲಿ ಪ್ರಶ್ನೆ ಏನೆಂದರೆ ವಯಸ್ಸಾದ ಹಾಗೆ urgency ಜಾಸ್ತಿ ಬರುತ್ತದೆಯೇ? ಇಲ್ಲವೇ? ಯುವಕರಿಗೆ ಸ್ಫೂರ್ತಿ ಇರಬೇಕು. ಮಾನ್ಯ ಸಭಾನಾಯಕರು ಹಾಗೂ ಶ್ರೀ ವೀರಣ್ಣ ಮತ್ತಿಕಟ್ಟಿಯವರು ಯಾವ ಯುವಕರಿಗೂ ಕಡಿಮೆ ಇಲ್ಲ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ನಾನು ಹೇಳುವುದೇನೆಂದರೆ ಮಾನ್ಯ ಸಚಿವರು ಹೇಳಿಕೆ ಕೊಟ್ಟಿಲ್ಲ ಎಂದು ಇವರು ಮೊದಲೇ ಹೇಳಿಬಿಟ್ಟರು. ಆ ರೀತಿ ಹೇಳಬಾರದು.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮತ್ತೆ ಇನ್ನೇನು ಹೇಳುತ್ತಾರೆ? ಇರಲಿ ಬಿಡಿ. ನಾನು ಹೇಳುವುದೇನೆಂದರೆ ಇದು ಇವತ್ತಿಗೆ ಕೊನೆಯಾಗಬೇಕು. ಇನ್ನು ಮುಂದೆ ಕರ್ನಾಟಕ ರಾಜ್ಯದ ವಿಧಾನ ಪರಿಷತ್ತಿನ ಬಗ್ಗೆ ಯಾರ ಬಾಯಲ್ಲೂ ಹಗುರವಾದ ಮಾತು ಬರಕೂಡದು. ಸಂವಿಧಾನಕ್ಕೆ ದ್ರೋಹವಾಗುತ್ತದೆ ಮತ್ತು ಪ್ರಜಾಪ್ರಭುತ್ವಕ್ಕೆ ಅನ್ಯಾಯವಾಗುತ್ತದೆ ಎಂಬುದು ನಮ್ಮ ಉದ್ದೇಶವೇ ವಿನ: ಮಾನ್ಯ ಜಯಚಂದ್ರರವರನ್ನು ನೇಣು ಹಾಕಬೇಕೆಂಬ ಉದ್ದೇಶ ಅಲ್ಲ. ಇದು ನಮ್ಮ ಆಸೆ, ಅವರ ಆಸೆಯೂ ಇದೇ ಆಗಬೇಕೆಂದು ನನ್ನ ಪ್ರಾರ್ಥನೆ. ಇದು ಪಕ್ಷಾತೀತವಾಗಿ ಆಗಬೇಕು. ವಿಧಾನ ಪರಿಷತ್ತು ಸಂವಿಧಾನದ ಹಕ್ಕು. ಇದನ್ನು ಅವರ್‍ಯಾರೂ ನಮಗೆ ಕೊಟ್ಟಿಲ್ಲ ಅಥವಾ ನಾವ್ಯಾರೂ ಅವರಿಗೆ ಕೊಟ್ಟಿಲ್ಲ. ಇದು ಸಂವಿಧಾನಾತ್ಮಕವಾಗಿ ಬಂದಿದೆ. ಆ ರೀತಿ ವಿಧಾನ ಪರಿಷತ್ತನ್ನು ರದ್ದು ಮಾಡುತ್ತೇವೆ ಎಂದು ಹೇಳಿಕೆ ಕೊಟ್ಟವರು ಸರ್ವಾಧಿಕಾರಿಗಳಾಗುತ್ತಾರೆ. ಅವರಿಗೆ ತಾಕತ್ತು ಇದ್ದರೆ ಮಾಡಲಿ.

**ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮಾನ್ಯ ಮುಖ್ಯಮಂತ್ರಿಯವರು ವಿಧಾನ ಪರಿಷತ್ತನ್ನು ರದ್ದು ಮಾಡುವ ಯಾವುದೇ ಚಿಂತನೆ

ನಮ್ಮಲ್ಲಿಲ್ಲ ಎಂದು ಈಗಾಗಲೇ ಒಂದು ಹೇಳಿಕೆ ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಹೇಳಿದ ಮೇಲೆ ಪದೇ ಪದೇ......

**(ಗೊಂದಲ)**

**Mr. CHAIRMAN:** One at a time. ಒಂದು ಸಾರಿ ಒಬ್ಬರು ಮಾತನಾಡಿ. One at a time, please.

**(ಗೊಂದಲ)**

**ಶ್ರೀ ವಿ. ಸೋಮಣ್ಣ:–** ಮಾನ್ಯ ಗೃಹ ಸಚಿವರು ಮಾನ್ಯ ಮುಖ್ಯಮಂತ್ರಿಗಳು ಹೇಳಿರುವ ಬಗ್ಗೆ ಹೇಳಿದರು. ಮಾನ್ಯ ಕಾನೂನು ಇಲಾಖೆಯು ಮುಖ್ಯಮಂತ್ರಿಗಳ ಅಧೀನದಲ್ಲಿರುವ ಇಲಾಖೆಯಾಗಿದೆ.

**(ಗೊಂದಲ)**

**ಶ್ರೀ ಕೆ.ಜೆ. ಜಾರ್ಜ್:–** ಕಾನೂನು ಸಚಿವರು ಸದನದಲ್ಲಿ ಇದ್ದಾರೆ.

**ಶ್ರೀ ವಿ. ಸೋಮಣ್ಣ:–** ಕಾನೂನು ಸಚಿವರು ಇದ್ದರೆ ಅವರು ಹೇಳುತ್ತಾರೆ, ಗೃಹ ಸಚಿವರಿಗೆ ಏನು ಕೆಲಸ?

**(ಗೊಂದಲ)**

**ಶ್ರೀ ಕೆ.ಜೆ. ಜಾರ್ಜ್:–** ಕರ್ನಾಟಕದ ವಿಚಾರ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅವರು ಆಂಧ್ರ ಪ್ರದೇಶ ಮತ್ತು ತಮಿಳು ನಾಡು ವಿಧಾನ ಸಭೆಗಳು ಆ ರೀತಿ ಮಾಡಿದ್ದಾರೆ, ಆದರೆ ನಾವು ಮಾಡಬೇಕೆಂದು ಹೇಳುತ್ತಿಲ್ಲ.

**(ಗೊಂದಲ)**

**ಶ್ರೀ ವಿ. ಸೋಮಣ್ಣ:–** ಅವರು ರದ್ದುಪಡಿಸಿದರೆ ನಮಗೇನೂ ಬೇಸರ ಇಲ್ಲ. ಆದರೆ ಒಂದು ಸತ್ಯ ಏನೆಂದರೆ, ಮಾನ್ಯ ಜಯಚಂದ್ರರವರಂತಹ ಬುದ್ಧಿಜೀವಿ ಮತ್ತು ಮುತ್ಸದ್ದಿ ಹಾಗೂ ಕಾನೂನು ಸಚಿವರು ಪ್ರಾಯಶ: ಎಲ್ಲೋ ಒಂದು ಕಡೆ ಕೆಳಮನೆಯಲ್ಲಿ ಕುಳಿತುಕೊಂಡು ಮೇಲ್ಮನೆ ಸದಸ್ಯರಿಗೆ ಧಮಕಿ ಹಾಕುವುದಾಗಲೀ, ಮತ್ತೊಂದು ಮಾಡುವುದಾಗಲೀ ಯಾವ ನ್ಯಾಯ ಎಂಬುದನ್ನು ಹೇಳಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿರುವ ಬಗ್ಗೆ ನಮಗೂ ಓದುವುದಕ್ಕೆ ಬರುತ್ತದೆ. ಆದರೆ ಮಾನ್ಯ ಜಯಚಂದ್ರರವರು ಮಾತನಾಡುವುದು ಎಷ್ಟರಮಟ್ಟಿಗೆ ಸರಿ?

**(ಗೊಂದಲ)**

**ಸಭಾಪತಿಯವರು:–** ದಯಮಾಡಿ ಕುಳಿತುಕೊಳ್ಳಿ.

**ಶ್ರೀ ವಿ. ಸೋಮಣ್ಣ:–** ನಾವು ಯಾರದೋ ಮರ್ಜಿಗೋಸ್ಕರ ಇಲ್ಲ. ಇವತ್ತು ಪಾರ್ಲಿಮೆಂಟ್‌ನಲ್ಲಿ ರಾಜ್ಯಸಭೆ ಇದೆ. ಬಹುತೇಕರು ಈ ಮನೆಯ ವ್ಯವಸ್ಥೆಯನ್ನು ಅರಿತು ಕೆಲಸ ಮಾಡುವುದು ನಮ್ಮೆಲ್ಲರ

ಕರ್ತವ್ಯ. ತಾವು ಹಿರಿಯರ ಮನೆ ಎಂದು ಹೇಳಿದಿರಿ. ಈ ಹಿರಿಯರ ಮನೆಯನ್ನು ರದ್ದುಪಡಿಸುವುದಾಗಿದ್ದರೆ ಮಾನ್ಯ ಮುಖ್ಯಮಂತ್ರಿಗಳು ರದ್ದುಪಡಿಸಲಿ. ನಮಗೇನೂ ಬೇಸರ ಇಲ್ಲ. ಆದರೆ ಎಲ್ಲೋ ಒಂದು ಕಡೆ ಕಿವಿಗೆ ಹೂ ಇಡುವ ಕೆಲಸಗಳು ಆಗುವುದು ಬೇಡ.

**ಶ್ರೀ ಕೆ.ಬಿ. ಶಾಣಪ್ಪ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಧಾನ ಮಂತ್ರಿಗಳೇ ರಾಜ್ಯ ಸಭಾ ಸದಸ್ಯರಾಗಿ ಸುಮಾರು ಹತ್ತು ವರ್ಷಗಳ ಕಾಲ ಈ ದೇಶವನ್ನು ಆಳ್ವಿಕೆ ಮಾಡಿರುವುದು ಕಾಂಗ್ರೆಸ್ ಪಕ್ಷದವರಿಗೆ ನೆನಪಿಲ್ಲವೆಂದು ಕಾಣುತ್ತದೆ. How can you say that by threatening this House? Kindly don't threaten this House?

**ಶ್ರೀ ಎಸ್.ಆರ್. ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ನೀಡುವ ಉತ್ತರವನ್ನು ಅವರು ಕೇಳಬೇಕಾಗಿದೆ. ಅವರು ಉತ್ತರ ಹೇಳುವುದಕ್ಕೂ ಮೊದಲು ಇವರುಗಳು ತೀರ್ಮಾನಕ್ಕೆ ಬರುವುದು ಬೇಡ. Whether he has made that statement or not ಎನ್ನುವುದರ ಬಗ್ಗೆ ಉತ್ತರವನ್ನು ಕೊಡಲಿ. ಅಷ್ಟರಲ್ಲಿಯೇ ಅವರುಗಳು ತೀರ್ಮಾನಕ್ಕೆ ಬಂದು ಬಿಟ್ಟಿದ್ದಾರೆ, ಒಬ್ಬ ಗೌರವಾನ್ವಿತ ಕಾನೂನು ಸಚಿವರ ಬಗ್ಗೆ ಅವರುಗಳು ಹಗುರವಾಗಿ ಮಾತನಾಡುವುದು ಬೇಡ. ಮಾನ್ಯ ವಿರೋಧ ಪಕ್ಷದ ನಾಯಕರು ಕೊಟ್ಟಿರುವಂತಹ ನೋಟಿಸ್ ಸರ್ಕಾರಕ್ಕೆ ಬಂದಿದೆ. ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಒಂದೆರಡು ನಿಮಿಷಗಳಲ್ಲಿ ನಾನು ನನ್ನ ಮಾತುಗಳನ್ನು ಮುಗಿಸಿಬಿಡುತ್ತೇನೆ.

**ಸಭಾಪತಿಯವರು:–** ಮಾನ್ಯ ಜಗ್ಗೇಶ್‌ರವರು ಮಾತನಾಡಲು ನಿಂತಿದ್ದಾರೆ. ಒಂದು ನಿಮಿಷ ಅವರು ಮಾತನಾಡಲಿ.

**ಶ್ರೀ ಜಗ್ಗೇಶ್ (ನಾಮ ನಿರ್ದೇಶನ ಹೊಂದಿದವರು):–** ಸನ್ಮಾನ್ಯ ಸಭಾಪತಿಯವರೇ, ಸಂವಿಧಾನ ರಚನೆಯಾದ ಮೇಲೆ ಪರಿಷತ್ತು ಹುಟ್ಟಿದೆಯೇ ಅಥವಾ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಅವರ ಸಂಸ್ಥಾನದಲ್ಲಿ ಹುಟ್ಟಿದೆಯೇ ಎನ್ನುವುದರ ಬಗ್ಗೆ ನನಗೆ ಸ್ಪಷ್ಟೀಕರಣ ಬೇಕಾಗಿದೆ. ಏಕೆಂದರೆ, ನನ್ನಂತೆ ಸುಮಾರು ಜನ ಯುವ ಸದಸ್ಯರು ಇಲ್ಲಿದ್ದೇವೆ. ಆದ್ದರಿಂದ ಇದರ ಬಗ್ಗೆ ನಮಗೆ ಸ್ಪಷ್ಟೀಕರಣಬೇಕಾಗಿದೆ. ಏಕೆಂದರೆ, ಮಾನ್ಯ ಕಾನೂನು ಸಚಿವರು 'ಸಂವಿಧಾನ ರಚನೆಯಾದ ಮೇಲೆ ಪರಿಷತ್ತು ಹುಟ್ಟಿದೆ' ಎನ್ನುವ

ಪದಪುಂಜವನ್ನು ಬಳಕೆ ಮಾಡಿದ್ದಾರೆ. ನನ್ನ ತಿಳುವಳಿಕೆಯ ಪ್ರಕಾರ ಮೈಸೂರು ಮಹಾರಾಜರು 'ಜನಪ್ರತಿನಿಧಿ ಸಭೆ' ಎಂದು ಮಾಡಿ ಆ ಸಭೆಗೆ 3,4,8 ಜನ ಸದಸ್ಯರನ್ನು ನಾಮಕರಣ ಮಾಡಿದ್ದರು. ಮಾನ್ಯ ಡಿ.ವಿ. ಗುಂಡಪ್ಪನವರು ಸಹ ಆ ಸಭೆಯ ಸದಸ್ಯರಾಗಿದ್ದರು. ಬುದ್ಧಿ ಇಲ್ಲದವರಿಗೆ ಬುದ್ಧಿ ಹೇಳುವಂತಹ ಕೆಲಸವನ್ನು ಮಾಡಿದ್ದರು. ಈ ದಿನದ ಕನ್ನಡಪ್ರಭ ದಿನಪತ್ರಿಕೆಯಲ್ಲಿ ಒಂದು ಜೋಕ್ ಬಂದಿದೆ. ಅದನ್ನು ಸದನದ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಒಂದು ಕಾಗೆ 'ವಿಧಾನ ಪರಿಷತ್ತನ್ನು ವಿಸರ್ಜಿಸುವ ಬಗ್ಗೆ ಮಾನ್ಯ ಜಯಚಂದ್ರರವರು ಯಾಕಪ್ಪ ಗೊಣಗುತ್ತಿದ್ದಾರೆ' ಎಂದು ಕೇಳುತ್ತದೆ. ಅದಕ್ಕೆ ಉತ್ತರವಾಗಿ 'ಹೌದು ಹೌದು ಕೆ.ಪಿ.ಸಿ.ಸಿ. ಅಧ್ಯಕ್ಷರು ಸಹ ವಿಧಾನ ಪರಿಷತ್ತಿನಲ್ಲಿದ್ದಾರೆ. ಅವರನ್ನು ಓಡಿಸುವುದಕ್ಕೆ ಸ್ಕೀಂ ಹಾಕಿದ್ದಾರೆ' ಎಂದು ಬರೆದಿದ್ದಾರೆ.

**(ಸದನದಲ್ಲಿ ನಗುವಿನ ಅಲೆ)**

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಜಯಚಂದ್ರರವರ ಬಗ್ಗೆ ನನಗೆ ಬಹಳ ಗೌರವವಿದೆ. ಸುಮಾರು 5–6 ಬಾರಿ ತುಮಕೂರು ಜಿಲ್ಲೆಯಿಂದ ಯಶಸ್ವಿಯಾಗಿ ಗೆದ್ದವರು. ಅವರ ಬಗ್ಗೆ ಒಂದು ಸಣ್ಣ ವಿಷಯವನ್ನು ಹೇಳುವುದಕ್ಕೆ ನಾನು ಬಯಸುತ್ತಿದ್ದೇನೆ. ತುರುವೇಕೆರೆಯಲ್ಲಿ ನಾನು ಕಷ್ಟಪಡುತ್ತಿದ್ದ ಸಂದರ್ಭಧಲ್ಲಿ ನನ್ನ ಚೇಲಬಾಲಗಳು ಬಲಿಷ್ಠವಾಗಿರುವವರನ್ನು ನಾನು ಮಾನ್ಯ ಜಯಚಂದ್ರರವರಿಗೆ ಪರಿಚಯ ಮಾಡಿಸಿದ್ದೆ, ಆಗ ಅವರು 'ಏನಪ್ಪಾ ನೀವು ಈಗ ಜಗ್ಗೇಶ್ ಜೊತೆಗೆ ಬರುತ್ತಿದ್ದೀರಾ, ನೀವುಗಳು ಮೊದಲೇ ಬಂದಿದ್ದರೆ, ನಿಮಗೇ ಎಂ.ಎಲ್.ಎ. ಸೀಟ್ ಕೊಡಿಸುತ್ತಿದ್ದೆ' ಎಂದು ನನ್ನ ಬುಡಕ್ಕೆ ಬಾಂಬ್ ಹಾಕಿದ್ದರು. ಅಷಟು ಅದ್ಭುತವಾದ ಜನ ಅವರು. ಆದ್ದರಿಂದ 6 ಸಾರಿ ಅವರೇ ಗೆದ್ದಿದ್ದಾರೆ. ಅವರು ಚೆನ್ನಾಗಿರಲಿ. ಆದರೆ, ವಿಧಾನ ಪರಿಷತ್ತಿನ ಬಗ್ಗೆ ಇರುವಂತಹ ವ್ಯಾಖ್ಯಾನವನ್ನು ಇಡೀ ರಾಜ್ಯಕ್ಕೆ ತಿಳಿಸುವಂತಹ ಕೆಲಸವನ್ನು ಮಾಡಬೇಕೆಂದು ಅವರ ಪಾದಕ್ಕೆ ನಮಸ್ಕಾರ ಮಾಡಿ ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, . . . . . . .

**ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ನಾನು ಉತ್ತರ ಕೊಟ್ಟ ನಂತರ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ತಾವು ನಾನು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ಒಂದೆರಡು ನಿಮಿಷಗಳಲ್ಲಿ ನಾನು ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ. ನಾನು ನನ್ನ ಮಾತುಗಳನ್ನು ಮುಗಿಸಿದ ಮೇಲೆ ಅವರು ಉತ್ತರ ಕೊಡಲಿ. ಒಬ್ಬ ಮಂತ್ರಿಗಳಾಗಿ ಅವರು ಈ ರೀತಿ ಮಾಡಬಾರದು. ತಾವು ಪ್ರಾಸ್ತಾವಿಕವಾಗಿ ಮಾತನಾಡಲು ನನಗೆ

ಅವಕಾಶವನ್ನು ಕೊಟ್ಟಿದ್ದೀರಿ. ಮಧ್ಯೆ ಅವರು ಮಾತನಾಡಿದರೆ ಹೇಗೆ? ಅವರು ಉತ್ತರ ಕೊಡುವುದಾದರೆ ಆಮೇಲೆ ಕೊಡಲಿ.

**ಶ್ರೀ ಟಿ.ಬಿ. ಜಯಚಂದ್ರ:-** ಸನ್ಮಾನ್ಯ ಸಭಾಪತಿಯವರೇ, ಪತ್ರಿಕೆಗಳಲ್ಲಿ ಬಂದಿರುವ ವರದಿಗಳನ್ನು ಆಧರಿಸಿ ಅವರು ಮಾತನಾಡುವುದಾದರೆ, ಚರ್ಚೆ ದಿನಗಟ್ಟಲೆ ನಡೆಯುತ್ತದೆ. ಅದಕ್ಕೆ ಅವಕಾಶವನ್ನು ಕೊಡಲಾಗುತ್ತದೆಯೇ? ಅದರ ಅವಶ್ಯಕತೆ ಇದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ನಾನು ಕೇವಲ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ವರದಿಯ ಆಧಾರದ ಮೇಲೆ ಮಾತನಾಡುತ್ತಿಲ್ಲ. ಅವರ ಹೇಳಿಕೆ ದೂರದರ್ಶನದಲ್ಲಿ ಪ್ರಸಾರವಾಗಿರುವುದನ್ನು ನಾನು ನೋಡಿದ್ದೇನೆ.

**ಸಭಾಪತಿಯವರು:-** ಈ ಚರ್ಚೆಯನ್ನು ಇದೇ ರೀತಿಯಲ್ಲಿ ಎಷ್ಟು ಹೊತ್ತಿನವರೆಗೆ ಮುಂದುವರೆಸುವುದು? ಮಾನ್ಯ ವಿರೋಧ ಪಕ್ಷದ ನಾಯಕರು ಒಂದೆರಡು ನಿಮಿಷಗಳಲ್ಲಿ ತಮ್ಮ ಮಾತನ್ನು ಮುಗಿಸಿಬಿಡಲಿ. ಆನಂತರ ಮಾನ್ಯ ಕಾನೂನು ಸಚಿವರು ತಮ್ಮ ಉತ್ತರವನ್ನು ಕೊಡಲಿ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಇದು ವಿಧಾನ ಪರಿಷತ್ತಿನ ಎಲ್ಲ ಸದಸ್ಯರ ಹಕ್ಕಾಗಿದೆ. ನಮ್ಮ ಹಕ್ಕಿಗೆ ಚ್ಯುತಿಯನ್ನುಂಟು ಮಾಡಲು ಮಾನ್ಯ ಜಯಚಂದ್ರರವರು ಹೊರಟಿರುವಾಗ,

ನಾವು ಈ ಸದನದಲ್ಲಿ ಹಕ್ಕುಚ್ಯುತಿಯನ್ನು ಮಂಡನೆ ಮಾಡಬೇಕಾಗುತ್ತದೆ ಎನ್ನುವ ಎಚ್ಚರಿಕೆಯನ್ನು ಅವರಿಗೆ ನಾನು ಕೊಡುತ್ತಿದ್ದೇನೆ. ಏಕೆಂದರೆ, ಅವರು ಒಬ್ಬ ಕಾನೂನು ಸಚಿವರಾಗಿ ಕಳೆದ ಬಾರಿಯೂ ಈ ರೀತಿಯ ಹೇಳೀಕೆಯನ್ನು ಕೊಟ್ಟ ಹಿನ್ನೆಲೆಯಲ್ಲಿ ಆ ವಿಚಾರ ಸದನದಲ್ಲಿ ಚರ್ಚೆಯಾಗಿತ್ತು. ಈಗ, ಎಲ್ಲ ಪತ್ರಿಕೆಗಳಲ್ಲಿ ಬಂದಿರುವ ವಿಚಾರವನ್ನು ಕುರಿತು ಇವರು ಚರ್ಚೆ ಮಾಡಿದರೆ ಹೇಗೆ ಎಂದು ನಮ್ಮನ್ನು ಕೇಳುತ್ತಿದ್ದಾರೆ. ಪತ್ರಿಕೆಗಳಲ್ಲಿ ಬಹಳ ವಿಚಾರಗಳು ಪ್ರಕಟವಾಗುತ್ತವೆ. ಅವರು ಹೇಳುವ ಒಳ್ಳೆಯ ಹೇಳಿಕೆಗಳು ಸಹ ಪ್ರಕಟವಾಗುತ್ತವೆ. ಅದು ಮಾತ್ರ ಸರಿ, ಅವರಿಗೆ ಹಿಡಿಸದೇ ಇರುವ ಪತ್ರಿಕಾ ಹೇಳಿಕೆ ಸರಿ ಇಲ್ಲವೆಂದು ಹೇಳುತ್ತಾರೆ. ನಾನು ವಿಧಾನ ಪರಿಷತ್ತಿನ ಅಷ್ಟೂ ಜನ ವಿಧಾನ ಪರಿಷತ್ತಿನ ಸದಸ್ಯರ ಪರವಾಗಿ ಮತ್ತು ಪಕ್ಷಾತೀತವಾಗಿ, 'ಇದು ನಮ್ಮ ಹಕ್ಕು, ಇದು ಸಂವಿಧಾನ ಬದ್ಧವಾಗಿರುವ ಹಕ್ಕು, ಇದನ್ನು ಕುಸಿದುಕೊಳ್ಳುವುದಕ್ಕೆ ನಿಮಗೆ ಅವಕಾಶವಿಲ್ಲ. ಇಲ್ಲಿ ಸರ್ವಾಧಿಕಾರದ ಧೋರಣೆ ಸರಿಯಲ್ಲ' ಎಂದು ಹೇಳುವುದಕ್ಕೆ ಬಯಸುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ರಾಜ್ಯಸಭೆಯಲ್ಲಿ ಎರಡು ಬಾರಿ ಸೆಲೆಕ್ಟ್ ಕಮಿಟಿಗೆ ವಿಷಯಗಳನ್ನು ವಹಿಸಿಕೊಟ್ಟಿದ್ದಾರೆ. ಅದನ್ನು ರಾಜಕೀಯವೆಂದು ನಾವು ಹೇಳಲಿಲ್ಲ. ಸಂವಿಧಾನಬದ್ಧವಾದ ಹಕ್ಕು ಅವರಿಗಿದೆ ಅವರು ಮಾಡಿಕೊಂಡಿದ್ದಾರೆ. ಆ ಸಂದರ್ಭದಲ್ಲಿ ರಾಜ್ಯಸಭೆಯನ್ನು ವಿಸರ್ಜನೆ ಮಾಡುತ್ತೇವೆನ್ನುವ ಯೋಚನೆಯನ್ನು ಸಹ ಅವರು ಮಾಡಲಿಲ್ಲ. ಹೀಗಿರುವಾಗ ವಿಧಾನಪರಿಷತ್ತನ್ನು ಸಭೆಯನ್ನು ವಿಸರ್ಜನೆ ಮಾಡುವ ಯೋಚನೆ ಇವರಿಗೆ ಹೇಗೆ ಬಂದಿದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಮಾನ್ಯ ಕಾನೂನು ಸಚಿವರ ಹೇಳಿಕೆಯನ್ನು ನಾನು ದೂರದರ್ಶನದಲ್ಲಿ ನೋಡಿದ್ದೇನೆ. ಇದು ಹಕ್ಕುಚ್ಯುತಿ ಆಗುತ್ತದೆ. ಅವರು ಕರ್ನಾಟಕ ರಾಜ್ಯದ ಜನರ ಕ್ಷಮೆ ಕೇಳಬೇಕು. ಕ್ಷಮೆ ಕೇಳದಿದ್ದರೆ ಅವರು ರಾಜಿನಾಮೆ ಕೊಡಬೇಕಾಗುತ್ತದೆ. ರಾಜಿನಾಮೆ ಕೊಡಲಿಲ್ಲವೆಂದರೆ, ಮಾನ್ಯ ಮುಖ್ಯಮಂತ್ರಿಗಳು ಅವರನ್ನು ಕಿತ್ತು ಹಾಕಬೇಕಾಗುತ್ತದೆ. ಇಲ್ಲಿ ನಾವು ರಾಜಕಾರಣ ಮಾಡುತ್ತಿಲ್ಲ. ಸಂವಿಧಾನಬದ್ಧವಾಗಿ ನಮಗೆ ದೊರೆತಿರುವ ಅಧಿಕಾರವನ್ನು ಪ್ರಯೋಗ ಮಾಡುತ್ತಿದ್ದೇವೆ. 'ಬಿ.ಬಿ.ಎಂ.ಪಿ. ವಿಧೇಯಕವನ್ನು ಸೆಲೆಕ್ಟ್ ಕಮಿಟಿಗೆ ಹಾಕಿದರೆ, ವಿಧಾನ ಪರಿಷತ್ತನ್ನು ರದ್ದುಗೊಳಿಸುವ ಬಗ್ಗೆ ಚಿಂತನ ಮಾಡುತ್ತೇವೆ' ಎನ್ನುವ ಮಾತುಗಳನ್ನು ಮಾನ್ಯ ಕಾನೂನು ಸಚಿವರು ಆಡಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಇದು ನಮಗೆ ಸಂವಿಧಾನಬದ್ಧವಾಗಿ ಬಂದಿರುವ ಹಕ್ಕಾಗಿದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 116ರ ಪ್ರಕಾರ "ವಿಧೇಯಕವನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂಬ ಪ್ರಸ್ತಾವವನ್ನು ಅಂಗೀಕರಿಸಿದ ತರುವಾಯ, ವಿಧೇಯಕವನ್ನು ಪರಿಶೀಲನಾ ಸಮಿತಿಗೆ ಕಳುಹಿಸಬೇಕೆಂದು ಯಾರೇ ಸದಸ್ಯರು ಸೂಚಿಸಬಹುದು. . . ." ಎಂದು ಇದೆ.

**ಶ್ರೀ ಟಿ.ಬಿ. ಜಯಚಂದ್ರ:–** ಸನ್ಮಾನ್ಯ ಸಭಾಪತಿಯವರೇ, ನಾನು ಉತ್ತರ ಕೊಡುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಅವರು ಕಳುಹಿಸಿರುವ ನೋಟಿಸ್ ತಲುಪಿದೆ ಮಾನ್ಯ ಮಂತ್ರಿಗಳು ಉತ್ತರ ಕೊಡಲು ಸಿದ್ಧರಾಗಿದ್ದಾರೆ. How long you prolong this discussion?

**ಸಭಾಪತಿಯವರು:–** ಅವರು ಏನು ಹೇಳುತ್ತಾರೆ ಎನ್ನುವುದನ್ನು ಕೇಳೋಣ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ನೀವು ಕೊಟ್ಟಿರುವ ಅಧಿಕಾರದ ಬಗ್ಗೆ ಇವರು ನಮಗೆ ಎಚ್ಚರಿಕೆ ಕೊಡುವ ಅಧಿಕಾರ ಇದೆಯೇ? ಯಾರು ಇವರಿಗೆ ಅಧಿಕಾರವನ್ನು ಕೊಟ್ಟಿದ್ದಾರೆ? ಆದ್ದರಿಂದ ಇವರು ಕ್ಷಮೆ ಕೇಳಬೇಕಾಗಿದೆ, ಇಲ್ಲದಿದ್ದರೆ ರಾಜಿನಾಮೆ ನೀಡಬೇಕಾಗಿದೆ.

ಇಲ್ಲದಿದ್ದರೆ ಮಾನ್ಯ ಮುಖ್ಯಮಂತ್ರಿಗಳು ಇವರನ್ನು ಕಿತ್ತು ಹಾಕಬೇಕಾಗಿದೆ. ನಮ್ಮ ಹಕ್ಕುಚ್ಯುತಿಯಾಗಿದೆ. ಇವರು ಉತ್ತರ ಕೊಡುವ ಸಂದರ್ಭದಲ್ಲಿ ತಿಪ್ಪೆ ಸಾರಿಸುವ ಉತ್ತರವನ್ನು ಕೊಡುವುದು ಬೇಡ. ಆ ರೀತಿ ಹೇಳಿಕೆ ಕೊಟ್ಟಿಲ್ಲವೆಂದು ಹೇಳಿದರೆ ಪತ್ರಕರ್ತರ ಮುಂದೆ ಇವರು ತಪ್ಪಿತಸ್ಥರಾಗುತ್ತಾರೆ. ಆದ್ದರಿಂದ ರಾಜ್ಯದ ಜನತೆಯ ಮುಂದೆ ಇವರು ಮಾಡಿರುವ ತಪ್ಪನ್ನು ಒಪ್ಪಿಕೊಳ್ಳಬೇಕು ಮತ್ತು ಕ್ಷಮೆ ಕೇಳಬೇಕೆಂದು ಒತ್ತಾಯ ಮಾಡುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೆ, ಮಾನ್ಯ ಕಾನೂನು ಸಚಿವರ ಉದ್ದೇಶವೇನು ಎನ್ನುವುದು ನಮಗೆ ಗೊತ್ತಿಲ್ಲ. ಆದರೆ, ಪತ್ರಿಕೆಗಳಲ್ಲಿ ಬಂದಿರುವ ವರದಿಯನ್ನು ನಾವು ನಂಬಬೇಕಾಗುತ್ತದೆ. ದೂರದರ್ಶನದಲ್ಲಿ ಪ್ರಸಾರ ಆಗಿರುವ ಅವರ ಹೇಳಿಕೆಯನ್ನು ನಾವು ಕೇಳಿದ್ದೇವೆ. ಬೆಳಗಾವಿಯಲ್ಲಿ ಅಧಿವೇಶನ ನಡೆದಂತಹ ಸಂದರ್ಭದಲ್ಲಿ ಒಂದು ಘಟನೆ ನಡೆಯಿತು. ಈ ಸದನಕ್ಕೆ ಕೆಲವು ನಿಯಮಗಳನ್ನು ಮಾಡಿದ್ದಾರೆ. ಬೆಳಗಾವಿ ಅಧಿವೇಶನದಲ್ಲಿ ಮಾನ್ಯ ಜಯಚಂದ್ರರವರು ಈ ಮನೆಯಲ್ಲಿ ಕ್ರಿಯಾಲೋಪ ಎತ್ತಿದ್ದರು. ಆಗ ನಾವು 'ಈ ಸದನದ ಸದಸ್ಯರಲ್ಲದವರು ಕ್ರಿಯಾಲೋಪ ಎತ್ತುವುದಕ್ಕೆ ಬರುವುದಿಲ್ಲ' ಎನ್ನುವ ಮಾತನ್ನು ಹೇಳಿದ್ದೆವು. ಮಂತ್ರಿಗಳಾಗಿ ಅವರು ಈ ಮನೆಯಲ್ಲಿ ಉತ್ತರ ಹೇಳುವುದಕ್ಕೆ ಎಲ್ಲ ರೀತಿಯ ಅಧಿಕಾರಗಳು ಇವೆ. ಆಗ ಚರ್ಚೆಯಾದಂತಹ ಸಂದರ್ಭದಲ್ಲಿ ವಿಧಾನ ಪರಿಷತ್ತು, it is the creation of Assembly ಎಂದು ಹೇಳಿದ್ದರು. ಅದನ್ನು ನಾವು ಒಪ್ಪುತ್ತೇವೆ. ಆದರೆ, ಸುಮಾರು 107 ವರ್ಷಗಳ ಇತಿಹಾಸ ಇರುವ ವಿಧಾನ ಪರಿಷತ್ತಿಗೆ ತನ್ನದೇ ಆಗಿರುವ ನೀತಿ ನಿಯಮಾವಳಿಗಳು ಇವೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರು ನಿನ್ನೆ ಅಥವಾ ಮೊನ್ನೆ, 'ನಾನು ಆ ರೀತಿ ಹೇಳಿಕೆ ಕೊಟ್ಟಿಲ್ಲ. ಇದು ತಪ್ಪು ಕಲ್ಪನೆಯಿಂದಾಗಿದೆ. ಈ ಹೇಳಿಕೆಗೂ ನನಗೂ ಸಂಬಂಧವಿಲ್ಲ' ಎನ್ನುವ ಹೇಳಿಕೆಯನ್ನು ಅವರು ಕೊಟ್ಟಿದ್ದರೆ, ಈ ದಿನ ಇಂತಹ ಪ್ರಶ್ನೆ ಉದ್ಭವಿಸುತ್ತಿರಲಿಲ್ಲ. ನಾನು ಎಷ್ಟೋ ಬಾರಿ ಈ ವಿಚಾರಕ್ಕೆ ಸಂಬಂಧಪಟ್ಟಂತೆ ಒಂದು ನೋಟಿಸ್‌ನ್ನು ತಮಗೆ ಕಳುಹಿಸಿಕೊಟ್ಟಿದ್ದೆ. ಆದರೆ, ತಾವು ಪ್ರಸ್ತಾಪ ಮಾಡುವುದಕ್ಕೆ ನನಗೆ ಅವಕಾಶವನ್ನು ಕೊಡಲಿಲ್ಲ. ವಿಧಾನಸಭೆಯ ಶಾಸಕರಾಗಿರಲಿ, ವಿಧಾನ ಪರಿಷತ್ತಿನ ಶಾಸಕರಾಗಿರಲಿ ಎಲ್ಲರೂ ಒಂದೇ ಎನ್ನುವ ಭಾವನೆ ನಮಗಿದೆ. ಎಲ್ಲರೂ ಒಂದೇ ರೀತಿಯಲ್ಲಿ ಇರುತ್ತೇವೆ. ಆ ಮನೆಯವರು ನಮಗಾಗಲೀ, ನಾವು ಅವರಿಗಾಗಲೀ ಯಾವುದೇ ರೀತಿಯ ಬೇಧಭಾವವನ್ನು ಮಾಡುವುದಿಲ್ಲ. ಎಲ್ಲರಿಗೂ ಒಂದೇ ರೀತಿಯಾದ ಗೌರವಘನತೆ ಇದೆ. ತಾಲ್ಲೂಕು ಮಟ್ಟದಲ್ಲಿರುವ ಸಭೆಗಳಿಗೆ ಎಂ.ಎಲ್.ಎ.ಗಳು ಅಧ್ಯಕ್ಷರಾಗಿರುತ್ತಾರೆ. ನಾವು ಅದಕ್ಕೆ ಯಾವುದೇ ರೀತಿಯಲ್ಲಿಯೂ ತಕರಾರು ಮಾಡುವುದಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಸರ್ಕಾರಿ ಕಾರ್ಯಕ್ರಮಗಳಿಗೆ ಆಹ್ವಾನ ಪತ್ರಿಕೆಗಳು ಬರುತ್ತವೆ. ಅದರಲ್ಲಿ ಮೊನ್ನೆ ಮೊನ್ನೆ ಆರಿಸಿ ಬಂದಿರುವ ನಮ್ಮ ಶಿಷ್ಯರ ಹೆಸರು ಮೇಲಿರುತ್ತದೆ. ನಮ್ಮ ಹೆಸರು ಕೆಳಗಿರುತ್ತದೆ. ಇದರಿಂದ ನಮಗೇನು ಅನ್ನಿಸುವುದಿಲ್ಲ. ಆದರೆ, ಅವರಿಗೆ ಮುಜುಗರವಾಗುತ್ತದೆ. ಈ ವಿಚಾರವನ್ನು ಹಲವಾರು ಬಾರಿ ತಮ್ಮ ಗಮನಕ್ಕೆ ತಂದಿದ್ದೇವೆ. ಈ ರೀತಿಯಾದರೆ, ಜನತೆಗೆ 'ವಿಧಾನ ಪರಿಷತ್ತು ಎಂದರೆ, ಏನೂ ಇಲ್ಲ. ಈ ಸದಸ್ಯರಿಗೆ ಏನೂ ಅಧಿಕಾರವಿಲ್ಲ' ಎನ್ನುವ ಭಾವನೆ ಬರುತ್ತದೆ. ಆ ರೀತಿ ಆಗಬಾರದು ಎನ್ನುವ ಕಳಕಳಿಯಿಂದ ಈ ಚರ್ಚೆ ಪ್ರಾರಂಭ ಮಾಡಲಾಗಿದೆಯೇ ವಿನ: ಬೇರೆ ಉದ್ದೇಶವೇನೂ ಇಲ್ಲ.

ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷರಾಗಿರುವ ಮಾನ್ಯ ಕಾಗೋಡು ತಿಮ್ಮಪ್ಪನವರು ಒಮ್ಮೆ ವಿಧಾನ ಸಭೆಯಲ್ಲಿ ವಿಧಾನ ಪರಿಷತ್ತನ್ನು ರದ್ದು ಮಾಡಬೇಕೆಂದು ಹೇಳಿದ್ದರು. ಆ ರೀತಿ ಹೇಳಿದ ಎರಡೇ ವರ್ಷಗಳಲ್ಲಿ ಅವರು ಈ ಮನೆಯ ಸದಸ್ಯರಾಗಿ ಬಂದರು. ಮಾನ್ಯ ವಾಟಾಳ್ ನಾಗರಾಜ್‌ರವರು ಪದೇ ಪದೇ ಈ ವಿಚಾರವನ್ನು ಹೇಳುತ್ತಿದ್ದರು. ಅವರು ಮೂರು ಬಾರಿ ವಿಧಾನ ಪರಿಷತ್ತಿಗೆ ನಾಮ ನಿರ್ದೇಶಿತರಾಗಿದ್ದರು. ಕೋಣಂದೂರು ಲಿಂಗಪ್ಪನವರು ವಿಧಾನ ಪರಿಷತ್ತನ್ನು ರದ್ದು ಮಾಡಬೇಕೆಂದು ಹೇಳಿದ್ದವರು 1980ರಲ್ಲಿ ನನ್ನ ವಿರುದ್ಧ ಚುನಾವಣೆಗೆ ನಿಂತಿದ್ದರು. ಯಾರ್ಯಾರು ವಿಧಾನ ಪರಿಷತ್ತನ್ನು ರದ್ದುಗೊಳಿಸಬೇಕೆಂದು ಹೇಳಿದ್ದರು ಅವರೆಲ್ಲರೂ ಇಲ್ಲಿಗೇ ಬಂದಿದ್ದಾರೆ. ಆದ್ದರಿಂದ ಮಾನ್ಯ ಕಾನೂನು ಸಚಿವರಲ್ಲಿ ನನ್ನ ವಿನಂತಿ ಏನೆಂದರೆ, ಹೇಳಿಕೆಯನ್ನು ಕೊಡುವ ಸಂದರ್ಭದಲ್ಲಿ ಅವರ ಮನಸ್ಸಿನಲ್ಲಿ ಆ ರೀತಿ ಇದೆಯೋ ಇಲ್ಲವೋ, ಹೇಳಿಕೆಯನ್ನು ಕೊಡುವ ಸಂದರ್ಭದಲ್ಲಿ ಬಹಳ ವಿಚಾರ ಮಾಡಿ ಹೇಳಿಕೆಯನ್ನು ಕೊಡಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಶ್ರೀಯುತರುಗಳಾದ ರಾಮಕೃಷ್ಣ ಹೆಗಡೆಯವರು, ಎಸ್.ಎಂ. ಕೃಷ್ಣರವರು ಮತ್ತು ಬೊಮ್ಮಾಯಿಯವರು ಈ ಮನೆಯಲ್ಲಿದ್ದರು.

(12–30 ಗಂಟೆ)

ಶ್ರೀ ಕೋಣಂದೂರು ಲಿಂಗಪ್ಪ, ಶ್ರೀ ಲಕ್ಷ್ಮೀಸಾಗರ್, ಶ್ರೀ ಯಡಿಯೂರಪ್ಪ, ಶ್ರೀ ಸದಾನಂದಗೌಡ, ಶ್ರೀ ಆರ್.ಎಲ್. ಜಾಲಪ್ಪ, ಶ್ರೀ ಖಾದ್ರಿ ಶಾಮಣ್ಣ, ಶ್ರೀ ಜಿ. ಪರಮೇಶ್ವರ್ ಇವೆಲ್ಲರೂ ವಿಧಾನ ಪರಿಷತ್ತಿನ ಸದಸ್ಯರಾಗಿ ಆಯ್ಕೆಯಾದವರು. ತಾವು ಹೇಳಿದ ಹಾಗೆ ಭಾರತ ದೇಶದಲ್ಲಿ ಇಡೀ ದೇಶಕ್ಕೆ ಮಾದರಿಯಾದಂಥ ವಿಧಾನ ಪರಿಷತ್ತು ಎಂದರೆ ಅದು ಕರ್ನಾಟಕ ರಾಜ್ಯದಲ್ಲಿರುವಂಥ ವಿಧಾನ ಪರಿಷತ್ತು. ಇವತ್ತು ಆವತ್ತಿನ ತರಹ ಚರ್ಚೆ ನಡೆಯುವುದಿಲ್ಲ. 1980ನೇ ಇಸವಿಯಲ್ಲಿ ಶ್ರೀ ವೆಂಕಟರಾಮಣ್ಣ, ಶ್ರೀ ರಾಜಗೋಪಾಲ ಮತ್ತು ಶ್ರೀ ಎ.ಕೆ. ಸುಬ್ಬಯ್ಯನವರಿದ್ದರು ಶ್ರೀ

ವೆಂಕಟರಾಮಣ್ಣನವರು ಸುಮಾರು ಮೂರುವರೆ ಗಂಟೆಗಳ ಕಾಲ ಮಾತನಾಡುವಾಗ ಒಂದು ಸೂಜಿ ಬಿದ್ದರು ಶಬ್ಧವಾಗುತ್ತಿತ್ತು, ಅಷ್ಟು ನಿಶಬ್ಧವಾಗಿ ಎಲ್ಲರೂ ಕುಳಿತು ಕೇಳುತ್ತಿದ್ದರು. ದುರ್ದೈವದಿಂದ ಆವತ್ತಿನ ರೀತಿಯಲ್ಲಿ ಇವತ್ತು ಆಗುವುದಿಲ್ಲ. ಆ ರೀತಿ ಆಗಬೇಕೆಂಬುದು ನಮ್ಮ ಒಂದು ಆಸೆಯಾಗಿದೆ. ಈ ಹಿನ್ನೆಲೆಯಲ್ಲಿ ನಾನೇನು ಹೇಳುತ್ತೇನೆಂದರೆ, ಯಾವುದೇ ಒಂದು ಸದನದ ಬಗ್ಗೆ ಅಗೌರವವನ್ನು ತೋರಿಸಬಾರದು. Legislative Council is the creation of Legislative Assembly. ಆಯಿತು, ಹಾಗಾದರೆ ಹುಟ್ಟಿದ ಮಕ್ಕಳ ಕುತ್ತಿಗೆಯನ್ನು ಹಿಸುಕುತ್ತಾರೆಯೇ ಎಂಬುದನ್ನು ಹೇಳಲಿ. ನಾಳೆಯ ದಿವಸ ಅವರ ಮಗುವಿನ ಕುತ್ತಿಗೆಯನ್ನು ಹಿಸುಕುವಂಥ ಕೆಲಸವನ್ನು ಅವರು ಮಾಡುತ್ತಾರೆಯೇ? ಅದು ಆಗುವುದಿಲ್ಲ. ಈಗ ರಾಜ್ಯಸಭೆ ಸಂವಿಧಾನಾತ್ಮಕವಾಗಿ ಇದೆ. ಇದು ಸಂವಿಧಾನಾತ್ಮಕವಾಗಿ ಇಲ್ಲವೆಂದು ನಾವು ಹೇಳುವುದಕ್ಕಾಗುವುದಿಲ್ಲ. ಇಲ್ಲಿಯವರೆವಿಗೂ ಸುಮಾರು 108 ವರ್ಷಗಳಿಂದ ನಡೆದುಕೊಂಡು ಬಂದಿರುವ ಈ ವಿಧಾನ ಪರಿಷತ್ತಿಗೆ, ದಯಮಾಡಿ ನಾನು ತಮ್ಮನ್ನು ವಿನಂತಿ ಮಾಡುತ್ತೇನೆ. ಇಲ್ಲಿ ಕಾಂಗ್ರೆಸ್, ಜೆಡಿ(ಎಸ್) ಮತ್ತು ಬಿಜೆಪಿ ಪಕ್ಷದವರೆಲ್ಲರೂ ಇದ್ದಾರೆ. . . .

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಇಡೀ ದೇಶದಲ್ಲಿ ನಮ್ಮ ರಾಜ್ಯದಲ್ಲಿರುವ ವಿಧಾನ ಪರಿಷತ್ತಿಗೆ ಈಗಾಗಲೇ 108 ವರ್ಷಗಳಾಗಿವೆ. ಡಾ॥ ಬಿ.ಆರ್. ಅಂಬೇಡ್ಕರ್‌ರವರು ಸಂವಿಧಾನವನ್ನು ರಚನೆ ಮಾಡುವುದಕ್ಕೆ ಮುಂಚೆ ಈ ವಿಧಾನ ಪರಿಷತ್ತು ಮೈಸೂರು ಮಹಾರಾಜರ ಕಾಲದಲ್ಲಿಯೇ ಪ್ರಾರಂಭವಾಗಿದೆ. ಇದಕ್ಕೆ ಒಂದು ದೊಡ್ಡ ಇತಿಹಾಸವಿದೆ. ಅನೇಕ ಸಂದರ್ಭಗಳಲ್ಲಿ ಗೊಂದಲವಾಗುತ್ತದೆ, ಇಲ್ಲವೆಂದು ಅಲ್ಲ. ಯಾವುದಕ್ಕೋಸ್ಕರ ಗೊಂದಲವಾಗುತ್ತದೆ? ಒಂದು ವಿಚಾರಕ್ಕೋಸ್ಕರ, ಒಂದು ಒಳ್ಳೆಯ ಚರ್ಚೆ ನಡೆಯಬೇಕೆನ್ನುವಂಥ ದೃಷ್ಟಿಯಿಂದ ಆಗುತ್ತದೆ. ಅವರು ಹೇಳಿದ್ದಾರೋ, ಬಿಟ್ಟಿದ್ದಾರೋ ನನಗೆ ಗೊತ್ತಿಲ್ಲ. ಅವರು ಹೇಳದೇ ಇದ್ದರೆ ಬಹಳ ಸಂತೋಷ. ಅವರು ಹೇಳಿದ್ದರೂ ಸಹ ಒಂದೊಂದು ಸಲ ಹಾಗೆ ಅನ್ನಿಸುತ್ತದೆ. ಅದೇ ರೀತಿ ನಮಗೂ ಸಹ ಅನ್ನಿಸುತ್ತದೆ. ವಿಧಾನ ಪರಿಷತ್ತಿನ ಸದಸ್ಯನಾಗಿ ನನಗೂ ಕೆಲವೊಮ್ಮೆ ಹಾಗೆ ಅನ್ನಿಸಿದೆ. ಆದರೆ ಅದನ್ನು ಹೇಳಬೇಕೋ ಬೇಡವೋ? ಹೇಳುವುದಿದ್ದರೆ ಎಲ್ಲಿ ಹೇಳಬೇಕು? ಯಾವಾಗ ಈ ವಿಚಾರ ಚರ್ಚೆಗೆ ಬರುತ್ತದೆ ಆಗ ಇದನ್ನು ಹೇಳಬೇಕೇ ವಿನಃ ವಿಧಾನ ಮಂಡಲದ ಅಧಿವೇಶನ ನಡೆಯುವಂಥ ಸಂದರ್ಭದಲ್ಲಿ ಹೊರಗಡೆ ಇಂತಹ ಮಾತುಗಳನ್ನು ಹೇಳಿದರೆ ನಮಗೆ ಶೋಭೆ ತರುವುದಿಲ್ಲವೆನ್ನುವ ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಆ ಹಿನ್ನೆಲೆಯಲ್ಲಿ ಇದರ ಬಗ್ಗೆ ನಾವು ಸಾಕಷ್ಟು ಚರ್ಚೆಯನ್ನು ಮಾಡುತ್ತೇವೆ, ಸಾಕಷ್ಟು ಮಾರ್ಗದರ್ಶನವನ್ನು ಮಾಡುತ್ತೇವೆ. ದೇಶದಲ್ಲಿರುವಂಥ

ಎಲ್ಲಾ ನಿಯಮಗಳನ್ನು ತಂದು ಎಲ್ಲಾ ಸದಸ್ಯರು ಇಲ್ಲಿ ಗೈಡ್ ಮಾಡುತ್ತಾರೆ. ಒಂದು ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡಿದಂಥ ಈ ಸದನದ ಬಗ್ಗೆ ಅವರು ಏನು ಹೇಳಿದ್ದಾರೋ, ಬಿಟ್ಟಿದ್ದಾರೋ ಎನ್ನುವುದರ ಬಗ್ಗೆ ನಾನು ಚರ್ಚೆಗೆ ಹೋಗುವುದಿಲ್ಲ. ಏಕೆಂದರೆ ಪತ್ರಿಕೆಯಲ್ಲಿ ಬಂದಿದ್ದನ್ನು ನಾವು ನೋಡುತ್ತೇವೆ. ಬೇರೆಯವರ ತರಹ ಮಂತ್ರಿಗಳು ಹಗುರವಾಗಿ ಮಾತನಾಡುತ್ತಾರಲ್ಲಾ ಎಂದು, ಇವರಿಗೂ ಸಹ ಇದರ ಘನತೆ-ಗೌರವವನ್ನು ಕಡಿಮೆ ಮಾಡುವಂಥ... ಅದಕ್ಕಾಗಿ ಇದರ ಬಗ್ಗೆ ಚರ್ಚೆಯನ್ನು ಮಾಡೋಣ. ಅವರಿಗೆ ಟೀಕೆ ಅಥವಾ ಮತ್ತೊಂದು ಮಾಡಬೇಕೆಂಬುದಲ್ಲ. ಇದರ ಬಗ್ಗೆ ಚರ್ಚೆಯನ್ನು ಮಾಡಿ, ಇದಕ್ಕೊಂದು ಇತಿಶ್ರೀ ಹಾಡಬೇಕು, ಪದೇ ಪದೇ ಇಂತಹದ್ದು ಬರಬಾರದು. ಅನೇಕ ಜನ ಈ ಮನೆಯ ಬಗ್ಗೆ ಟೀಕೆಯನ್ನು ಮಾಡಿದವರು ಇಲ್ಲಿಗೆ ಬಂದು ಹೋಗಿದ್ದಾರೆ. ಈ ಹಿನ್ನೆಯಲ್ಲಿ ತಾವು ಸ್ಪಷ್ಟವಾದಂಥ ಒಂದು ನಿರ್ಧಾರವನ್ನು ಹೇಳಬೇಕು. ಬರುವಂಥ ದಿನಮಾನಗಳಲ್ಲಿ ಯಾರೂ ಸಹ ಆ ಸದನದ ಬಗ್ಗೆ ಅಥವಾ ಈ ಸದನದ ಬಗ್ಗೆ ಮಾತನಾಡಿದರೆ, ನಮ್ಮ ಗೌರವವನ್ನು ನಾವೇ ಕಡಿಮೆ ಮಾಡಿಕೊಂಡ ಹಾಗಾಗುತ್ತದೆ. ಹಾಗಾಗಿ ಇದನ್ನು ಮಾಡಬಾರದು ಎನ್ನುವಂಥ ಸದುದ್ದೇಶದಿಂದ ಇಲ್ಲಿ ಚರ್ಚೆಗೆ ಅವಕಾಶವನ್ನು ಕೊಡಿ ಎಂದು ಹೇಳಿದ್ದೇವೆ. ನಾವು ನಿಮ್ಮನ್ನು ಟೀಕೆ ಮಾಡಬೇಕು, embarrassment ಮಾಡಬೇಕು ಅಥವಾ ಮತ್ತೊಂದನ್ನು ಮಾಡುವುದಕ್ಕೆ ಹೋಗಿಲ್ಲ. ಆದರೆ ಸದನದ ಗೌರವವನ್ನು ಕಾಪಾಡಿಕೊಂಡು ಹೋಗುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ನಾವು ಸಹ ಚುನಾಯಿತ ಸದಸ್ಯರಿದ್ದೇವೆ. 25 ಜನ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಆಯ್ಕೆಯಾಗಿ ಬಂದಿದ್ದಾರೆ, 14 ಜನರು ಶಿಕ್ಷಕರ ಕ್ಷೇತ್ರ ಮತ್ತು ಪದವೀಧರರ ಕ್ಷೇತ್ರದಿಂದ ಆಯ್ಕೆಯಾಗಿ ಬಂದಿದ್ದೇವೆ. ನಾವು ಸಹ ಚುನಾಯಿತ ಸದಸ್ಯರೇ ಆಗಿರುತ್ತೇವೆ. ಮಾನ್ಯ ಸೋಮಣ್ಣನವರು ವಿಧಾನ ಸಭೆಯ ಸದಸ್ಯರಾಗಿದ್ದರು, ಈಗ ವಿಧಾನ ಪರಿಷತ್ತಿನ ಸದಸ್ಯರಾಗಿದ್ದಾರೆ. ಬೇಕಾದಷ್ಟು ಜನ ವಿಧಾನ ಸಭೆಯ ಸದಸ್ಯರು ವಿಧಾನ ಪರಿಷತ್ತಿಗೆ ಆಯ್ಕೆಯಾಗಿ ಬಂದಿದ್ದಾರೆ. ಒಂದೊಂದು ಸಾರಿ ಯಾವ್ಯಾವುದೋ ಪರಿಸ್ಥಿತಿಗೆ ಅನುಗುಣವಾಗಿ ಇಲ್ಲಿ ಆಯ್ಕೆಯಾಗಿ ಬರುತ್ತಾರೆ. ಅದೇ ರೀತಿ ಆಯ್ಕೆಯಾಗಿ ಬಂದಿದ್ದಾರೆ. ಆ ಹಿನ್ನೆಲೆಯಲ್ಲಿ ಯಾರೇ ಪಂಚಾಯ್ತಿ ಸದಸ್ಯರಿರಲಿ, ಜಿಲ್ಲಾ ಪಂಚಾಯತ್ ಸದಸ್ಯರಿರಲಿ, ವಿಧಾನ ಸಭೆಯ ಸದಸ್ಯರಿರಲಿ ಅಥವಾ ವಿಧಾನ ಪರಿಷತ್ತಿನ ಸದಸ್ಯರಿರಲಿ ಚುನಾಯಿತ ಸದಸ್ಯರಿಗೆ ನಾವು ಅಗೌರವವನ್ನು ತೋರಿಸಬಾರದು ಎನ್ನುವಂಥ ಸದುದ್ದೇಶದಿಂದ ಇಲ್ಲಿ ಮಾತನಾಡುತ್ತೇವೆ ಹೊರತಾಗಿ ಟೀಕೆ-ಟಿಪ್ಪಣಿಯನ್ನು ಮಾಡುವುದಿಲ್ಲ. ಈ ಸದನದ ಘನತೆ-ಗೌರವವನ್ನು ಇಡೀ ಭಾರತ ದೇಶದಲ್ಲಿ ಎತ್ತಿ ಹಿಡಿಯಬೇಕು. ನಾವು ಒಮ್ಮೆ ಕಾಶ್ಮೀರಕ್ಕೆ ಹೋಗಿದ್ದೆವು. ಅಲ್ಲಿ ಅವರು 'Karnataka Legislative Council is the best Council in the Country' ಎಂದು ನಮ್ಮ ಸದನದ ಬಗ್ಗೆ ಹೇಳಿದರು. ಎಲ್ಲಾ ಕಡೆ ನಮ್ಮ ಸದನಕ್ಕೆ ಗೌರವವಿದೆ. ಮಾಧ್ಯಮದ ಮುಖಾಂತರ ಕೆಲವು ವಿಚಾರಗಳು ಬೇರೆ ರಾಜ್ಯಗಳಿಗೆ ಮತ್ತು ಬೇರೆ ದೇಶಕ್ಕೆ ಹೋಗುತ್ತದೆ.

ಬೇರೆ ರಾಜ್ಯದಲ್ಲಿ ವಿಧಾನ ಪರಿಷತ್ತನ್ನು ರದ್ದು ಮಾಡಿದ್ದಾರೆಂದು ಹೇಳಿದರು. ಆಂಧ್ರ ಪ್ರದೇಶದಲ್ಲಿ ರದ್ದು ಮಾಡಿದಂಥ ವಿಧಾನ ಪರಿಷತ್ತನ್ನು ಏಕೆ ಪುನರ್ ರಚನೆ ಮಾಡಿದರು? ಬೇಕಾದಷ್ಟು ಸಣ್ಣ ಸಣ್ಣ ರಾಜ್ಯಗಳಲ್ಲಿ ವಿಧಾನ ಪರಿಷತ್ತನ್ನು ಮಾಡಬೇಕೆಂದು ಇದ್ದಾರೆ. ಕಾಶ್ಮೀರದಲ್ಲಿ ಬಹಳ ಕಡಿಮೆ ಜನರಿದ್ದಾರೆ. ಆದರೆ ಯಾವುದೇ ಪರಿಸ್ಥಿತಿಯಲ್ಲಿ ವಿಧಾನ ಪರಿಷತ್ತನ್ನು ರದ್ದು ಮಾಡಬಾರದೆಂದು ತೀರ್ಮಾನವನ್ನು ಮಾಡಿದ್ದಾರೆ. ಆ ಒಂದು ಹಿನ್ನೆಲೆಯಲ್ಲಿ ದಯಮಾಡಿ ಸರ್ಕಾರ ಇದನ್ನು ಯಾವುದೇ ಪ್ರತಿಷ್ಠೆಯ ಮೇಲೆ ತೆಗೆದುಕೊಳ್ಳಬಾರದು. ಇದರ ಬಗ್ಗೆ ಉತ್ತರವನ್ನು ನೀಡಿ ಇದಕ್ಕೆ ಒಂದು ಇತಿಶ್ರೀ ಹಾಡುವಂಥ ಕೆಲಸವನ್ನು ನಾವು ಮಾಡಬೇಕು. ಪದೇ ಪದೇ ಇಂತಹ ಚರ್ಚೆಗಳು ಬರಬಾರದು. ವಿಧಾನ ಸಭೆ ಇರಲಿ ಅಥವಾ ವಿಧಾನ ಪರಿಷತ್ತು ಇರಲಿ ಎಲ್ಲಾ ಸದಸ್ಯರಿಗೂ ಸಹ ಒಂದೇ ರೀತಿಯ ಗೌರವವನ್ನಿಟ್ಟುಕೊಂಡು ಹೋಗುವಂಥ ಸತ್ಸಂಪ್ರದಾಯವನ್ನು ನಾವು ಮಾಡಿಕೊಂಡು ಬಂದಿದ್ದೇವೆ. ಅದು ಮುಂದುವರೆಯಲಿ ಎನ್ನುವಂಥ ಮಾತನ್ನು ನಾನು ತಮಗೆ ಹೇಳಿ, ಸರ್ಕಾರ ಇದಕ್ಕೆ ಒಂದು ಸ್ಪಷ್ಟವಾದಂಥ ಮಾತನ್ನು ಹೇಳಬೇಕು. ಬರುವಂಥ ದಿನಮಾನಗಳಲ್ಲಿ ಇದು ಆಗಬಾರದು ಎಂದು ಹೇಳುತ್ತಿದ್ದೇನೆ.

**ಸಭಾಪತಿಯವರು:–** ಸರ್ಕಾರದ ಪರವಾಗಿ ಮಾನ್ಯ ಕಾನೂನು ಸಚಿವರು ಉತ್ತರವನ್ನು ನೀಡುತ್ತಾರೆ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನಾನು ಸರ್ಕಾರದ ಪರವಾಗಿ ಹೇಳುತ್ತಿಲ್ಲ. ನಾನು ಈ ಸದನದ ಸದಸ್ಯನಾಗಿ ಹೇಳುತ್ತಿದ್ದೇನೆ.

**ಶ್ರೀ ಇ. ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೆ, ಕಳೆದ ಮೂರು ದಿನಗಳಿಂದ ನಾನು ಈ ಸದನದಲ್ಲಿ ಕುಳಿತು ನೋಡುತ್ತಿದ್ದೇನೆ. ಇಲ್ಲಿ ಸಭೆಯನ್ನು ನಡೆಸುವವರು ಮಾನ್ಯ ಸಭಾಪತಿಯವರಾ ಅಥವಾ ಮಾನ್ಯ ಉಗ್ರಪ್ಪನವರಾ ಎನ್ನುವುದು ನನಗೆ ಗೊತ್ತಾಗುತ್ತಿಲ್ಲ. ಅವರು ಪ್ರತಿ ಸಾರಿ ನಿಂತಾಗಲೂ ಸಹ ಅವರಿಗೆ ಮಾತನಾಡಲು ಅವಕಾಶವನ್ನು ಕೊಡುತ್ತಿದ್ದೀರಿ. ಹಾಗಾದರೆ ಎಲ್ಲರಿಗೂ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡಿ.

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಇದು ನಿಲುವಳಿ ಸೂಚನೆ. ನಿಲುವಳಿ ಸೂಚನೆ ಮೇಲೆ ಅಧಿಕಾರ ಆಳುವ ಪಕ್ಷಕ್ಕೆ ಇರುವುದಿಲ್ಲ. ಆಳುವ ಪಕ್ಷಕ್ಕೆ ನಿಲುವಳಿ ಸೂಚನೆಯ ಪರವಾಗಿ ಮಾತನಾಡುವುದಕ್ಕೆ ಅವಕಾಶವಿರುವುದಿಲ್ಲ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನಾನು ಸದಸ್ಯನಾಗಿ ಮಾತನಾಡಲು ಅವಕಾಶವನ್ನು ಕೇಳುತ್ತಿದ್ದೇನೆ.

**ಸಭಾಪತಿಯವರು:–** ಅವರು ಹೇಳುವುದು ನಿಮಗೆ ಒಪ್ಪಿಗೆಯಾಗದೇ ಇದ್ದರೆ ನಿಮಗೆ ಆಮೇಲೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನನ್ನ ಸನ್ಮಿತ್ರರ ಮಾತುಗಳು ಸರಿಯಿಲ್ಲ. ನಾನು ಈ ಸದನದ ಸದಸ್ಯನಾಗಿ ಈ ವಿಚಾರದ ಮೇಲೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ತಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ.

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೆ, ಅವರು ಈ ನಿಲುವಳಿ ಸೂಚನೆಯ ಪರವಾಗಿ ಮಾತನಾಡುತ್ತಾರೆಂದರೆ, ಅವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ. ಇಲ್ಲವೆಂದರೆ ಅವರಿಗೆ ಅವಕಾಶವಿಲ್ಲ.

**ಸಭಾಪತಿಯವರು:–** ನಾನು ಸಭೆಯನ್ನು ನಡೆಸಬೇಕೋ ಬೇಡವೋ, ಎಲ್ಲರೂ ಕುಳಿತುಕೊಳ್ಳಿ ಸಣ್ಣ ಸಣ್ಣ ವಿಷಯಕ್ಕೂ ಮಾತನಾಡಬೇಡಿ.

**ಶ್ರೀ ಕೆ.ಜೆ. ಜಾರ್ಜ್:–** ಎಲ್ಲರೂ ಅವರವರ ಅಭಿಪ್ರಾಯವನ್ನು ಹೇಳುವುದಕ್ಕೆ ಅವಕಾಶವಿದೆ.

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೆ, ಈಗ ಪ್ರಿಲಿಮಿನರಿ ಸಬ್ಮಿಶನ್ ನಡೆಯುತ್ತಿದೆ. ಪ್ರಿಲಿಮಿನರಿ ಸಬ್ಮಿಶನ್‌ನಲ್ಲಿ ruling party ಬರುವುದಕ್ಕೆ ಸಾಧ್ಯವಿಲ್ಲ, ಪ್ರಿಲಿಮಿನರಿ ಸಬ್ಮಿಶನ್‌ನಲ್ಲಿ ಸರ್ಕಾರದ ಉತ್ತರವನ್ನು ಕೊಡುವುದಕ್ಕೆ ಸಾಧ್ಯವಿಲ್ಲ.

**ಸಭಾಪತಿಯವರು:–** ನಾನು ಚರ್ಚೆ ಬೇಡವೆಂದು ಹೇಳಿದ ಮೇಲೆ ಮಾತನಾಡುತ್ತಿದ್ದೀರಿ. ಆಯಿತು, ಈಗ ಎಲ್ಲರೂ ಕುಳಿತುಕೊಳ್ಳಿ. ಈಗ ಮಾನ್ಯ ಸಚಿವರು ಹೇಳುತ್ತಾರೆ. ಮಾನ್ಯ ಸಚಿವರು ಮಾತನಾಡಿದ ನಂತರ ಮಾನ್ಯ ಉಗ್ರಪ್ಪನವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ.

**ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಯವರೆ, ವಾಸ್ತವಿಕವಾಗಿ ಏನು ನಡೆಯಿತು ಎನ್ನತಕ್ಕಂಥಾದ್ದನ್ನು, ಏಕೆ ಈ ರೀತಿಯ ಚರ್ಚೆಗಳು ಬರುತ್ತದೆ ಎನ್ನತಕ್ಕಂಥಾದ್ದನ್ನು ನಾನು ಒಂದೇ ಮಾತಿನಲ್ಲಿ ಹೇಳಬೇಕಾಗುತ್ತದೆ. ಮೊನ್ನೆಯ ದಿವಸ ಭಗೀರಥ ಜಯಂತಿ ಕಾರ್ಯಕ್ರಮವಿತ್ತು. ಈ ಕಾರ್ಯಕ್ರಮವನ್ನು ಮುಗಿಸಿ ಬರುವಂಥ ಸಂದರ್ಭದಲ್ಲಿ ಮಾಧ್ಯಮದವರು ಸಹ ಬಿಬಿಎಂಪಿ ವಿಚಾರದ ಬಗ್ಗೆ ಪ್ರಸ್ತಾಪವನ್ನು ಮಾಡಿದರು ಮತ್ತು ಅದೇ ರೀತಿ ನ್ಯಾಯಾಲಯದ ಬಗ್ಗೆಯೂ ಸಹ ಪ್ರಸ್ತಾಪವನ್ನು ಮಾಡಿದರು. ನಾವು ಜಿಲ್ಲೆಗೆ ಹೋದಂಥ ಸಂದರ್ಭದಲ್ಲಿ ಸಲಿಗೆಯಿಂದ ಉದ್ಭವಿಸಿದಂಥ ರೀತಿಯಲ್ಲಿ ಅನೇಕ ಪ್ರಶ್ನೆಗಳನ್ನು ಕೇಳುತ್ತಾರೆ. ಆಗ ವಿಧಾನ ಸಭೆಯಲ್ಲಿ,

ಕೋರ್ಟಿನಲ್ಲಿ ಆಯಿತು ಮುಂದೆ ನಿಮ್ಮ ನಡೆ ಏನು, ಹೆಜ್ಜೆ ಏನು ಎಂದು ಕೇಳುತ್ತಾರೆ. ಅಲ್ಲಿ ಬಂದಂಥ ಚರ್ಚೆ ಅದು. ಈ ರೀತಿಯಾಗಿ ವಿಧಾನ ಸಭೆಯಲ್ಲಿ ಮಂಡಿಸಿದಂಥ ಮಸೂದೆ ಅನುಮೋದನೆಗೊಂಡು ವಿಧಾನ ಪರಿಷತ್ತಿಗೆ ಬಂದಾಗ ವಿಧಾನ ಪರಿಷತ್ತಿನಲ್ಲಿ ಈ ರೀತಿಯಾಗಿ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆಯೇ? ಇದನ್ನು ನೀವು ಕಾನೂನು ಮಂತ್ರಿಯಾಗಿ ಹೇಳಿ ಎಂದು ನನ್ನನ್ನು ಕೇಳಿದರು. ಪತ್ರಿಕೆಯವರು ಇದೇ ರೀತಿಯಾಗಿ ಮಾತನಾಡಬೇಕು ಎಂದು ಹೇಳುವುದಕ್ಕೆ ಅದು ನಮ್ಮ ಕೈಯಲ್ಲಿ ಇರುವುದಿಲ್ಲ. ಅವರು ಪ್ರಶ್ನೆಗಳನ್ನು ಕೇಳುತ್ತಾರೆ. ಆಗ ನಾನು ಹೇಳಿದ್ದು ಇಷ್ಟೇ ಇವತ್ತು ನಾನು ಹೇಳಿದ ಮಾತು ಪತ್ರಿಕೆಯಲ್ಲಿ ವರದಿಯಾಗಿಲ್ಲ, ಅದು ಬೇರೆ ಪ್ರಶ್ನೆ. ನಾನು ವಿಧಾನ ಪರಿಷತ್ತಿಗೆ ಈ ದೇಶದಲ್ಲಿ ಅತ್ಯಂತ ಗೌರವಯುತವಾದ ಸ್ಥಾನವಿದೆ. ಸುಮಾರು 110 ವರ್ಷಗಳು ತುಂಬಿರತಕ್ಕಂಥ ವಿಧಾನ ಪರಿಷತ್ತಿಗೆ, ವಿಧಾನ ಸಭೆ ಇಲ್ಲದಂಥ ಸಂದರ್ಭದಲ್ಲಿಯೂ ಈ ಮನೆ ಸರ್ಕಾರಕ್ಕೆ ಸಲಹೆಗಳನ್ನು ಕೊಟ್ಟುಕೊಂಡು ಬಂದಿದೆ. ಸರ್ಕಾರದ ಆದೇಶಗಳನ್ನು ಸಹ ಇವತ್ತು ನಾವು ನೋಡುತ್ತಿದ್ದೇವೆ. ಆ ರೀತಿಯಾಗಿ ಅದಕ್ಕೆ ತನ್ನದೇ ಆಗಿರತಕ್ಕಂಥ ಹಿರಿಮೆ ಇದೆ ಎನ್ನುವಾಗ, ಮತ್ತೆ ಅವರೇಕೆ ವಿರೋಧವನ್ನು ಮಾಡುತ್ತಾರೆ, ಇದು ಎಲ್ಲಾ ರಾಜ್ಯಗಳಲ್ಲಿ ಏಕಿಲ್ಲವೆಂದು ಕೇಳಿದರು. ವಿರೋಧ ಮಾಡುತ್ತಾರೆಂದರೆ, ಅದಕ್ಕೆ ನಾನು ಈ ರೀತಿಯಾಗಿ ಹೇಳಿದೆ. "ದೇಶದಲ್ಲಿ 5 ರಾಜ್ಯಗಳಲ್ಲಿ ಮಾತ್ರ ವಿಧಾನ ಪರಿಷತ್ತು ಇದೆ. ಎಲ್ಲಾ ರಾಜ್ಯಗಳಲ್ಲಿ ವಿಧಾನ ಪರಿಷತ್ತು ಇಲ್ಲ. ಇದಕ್ಕೆ ನಮ್ಮದೇ ಆಗಿರತಕ್ಕಂಥ ಇತಿಹಾಸವಿದೆ. ಹಾಗಾಗಿ ಜನರ ಹಿತದೃಷ್ಟಿಯಿಂದ, ಬೆಂಗಳೂರಿನ ಸಮಗ್ರತೆಯ ಹಿತದೃಷ್ಟಿಯಿಂದ ಯಾವುದೇ ಒಂದು ಮಸೂದೆಯನ್ನು ಮಾಡಿದಾಗ ಅದಕ್ಕೆ ಸಲಹೆಗಳನ್ನು ನೀಡಬೇಕು. ಸಲಹೆಗಳು ಸರಿ ಇಲ್ಲದೇ ಇರುವ ಸಂದರ್ಭದಲ್ಲಿ ತಿರಸ್ಕಾರ ಮಾಡುವಂಥ ಅಧಿಕಾರವಿದೆ. ಆಗ ವಿಧಾನ ಸಭೆಯಲ್ಲಿ ಮಂಜೂರು ಮಾಡುತ್ತಾರೆ. ಅವರು ಕೊಟ್ಟಿರುವ ಸಲಹೆಗಳನ್ನೂ ಪರಿಗಣಿಸಬೇಕಾಗುತ್ತದೆ, ಪರಿಗಣಿಸಿ ಪಾಸ್ ಮಾಡುತ್ತೇವೆ ಎಂದು ಹೇಳಿದೆ. ಮಾನ್ಯ ಸಭಾಪತಿಗಳೆ, ನಾನು ನಿನ್ನೆ ಬೆಳಿಗ್ಗೆ ಹುಬ್ಬಳ್ಳಿಗೆ ಹೋಗಿದ್ದೆ, ಗದಗ್‌ಗೆ ಹೋಗಿದ್ದೆ. ಮಾನ್ಯ ಹೊರಟ್ಟಿಯವರು ಅಲ್ಲಿದ್ದರು. ಅವರು ಹೇಳಿದಾಗಲೇ ಪತ್ರಿಕೆಯಲ್ಲಿ ಈ ರೀತಿ ಬಂದಿದೆ ಎನ್ನುವುದು ನನಗೆ ಗೊತ್ತಾಯಿತು. ನಾನು ಒಂದು ಮಾತನ್ನು ಹೇಳುತ್ತೇನೆ. Totally I deny the statement. ನಾನು "ಸೃಷ್ಟಿ" ಎಂದು ಹೇಳಿರುವ ಶಬ್ದ, . . . "ವಿಧಾನಸಭೆಯ ಸೃಷ್ಟಿ" ಎನ್ನುವ ಮಾತನ್ನು ಹೇಳಿದ್ದೇನೆ. ಪದೇ ಪದೇ ಅವರು, ಸೃಷ್ಟಿ ಎಂದರೇನು ಎಂದು ಕೇಳಿದರು. ಅದಕ್ಕೆ ನಾನು, ಸೃಷ್ಟಿ ಎಂದರೆ "ಬ್ರಹ್ಮ" ಎಂದು ಹೇಳಿದೆ. ಅಷ್ಟು ಬಿಟ್ಟರೆ ಬೇರೆ ಯಾವರೀತಿಯಲ್ಲೂ ಮಾತುಗಳು ಬರಲಿಲ್ಲ. ಮಾನ್ಯ ಸಭಾಪತಿಗಳೆ, ನಾನು ಪ್ರತಿ ಬಾರಿ ತುಮಕೂರಿಗೆ ಹೋದಾಗಲೆಲ್ಲಾ ಇಂತಹ ಪ್ರಸಂಗಗಳು ಬರುತ್ತಲೇ ಇರುತ್ತವೆ. ನಾನು ಒಂದು ಮಾತನ್ನು ಹೇಳುತ್ತೇನೆ. ನಾನು ವಿಧಾನಸಭೆ ಪ್ರವೇಶ ಮಾಡಿ 38 ವರ್ಷಗಳಾಯಿತು. 38 ವರ್ಷಗಳ ಜೊತೆಗೆ ನಾನು ಈ ಸಂಸದೀಯ ವ್ಯವಸ್ಥೆಯಲ್ಲಿ, ಜನತಂತ್ರ ವ್ಯವಸ್ಥೆಯಲ್ಲಿ ವಿಧಾನಸಭೆ ಮತ್ತು

ವಿಧಾನಪರಿಷತ್ತಿನ ಮಹತ್ವವನ್ನು ಅರ್ಥ ಮಾಡಿಕೊಂಡಿದ್ದೇನೆ. ಇದಕ್ಕೆ ಕಾರಣವೇನೆಂದರೆ, ಕಳೆದ 15 ವರ್ಷಗಳ ಹಿಂದೆ ನಾನು, ಲಂಡನ್‌ನಲ್ಲಿ ನಡೆದ Commonwealth Parliamentary Conference ನಲ್ಲಿ 1 ತಿಂಗಳುಗಳ ಕಾಲ House Commons, House of Lords ನಲ್ಲಿ ಭಾಗವಹಿಸಿದ್ದೆ. ಅಲ್ಲಿನ ವಿದ್ಯಮಾನಗಳೇನು ಎನ್ನುವುದನ್ನು ಅರ್ಥ ಮಾಡಿಕೊಂಡಿದ್ದೇನೆ. ಬಹುಶಃ ಅಲ್ಲಿ ನಡೆಯುತ್ತಿದ್ದ ಪ್ರಜಾಪ್ರಭುತ್ವದ ಸ್ಥಿತಿಯನ್ನು ನೋಡಿದಾಗ, ಎರಡೂ ಸದನಗಳಲ್ಲಿ ನಡೆಯುತ್ತಿದ್ದ ಕಾರ್ಯಾಚರಣೆಯನ್ನು ಗಮನಿಸಿದಾಗ ನನಗೆ ಈ ವ್ಯವಸ್ಥೆ ಬಗ್ಗೆ ತುಂಬಾ ಗೌರವ ಬಂತು. ನನಗೆ ಯಾವತ್ತೂ ಕೂಡ, ಅಗೌರವವನ್ನು ತರಬೇಕು, ಇನ್ನೊಂದು ಮಾಡಬೇಕು ಎನ್ನುವ ಉದ್ದೇಶ ಬಂದಿಲ್ಲ. ಮೇಲ್ಮನೆಯ ಸದಸ್ಯರು ಎಂದು ಕರೆಯಬೇಕಾದಾಗ ಅಲ್ಲಿ ರಾಜಕೀಯ ಪ್ರವೇಶ ಆಗಬಾರದು. ರಾಜಕೀಯವಾಗಿ ಅವರು ಪ್ರತಿನಿಧಿಸಿದ್ದರೂ ಕೂಡ ಮಸೂದೆಗಳು ಬಂದ ಸಂದರ್ಭದಲ್ಲಿ ಅದನ್ನು ರಾಜಕೀಯವಾಗಿ ಚರ್ಚೆ ಮಾಡಬಾರದು. ಯಾವ ಉದ್ದೇಶದಿಂದ ಮಸೂದೆ ವಿಧಾನಸಭೆಯಲ್ಲಿ ಪಾಸ್ ಆಯಿತು ಎನ್ನುವ ವಿಚಾರ ಮುಖ್ಯವಾಗುತ್ತದೆ ಎಂದು ಹೇಳಿರುವುದನ್ನು ಬಿಟ್ಟರೆ ಬೇರೆ ಯಾವುದನ್ನೂ ನಾನು ಮಾತನಾಡಿಲ್ಲ. ಈ ಸದನದ ಬಗ್ಗೆ ನನಗೆ ಅತ್ಯಂತ ಗೌರವ ಇದೆ. 110 ವರ್ಷವಾಗಿದೆ ಎಂದು ಅತ್ಯಂತ ಹೆಮ್ಮೆಯಿಂದ ಹೇಳುತ್ತೇನೆ. ನಾನು ಮಹಾರಾಜರ ಕಾಲದಲ್ಲಿ ಆಗಿದ್ದಂಥ ನಡವಳಿಗಳನ್ನು ಅನೇಕ ಸಲ ಓದಿದ್ದೇನೆ, ನಾನು ತಿಳಿದುಕೊಂಡಿದ್ದೇನೆ. ಆಗ ಮಾಡಿದ್ದ ಚಿಂತನೆಯನ್ನು ಕಾನೂನಿನಲ್ಲಿ ಅಳವಡಿಸುವ ಪ್ರಯತ್ನವನ್ನು ಮಾಡಿದ್ದೇವೆ. ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ಮಹಾರಾಜರ ಕಾಲದಲ್ಲಿ ಎಥನಾಲ್ ಅನ್ನು ಉಪಯೋಗ ಮಾಡುವುದರ ಬಗ್ಗೆ ದೊಡ್ಡ ಚರ್ಚೆಯಾಗಿತ್ತು. ಅದೆಲ್ಲವನ್ನೂ ನಾನು ಓದಿದ್ದೇನೆ. ಇವತ್ತು ರೈತರಿಗೆ ಸಹಾಯ ಆಗಬೇಕು ಎನ್ನುವ ಕಾರಣಕ್ಕೆ, ಎಥನಾಲ್ ಬಳಸುವುದಕ್ಕೆ ಸಂಬಂಧಪಟ್ಟಂತೆ ಮೆಕ್ಸಿಕೋ ಅಥವಾ ಬೇರೆ ದೇಶವನ್ನು ನೋಡಿ ಕಲಿತುಕೊಳ್ಳುವ ಅವಶ್ಯಕತೆ ಇಲ್ಲ. ನಮ್ಮ ಮಹಾರಾಜರ ಕಾಲದಲ್ಲೇ ಚರ್ಚೆಯಾಗಿತ್ತು ಎನ್ನುವುದರ ಬಗ್ಗೆ ನಾನು ಅನೇಕ ಸಲ ಉಲ್ಲೇಖ ಮಾಡಿದ್ದೇನೆ. ಮಾನ್ಯ ಈಶ್ವರಪ್ಪನವರು, ಮಾನ್ಯ ಹೊರಟ್ಟಿಯವರೇನು ಈ ನಿಯಮದ ಅಡಿ ಪ್ರಸ್ತಾಪ ಮಾಡಿದ್ದಾರೋ. . . ನಾನು ಸತ್ಯ ಹೇಳುತ್ತೇನೆ, ಯಾವುದೇ ರೀತಿಯಲ್ಲಿ ಅಗೌರವ ತರಬೇಕು ಅಥವಾ ಯಾವುದೇ ಸಂದರ್ಭದಲ್ಲಾದರೂ ಕೂಡ ಇದನ್ನು ರದ್ದತಿ ಮಾಡಬೇಕು, ಇನ್ನೊಂದು ಮಾಡಬೇಕು ಎಂದು ಕನಸು–ಮನಸಲ್ಲೂ ನಾನು ಚಿಂತನೆ ಮಾಡಿದವನೂ ಅಲ್ಲ, ಆ ರೀತಿ ಸಲಹೆ ಕೊಟ್ಟವನೂ ಅಲ್ಲ, ಆ ರೀತಿಯಾಗಿ ಎಂದೂ ಕೂಡ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿದವನಲ್ಲ. ಯಾವುದೇ ಸಂದರ್ಭಗಳಲ್ಲೂ ಈ ವಿಚಾರ ಚರ್ಚೆಗೆ ಬಂದಿಲ್ಲ. ಈ ಹಿನ್ನೆಲೆಯಲ್ಲಿ, ಪತ್ರಿಕೆಯಲ್ಲಿ ಬಂದಿರತಕ್ಕಂಥದ್ದು . . . . ನಾವೇನಾದರೂ ಹೇಳಿದಾಗ in between lines ಅನ್ನು ಊಹೆ ಮಾಡಿ ಬರೆಯುತ್ತಾರೆ. ಊಹೆ ಮಾಡಿ ಹಾಕಿರುವ ವರದಿ ಇದಾಗಿದೆಯೇ ವಿನಃ . . .ಏಕೆಂದರೆ ಅವರು ಪದೇ ಪದೇ, ನೀವು ವಿಶೇಷ ಅಧಿವೇಶನ

ಕರೆದಿದ್ದೀರಿ, ಈ ವಿಚಾರ ವಿಧಾನಸಭೆಯಲ್ಲಿ ಬಂತು, ಇದಕ್ಕೆ Select Committee ಏಕೆ ಬೇಕು ಎನ್ನುವಂತಹ ಪ್ರಶ್ನೆಗಳು ಉದ್ಭವವಾದಾಗ, ನಾನು ಇಷ್ಟು ಹೇಳಿದ್ದನ್ನು ಬಿಟ್ಟರೆ ಬೇರೆ ಹೇಳಿಲ್ಲ. ವಿಧಾನಸಭೆಯಲ್ಲಿನ ಮಸೂದೆಯ ಉದ್ದೇಶವನ್ನು ಅರ್ಥ ಮಾಡಿಕೊಳ್ಳಬೇಕು, ಆ ಹಿನ್ನೆಲೆಯಲ್ಲಿ ಅವರ ಮನಸ್ಸನ್ನು ಒಲಿಸುತ್ತೇವೆ ಎಂಬ ಮಾತನ್ನು ಹೇಳಿದ್ದೇನೆ, 10 ಸಲ ಹೇಳಿದ್ದೇನೆ. ಚರ್ಚೆ ಆದನಂತರ ಅದು ಅಂತಿಮ ಘಟ್ಟಕ್ಕೆ ಬಂದು ಅದಕ್ಕೆ ಸರ್ಕಾರ ಉತ್ತರ ಕೊಟ್ಟಾಗ ಸೌಹಾರ್ದವಾಗಿ ಕೊನೆಯಾಗುತ್ತದೆ ಎನ್ನುವ ಮಾತನ್ನೂ ಕೂಡ ಹೇಳಿದ್ದೇನೆ. ನಾನಿವತ್ತು I deny the statement which has appeared in the press ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಹೊರಟ್ಟಿಯವರು, ಇದನ್ನು ನಿನ್ನೆಯೇ ಏಕೆ ಡಿನೈ ಮಾಡಲಿಲ್ಲ ಎಂದು ಕೇಳಿದರು. ನಾನು ನಿನ್ನೆ ಹುಬ್ಬಳ್ಳಿಗೆ ಹೋಗಿದ್ದಾಗ ಈ ಕುರಿತು ಅವರು ಹೇಳಿದ ಮೇಲೆಯೇ ನನಗೂ ವಿಷಯಗೊತ್ತಾಯಿತು. ಅಲ್ಲಿಂದ ಬರುವುದಕ್ಕೆ ರಾತ್ರಿ 11–12 ಗಂಟೆಯಾಯಿತು, ಹಾಗಾಗಿ ನನಗೆ ಈ ಕುರಿತು ಪ್ರತಿಕ್ರಿಯೆ ನೀಡುವುದಕ್ಕೆ ಅವಕಾಶ ಆಗಲಿಲ್ಲ. ಈ ಸದನದಲ್ಲಿ ಇವತ್ತು ಈ ಪ್ರಶ್ನೆಯನ್ನು ಎತ್ತಿದ್ದೀರಿ. ಬಹುಶಃ ಇನ್ನು ಯಾವುದೇ ರೀತಿಯಲ್ಲೂ ಕೂಡ, ಕನಸು–ಮನಸ್ಸಿನಲ್ಲೂ ಕೂಡ ಈ ರೀತಿ ಚರ್ಚೆ ಬರಬಾರದು ಎಂದು ನಾನು ಬಯಸುತ್ತೇನೆ. ಬಹುಶಃ ದೇಶದ ಇತರ ರಾಜ್ಯಗಳಲ್ಲಿ ವಿಧಾನಪರಿಷತ್ತು ಇದೆಯೋ ಇಲ್ಲವೋ ಆದರೆ ಕರ್ನಾಟಕದಲ್ಲಿ ಮಾತ್ರ ಅದು ಉಳಿದೇ ಉಳಿಯುತ್ತದೆ, ಕರ್ನಾಟಕದಲ್ಲಿ ಮಾತ್ರ ಇದ್ದೇ ಇರುತ್ತದೆ, ಅದಕ್ಕೆ ನಾವು ಬದ್ಧವಾಗಿದ್ದೇವೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅನಗತ್ಯವಾಗಿರುವ ಚರ್ಚೆ ಮಾಡುತ್ತಾ ಹೋದರೆ ಅದು ಎಲ್ಲೆಲ್ಲಿಗೋ ಹೋಗುತ್ತದೆ. ಅದಕ್ಕೆ ನಾವು ಉತ್ತರ ಕೊಡುವಂಥದ್ದೂ ಸರಿಯಲ್ಲ. ಈ ವಿಚಾರವನ್ನು ಇಲ್ಲಿಗೆ ಕೊನೆಗಾಣಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಗಳೆ, ಒಂದು ಕಡೆ, ವಿಧಾಸಭೆಯ ಸೃಷ್ಟಿ ವಿಧಾನಪರಿಷತ್ತು ಎಂದು ಹೇಳುತ್ತಾರೆ, ಅದನ್ನು ನಾನು ಹೇಳಿದ್ದೇನೆ ಎಂದು ಒಪ್ಪಿಕೊಳ್ಳುತ್ತಿದ್ದಾರೆ. ಮಾನ್ಯ ಕಾನೂನು ಸಚಿವರೇ, ನೀವು ಕಾನೂನು ತಜ್ಞರಾಗಿದ್ದೀರೋ ಇಲ್ಲವೋ ನನಗೆ ಗೊತ್ತಿಲ್ಲ. ವಿಧಾನಸಭೆ ವಿಧಾನಪರಿಷತ್ತನ್ನು ಸೃಷ್ಟಿ ಮಾಡಿಲ್ಲ, ಸಂವಿಧಾನ ಸೃಷ್ಟಿ ಮಾಡಿದೆ. ಎರಡನೆಯದು, ಬ್ರಹ್ಮ ಎನ್ನುವ ಪದವನ್ನು ಹೇಳಿದ್ದೀರಿ. ಈ ಸದನದಲ್ಲಿ ಶಿಕ್ಷಕ ಕ್ಷೇತ್ರದಿಂದ ಮತ್ತು ಬೇರೆ ಬೇರೆ ಕ್ಷೇತ್ರಗಳಿಂದ ಆಯ್ಕೆಯಾಗಿರುವ ಸದಸ್ಯರಿದ್ದಾರೆ. ಹೀಗಿರುವಾಗ ವಿಧಾನಪರಿಷತ್ತಿನ ತೂಕವೇ ಬೇರೆಯಾಗಿದೆ. ಮತ್ತೆ ತಾವು ಈಗ, ನಾನು ಈ ಮಾತುಗಳನ್ನು ಹೇಳಿಯೇ ಇಲ್ಲ ಎಂದು ಹೇಳುತ್ತಿದ್ದೀರಿ. ಪರಿಷತ್ತು ರದ್ದತಿ ಚಿಂತನೆ ಬರಬಹುದು ಎಂದು ನೀವು . . .(ಗೊಂದಲ) ಅದಕ್ಕೆ ನೀವು ಒಂದು ಕೆಲಸ ಮಾಡಿ. ಇದೇ ಸದನದ ಒಂದು ಸಮಿತಿ ಮಾಡಿ (ಗೊಂದಲ) . . .

**ಶ್ರೀ ಟಿ.ಬಿ. ಜಯಚಂದ್ರ:–** ಮತ್ತೆ ನೀವು ಅದನ್ನೇ ಹೇಳುತ್ತಿದ್ದೀರಿ . . . (ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಚಿವರು, ರದ್ದತಿ ಬಗ್ಗೆ ಹೇಳಿಕೆ ಕೊಟ್ಟೇ ಇಲ್ಲ ಎಂದು ಹೇಳಿದ್ದಾರೆ, ಕನಸು–ಮನಸಿನಲ್ಲಿಯೂ ಇದರ ಬಗ್ಗೆ ವಿಚಾರ ಮಾಡುವುದಿಲ್ಲ ಎಂದು ಹೇಳಿದ್ದಾರೆ. . .

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಗಳೆ, ಅವರೂ ಕೂಡ ಹೇಳುತ್ತಿದ್ದಾರೆ, ಪತ್ರಿಕೆಗಳೂ ಕೂಡ ಅದನ್ನೇ ಹೇಳುತ್ತಿವೆ. ಈ ಬಗ್ಗೆ ಪತ್ರಿಕೆ ಮತ್ತು ಟಿವಿಯಲ್ಲಿ ಬಂದಿರುವುದರಿಂದ ಈ ಕುರಿತು ಜನರಿಗೆ ಕ್ಲಿಯರ್ ಆಗಬೇಕು. ಅಲ್ಲಿ ಹೇಳಿ, ಇಲ್ಲಿ ಬಂದು, ನಾನು ಹೇಳಿಲ್ಲ ಎಂದು ಹೇಳುವುದು ಸೂಕ್ತವಲ್ಲ. ಆಯಿತು, ನಾನು ಇವರ ಮಾತನ್ನು ನಂಬುತ್ತೇನೆ. ಆದರೆ ಈ ಕುರಿತು ಸ್ಪಷ್ಟವಾಗಬೇಕು ಎನ್ನುವುದಾದರೆ ಒಂದು ಸಮಿತಿ ಮಾಡಿ. ಎಲ್ಲಾ ಪಕ್ಷದ ಸದಸ್ಯರನ್ನೊಳಗೊಂಡಂಥ ಒಂದು ಸಮಿತಿ ಮಾಡಿ. ಟಿ.ವಿ., ಪತ್ರಿಕೆಗಳೆಲ್ಲವನ್ನೂ ಆ ಸಮಿತಿ ನೋಡಲಿ, ಅಲ್ಲೇ ತೀರ್ಮಾನವಾಗಲಿ. ಅಲ್ಲಿ ಹೇಳಿ, ಇಲ್ಲಿ ಬಂದು, ಹೇಳಿಲ್ಲ ಎನ್ನುವುದು ಎಷ್ಟು ನ್ಯಾಯ? ನಾನು ನಿಮ್ಮ ಮೇಲೆಯೇ ಬಿಡುತ್ತೇನೆ. ನೀವು ಏನು ತೀರ್ಮಾನ ತೆಗೆದುಕೊಳ್ಳುತ್ತೀರೋ ಆ ತೀರ್ಮಾನಕ್ಕೆ ಬದ್ಧರಾಗಿರುತ್ತೇವೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಗಳೆ, ಈ ಚರ್ಚೆಯನ್ನು ಇಲ್ಲಿಗೆ ಮುಗಿಸೋಣ. ಮಂತ್ರಿಗಳು ತಮ್ಮ ಹೇಳಿಕೆಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿ ಎಲ್ಲರಿಗೂ ಮನವರಿಕೆಯಾಗಿದೆ. ಇನ್ನು ಮುಂದೆ ಇಂಥದ್ದರ ಬಗ್ಗೆ ಪ್ರಸ್ತಾಪ ಬರಬಾರದು. ಈ ವಿಚಾರವನ್ನು ಇಲ್ಲಿಗೆ ಮುಕ್ತಾಯ ಮಾಡೋಣ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಗಳೆ, ನಾನು ಈ ಕುರಿತು ಎರಡು ವಾಕ್ಯಗಳನ್ನು ಹೇಳಬಯಸುತ್ತೇನೆ. . . (ಗೊಂದಲ) . .

(ಈ ಹಂತದಲ್ಲಿ ವಿರೋಧ ಪಕ್ಷದ ಭಾಗದಿಂದ, ಮಾನ್ಯ ಉಗ್ರಪ್ಪನವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ತಮಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕು ಎಂದು ಅನೇಕ ಸದಸ್ಯರು ಕೇಳುತ್ತಿದ್ದರು) (ಗೊಂದಲ)

**ಶ್ರೀ ವಿ.ಎಸ್. ಉಗ್ರಪ್ಪ:–** ನಮ್ಮ ಅಭಿಪ್ರಾಯವನ್ನು ನಾವು ಹೇಳಬಾರದೇ? ಏನಿದರ ಅರ್ಥ? ನಾವು ಮಾತನಾಡಬೇಕಾದರೆ ಸುಮ್ಮನೆ ಕುಳಿತುಕೊಳ್ಳಬೇಕಾಗುತ್ತದೆ. This is too much. ನನ್ನ ಹಕ್ಕುಗಳ ಮೇಲೆ ಅವರು ದಾಳಿ ನಡೆಸುತ್ತಿದ್ದಾರೆ. ಅವರು ಮಾತನಾಡಬೇಕಾದರೆ ನಾವು ಸುಮ್ಮನೆ ಕುಳಿತು ಕೇಳುತ್ತೇವೆ. ನಾವು ಏನಾದರೂ ಹೇಳುವುದಕ್ಕೆ ಹೋದರೆ . . . (ಗೊಂದಲ)

**ಸಭಾಪತಿಗಳು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಗಳೆ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ ಎಂದು ತಾವು ಹೇಳಿದ್ದೀರಿ. ಅವರು (ವಿರೋಧ ಪಕ್ಷದ ಸದಸ್ಯರು) ನಮಗೆ ಡಿಕ್ಟೇಟ್ ಮಾಡುವುದಕ್ಕಾಗುವುದಿಲ್ಲ. ನಾನು ಮಾತನಾಡುವುದಕ್ಕೆ ಅವರ ಅನುಮತಿ ತೆಗೆದುಕೊಳ್ಳಬೇಕೇ?

**(ಗೊಂದಲ)**

**ಸಭಾಪತಿಗಳು:–** ನಿಯಮ 59ರ ಅಡಿಯಲ್ಲಿ ಏನು ನೋಟಿಸ್ ಕೊಟ್ಟಿದ್ದಾರೋ ಆ ಕುರಿತು ನಡೆದಿರುವ ಚರ್ಚೆಯ ಹಿನ್ನೆಲೆಯಲ್ಲಿ . . .(ಗೊಂದಲ)

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಗಳೆ, ನನಗೆ ಮಾತನಾಡಲು ಅವಕಾಶ ಕೊಡುತ್ತೇನೆ ಎಂದು ತಾವು ಹೇಳಿದ್ದೀರಿ. ಬೇರೆಯವರು ಡಿಕ್ಟೇಟ್ ಮಾಡಿ, ನೀವು ಮಾತನಾಡಬಾರದು ಎಂದು ಹೇಳಿದರೆ ಅದು ನಮ್ಮ ಹಕ್ಕುಗಳಿಗೆ ಧಕ್ಕೆಯನ್ನುಂಟು ಮಾಡುತ್ತದೆ. ಮಾನ್ಯ ಸಭಾಪತಿಗಳೆ, ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ ಎಂದು ತಾವು ಹೇಳಿದ್ದೀರಿ . . .

**ಸಭಾಪತಿಗಳು:–** ಇದರ ಬಗ್ಗೆ ಏನು ಮಾತಾಡುತ್ತೀರಿ? ಅವರು ಕೊಟ್ಟಿರುವ ಹೇಳಿಕೆ ಮೇಲೆ ಏನಾದರೂ ಇದ್ದರೆ . . .

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಗಳೆ, ಪ್ರಶ್ನೆ ಅದಲ್ಲ. ತಾವು ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದಿರಿ. I will not take more than one minute.

**ಸಭಾಪತಿಗಳು:–** ಆಯಿತು, ಮಾತನಾಡಿ . . . (ಗೊಂದಲ)

**ಶ್ರೀ ಇ. ಕೃಷ್ಣಪ್ಪ:–** ನೀವು ಅವರಿಗೆ ಮಾತನಾಡಲು ಅವಕಾಶ ಕೊಡಿ. ಆದರೆ ಮಾತನಾಡಲು ಇಚ್ಛಿಸುವ ಇತರ ಸದಸ್ಯರೆಲ್ಲರಿಗೂ ಅವಕಾಶ ಕೊಡಬೇಕು. ಸರ್ಕಾರ ಉತ್ತರ ಕೊಟ್ಟಮೇಲೆ ಅವರು ಮತ್ತೆ ಏಕೆ ಮಾತನಾಡಬೇಕು? . . .

**ಶ್ರೀ ವಿ.ಎಸ್. ಉಗ್ರಪ್ಪ:–** ಅದರ ವಿಷಯ ನಿಮಗೇಕೆ? ಮಾನ್ಯ ಸಭಾಪತಿಗಳೆ, ಅವರು ನಮಗೆ ಡಿಕ್ಟೇಟ್ ಮಾಡುವುದಕ್ಕೆ ಆಗುವುದಿಲ್ಲ. ಮಾನ್ಯ ಸಭಾಪತಿಗಳೆ, ಕಾನೂನು ಸಚಿವರು ಈಗ ಕ್ಲ್ಯಾರಿಫೈ ಮಾಡಿದ್ದಾರೆ, ಅವರನ್ನು ಅಭಿನಂದಿಸುತ್ತೇನೆ. ಎರಡನೆಯದು, ಈಗ ರಾಜ್ಯಸಭೆಗೆ ಸಂಬಂಧಿಸಿದಂತೆ ಆರ್ಟಿಕಲ್ 18ರಲ್ಲಿ ಅವಕಾಶ ಇದೆ. ವಿಧಾನ ಪರಿಷತ್ತಿನ ವಿಚಾರವಾಗಿ Article 168 and 169 are

relevant. Article 168 and 169 ನಲ್ಲಿ ಕ್ರಿಯೇಷನ್ ಮತ್ತು ಅಬಾಲಿಷನ್‌ಗೆ ಅವಕಾಶ ಇದ್ದರೂ ಕೂಡ ಸರ್ಕಾರಗಳು ಯಾವುದೇ ಸರ್ಕಾರವಾಗಿರಲಿ ಬಹುಶಃ ಈ ರೀತಿ ವಿಧಾನ ಪರಿಷತ್ತನ್ನು ಅಬಾಲಿಷ್ ಮಾಡುವುದಕ್ಕೆ ಚಿಂತನೆ ಮಾಡತಕ್ಕಂಥಾದ್ದು ಸಮಂಜಸ ಅಲ್ಲ. ನಾನು ಇಷ್ಟೇ ಹೇಳುತ್ತೇನೆ, ಇನ್ನು ಮುಂದೆ ಯಾರೂ ಸಹ ಆ ದಿಕ್ಕಿನಲ್ಲಿ ಚಿಂತನೆ ಸಾಗಿಸತಕ್ಕಂಥದ್ದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಎಲ್ಲೋ ಒಂದು ರೀತಿಯ ಅಪಚಾರವಾಗುವಂಥದ್ದು ಇದೆ. ಇದನ್ನು ಇವತ್ತು ಸರ್ಕಾರ ಸ್ಪಷ್ಟಪಡಿಸಿರತಕ್ಕಂಥ ಹಿನ್ನೆಲೆಯಲ್ಲಿ ನಾನು ಅದನ್ನು ಸ್ವಾಗತ ಮಾಡುತ್ತೇನೆಂದು ಮತ್ತೊಮ್ಮೆ ಹೇಳುವುದಕ್ಕೆ ಬಯಸುತ್ತೇನೆ.

**(ಗೊಂದಲ)**

**ಸಭಾಪತಿಯವರು:–** ಈಗ ಸಾಕು, ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಈಗ ನಿಯಮ 59ರ ಅಡಿಯಲ್ಲಿ ಏನು ಒಂದು ನಿಲುವಳಿ ಸೂಚನೆ ನನ್ನಲ್ಲಿಗೆ ಬಂದಿತ್ತು, ವಿಷಯಗಳ ಮಂಡನೆ ಮತ್ತು ಸರ್ಕಾರದಿಂದ ಅದಕ್ಕೆ ಸ್ಪಷ್ಟೀಕರಣವನ್ನು ಕೊಟ್ಟಿರುವ ಹಿನ್ನೆಲೆಯಲ್ಲಿ ಈ ನಿಲುವಳಿ ಸೂಚನೆ sustainable ಅಲ್ಲ ಎಂದು ಹೇಳಿ ಇದನ್ನು ನಾನು ತೆಗೆದು ಹಾಕುತ್ತಿದ್ದೇನೆ. ಆದರೆ ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಮಾತ್ರ ಸೇರಿಸುವುದಕ್ಕೆ ಇಷ್ಟಪಡುತ್ತೇನೆ, ನಮ್ಮ ಕರ್ನಾಟಕ ವಿಧಾನ ಪರಿಷತ್ತು ಎಲ್ಲರೂ ಹೇಳಿರುವ ಹಾಗೆ ದೇಶದಲ್ಲೇ ಅತೀ ದೊಡ್ಡ, ಅತ್ಯಂತ ಹಿರಿಯ ಪ್ರಜಾ ತಾಂತ್ರಿಕ ವ್ಯವಸ್ಥೆ. ಇದಕ್ಕೆ ತನ್ನದೇ ಆದಂಥ ಹಿರಿಮೆ, ಗರಿಮೆ ಇದೆ, reputation ಇದೆ. ಈ ಹಿನ್ನೆಲೆಯಲ್ಲಿ ಈ ರೀತಿಯ ಚರ್ಚೆ ಸಾರ್ವಜನಿಕವಾಗಿ ಆದದ್ದು ಸರಿಯಲ್ಲ, ಒಂದು ರೀತಿಯಲ್ಲಿ ಮನಸ್ಸಿಗೆ ನೋವುಂಟು ಮಾಡುವಂತಹ ಸಂಗತಿಯಾಗಿದೆ. ಯಾರೂ ಹೇಳಿಲ್ಲ, ನಾನು ಸಹ ಮೊನ್ನೆ ಕೊಪ್ಪಳಕ್ಕೆ ಭೇಟಿ ಕೊಟ್ಟಂತಹ ಸಂದರ್ಭದಲ್ಲಿ ಅಲ್ಲಿ ಕೆಲವು ಪತ್ರಕರ್ತರು ಈ ಬಗ್ಗೆ ಪ್ರಶ್ನಿಸಿದಾಗ ನಾನು ಬಹಳ ಸ್ಪಷ್ಟವಾಗಿ ಹೇಳಿದೆ, ಮುಖ್ಯಮಂತ್ರಿಗಳು ನನ್ನ ಜೊತೆಯಲ್ಲಿ ಅದರ ಹಿಂದಿನ ದಿವಸ ತುಂಬಾ ಮಾತನಾಡಿದ್ದು, ಅವರಿಗೆ ಸ್ಪಷ್ಟವಾಗಿ ಈ ರೀತಿಯ ಯಾವುದೇ ಭಾವನೆ ಇಲ್ಲ, ಮತ್ತು ಈ ಚರ್ಚೆಯೂ ಸರಿಯಲ್ಲ ಎನ್ನುವಂತಹ ಮಾತುಗಳನ್ನು ನಾನು ಹೇಳಿದ್ದು ಸಹ ಪತ್ರಿಕೆಯಲ್ಲಿ ಬಂದಿದೆ. ಮುಖ್ಯಮಂತ್ರಿಗಳು ನನ್ನ ಹತ್ತಿರ ಸಾಕಷ್ಟು ಸಮಯ ಮಾತನಾಡಿದ್ದಾರೆ. ಹಾಗಾಗಿ ಮತ್ತೆ ಆ ವಿಷಯದ ಬಗ್ಗೆ ಚರ್ಚೆ ಬೇಡ. ಆ ವಿಷಯವನ್ನು ನಾನು ಇಲ್ಲಿಗೆ ಮುಗಿಸುತ್ತಿದ್ದೇನೆ. ಯಾವುದೇ ಗೊಂದಲ ಇಲ್ಲದ ರೀತಿಯಲ್ಲಿ ನಮ್ಮ ಸದನದ ಮುಂದಿನ ಕಲಾಪಗಳನ್ನು ನಡೆಸಿಕೊಂಡು ಹೋಗೋಣ.

## 5. <u>ಸಚಿವರ ಹೇಳಿಕೆ</u>

**ವಿಷಯ: ಗೋಪಾಡಿ ಗ್ರಾಮದ ಚೆರ್ಕಿಕಡು ಎಂಬಲ್ಲಿ ಅಪರಿಚಿತರು ಇಂದಿರಾ ಎಂಬುವ ಮೇಲೆ ಲೈಂಗಿಕ ಆಕ್ರಮಣ ನಡೆಸಿ ಕೊಲೆ ಮಾಡಿರುವ ಬಗ್ಗೆ.**

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಕೋಟ ಶ್ರೀನಿವಾಸ ಪೂಜಾರಿಯವರು ನಿಯಮ 330(ಎ) ಅಡಿಯಲ್ಲಿ ಚರ್ಚಿಸಿದ ವಿಷಯಕ್ಕೆ ಕುರಿತು ಮಾನ್ಯ ಗೃಹ ಸಚಿವರ ಪರವಾಗಿ ಈ ಕೆಳಕಂಡ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ:

"ದಿನಾಂಕ 11.04.2015 ರಂದು ಸಂಜೆ ಗೋಪಾಡಿ ಗ್ರಾಮದ ಚೆರ್ಕಿಕಡು ಎಂಬಲ್ಲಿ ಯಾರೋ ಅಪರಿಚಿತರು ಇಂದಿರಾ ಎಂಬವರ ಮೇಲೆ ಲೈಗಿಂಕ ಆಕ್ರಮಣ ನಡೆಸಿ ಕೊಲೆ ಮಾಡಿರುತ್ತಾರೆ ಎಂದು ಮಾಹಿತಿ ಬಂದ ಮೇರೆಗೆ ಪೊಲೀಸ್ ವೃತ್ತ ನಿರೀಕ್ಷಕರು, ಕುಂದಾಪುರ ವೃತ್ತರವರು ಸಿಬ್ಬಂದಿಯವರೊಂದಿಗೆ ಕುಂದಾಪುರ ತಾಲೂಕು ಚೆರ್ಕಿಕಡು ಪಡುಗೋಪಾಡಿ ಎಂಬಲ್ಲಿರುವ ಮಹಾಬಲ ಮೋಗವೀರ ರವರ ಮನೆಯ ಬಳಿ ಬಂದಾಗ ಅಲ್ಲಿ ಜನ ಸೇರಿದ್ದು ಮಹಾಬಲ ಮೋಗವೀರ ರವರ ಮನೆಯ ಅಂಗಳದ ಒತ್ತಿಗೆ ಇರುವ ಕಟ್ಟಿಗೆ ಕೂಡಿಡುವ ಕೊಟ್ಟಿಗೆಯಲ್ಲಿ ಶ್ರೀಮತಿ ಇಂದಿರಾ ಎಂಬ ಮಹಿಳೆ ರಕ್ತದ ಮಡುವಿನಲ್ಲಿ ಬಿದ್ದುಕೊಂಡಿದ್ದು ಇವರ ಮುಖವನ್ನು ಯಾರೋ ಕಲ್ಲಿನಿಂದ ಜಜ್ಜಿ ಮುಖ ವಿಕಾರಗೊಂಡಿತ್ತು. ಶ್ರೀಮತಿ ಇಂದಿರಾರವರ ಕುತ್ತಿಗೆಯಲ್ಲಿ ಯಾವುದೇ ಆಭರಣಗಳು ಕಂಡುಬಂದಿರಲಿಲ್ಲ.

ಈ ಘಟನೆಯ ಕುರಿತು ಕುಮಾರಿ ಪ್ರಮತಿ ತಂದೆ ಮಹಾಬಲ ಮೋಗವೀರ ಗುಡ್ಡಿ ಲಿಂಗಜ್ಜಿಮನೆ ಚೆರ್ಕಿಕಡು ಪಡುಗೋಪಾಡಿ ಗ್ರಾಮ ಕುಂದಾಪುರ ತಾಲೂಕು ಇವರು ದಿನಾಂಕ 11.04.2015 ರಂದು ನನ್ನ ಮಾವಂದಿರು ಕೆಲಸಕ್ಕೆ ಹೋಗಿದ್ದು ಮನೆಯಲ್ಲಿ ನಾನು, ನನ್ನ ತಾಯಿ ನನ್ನ ಚಿಕ್ಕಮ್ಮ ಹಾಗೂ ಚಿಕ್ಕಮ್ಮನ ಮಗ ಮನೆಯಲ್ಲಿದ್ದು ಮಧ್ಯಾಹ್ನ ಸುಮಾರು 4 ಗಂಟೆಗೆ ನನ್ನ ತಾಯಿ ಮನೆ ಹತ್ತಿರ ಇರುವ ಗದ್ದೆಗೆ ತರಕಾರಿ ಕೊಯ್ಯಲು ಹೋಗಿದ್ದು ನನ್ನ ಚಿಕ್ಕಮ್ಮ ಇಂದಿರಾರವರು ಮನೆಯ ಅಂಗಳಕ್ಕೆ ತಾಗಿ ಹೊಂದಿ ಕೊಂಡಿರುವ ಕೊಟ್ಟಿಗೆಯಲ್ಲಿ ಸೌದೆಯನ್ನು ಜೋಡಿಸುತ್ತಿದ್ದು ನಾನು ಅಡುಗೆ ಕೆಲಸದ ಬಗ್ಗೆ ಹೋದೆನು. ಸುಮಾರು ಅರ್ಧಗಂಟೆ ಕಳೆದರೂ ಚಿಕಮ್ಮನವರು ಮನೆಯೊಳಗೆ ಬಾರದಿರುವುದನ್ನು ಕಂಡು ನಾನು ಹುಡುಕುತ್ತಾ ಕೊಟ್ಟಿಗೆ ಒಳಗೆ ಇಣುಕಿ ನೋಡಿದಾಗ ಚಿಕ್ಕಮ್ಮ ಇಂದಿರಾಳು ಸೌದೆ ರಾಶಿಯ ಹತ್ತಿರ ನೆಲದಲ್ಲಿ ಅಂಗಾತನೆ ರಕ್ತದ ಮಡುವಿನಲ್ಲಿ ಬಿದ್ದಿದ್ದು ಆಕೆಯ ಮುಖದ ತುಂಬಾ ರಕ್ತ ಹರಿದಿದ್ದು, ಆಕೆ ಧರಿಸಿದ ನೈಟಿಯ ಎದೆ ಬಾಗ ಹರಿದುಕೊಂಡಿದ್ದು ಮೊಣಕಾಲಿನಿಂದ ಸ್ವಲ್ಪ ಮೇಲಕ್ಕೆ ಸರಿದಿದ್ದು ಚಿಕ್ಕಮ್ಮ ಚಿಕ್ಕಮ್ಮ ಎಂದು ನಾನು ಕೂಗಿ ಕರೆದರೂ ಉತ್ತರಿಸದೇ ಇದ್ದು ನಾನು ಜೋರಾಗಿ ಬೊಬ್ಬೆ ಹಾಕಿದಾಗ ನನ್ನ ತಾಯಿ ಗಿರಿಜಾ ಹಾಗೂ ಅನುಪಾಸಿನವರು ಓಡಿ ಬಂದರು. ಅವರು ಬಂದು ನೋಡಿದಾಗ ನನ್ನ ಚಿಕ್ಕಮ್ಮ

ಮೃತಪಟ್ಟಿರುವುದು ಗೊತ್ತಾಯಿತು. ಗಮನಿಸಿದಾಗ ನನ್ನ ಚಿಕ್ಕಮ್ಮನು ಧರಿಸಿದ್ದ ಒಂದು ಜತೆ ಕಿವಿ ಓಲೆ ಹಾಗೂ ಕುತ್ತಿಗೆಯಲ್ಲಿದ್ದ ಚಿನ್ನದ ಕರಿಮಣಿ ಇರಲಿಲ್ಲ. ನನ್ನ ಚಿಕ್ಕಮ್ಮನನ್ನು ಯಾರೋ ಅಪರಿಚಿತರು ಅತ್ಯಾಚಾರ ಮಾಡಿ ಕಲ್ಲಿನಿಂದ ತಲೆಗೆ ಜಜ್ಜಿ ಕೊಲೆ ಮಾಡಿ ಬಳಿಕ ಆಕೆಯ ಮೈಮೇಲಿರುವ ಚಿನ್ನಾಭರಣಗಳನ್ನು ದೋಚಿಕೊಂಡು ಹೋಗಿರುತ್ತಾರೆ. ಈ ಘಟನೆಯು ಮಧ್ಯಾಹ್ನ 4 ಗಂಟೆಯಿಂದ 4.30 ಗಂಟೆಯ ಮಧ್ಯದಲ್ಲಿ ನಡೆದಿರುತ್ತದೆ ಎಂಬುದಾಗಿ ಲಿಖಿತ ದೂರು ನೀಡಿದ್ದರಿಂದ ಕುಂದಾಪುರ ಠಾಣಾ ಅ.ಕ್ರ. 110/–2015 ಕಲಂ 376, 302, 201 ಐಪಿಸಿಯಂತೆ ಪ್ರಕರಣ ದಾಖಲಿಸಿ, ತನಿಖೆ ಕೈಗೊಂಡಿರುವುದಾಗಿದೆ.

ಈ ಪ್ರಕರಣದಲ್ಲಿ ತನಿಖೆ ಮುಂದುವರಿಸಿದ ಸಿಪಿಐ, ಕುಂದಾಪುರ ರವರು ಘಟನಾ ಸ್ಥಳಕ್ಕೆ ಶ್ವಾನದಳ ಮತ್ತು ಬೆರಳಚ್ಚು ತಜ್ಞರನ್ನು ಸ್ಥಳಕ್ಕೆ ಬರ ಮಾಡಿಕೊಂಡು ಪರಿಶೀಲನೆ ನಡೆಸಿ ಘಟನಾ ಸ್ಥಳದಲ್ಲಿ ಸಾರ್ವಜನಿಕರು ಸೇರಿ ಜನ ಸಂದಣಿ ಜಾಸ್ತಿಯಾಗಿ ಈ ಕೃತ್ಯವನ್ನು ಖಂಡಿಸುತ್ತಿದ್ದರಿಂದ ಅಲ್ಲದೇ ಘಟನೆಯ ಸ್ಥಳದಲ್ಲಿ ವಿದ್ಯುತ್ ದೀಪದ ಬೆಳಕಿನ ವ್ಯವಸ್ಥೆ ಇಲ್ಲದ ಕಾರಣ ಶವ ಮಹಜರು ನಡೆಸಲು ಅನಾನೂಕೂಲವಾಗಿದ್ದು ಮೃತರ ಮೇಲೆ ಲೈಂಗಿಕ ಆಕ್ರಮಣ ನಡೆದ ಬಗ್ಗೆ ಖಚಿತಪಡಿಸಿಕೊಳ್ಳಲು ಹಾಗೂ ಮೃತರ ಮೈಮೇಲಿನ ಗಾಯಗಳ ಬಗ್ಗೆ ಪರಿಶೀಲಿಸಿ ಕೂಲಂಕುಷ ತನಿಖೆ ನಡೆಸುವ ಸಲುವಾಗಿ ಮೃತದೇಹವನ್ನು ಮಣಿಪಾಲ ಕೆಎಂಸಿ ಶವಗಾರಕ್ಕೆ ಕಳುಹಿಸಿಕೊಟ್ಟಿದ್ದು, ವರದಿ ಬರಲು ಬಾಕಿ ಇರುತ್ತದೆ. ಸದ್ರಿ ಪ್ರಕರಣದಲ್ಲಿ ಮೃತೆಯ ಮೇಲೆ ಲೈಗಿಂಕ ದೌರ್ಜನ್ಯ ನಡೆಸಿರುವುದು ಕಂಡು ಬಂದಿದ್ದು, ವೈದ್ಯಕೀಯ ವರದಿ ಬಂದ ನಂತರ ಖಚಿತವಾದ ಅಭಿಪ್ರಾಯಕ್ಕೆ ಬರಬಹುದಾಗಿದೆ. ಪ್ರಕರಣದ ತನಿಖೆಯ ಸಮಯ ಸಾಕ್ಷಿದಾರರು ಪ್ರಶಾಂತ ಮೋಗವೀರ ಎಂಬಾತ ಘಟನೆಯ ದಿನಾಂಕದಂದು ಸಂಜೆ ಈ ಮನೆಯ ಹಿಂದಿನಿಂದ ಹೋಗುತ್ತಿರುವುದನ್ನು ನೋಡಿದ ಬಗ್ಗೆ ಮಾಹಿತಿ ನೀಡಿದ್ದು, ದಿನಾಂಕ: 12.04.2015 ರಂದು ಪ್ರಶಾಂತ ಮೋಗವೀರ ನನ್ನು ವಶಕ್ಕೆ ಪಡೆದು ವಿಚಾರಿಸಿದಾಗ ಆತನು ತಾನು ಇಂದಿರಾಳನ್ನು ಅತ್ಯಾಚಾರ ಮಾಡಲು ಪ್ರಯತ್ನಿಸಿದಾಗ ಆಕೆ ಬೊಬ್ಬೆ ಹಾಕಿದ್ದರಿಂದ, ಆಕೆಯನ್ನು ಕೊಲೆ ಮಾಡಿ, ಆಕೆಯ ಕರಿಮಣಿ ಸರವನ್ನು ದೋಚಿರುವುದಾಗಿ ಒಪ್ಪಿಕೊಂಡಿದ್ದು, ಈತನು ದೋಚಿರುವ ಕರಿಮಣಿ ಸರವನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಆರೋಪಿಯನ್ನು ದಿನಾಂಕ: 13.04.2015 ರಂದು ಮಾನ್ಯ ಕುಂದಾಪುರ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ದಿನಾಂಕ: 27.04.2015 ರವರೆಗೆ ನ್ಯಾಯಾಂಗ ಬಂಧನ ವಿಧಿಸಿರುತ್ತದೆ.

ಮಾನ್ಯ ವಿಧಾನ ಪರಿಷತ್ ಸದಸ್ಯರು ಗಮನ ಸೆಳೆದಿರುವಂತೆ ಸದ್ರಿ ಪ್ರಕರಣದಲ್ಲಿ ಮೃತರ ಕುಟುಂಬಕ್ಕೆ ಪರಿಹಾರ ದೊರಕಿಸಿಕೊಡುವ ನಿಟ್ಟಿನಲ್ಲಿ Victim Compensation Scheme 2011 ರ ದಂಡ ಪ್ರಕ್ರಿಯಾ ಸಂಹಿತೆ ಕಲಂ 357–ಎ ಅಡಿಯಲ್ಲಿ ಅಧ್ಯಕ್ಷರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,

ಉಡುಪಿ ರವರಿಗೆ ಅರ್ಜಿ ಸಲ್ಲಿಸಲು ಮೃತರ ಕುಟುಂಬದವರಿಗೆ ಇಲಾಖಾ ವತಿಯಿಂದ ಎಲ್ಲಾ ರೀತಿಯ ಸಹಕಾರವನ್ನು ನೀಡಲಾಗುವುದು."

**ಸಭಾಪತಿಯವರು:–** ಈಗ ವಿಧೇಯಕದ ಬಗ್ಗೆ ಮುಂದುವರೆದ ಚರ್ಚೆ.

**ಶ್ರೀ ಸಂದೇಶ್ ನಾಗರಾಜ್:–** ಮಾನ್ಯ ಸಭಾಪತಿಯವರೇ, ವಿಧೇಯಕದ ಬಗ್ಗೆ ಎರಡೂ ಕಡೆ ಬಹಳಷ್ಟು ಸದಸ್ಯರು ಮಾತನಾಡಿದ್ದಾರೆ. ನಾವೆಲ್ಲಾ ಅವರು ಮಾತನಾಡಿರುವುದನ್ನು ಕೇಳಿದ್ದೇವೆ. ಅದನ್ನು ಮುಂದುವರೆಸಿ ಅಷ್ಟೆ.

**ಸಭಾಪತಿಯವರು:–** ಈಗ ಜೆಡಿಎಸ್ ನಿಂದ ಮಾನ್ಯ ಹುಲಿನಾಯ್ಕರ್‌ರವರು ಮಾತನಾಡಬೇಕಾಗಿತ್ತು. ಅವರು ಇಲ್ಲ ಎನ್ನುವುದಾದರೆ, ಮೊದಲು ಜೆಡಿಎಸ್ ನವರಿಗೆ ಅವಕಾಶ ಕೊಡುತ್ತೇನೆ, ಅದಾದ ಮೇಲೆ ಬಿಜೆಪಿಯವರಿಗೆ ಅವಕಾಶ ಕೊಡುತ್ತೇನೆ. ಈಗ ಮಾನ್ಯ ಕೃಷ್ಣಪ್ಪನವರು ಮಾತನಾಡುತ್ತಾರೆ. ತಾವೆಲ್ಲಾ ಮಾತನಾಡುತ್ತಿರುವಾಗ ನಾನು ಮಧ್ಯ ಮಾತನಾಡಿದೆ ಎಂದು ಯಾರು ತಪ್ಪು ತಿಳಿದುಕೊಳ್ಳಬಾರದು. ಇವತ್ತು ನಾನು ಈ ಚರ್ಚೆಯನ್ನು ಮುಗಿಸಬೇಕಾಗಿತ್ತು. ಮಾತನಾಡುವವರ ಪಟ್ಟಿ ಜಾಸ್ತಿ ಇದೆ, ಆದರೆ ನಾನು ಎಲ್ಲರಿಗೂ ಅವಕಾಶ ಕೊಡುವುದಕ್ಕಾಗುವುದಿಲ್ಲ. ಯಾರೇ ಮಾತನಾಡಿದರೂ ಕೂಡ ಐದು ನಿಮಿಷದೊಳಗೆ ಮುಗಿಸಬೇಕು.

**ಶ್ರೀ ಕೆ.ಬಿ. ಶಾಣಪ್ಪ:–** ನಾವೇನು ಸುಮ್ಮನೆ ಕುಳಿತುಕೊಳ್ಳಬೇಕೆ? How far we have to tolerate?

**ಶ್ರೀ ಇ. ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೇ, ಐದು ನಿಮಿಷದಲ್ಲಿ ಮಾತನಾಡಿ ಎಂದರೆ ಹೇಗೆ ಮಾತನಾಡುವುದು?

**ಸಭಾಪತಿಯವರು:–** ನಾನು ಹೇಳುವುದನ್ನು ಸ್ವಲ್ಪ ಕೇಳಿ. ನಾನು ವಿರೋಧ ಪಕ್ಷದ ನಾಯಕರನ್ನು, ಜೆಡಿಎಸ್ ನಾಯಕರಾದ ಬಸವರಾಜ ಹೊರಟ್ಟಿಯವರನ್ನು, ನಮ್ಮ ಮುಖ್ಯ ಸಚೇತಕರುಗಳನ್ನು ಕರೆಯಿಸಿ ನನ್ನ ಕಛೇರಿಯಲ್ಲಿ ಮಾತನಾಡಿದಾಗ ಅವರು ಒಬ್ಬರಿಗೆ ಐದು ನಿಮಿಷಕ್ಕಿಂತ ಜಾಸ್ತಿ ಅವಕಾಶ ಕೊಡುವುದು ಬೇಡ, ಅವರು ಐದು ನಿಮಿಷದೊಳಗೆ ಪರ ಅಥವಾ ವಿರೋಧ ಏನು ಎಂಬುದನ್ನು ಹೇಳಲಿ ಎಂದು ಮೊನ್ನೆಯೇ ಹೇಳಿದರು. ಆ ತರಹ ಮುಗಿಸಿ, ಸುಮಾರು ಒಂದೂವರೆ ಒಂದೂಮುಕ್ಕಾಲು ಗಂಟೆಯವರೆಗೆ ಮಾತನಾಡಿ ನಂತರ ಸರ್ಕಾರ ಉತ್ತರ ಕೊಡಲಿ. ಅಲ್ಲಿಗೆ ಮುಂದೇನು ಮಾಡಬೇಕೆಂಬುದನ್ನು ನೋಡೋಣ. ಹಾಗಾಗಿ ಯಾರ್‍ಯಾರು ಮಾತನಾಡುತ್ತಾರೆ ಅವರು ಐದು ನಿಮಿಷದೊಳಗೆ ಮುಗಿಸಬೇಕು. ಈಗ ಮೊದಲನೆಯದಾಗಿ ಮಾನ್ಯ ಕೃಷ್ಣಪ್ಪನವರು ಮಾತನಾಡುತ್ತಾರೆ.

## 6. ಶಾಸನ ರಚನೆ

### ವಿಧೇಯಕಗಳ ಪರ್ಯಾಲೋಚನೆ ಮತ್ತು ಅಂಗೀಕಾರ ಮತ್ತು ಪರಿಶೀಲನಾ ಸಮಿತಿಗೆ ಒಪ್ಪಿಸುವ ಬಗ್ಗೆ.

### ಕರ್ನಾಟಕ ನಗರಪಾಲಿಕೆಗಳ (ತಿದ್ದುಪಡಿ) ವಿಧೇಯಕ 2015ರ ಮುಂದುವರೆದ ಚರ್ಚೆ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕರ್ನಾಟಕ ನಗರಪಾಲಿಕೆಗಳ (ತಿದ್ದುಪಡಿ) ವಿಧೇಯಕ, 2015ರ ಮೂಲಕ ಬೆಂಗಳೂರನ್ನು ಮೂರು ಭಾಗ ಮಾಡಬೇಕೆಂದು ಈ ವಿಧೇಯಕವನ್ನು ತಂದಿದ್ದಾರೆ. ಬೆಂಗಳೂರನ್ನು ಮೂರು ಭಾಗ ಮಾಡಬೇಕೆಂದರೆ ಕಠಾರಿಯ ರವರ ವರದಿ ಹಾಗೂ ಬಿ.ಎಸ್. ಪಾಟೀಲ್‌ರವರ ಮಧ್ಯಂತರ ವರದಿ, ಇದನ್ನು ಅವರು ಇಟ್ಟುಕೊಂಡು ಇವತ್ತು ಮೂರು ಭಾಗ ಮಾಡುವುದಕ್ಕೆ ಹೊರಟಿದ್ದಾರೆ. ಇದಕ್ಕೆ ಮುಖ್ಯವಾದ ಕಾರಣ ಭ್ರಷ್ಟಾಚಾರ, ಫ್ಲೆಕ್ಸ್‌ಗಳ ಹಾವಳಿ, ಈ ರೀತಿ ಎರಡು–ಮೂರು ಕಾರಣಗಳನ್ನು ಕೊಟ್ಟಿದ್ದಾರೆ. ಈ ಭ್ರಷ್ಟಾಚಾರ ಎನ್ನುವುದನ್ನು ನಮ್ಮ ಗೆಳೆಯರಾದ ಕಾಂಗ್ರೆಸ್‌ನವರು, ಬಿಜೆಪಿಯವರ ಕಡೆಗೆ ಬೆರಳು ತೋರಿಸುತ್ತಾರೆ, ಬಿಜೆಪಿಯವರು ಕಾಂಗ್ರೆಸ್ ಕಡೆಗೆ ತೋರಿಸುತ್ತಿದ್ದಾರೆ. ಈ ಭ್ರಷ್ಟಾಚಾರ ಕಳೆದ ಐದು ವರ್ಷಗಳಿಂದ ಜಾಸ್ತಿಯಾಗಿದೆ ಎಂದು ಹೇಳುತ್ತಿದ್ದಾರೆ. ಅದರೆ ಮೂರು ವರ್ಷ ಬಿಜೆಪಿ ಸರ್ಕಾರದ ಪಾಲಾಗುತ್ತದೆ, ಎರಡು ವರ್ಷ ಕಾಂಗ್ರೆಸ್‌ನವರ ಪಾಲಾಗುತ್ತದೆ. ಏಕೆಂದರೆ, ಈ ಸರ್ಕಾರ ಎರಡು ವರ್ಷಗಳಿಂದ ಈ ಭ್ರಷ್ಟಾಚಾರದ ಬಗ್ಗೆ ಅದರಲ್ಲೂ ಬಿಬಿಎಂಪಿ ಬಗ್ಗೆ ಮಾತ್ರ ಮಾತನಾಡುವುದಾದರೆ ಅದು ಕಸ ವಿಲೇವಾರಿ ಆಗಿರಬಹುದು, ಬೇರೆ ಬೇರೆ ದುರುಪಯೋಗದ ಬಗ್ಗೆ, ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಾರೆ. ಪ್ರಾಮಾಣಿಕವಾಗಿ ಹೇಳಬೇಕೆಂದರೆ ಈ ಭ್ರಷ್ಟಾಚಾರವನ್ನು ತಡೆಗಟ್ಟುವ ನಿಟ್ಟಿನಲ್ಲಿ ನಾವು ಯಾರು ಪ್ರಯತ್ನಪಡುತ್ತಿಲ್ಲ. ಇದನ್ನು ಯಾರು ಕೇಳುತ್ತಲೂ ಇಲ್ಲ. ಈಗ ಇದನ್ನು ಮೂರು ಭಾಗ ಮಾಡುವ ಬದಲು, ಈಗಾಗಲೇ ಬಿಬಿಎಂಪಿಯಲ್ಲಿ ಅತಿ ಹೆಚ್ಚಿನ ಜನಕ್ಕೆ ಬೆಂಗಳೂರಿನ ಒಂದು ಪರಿಮಿತಿ ಆಡಳಿತದ ಬಗ್ಗೆ ಅಷ್ಟು ಕಲ್ಪನೆ ಇರುವುದಿಲ್ಲ. ಅರಿವು ಕೂಡ ಕಡಿಮೆ. ಬೆಂಗಳೂರನ್ನು ಈಗಾಗಲೇ ಎಂಟು ಭಾಗಗಳನ್ನು ಮಾಡಿ ಜಾಯಿಂಟ್ ಕಮೀಷನರ್‌ಗಳನ್ನು ನಾವು ಫಿಕ್ಸ್ ಮಾಡಿದ್ದೇವೆ. ಅಂದರೆ, ಬೆಂಗಳೂರನ್ನು ಆಡಳಿತಕೋಸ್ಕರ ಎಂಟು ಭಾಗಗಳಾಗಿ ಮಾಡಿದ್ದೇವೆ. ಆ ಎಂಟು ಜಾಯಿಂಟ್ ಕಮೀಷನರ್‌ರವರಿಗೆ ಯಾವುದೇ ತರಹದ ಅಧಿಕಾರವನ್ನು ನಾವು ನೀಡಿಲ್ಲ. ಒಬ್ಬ ಕಮೀಷನರ್ ಇಟ್ಟುಕೊಂಡು ಎಂಟು ಜಾಯಿಂಟ್ ಕಮೀಷನರ್ ಇಟ್ಟುಕೊಂಡು ಎಲ್ಲಾ ಕೆಲಸವನ್ನು ಕಮೀಷನರ್ ಮೇಲೆ ಹೊರೆ ಹಾಕಿದಾಗ ಈ ಆಡಳಿತ ಸರಿ ಹೋಗುವುದಿಲ್ಲ. ಈ ಮೂರು ಭಾಗ ಮಾಡುವುದನ್ನು ಬಿಟ್ಟು ಈ ಎಂಟು ಆಡಳಿತ ವಿಕೇಂದ್ರೀಕರಣ ಸಲುವಾಗಿ ಜಾಯಿಂಟ್ ಕಮೀಷನರ್‌ಗಳಿಗೆ ಈಗಿರುವ ಕಮೀಷನರ್‌ಗಳ ಪವರ್‌ನ್ನು ಕೊಟ್ಟು ಶಕ್ತಿಯುತವಾಗಿ ನಡೆಸಿದರೆ ಬಿಬಿಎಂಪಿಯಲ್ಲಿ ಆಡಳಿತ ಸುಲಲಿತವಾಗಿ ನಡೆಯುವುದಕ್ಕೆ

ಸಾಧ್ಯವಾಗುತ್ತದೆ. ಇದೆಲ್ಲಕ್ಕಿಂತಲೂ ಎರಡು–ಮೂರು ಅಂಶಗಳು ತುಂಬಾ ಕಷ್ಟಕರವಾಗುತ್ತದೆ. ಬೆಂಗಳೂರಿಗೆಲ್ಲಾ ಇರುವುದು ಒಂದೇ ಜಲಮಂಡಲಿ. ಇಡೀ ಬೆಂಗಳೂರಿನ ಒಂದು ಕೋಟಿ ಜನಗಳಿಗೆ ಒಂದು ಜಲಮಂಡಲಿ ಇರುವಾಗ ಮೂರು ಭಾಗ ಮಾಡಿದಾಗ ಜಲಮಂಡಳಿಯ ಕೇಂದ್ರ ಕಛೇರಿಯನ್ನು ಯಾರಿಗೆ ಕೊಡುತ್ತೀರಿ? ಒಂದೇ ಒಂದು ಕಾರ್ಪೋರೇಷನ್‌ಗೆ ಸೇರಿತು ಎಂದರೆ ಇನ್ನು ಎರಡು ಕಾರ್ಪೋರೇಷನ್‌ಗೆ ನೀರು ಕೊಡುವುದಕ್ಕೆ ಅವರು ತಾರತಮ್ಯ ಮಾಡಬಹುದು. ಬಿಡಿಎ ಎಂದು ಇದೆ. ಇಡೀ ಸಮಗ್ರ ಬೆಂಗಳೂರನ್ನು ಅಭಿವೃದ್ಧಿ ಪಡಿಸುವುದಕ್ಕೆ ಬಿಡಿಎ ಇದೆ. ಈ ಬಿಡಿಎ ಅನ್ನು ಎಷ್ಟು ಭಾಗಗಳನ್ನಾಗಿ ಮಾಡುತ್ತೀರಿ? ಉದಾಹರಣೆಗೆ, ಈ ಕೇಂದ್ರ ಸ್ಥಾನ ನಮ್ಮ ವಿಧಾನಸೌಧ ಇರಬಹುದು, ಬಹುಮಹಡಿಗಳ ಕಟ್ಟಡ ಇರಬಹುದು, ರಾಜ್ಯದ ಎಲ್ಲಾ ಆಡಳಿತ ಕಛೇರಿಗಳು ಒಂದು ಕಡೆ ಇವೆ. ಇದನ್ನು ಯಾವ ಬೆಂಗಳೂರಿನ ಮಹಾನಗರ ಪಾಲಿಕೆಗೆ ಕೊಡುತ್ತೀರಿ? ರಾಜ್ಯದ್ದು ಇದ್ದರೂ ಕೂಡ ಇಲ್ಲಿನ ವ್ಯವಸ್ಥೆಗಳನ್ನು ಮಾಡಬೇಕಲ್ಲವೆ?

**ಶ್ರೀ ಜಗ್ಗೇಶ್:–** ಮಾನ್ಯ ಸಭಾಪತಿಯವರೇ, ಬಹಳ ಮುಖ್ಯವಾದ ವಿಚಾರಗಳನ್ನು ಮಾನ್ಯ ಕೃಷ್ಣಪ್ಪನವರು ಹೇಳುತ್ತಿದ್ದಾರೆ. ನನ್ನ ವಿನಂತಿ ಏನೆಂದರೆ, ಮಾನ್ಯ ಮುಖ್ಯಮಂತ್ರಿಗಳ ಗಮನ ಈ ಕಡೆ ಇದ್ದರೆ ಒಳ್ಳೆಯದು. ಏಕೆಂದರೆ, ಅವರ ಹತ್ತಿರ ಯಾರ್‍ಯಾರೋ ಸಹಿಗಳನ್ನು ಮಾಡಿಸಿಕೊಳ್ಳುತ್ತಿದ್ದಾರೆ. ಅದನ್ನು ಆಮೇಲೆ ಮಾಡಿಸಿಕೊಳ್ಳುವುದಕ್ಕೆ ಹೇಳಿ. ಇದು ಬಹಳ ಮುಖ್ಯವಾದ ವಿಷಯ.

**ಶ್ರೀ ಬಿ. ರಮಾನಾಥರೈ:–** ಜನರ ಸಮಸ್ಯೆಗಳಿಗೆ ಸಹಿ ಹಾಕಿಸಿಕೊಳ್ಳುತ್ತಿದ್ದೇವೆ.

**ಶ್ರೀ ಇ. ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೇ, ಮಾನ್ಯ ಜಗ್ಗೇಶ್‌ರವರು ಹೇಳುತ್ತಿರುವುದು ಸರಿ ಇದೆ. ಮಾನ್ಯ ಮುಖ್ಯಮಂತ್ರಿಗಳು ಕೇಳಿಸಿಕೊಳ್ಳಬೇಕು. ಈಗಾಗಲೇ ಕೆಂಪೇಗೌಡರು ಬೆಂಗಳೂರನ್ನು ಸ್ಥಾಪನೆ ಮಾಡಿ 470 ವರ್ಷಗಳು ಕಳೆದಿವೆ. 470 ವರ್ಷಗಳಲ್ಲಿ ಕೆಂಪೇಗೌಡರು ಕಟ್ಟಿದ್ದಂತಹ ಬೆಂಗಳೂರು ಅವತ್ತು ನೀವು ನೋಡಿರಬಹುದು, ಇವತ್ತೇನು ನಾವು ಸಾಮಾಜಿಕ ವ್ಯವಸ್ಥೆ ಎಂದು ಹೇಳುತ್ತೇವೆ ಆವತ್ತೇ ಆ ವ್ಯವಸ್ಥೆಯ ಕಲ್ಪನೆಯನ್ನು ಕಂಡ ಕೆಂಪೇಗೌಡರು ಕಾಟನ್‌ಪೇಟೆ, ತರಗುಪೇಟೆ, ರಾಣಾಸಿಂಗ್‌ಪೇಟೆ, ಅಕ್ಕಿಪೇಟೆ, ನಗರತ್‌ಪೇಟೆ, ಮನವರ್ತಪೇಟೆ, ಅಡೇಪೇಟೆ, ಅಕ್ಕಿಪೇಟೆ, ತಿಗಳರಪೇಟೆ, ಕುಂಬಾರಪೇಟೆ, ಈ ಎಲ್ಲಾ ವರ್ಗದ ಜನಾಂಗದವರನ್ನು ವರ್ಗೀಕರಿಸಿ ಅವರದ್ದೇ ಆದ ಉದ್ಯಮಗಳಿಗೆ ಅವಕಾಶ ಕೊಟ್ಟಂಥ ಮಹಾನ್ ವ್ಯಕ್ತಿ ಕೆಂಪೇಗೌಡರು. ಅವತ್ತಿನ ನಾಡಪ್ರಭು ಕೆಂಪೇಗೌಡರು ಮಾಡಿದಂತಹ ಬೆಂಗಳೂರನ್ನು ಇವತ್ತೇನಾದರೂ ಮೂರು ಭಾಗಗಳಾಗಿ ಮಾಡುವುದಕ್ಕೆ ಹೊರಟರೆ ಬೆಂಗಳೂರಿನ ಶ್ರೀಮಂತರೆಲ್ಲರೂ ಒಂದು ವರ್ಗಕ್ಕೆ, ಒಂದು ಬೆಂಗಳೂರಿಗೆ ಸೇರುತ್ತಾರೆ.

(1–00 ಗಂಟೆ)

ಬೆಂಗಳೂರಿನ ಪಶ್ಚಿಮಕ್ಕೆ ಇರುವಂಥವರು ಗುಲ್ಬರ್ಗಾ, ರಾಯಚೂರು, ಬೀದರ್, ಬೆಳಗಾವಿ ಭಾಗಗಳಿಂದ ಬಂದುಕುಣಿಗಲ್, ನಾಗಮಂಗಲದ ಕಡೆ ಇರುವಂಥ ಕೂಲಿಕಾರ್ಮಿಕರು, ಗಾರ್ಮೆಂಟ್ ಉದ್ಯೋಗಿಗಳು, ಆಟೋ ಡ್ರೈವರ್‌ಗಳು, ಟ್ಯಾಕ್ಸಿ ಡ್ರೈವರ್‌ಗಳು ಇಂಥವರೆಲ್ಲಾ ಒಂದು ಭಾಗಕ್ಕೆ ಉಳಿದುಕೊಳ್ಳುತ್ತಾರೆ. ಬೆಂಗಳೂರಿನ ಪೂರ್ವ ಭಾಗಕ್ಕೆ ಇರುವವರೆಲ್ಲಾ ಐಟಿ–ಬಿಟಿ ಕಂಪನಿಗಳಲ್ಲಿ ಕೆಲಸವನ್ನು ನಿರ್ವಹಿಸುವವರು. ಅವರು ಉತ್ತರ ಭಾರತದವರಿರಬಹುದು, ದಕ್ಷಿಣ ಭಾರತದವರಿರಬಹುದು, ವಿದೇಶಿಗಳಿರಬಹುದು, ಎಲ್ಲಾ ಶ್ರೀಮಂತರು ಪೂರ್ವ ಭಾಗಕ್ಕೆ ಉಳಿದುಕೊಳ್ಳುತ್ತಾರೆ. ಈ ಮೂರು ಭಾಗವನ್ನು ಮಾಡಿ ಟ್ಯಾಕ್ಸ್ ಫಿಕ್ಸೇಶನ್ ಮಾಡಿದಾಗ ಪಶ್ಚಿಮ ಭಾಗದಲ್ಲಿರುವವರು ಎಲ್ಲರೂ revenue pocket ನಲ್ಲಿರುವವರು. ಅವರಿಗೆ ಇವತ್ತಿನವರೆವಿಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಿಲ್ಲ. ಅವರಿಗೆ ರಸ್ತೆಗಳಿಲ್ಲ, ನಾಗರೀಕ ಸೌಲಭ್ಯಗಳಿಲ್ಲ. ಮೂರು ಭಾಗವನ್ನು ಮಾಡಿದಾಗ ಬಡವರಿಂದ ಹೆಚ್ಚಿನ ತೆರಿಗೆಯನ್ನು ಸಂಗ್ರಹ ಮಾಡಿ ಆ ಭಾಗದ ಅಭಿವೃದ್ಧಿಯನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ? ಕೇಂದ್ರ ಸ್ಥಾನದಲ್ಲಿ 100ಕ್ಕೆ 95 ಭಾಗದಷ್ಟು ಅಭಿವೃದ್ಧಿ ಕಾರ್ಯಗಳು ಮುಗಿದು ಹೋಗಿದೆ. ಮತ್ತೆ ಮತ್ತೆ ಫುಟ್‌ಪಾತ್‌ಗಳನ್ನು ಕಿತ್ತು ಟೈಲ್ಸ್‌ಗಳನ್ನು ಹಾಕುತ್ತಿರುತ್ತಾರೆ. ಆ ಒಂದು ಏರಿಯಾದಲ್ಲಿ ಹಣವನ್ನು ಖರ್ಚು ಮಾಡಬೇಕಲ್ಲಾ ಎಂದು ಒತ್ತಾಯ ಪೂರ್ವಕವಾಗಿ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ಪಶ್ಚಿಮ ಭಾಗದಲ್ಲಿರುವ ಬೆಂಗಳೂರಿಗೆ 110 ಹಳ್ಳಿಗಳನ್ನು ಸೇರಿಸಿಕೊಂಡಿರುವಂಥ ಗ್ರಾಮಗಳಿಗೆ ಇವತ್ತಿಗೂ ಸಹ ರಸ್ತೆ, ಕುಡಿಯುವ ನೀರಿನ ವ್ಯವಸ್ಥೆ ಮತ್ತು ಯಾವುದೇ ಮೂಲಭೂತ ಸೌಕರ್ಯಗಳಿಲ್ಲ. ನಮ್ಮ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರು 'ಸ್ವಚ್ಛ ಭಾರತ' ಕಾರ್ಯಕ್ರಮವನ್ನು ಕೈಗೊಂಡಿದ್ದಾರೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಇವತ್ತಿಗೂ ಸಹ ಬಯಲಿನಲ್ಲಿ ಶೌಚಾಲಯಕ್ಕೆ ಹೋಗುವಂಥ ಊರುಗಳನ್ನು ನಾನು ಬೇಕಾದರೆ ತೋರಿಸುತ್ತೇನೆ. ಆದ್ದರಿಂದ ಬಿಬಿಎಂಪಿಯನ್ನು ಮೂರು ಭಾಗ ಮಾಡುವುದರಿಂದ ಸಮಾನತೆ ಬರುವುದಿಲ್ಲ. ಸಮಾನತೆ ಏಕೆ ಬರುವುದಿಲ್ಲವೆಂದರೆ ಆರ್ಥಿಕ ಕ್ರೋಢೀಕರಣ ಏನಿದೆ, ಅದನ್ನು ಸಮಾನವಾಗಿ ಹಂಚುವುದಕ್ಕಾಗುತ್ತಿಲ್ಲ.

ಮಾನ್ಯ ಸಭಾಪತಿಯವರೆ, ನಾನು 1962 ರಿಂದ 67ರವರೆವಿಗೂ ಸಿಟಿ ಮಾರ್ಕೆಟ್ ಬಳಿ ಇರುವ ರಾಣಾಸಿಂಗ್ ಪೇಟೆಯಲ್ಲಿ ವಾಸವಿದ್ದೆ. ತಮ್ಮ ಮುಂದೆ ಇವತ್ತು ನಾನು ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. 1962 ರಿಂದ 1969ರವರೆವಿಗೂ ನಾನು ಸಣ್ಣ ಹುಡುಗನಾಗಿದ್ದಾಗ ಬೆಂಗಳೂರಿನಲ್ಲಿದ್ದವನು. ಆವತ್ತು ಬೆಂಗಳೂರಿನ ಮೇಲೆ ತಮಿಳರ ಒತ್ತಡ ಎಷ್ಟಿತ್ತು ಎಂದರೆ, ಸನ್ಮಾನ್ಯ ವಾಟಾಳ್ ನಾಗರಾಜ್‌ರವರು 1967ರಲ್ಲಿ ಕನ್ನಡ ಚಳುವಳಿ ಪಕ್ಷದಿಂದ ಚುನಾವಣೆಗೆ ನಿಂತು ಚಿಕ್ಕಪೇಟೆ ಕ್ಷೇತ್ರದಿಂದ ಗೆದ್ದು ಬಂದಾಗ ಕನ್ನಡಿಗರು ಸಂಭ್ರಮಿಸಿದರು. ನೀವು ಓಕಳಿಪುರ, ಶ್ರೀರಾಮಪುರ, ರಾಮಚಂದ್ರಪುರ ಮುಂತಾದ ಕೆಲವು ಭಾಗಗಳಲ್ಲಿ ಅವರು ಕನ್ನಡ ಭಾಷೆಯನ್ನೇ ಬಳಕೆ ಮಾಡುತ್ತಿರಲಿಲ್ಲ. ಪ್ರತಿ ಸರ್ಕಲ್ ಮತ್ತು ಪ್ರತಿ ಫುಟ್‌ಪಾತ್ ಮೇಲೆ ಒಂದೊಂದು ಡಿಎಂಕೆ ಬಾವುಟಗಳನ್ನು ಹಾಕಿಕೊಂಡಿದ್ದರು. ನೀವು ಪಾಕಿಸ್ತಾನಕ್ಕೆ ಹೋಗಿ ಬರಬಹುದಾಗಿತ್ತು, ಆದರೆ ಇಲ್ಲಿನ ಕನ್ನಡಿಗರು ಈ ತಮಿಳರ ಜಾಗಕ್ಕೆ ಹೋಗಿ ಬರುವುದಕ್ಕಾಗುತ್ತಿರಲಿಲ್ಲ. ಅದು ಕಲಾಸಿಪಾಳ್ಯ, ಮೆಜೆಸ್ಟಿಕ್ ಅಥವಾ ಸಿಟಿ ಮಾರ್ಕೆಟ್ ಇರಬಹುದು ಕೂಲಿ ಕಾರ್ಮಿಕರು, ಕನ್ನಡಿಗ ರೈತರು ಏನಾದರೂ ತರಕಾರಿಯನ್ನು ತೆಗೆದುಕೊಂಡು ಹೋದರೆ ಅವರ ಮಂಕರಿಯನ್ನು ಕಿತ್ತುಕೊಂಡು ಹೋಗುತ್ತಿದ್ದರು. ಅಂತಹ ಸಂದರ್ಭದಲ್ಲಿ ಕನ್ನಡ ಚಳುವಳಿಗಳು ಬಂದು ಕನ್ನಡವನ್ನು ಉಳಿಸಬೇಕು, ಕನ್ನಡವನ್ನು ಬೆಳೆಸಬೇಕು, ಬೆಂಗಳೂರನ್ನು ಬೆಳೆಸಬೇಕು ಎನ್ನುವಂಥ ಒಂದು ಉದ್ದೇಶದಿಂದ ಆವತ್ತು ಸಂಘಟನೆಯಾಯಿತು. ನಿಮಗೆ ಗೊತ್ತಿರಬಹುದು ತಮಿಳರ ಒತ್ತಡ ಇಷ್ಟೊಂದು ಹೆಚ್ಚಾದಾಗ ಆವತ್ತು 1990ರಲ್ಲಿ ಕಾವೇರಿ ನೀರಿನ ವಿಚಾರವಾಗಿ ಗಲಾಟೆಯಾದಾಗ ಸನ್ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದರು. ಆವತ್ತು ಕನ್ನಡಿಗರ ರಕ್ಷಣೆಯನ್ನು ಮಾಡುವುದಕ್ಕೆ ಮುಖ್ಯ ಕಾರಣರು ಸನ್ಮಾನ್ಯ ಬಂಗಾರಪ್ಪನವರು. ಆವತ್ತು ಏನಾದರೂ ಆ ಕಾವೇರಿ ಗಲಾಟೆಯಲ್ಲಿ ತಮಿಳರಿಗೆ ಬುದ್ಧಿಯನ್ನು ಕಲಿಸದೇ ಇದ್ದಿದ್ದರೆ ಇವತ್ತು ತಮಿಳುನಾಡಿನವರು, ತಮಿಳರು ಈ ಒಂದು ಬೆಂಗಳೂರನ್ನು ಆಳುವಂಥ ಪ್ರಯತ್ನವನ್ನು ಮಾಡುತ್ತಿದ್ದರು. ಅವರನ್ನು ಹಿಮ್ಮೆಟಿಸುವ ಪ್ರಯತ್ನವನ್ನು ಮಾಡಿದರು. ಏತಕ್ಕಾಗಿ ನಾನು ಇದನ್ನು ಹೇಳುತ್ತಿದ್ದೇನೆಂದರೆ, ನಮ್ಮ ಬೆಂಗಳೂರು ತಮಿಳುನಾಡಿನ ಗಡಿಯಿಂದ 36 ಕಿ.ಮೀ ಅಂತರದಲ್ಲಿದೆ. ಅವರಲ್ಲಿ ಹೆಚ್ಚಿನ ಜನರು ಪೇಂಟರ್‌ಗಳಿರಬಹುದು, ಗಾರೆ ಕೆಲಸದವರು ಇರಬಹುದು, ರಸ್ತೆ ಕೆಲಸ ಮಾಡುವವರಿರಬಹುದು. ಹೆಚ್ಚಿನ ಜನ ಬೆಂಗಳೂರಿಗೆ ಆಕರ್ಷಿತರಾಗಿ ಇಲ್ಲಿಗೆ ಬಂದು ಸೇರಿಕೊಂಡು ಅವರದೇ ಒಂದು ರಾಜ್ಯವನ್ನು ಸೃಷ್ಟಿ ಮಾಡಿಕೊಂಡಿದ್ದರು. 1990ರ ನಂತರ ಕರ್ನಾಟಕದಲ್ಲಿ ಅವರಿಗೆ ಒಂದು ಭಯ ಬಂದ ಮೇಲೆ ಇವತ್ತು ಮಳೆ ಇಲ್ಲದೇ ರಾಯಚೂರು ಇರಬಹುದು, ಗುಲ್ಬರ್ಗಾ ಇರಬಹುದು ಅಥವಾ ಬಳ್ಳಾರಿ ಇರಬಹುದು, ಅಲ್ಲಿನ ಜನಗಳು ಕೂಲಿಗಾಗಿ ಬೆಂಗಳೂರಿಗೆ ವಲಸೆ ಬಂದಾಗ ಇಲ್ಲಿ ಗಾರ್ಮೆಂಟ್ ಉದ್ಯಮಗಳು ಹೆಚ್ಚಾದಾಗ ಕನ್ನಡಿಗರು ಸೇರುವಂಥ ಒಂದು ಪ್ರಯತ್ನವನ್ನು ಮಾಡಿದರು. ತಮ್ಮಲ್ಲಿ ಅಂಕಿ–

ಅಂಶಗಳಿರಲಿ ಎಂದು ಹೇಳುತ್ತಿದ್ದೇನೆ. ನಾನು ಒಂದೆರಡು ನಿಮಿಷಗಳಲ್ಲಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಇವತ್ತಿಗೂ ಸಹ ನಮ್ಮ ಬೆಂಗಳೂರಿನಲ್ಲಿ ಶೇಕಡ 32ಕ್ಕಿಂತಲೂ ಹೆಚ್ಚಿನ ಜನ ಕನ್ನಡಿಗರು ಇಲ್ಲ. ಶೇಕಡ 32ರಷ್ಟು ಜನ ಕನ್ನಡಿಗರು ಬೃಹತ್ ಬೆಂಗಳೂರಿನಲ್ಲಿ ಸೇರಿಕೊಂಡಿರುವುದರಿಂದ ಇವತ್ತು ಕನ್ನಡಕ್ಕೆ ಒಂದು ಸ್ಥಾನಮಾನವಿದೆ. ನೀವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಮೂರು ಭಾಗವಾಗಿ ಮಾಡುವುದಾದರೆ ಒಂದು ಕಡೆ ಒಂದು ಭಾಷಿಕರ ಪ್ರಭಾವ ಹೆಚ್ಚಾಗುತ್ತದೆ, ಇನ್ನೊಂದು ಕಡೆ ಇನ್ನೊಂದು ಭಾಷಿಕರ, ಕೋಮಿನ ಪ್ರಭಾವ ಹೆಚ್ಚಾಗುತ್ತದೆ. ಬೆಂಗಳೂರಿನಲ್ಲಿ ನಾವು ಕನ್ನಡ ಎನ್ನುವುದನ್ನು ಮರೆಯಬೇಕಾಗುತ್ತದೆ. ದಯವಿಟ್ಟು ಈ ಕನ್ನಡವನ್ನು ಉಳಿಸಬೇಕು ನಾಡಪ್ರಭು ಕೆಂಪೇಗೌಡರ ಮಹತ್ವಾಕಾಂಕ್ಷೆ ಆಸೆಯನ್ನು ಈಡೇರಿಸಬೇಕೆಂದರೆ ಇದು ಸಮಗ್ರ ಬೆಂಗಳೂರು, ಅಖಂಡ ಬೆಂಗಳೂರು ಆಗಿಯೇ ಉಳಿಯಬೇಕು ಹೊರತು ಇದನ್ನು ಭಾಗ ಮಾಡಬಾರದು. ಸರ್ಕಾರವೇನಾದರೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಮೂರು ಭಾಗವಾಗಿ ಮಾಡುವುದಾದರೆ ಮುಂದಿನ ದಿವಸಗಳಲ್ಲಿ ಏನು ಇವತ್ತು ಹೈದರಾಬಾದ್-ಕರ್ನಾಟಕ ಅಥವಾ ಮುಂಬೈ-ಕರ್ನಾಟಕ ಎಂದು ಭಾಗವನ್ನು ಕೇಳುತ್ತಿದ್ದಾರೆ, ಹಾಗಾಗಲು ಇದು ದಾರಿದೀಪವಾಗುತ್ತದೆ ಎಂಬುದನ್ನು ಹೇಳಲು ನಾನು ಇಷ್ಟಪಡುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಈ ಒಂದು ಪ್ರಯತ್ನವನ್ನು ಕೈಬಿಡಬೇಕು. ಏಕೆಂದರೆ ಅವರು ಬುದ್ಧಿಜೀವಿಗಳು, ಬೆಂಗಳೂರಿನಲ್ಲಿ ಅವರು ಸಾಕಷ್ಟು ವರ್ಷಗಳ ಕಾಲ ಇದ್ದಾರೆ. ಈ ಬೆಂಗಳೂರನ್ನು ಬೃಹತ್ ಬೆಂಗಳೂರು ಆಗಿಯೇ ಉಳಿಸಬೇಕು. ಆಡಳಿತ ವ್ಯವಸ್ಥೆಯನ್ನು ಸುಧಾರಿಸಬೇಕೆಂದರೆ ಮತ್ತಷ್ಟು ದಕ್ಷ ಆಡಳಿತಗಾರರನ್ನು ಹಾಕಿ 8 ವಿಭಾಗಗಳಲ್ಲಿಯೂ ಅಧಿಕಾರವನ್ನು ಹೆಚ್ಚು ಮಾಡಿ ಸರ್ಕಾರ ಕಾಲಕಾಲಕ್ಕೆ ಅವರಿಗೆ ಸಲಹೆಗಳನ್ನು ಕೊಡಬೇಕು. ಬೆಂಗಳೂರಿನ ಸಾಲ ಇವತ್ತು ಸುಮಾರು 9,000 ಕೋಟಿ ರೂಪಾಯಿ ಇದೆ ಎಂದು ಸರ್ಕಾರ ಹೇಳುತ್ತಿದೆ. ಬೇರೆ ಯಾವುದೇ ಒಂದು ಸ್ಥಳೀಯ ಸಂಸ್ಥೆಗೆ ಅದರದ್ದೇ ಆದ ವರಮಾನವಿದೆ.

**ಸಭಾಪತಿಯವರು:-** ತಮ್ಮ ಸಮಯವಾಗಿದೆ, ನೀವು ಈ ವಿಧೇಯಕಕ್ಕೆ ಬೆಂಬಲವನ್ನು ಸೂಚಿಸುತ್ತೀರೋ ಇಲ್ಲವೋ ಎಂಬುದನ್ನಷ್ಟೇ ಹೇಳಿ ಮುಗಿಸಿ.

**ಶ್ರೀ ಇ. ಕೃಷ್ಣಪ್ಪ:-** ಮಾನ್ಯ ಸಭಾಪತಿಯವರೆ, ನಾವು ವಿಧೇಯಕಕ್ಕೆ ಬೆಂಬಲವನ್ನು ಸೂಚಿಸುತ್ತೇವೆ ಎನ್ನುವುದಕ್ಕಿಂತಲೂ ಹೆಚ್ಚಾಗಿ ಸರ್ಕಾರ ದೊಡ್ಡ ಮನಸ್ಸನ್ನು ಮಾಡಿ ಈ ವಿಧೇಯಕವನ್ನು ವಾಪಸ್ ತೆಗೆದುಕೊಂಡು ಪುನಃ ಪರಿಶೀಲನೆಯನ್ನು ಮಾಡಿ, ಇದರ ಸಾಧಕ-ಬಾದಕಗಳ ಬಗ್ಗೆ ಯೋಚಿಸಲಿ. ಯಾರೋ ಒಬ್ಬ ಕಟಾರಿಯಾರವರು 15 ದಿವಸಗಳಲ್ಲಿ ಕೊಟ್ಟ ವರದಿಯನ್ನಾಗಲಿ, ಬಿ.ಎಸ್. ಪಾಟೀಲರ ಮಧ್ಯಂತರ ವರದಿಯನ್ನಾಗಲಿ ಅದನ್ನು ಗಣನೆಗೆ ತೆಗೆದುಕೊಳ್ಳಬಾರದು. ಇದಕ್ಕೆ ಒಂದು ತಜ್ಞರ

ಸಮಿತಿಯನ್ನು ರಚನೆ ಮಾಡಲಿ, ಈ ಒಂದು ವಿಧೇಯಕವನ್ನು ಸರ್ಕಾರ ವಾಪಸ್ ತೆಗೆದುಕೊಳ್ಳಲಿ ಎಂದು ತಮ್ಮ ಮೂಲಕ ನಾನು ಅವರನ್ನು ಕೈ ಮುಗಿದು ಕೇಳಿಕೊಳ್ಳುತ್ತೇನೆ.

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಮ್ಮ ರಾಜ್ಯದ ಮುಖ್ಯಮಂತ್ರಿಗಳಿದ್ದಾರೆ. ಇವರು ತಂದಿರತಕ್ಕಂಥ ಒಂದು ವಿಧೇಯಕದ ಬಗ್ಗೆ ಇವರಿಗೆ ಸ್ಪಷ್ಟತೆ ಇಲ್ಲ. ಇವರು ವಿಧೇಯಕದ 'Statement of objects and reasons' ನಲ್ಲಿ "For the purpose of smooth administration of the corporation of the city of Bangalore, the expert committee appointed by the Government has also recommended in its interim report for trifurcation of the corporation of the city of Bangalore." ಎಂದು ಹೇಳುತ್ತಾರೆ. ಇವರು ಇನ್ನೊಂದು ಮಾತನ್ನು ಸಹ ಹೇಳುತ್ತಾರೆ: "Therefore, it is considered necessary to reconstitute the corporation of the city of Bangalore into two or more corporations." ಅಂದರೆ ಮೂರು ಭಾಗವಾಗಿ ಮಾಡುತ್ತಾರೋ, ಎರಡು ಭಾಗವಾಗಿ ಮಾಡುತ್ತಾರೋ ಗೊತ್ತಿಲ್ಲ. ಎರಡಕ್ಕಿಂತ ಹೆಚ್ಚೆಂದರೆ ಅದು ಮೂರು ಆಗಬಹುದು, ನಾಲ್ಕು ಆಗಬಹುದು ಅಥವಾ ಐದು ಆಗಬಹುದು. ಈ ವಿಧೇಯಕಕ್ಕೆ ಒಂದು ಗುರಿಯೂ ಇಲ್ಲ, ದಾರಿಯೂ ಇಲ್ಲ. ನನ್ನ ಪ್ರಕಾರ this Bill is not sustainable. ಅಷ್ಟಾಗಿಯೂ ಈ ವಿಧೇಯಕ sustainable ಎಂದು ಸರ್ಕಾರ ಹೇಳುವುದಾದರೂ ಸಹ ಬೆಂಗಳೂರು ಮಹಾನಗರ ಆಗುವುದಕ್ಕೆ ಮುಂಚೆ ವಿಶ್ವ ಭೂಪಟದಲ್ಲಿ ಬೆಂಗಳೂರಿನ ಗುರುತು ಇದೆ. ವಜ್ರಗಳ ಪೈಕಿ ಕೊಹಿನೂರ್ ವಜ್ರ ಇದೆ. ಕೊಹಿನೂರ್ ವಜ್ರ ಎಷ್ಟು ಜಗತ್ ಪ್ರಸಿದ್ಧವಾಗಿದೆಯೋ ಬೆಂಗಳೂರು ಮಹಾನಗರ ಅಷ್ಟೇ ಪ್ರಸಿದ್ಧವಾಗಿದೆ ಎಂದು ಎಲ್ಲರಿಗೂಗೊತ್ತಿದೆ, ನಿಮಗೂ ಗೊತ್ತಿದೆ. ನಾನು ಸುಮ್ಮನೆ ಪುನರಾವರ್ತನೆಗಾಗಿ ಹೇಳುತ್ತಿದ್ದೇನೆ ಅಷ್ಟೇ. ರಾಜೇಂದ್ರ ಕಟಾರಿಯಾರವರು ಒಂದು ವರದಿಯನ್ನು ಕೊಟ್ಟುಬಿಟ್ಟರು. ಒಂದು ಗಾದೆ ಮಾತಿದೆ, **"**ಎತ್ತು ಈಯಿತು ಎಂದರೆ, ಕೊಟ್ಟಿಗೆಗೆ ಕಟ್ಟೋ ಎಂದನಂತೆ**"**. ಎತ್ತು ಈಯಿತು ಎಂದು ಅವನು ಹೇಳಿದ, ಕರುವನ್ನು ಕೊಟ್ಟಿಗೆಗೆ ಕಟ್ಟೋ ಎಂದು ಹೇಳಿದನಂತೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, in what way it is relevant? (ತಮ್ಮ ಸೀಟಿನಲ್ಲಿ ಕುಳಿತು ಮಾತನಾಡಿದರು)

**ಶ್ರೀ ರಾಮಚಂದ್ರಗೌಡ:–** ಶ್ರೀ ರಾಜೇಂದ್ರ ಕಠಾರಿಯಾ ಅವರ ವರದಿಯ ಮೇಲೆ ನೀವು ಈ ನಗರ ಸಭೆಯನ್ನು ಬೈಫರ್ಕೇಟ್ ಮಾಡುವುದಕ್ಕೆ ಹೊರಟಿದ್ದೀರಾ?

**ಶ್ರೀ ಸಿದ್ದರಾಮಯ್ಯ:–** ಇಲ್ಲ ಇಲ್ಲ. (ತಮ್ಮ ಸೀಟಿನಲ್ಲಿ ಕುಳಿತು ಮಾತನಾಡಿದರು)

**ಶ್ರೀ ರಾಮಚಂದ್ರಗೌಡ:–** ಇದಕ್ಕೆ ನಾನು ಏನು ಹೇಳಲಿ. ಎಲ್ಲಾ ಕಡೆ ಇದೇ ಇದೆ. ಡಿಸಾಲ್ವ್ ಮಾಡಿದ್ದು ಕೂಡ ಇದೇ ಕಾರಣಕ್ಕೆ. ಶ್ರೀ ರಾಜೇಂದ್ರ ಕಠಾರಿಯಾ ಅವರು ಬೆಂಗಳೂರು ನಗರ ಸಭೆಯಲ್ಲಿ ಭ್ರಷ್ಟಾಚಾರ ಇದೆ. . . .

**ಶ್ರೀ ಸಿದ್ದರಾಮಯ್ಯ:–** ಅದು ಸೂಪರ್‌ಸೀಡ್ ಮಾಡುವುದಕ್ಕೆ (ತಮ್ಮ ಸೀಟಿನಲ್ಲಿ ಕುಳಿತು ಮಾತನಾಡಿದರು)

**ಶ್ರೀ ಎಂ.ಆರ್. ಸೀತಾರಾಮ್:–** ಬೈಫರ್ಕೇಷನ್ನಿಗೂ, trifurcation ಗೂ ರಾಜೇಂದ್ರ ಕಠಾರಿಯಾ ಅವರ ವರದಿಗೂ ಸಂಬಂಧವಿಲ್ಲ. ಸರ್ಕಾರ ತಮ್ಮ ಗಮನಕ್ಕೆ ಈ ವಿಚಾರವನ್ನು ತರುತ್ತಿದೆ. ಶ್ರೀ ಬಿ.ಎಸ್. ಪಾಟೀಲ್ ಅವರ ಸಮಿತಿ ಬೇರೆ ಇದೆ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೇ, my Lordships are under consultation.

**(ಮಾನ್ಯ ಮುಖ್ಯಮಂತ್ರಿಯವರ ಬಳಿ ಕಾನೂನು ಸಚಿವರು, ಸಭಾನಾಯಕರು ಹಾಗೂ ಸರ್ಕಾರದ ಮುಖ್ಯ ಸಚೇತಕರು ಮಾತನಾಡುತ್ತಿದ್ದರು)**

**ಸಭಾಪತಿಯವರು:–** ನೀವು ಮಾತನಾಡಿ.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೇ, ನನ್ನ ಅನಿಸಿಕೆ ಏನೆಂದರೆ ರಾಜೇಂದ್ರ ಕಠಾರಿಯಾ ಅವರ ವರದಿಯಲ್ಲಿ ಬೆಂಗಳೂರು ನಗರ ಸಭೆಯಲ್ಲಿ ದೊಡ್ಡ ಅವ್ಯವಹಾರ ನಡೆದಿದೆ, ಇವರ ಕೈಯ್ಯಲ್ಲಿ ಅಡ್ಮಿನಿಸ್ಟ್ರೇಷನ್ ಮಾಡುವುದಕ್ಕೆ ಆಗುತ್ತಿಲ್ಲ, ಈ ನಗರ ಸಭೆಯನ್ನು ಡಿಸಾಲ್ವ್ ಮಾಡಬೇಕು ಇದನ್ನು 3–4–5 ವಿಭಾಗ ಮಾಡಬೇಕು ಎಂದು ಹೇಳಿದ್ದನ್ನು ನೀವು ಮಾಡಲು ಹೊರಟಿದ್ದೀರಿ. ಆದರೆ ನಿಮಗೂ ಕೂಡ ಇದನ್ನು ಎಷ್ಟು ಭಾಗವಾಗಿ ಮಾಡಬೇಕೆಂದು ಗೊತ್ತಿಲ್ಲ ಎಂಬುದು ನನ್ನ ಅನಿಸಿಕೆಯಾಗಿದೆ. ಏಕೆಂದರೆ, in the Statement of objects and reasons appended to the Bill, the Government has said: "….to reconstitute the corporation of the city of Bangalore into two or more corporations..." 'More' may be three or four or five or ten. We don't know. ಈ ಬಗ್ಗೆ ನೀವು ನಿರ್ದಿಷ್ಟವಾಗಿ ತೀರ್ಮಾನವನ್ನು ಮಾಡಿಲ್ಲ. ಈ ನಗರ ಸಭೆಯ ಅವಧಿ ಇನ್ನು 3–4 ದಿವಸ ಮಾತ್ರ ಇತ್ತು. ತಾವು ಒಬ್ಬ ಅಹಿಂದ ನಾಯಕರು. ತಾವು ಮುಖ್ಯಮಂತ್ರಿಗಳೂ

ಹೌದು ಮತ್ತು ವಿಶೇಷವಾಗಿ ಅಹಿಂದ ನಾಯಕರೂ ಕೂಡ ಹೌದು. ಅಲ್ಲಿ ಅಹಿಂದ ಮೇಯರ್ ಇದ್ದರು ಮತ್ತು ಅಹಿಂದ ಆಯುಕ್ತರು ಕೂಡ ಇದ್ದರು. ಅಹಿಂದ ನಾಯಕರು ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಅಹಿಂದ ಮೇಯರ್ ಅವರನ್ನು ಮತ್ತು ಅಹಿಂದ ಆಯುಕ್ತರನ್ನು ಬೇರೆ ಕಡೆ ಕಳಿಸಿದರೆ ಅದಕ್ಕೆ ಎಷ್ಟು ಮಾತ್ರ ಮಹತ್ವ ಇರುತ್ತದೆ ಇದು ಸರಿಯೇ? ಇದನ್ನು ತಮ್ಮ ವಿವೇಚನೆಗೆ ಬಿಡುತ್ತೇನೆ. ಈ ರೀತಿ ಮಾಡಿದ್ದು ಸರಿಯಲ್ಲ ಇದನ್ನು ಮಾಡಬಾರದಿತ್ತು. ಬೆಂಗಳೂರು ನಗರಸಭೆಯಲ್ಲಿ ಅವ್ಯವಹಾರ ನಡೆಯುತ್ತಿದೆ ಅಲ್ಲಿ ಆಡಳಿತವನ್ನು ಸರಿಯಾಗಿ ಮಾಡುವುದಕ್ಕಾಗುತ್ತಿಲ್ಲ ಎನ್ನುವ ವಿಚಾರ ಏನು ಇದೆ, ಇದು ಇತ್ತೀಚೆಗೆ ಗೊತ್ತಾಗಲಿಲ್ಲ. ತಾವು ಕಳೆದ ಎರಡು ವರ್ಷಗಳಿಂದ ಮುಖ್ಯಮಂತ್ರಿಯಾಗಿ ಕೆಲಸ ಮಾಡುತ್ತಾ ಇದ್ದೀರಿ. ಇದರ ಜೊತೆಗೆ ಇದಕ್ಕೆಂದೇ ಒಬ್ಬ ನಗರಾಭಿವೃದ್ಧಿ ಸಚಿವರು ಇದ್ದರು. ಇಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ, ಅವ್ಯವಹಾರ ನಡೆಯುತ್ತಿದೆ ಎಂದು ಅವರ ಗಮನಕ್ಕೆ ಬಂದು ಸುಮಾರು 6 ತಿಂಗಳ ಮುಂಚೆಯೇ ನೀವು ಈ ನಗರ ಸಭೆಯನ್ನು ಸೂಪರ್‌ಸೀಡ್ ಮಾಡಿದ್ದಿದ್ದರೆ, ಇನ್ನು ಮುಂದಿನ ಆರು ತಿಂಗಳೊಳಗೆ ಚುನಾವಣೆಯನ್ನು ನಡೆಸುವುದಕ್ಕೆ ಬೇಕಾದ ಸಿದ್ಧತೆಯನ್ನು ಮಾಡಿಕೊಳ್ಳಬಹುದಾಗಿತ್ತು. ಯಾವ್ಯಾವ ಏರಿಯಾ ಎಲ್ಲೆಲ್ಲಿ ಹೋಗಬೇಕು ಹೇಗೆ ಬರಬೇಕು ಎಂಬುದರ ಬಗ್ಗೆ ಒಂದು ಪ್ಲಾನ್ ಅನ್ನು ಮಾಡಿ ನಮ್ಮ ಮುಂದೆ ಇಡಬೇಕಾಗಿತ್ತು. ನಾವು ಒಪ್ಪಿಕೊಳ್ಳುತ್ತೇವೆಯೋ ಬಿಡುತ್ತೇವೆಯೋ ಅದು ಬೇರೆ ವಿಚಾರ. ಇಲ್ಲಿ ಬೇರೆ ಬೇರೆ ನಗರಗಳನ್ನು ಗಮನಿಸಿದಾಗ ಗೊತ್ತಾಗುತ್ತದೆ. ನಮ್ಮ ಬೆಂಗಳೂರಿನಲ್ಲಿ 1941 ರಲ್ಲಿ 4 ಲಕ್ಷ ಜನಸಂಖ್ಯೆ ಇತ್ತು. 1961 ರಲ್ಲಿ 7,78,000 ಜನಸಂಖ್ಯೆ ಇತ್ತು. 1963 ರಲ್ಲಿ 12,00,000 ಜನಸಂಖ್ಯೆ ಇತ್ತು. 1970 ರಲ್ಲಿ ನಾನು ನಗರಸಭಾ ಸದಸ್ಯನಾದಾಗ ಬೆಂಗಳೂರಿನಲ್ಲಿ 14,00,000 ಜನಸಂಖ್ಯೆ ಇತ್ತು. 1971 ರಲ್ಲಿ 16,00,000 ಜನಸಂಖ್ಯೆ ಇತ್ತು. 1981 ರಲ್ಲಿ 29,00,000 ಜನಸಂಖ್ಯೆ ಆಯಿತು. 1991 ರಲ್ಲಿ 41,00,000 ಆಯಿತು. 2001 ರಲ್ಲಿ 51,00,000 ಆಯಿತು. 2011 ರಲ್ಲಿ 84,00,000 ಆಯಿತು. 2012 ರಲ್ಲಿ 89,00,000 ಆಯಿತು. 2013 ರಲ್ಲಿ 95,00,000 ಆಯಿತು, ನಾನೇನು ಬೇರೆ ಬೇರೆ ಅಂಕಿ ಅಂಶಗಳನ್ನು ಹೇಳುತ್ತಿಲ್ಲ. 2014 ರಲ್ಲಿ 1 ಕೋಟಿ 1 ಲಕ್ಷ ಜನಸಂಖ್ಯೆ ಆಯಿತು. ಇವತ್ತಿಗೆ 1ಕೋಟಿ, 8 ಲಕ್ಷ 39,725 ಜನಸಂಖ್ಯೆ ಬೆಂಗಳೂರಿನಲ್ಲಿ ಇದೆ. ಬೆಂಗಳೂರಿನಲ್ಲಿ ನಾವೆಲ್ಲರೂ ನಗರ ಸಭಾ ಸದಸ್ಯರಾಗಿದ್ದಾಗ ಟೆಲಿಫೋನ್ ಇಲ್ಲ, ಸಿಟ್ಟಿಂಗ್ ಫೀಸ್ ಇಲ್ಲ. ಊಟ ಇಲ್ಲ. ಮನೆಗೆ ಒಂದು ನಾಯಿ ಗಾಡಿಯ ರೀತಿಯ ವಾಹನವನ್ನು ಕಳುಹಿಸುತ್ತಿದ್ದರು. ಆ ಗಾಡಿಯಲ್ಲಿ ಕುಳಿತುಕೊಂಡು ಹೋಗಿ ಬೆಳಿಗ್ಗೆಯಿಂದ ರಾತ್ರಿ 12 ಗಂಟೆಯವರೆವಿಗೂ ಸಭೆ ನಡೆಯುತ್ತಿತ್ತು. ದಿವಂಗತ ತಿವಾರಿಯವರು ಮೇಯರ್ ಆಗಿದ್ದರು. ಶ್ರೀ ಜಯಲಿಂಗಯ್ಯನವರು ಮೇಯರ್ ಆಗಿದ್ದಾಗ ಮತ್ತು ಶ್ರೀ ಟಿ.ಡಿ. ನಾಗಣ್ಣನವರು ಮೇಯರ್ ಆಗಿದ್ದರು. ಮತ್ತು ಶ್ರೀ ಅನಂತ ಕೃಷ್ಣ ಅವರು ಮೇಯರ್ ಆಗಿದ್ದರು. ಹೀಗೆ ಇಂತಹ ನಗರಸಭೆಗೆ ಒಂದು ಐತಿಹಾಸಿಕ ಇತಿಹಾಸ ಇತ್ತು. ಇಂತಹ ನಗರಸಭೆಯನ್ನು

ಏಕಾಏಕಿಯಾಗಿ 3–4–5 ಭಾಗ ಮಾಡಬೇಕೇ ಎಂಬ ಬಗ್ಗೆ ಕಲ್ಪನೆಯೇ ಇಲ್ಲ. ಆದರೂ ಕೂಡ ಭಾಗ ಮಾಡುವುದಕ್ಕೆ ಹೊರಟಿರುವಂತಾದ್ದು ಸರಿಯಲ್ಲ. ನೆಗಡಿಯಾದರೆ ಮೂಗನ್ನು ಕತ್ತರಿಸು ಎಂದು ಹೇಳಿದಂತೆ ಆಗುತ್ತಿದೆ. ನೆಗಡಿಯಾಗಿದ್ದರೆ ಮೂಗನ್ನು ಕತ್ತರಿಸುವುದಕ್ಕಾಗುತ್ತದೆಯೇ? ಇಲ್ಲಿ ಏನೋ ಆಗಿದೆ ನಾವು ವಿಭಜನೆ ಮಾಡುತ್ತೇವೆ. ಒಂದು ರುಂಡ, ಒಂದು ಮುಂಡ, ಕೈಕಾಲು ಮಾಡಿ ಬಿಟ್ಟರೆ ಈ ಮಾನವನ ಸೃಷ್ಟಿ ಹೋಗಿಯೇ ಬಿಡುತ್ತದೆ. ಅದು ಮನುಷ್ಯನಾಗಿ ಉಳಿಯುವುದೇ ಇಲ್ಲ. ಇದು ನಗರವಾಗಿಯೇ ಉಳಿಯುವುದಿಲ್ಲ. ಇದನ್ನು ನೀವೇನಾದರೂ ವಿಭಜನೆ ಮಾಡಿದರೆ ಬೆಂಗಳೂರಿನ ಜನರು ಒಪ್ಪುವುದಿಲ್ಲ. ಸರ್ಕಾರದವರು ನಾವು ಭದ್ರವಾಗಿ ಇದ್ದೇವೆ ಎಂದು ಹೇಳಿ ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಬಿಟ್ಟ ಹಾಗೆ ನೀವು ಇದನ್ನು ಇವತ್ತು ಸೂಪರ್‌ಸೀಡ್ ಮಾಡಿ ಬಿಟ್ಟಿದ್ದೀರಿ. ಈ ನಗರ ಸಭೆಯನ್ನು ನೀವು. . . .

**ಸಭಾಪತಿಯವರು:–** ನೀವು ಇನ್ನೂ ಎಷ್ಟು ಹೊತ್ತು ಮಾತನಾಡುತ್ತೀರಿ? ಬೇರೆಯವರು ಮಾತನಾಡಲು ನನಗೆ ಚೀಟಿಗಳನ್ನು ಕಳುಹಿಸುತ್ತಿದ್ದಾರೆ. ಅದಕ್ಕೋಸ್ಕರ ಕೇಳಿದೆ. ನಾನು ಮಾತನಾಡಬೇಡಿ ಎಂದು ಹೇಳಲಿಲ್ಲ. 10 ನಿಮಿಷ ಅಲ್ಲ 50 ನಿಮಿಷ ಮಾತನಾಡಿ ಆದರೆ ಎಷ್ಟು ಹೊತ್ತಿಗೆ ಮುಗಿಸುತ್ತೀರಿ ಹೇಳಿಬಿಡಿ.

**ಶ್ರೀ ರಾಮಚಂದ್ರಗೌಡ:–** ಇನ್ನು 10 ನಿಮಿಷದಲ್ಲಿ ಮುಗಿಸುತ್ತೇನೆ. ನಗರ ಸಭೆಯ ತಳ ಬುಡ ಎಲ್ಲವೂ ನನಗೆ ಗೊತ್ತಿದೆ. 01–30 ಗಂಟೆ ಒಳಗಾಗಿ ಮುಗಿಸುತ್ತೇನೆ.

**ಸಭಾಪತಿಯವರು:–** ತಾವು ಮಾತನಾಡುವುದನ್ನು ನಿಲ್ಲಿಸಿ ಎಂದು ಹೇಳಲಿಲ್ಲ. ನೀವೇ ಸಮಯದ ನಿರ್ಬಂಧವನ್ನು ಹಾಕಿಕೊಳ್ಳಿ ಎಂದು ಹೇಳಿದೆನು.

**ಶ್ರೀ ರಾಮಚಂದ್ರಗೌಡ:–** ಈ ಮೇಯರ್ ಅವರನ್ನು ಮತ್ತು ಆಯುಕ್ತರನ್ನು ಕಳುಹಿಸಿರುವುದನ್ನು ನೋಡಿದರೆ ಬಹಳ ಬೇಜಾರಾಗುತ್ತದೆ. ಅಲ್ಲಿ ತಿಂದಿರುವವರು ಯಾರೋ ನೀವು ಮತ್ಯಾರನ್ನೋ ಕಳುಹಿಸಿದ್ದೀರಿ. ಹಣ್ಣು ತಿಂದವನು ನುಸುಳಿಕೊಂಡ ಸಿಪ್ಪೆ ತಿಂದವನು ತಗುಲಿಕೊಂಡ ಎಂಬಂತಾಗಿದೆ.

**ಶ್ರೀ ಕೆ. ಗೋವಿಂದರಾಜ್:–** ಹಣ್ಣು ತಿಂದವರು ಯಾರು?

**ಶ್ರೀ ರಾಮಚಂದ್ರಗೌಡ:–** ಅದು ನನಗೇನು ಗೊತ್ತು. ನೀವೇ ಹೇಳಬೇಕು. ಕಠಾರಿಯಾ ವರದಿ ಹೇಳುತ್ತದೆ ಎಂದು ಹೇಳಿದಿರಿ. ಯಾರು ಮೇಯರ್ ಇದ್ದರು ಆಯುಕ್ತರು ಇದ್ದರು ಅವರ ಮೇಲೆ ಹೇಳಿದ್ದೀರಿ. ಹಣ್ಣು ತಿಂದವನು ನುಸುಳಿಕೊಂಡ ಸಿಪ್ಪೆ ತಿಂದವನು ತಗುಲಿಕೊಂಡ ಎಂಬಂತೆ ಈ ಮೇಯರ್ ಮತ್ತು ಆಯುಕ್ತರ ಪರಿಸ್ಥಿತಿಯಾಗಿದೆ. ಇದು ಮಾಡಿದ್ದು ಸರಿಯಿಲ್ಲ. ಅದರಲ್ಲೂ ಕೂಡ ಈಗ

ಇರುವಂತಹ ಮಹಿಳಾ ಮೇಯರ್ ಶ್ರೀಮತಿ ಶಾಂತಮ್ಮ ಎಂಬುವವರು ಯಾರು ಇದ್ದಾರೆ ಅವರು ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ. ಮುಂಬೈನಲ್ಲಿ 4764 ಚದುರ ಕಿ.ಮೀನಲ್ಲಿ ಇವತ್ತಿಗೆ 2 ಕೋಟಿ 15 ಲಕ್ಷ ಜನಸಂಖ್ಯೆ ಇದೆ. ಮುಂಬೈ ಸಿಟಿಯಲ್ಲಿ 617 ಚದುರ ಕಿ.ಮೀನಲ್ಲಿ 1 ಕೋಟಿ 20 ಲಕ್ಷ ಜನಸಂಖ್ಯೆ ಇದೆ. ಡೆನ್‌ಸಿಟಿಯಲ್ಲಿ ಮೆಟ್ರೋ ಮುಂಬೈನಲ್ಲಿ ಒಂದು ಚದುರ ಕಿ.ಮೀ 4,520 ಇದೆ. ಮುಂಬೈ ಸಿಟಿಯಲ್ಲಿ 20,482 persons per sq.km., ದೆಹಲಿಯಲ್ಲಿ 1,483 ಚ.ಕಿಲೋಮೀಟರ್ ಇದೆ. 1 ಕೋಟಿ 82 ಲಕ್ಷ ಜನಸಂಖ್ಯೆ ಇದೆ. ಅಲ್ಲಿನ ಡೆನ್‌ಸಿಟಿಯಲ್ಲಿ 12,000 persons per sq.km., ಇದೆ ಕಲ್ಕತ್ತ ಸಿಟಿಯಲ್ಲಿ 1,886 ಚ.ಕಿ.ಮೀಟರ್ ಇದೆ. ಕೊಲ್ಕತ್ತಾದ ಸಿಟಿಯಲ್ಲಿ 1 ಕೋಟಿ 45 ಲಕ್ಷ ಜನಸಂಖ್ಯೆ ಇದೆ. ಅಲ್ಲಿ 7,733 ಡೆನ್‌ಸಿಟಿ ಇದೆ. ಹೈದರಾಬಾದ್ 625 ಚ.ಕಿಲೋಮೀಟರ್ ಇದೆ 1 ಕೋಟಿ 14 ಲಕ್ಷ ಜನಸಂಖ್ಯೆ ಇದೆ. ಅಲ್ಲಿ ಡೆನ್‌ಸಿಟಿ 18,480 ಇದೆ. ಬೆಂಗಳೂರು ಮಹಾನಗರ ಇವತ್ತಿಗೆ 800 ಚ.ಕಿಲೋ ಮೀಟರ್ ಇದ್ದು, 1 ಕೋಟಿ 8 ಲಕ್ಷದ 39,725 ಜನಸಂಖ್ಯೆ ಇದೆ. ಇಲ್ಲಿ ಪಾಪ್ಯುಲೇಷನ್ persons per sq.km., 13,549 ಇದೆ. ಚೆನ್ನೈನಲ್ಲಿ 1,189 ಕಿಲೋಮೀಟರ್ ಇದೆ. ನಮ್ಮದಕ್ಕಿಂತಲೂ ಜಾಸ್ತಿ ಇದೆ. ಜನಸಂಖ್ಯೆ 91 ಲಕ್ಷ ಇದೆ. ಅಲ್ಲಿ ಡೆನ್‌ಸಿಟಿ 8,344 ಇದೆ. ವೆಹಿಕಲ್ಸ್ ದೆಹಲಿಯಲ್ಲಿ 87 ಲಕ್ಷ ಇದೆ. ಚೆನ್ನೈನಲ್ಲಿ 52 ಲಕ್ಷ ಕೊಲ್ಕತ್ತಾದಲ್ಲಿ 51 ಲಕ್ಷ ಬೆಂಗಳೂರಿನಲ್ಲಿ 50 ಲಕ್ಷ, ಹೈದರಾಬಾದ್‌ನಲ್ಲಿ 47 ಲಕ್ಷ ಇದೆ. ಮುಂಬೈನಲ್ಲಿ 33 ಲಕ್ಷ ಜನಸಂಖ್ಯೆ ಇದೆ. ಇಲ್ಲಿ ಅವರೆಲ್ಲರೂ ಆಡಳಿತವನ್ನು ಮಾಡುತ್ತಿದ್ದಾರೆ. ನೀವು supersede ಮಾಡುವುದಕ್ಕೆ ಮುಂಚೆಯೇ ಕಾರ್ಪೊರೇಟರ್‌ಗಳು ಇರುವಾಗಲೇ ಸರ್ಕಾರ ಒಂದು ಪ್ಲಾನ್ ಮಾಡಿ ಇಂಥಿಂಥದ್ದನ್ನು ಮಾಡೋಣವೆಂದು ಮಾಡಬೇಕಾಗಿತ್ತು. ಆ ಕಾರ್ಪೊರೇಷನ್‌ಗೂ ಕೂಡ ನಾವು ಈ ರೀತಿಯಾಗಿ ಮಾಡುತ್ತೇವೆಂದು ಮಾಹಿತಿಯನ್ನು ಕಳುಹಿಸಬೇಕಾಗಿತ್ತು. ಮತ್ತೆ ವಿಧಾನ ಮಂಡಲಕ್ಕೂ ಕೂಡ ಈ ರೀತಿಯಾಗಿ ಮಾಡುತ್ತಿದ್ದೇವೆಂದು ಹೇಳಬೇಕಾಗಿತ್ತು. It would have been a more democratic system. ಅದನ್ನು ಸರ್ಕಾರದವರು ಮಾಡಲಿಲ್ಲ. ಅದಕ್ಕಾಗಿ ಸರ್ಕಾರ ಎಲ್ಲಿಯೋ ಬಹಳ ಅವಸರ ಬಿದ್ದರು ಎಂದು ನನಗೆ ಅನ್ನಿಸುತ್ತದೆ. ಅದಕ್ಕೋಸ್ಕರವಾಗಿ ಬಹಳ ವಿಚಾರಗಳನ್ನು ಹೇಳುವುದಿದೆ. ಬಹಳ ವಿಚಾರಗಳನ್ನು ನನ್ನ ಮಿತ್ರರುಗಳಾದ ಶ್ರೀ ವಿ. ಸೋಮಣ್ಣನವರು ಮತ್ತು ಶ್ರೀ ಅಶ್ವಥ್‌ನಾರಾಯಣರವರು ಇದರ ಬಗ್ಗೆ ದೀರ್ಘವಾಗಿ ಚರ್ಚೆ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಸರ್ಕಾರ ಸದ್ಯಕ್ಕೆ ಬಿಬಿಎಂಪಿ ಗೆ ಚುನಾವಣೆಯನ್ನು ನಡೆಸಲಿ. ಏನು ಮಾಡಬೇಕೆಂದು ಸರ್ಕಾರದ ಅಭಿಪ್ರಾಯವಿದೆ ಆ blueprint ಅನ್ನು ವಿಧಾನ ಮಂಡಲದ ಎರಡು ಸದನಕ್ಕೆ ತೆಗೆದುಕೊಂಡು ಬರಲಿ. ಚುನಾವಣೆಯಾದ ನಂತರ ಹೊಸ ಕಾರ್ಪೊರೇಟರ್‌ಗಳು ಬರುತ್ತಾರಲ್ಲಾ ಅದನ್ನು ಅವರುಗಳ ಮುಂದೆ ಕೂಡ ಇಡಿ. ಅವರು ಚರ್ಚೆ ಮಾಡಲಿ, ನಾವುಗಳು ಕೂಡ ಚರ್ಚೆ ಮಾಡೋಣ. ಆಮೇಲೆ ಮಾಡಿದರೆ ಅದು most

democratic system ಎಂದು ನನಗನ್ನಿಸುತ್ತದೆ. ಅದುದರಿಂದ ದಯಮಾಡಿ ಇದನ್ನು ರದ್ದು ಮಾಡಿ, ಬಿಬಿಎಂಪಿ ಗೆ ಚುನಾವಣೆಯನ್ನು ಸರ್ಕಾರ ನಡೆಸಲಿ ಎನ್ನುವುದನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ವಿ.ಎಸ್. ಉಗ್ರಪ್ಪನವರೆ, ನಾನು ಸಭೆಯ ಒಪ್ಪಿಗೆಯನ್ನು ಕೇಳಿದ್ದೆ. ನಿಮ್ಮ ಪಕ್ಷದ ನಾಯಕರು ಮತ್ತು ಎಲ್ಲಾ ಪಕ್ಷದ ನಾಯಕರುಗಳು ಕೂಡ ಒಬ್ಬೊಬ್ಬ ಸದಸ್ಯರಿಗೆ ಐದೈದು ನಿಮಿಷಗಳ ಕಾಲ ಮಾತನಾಡುವುದಕ್ಕೆ ಕೊಡಿ ಎಂದು ಹೇಳಿದ್ದರು. ಆದರೆ ನಾನು ನನ್ನ ಹತ್ತಿರ ಸಮಯ ಇಲ್ಲವೆಂದು ಹೇಳಿದ್ದೆ. ಆದರೆ ಮಾತನಾಡುವವರು ಮೊದಲು ಐದು ನಿಮಿಷಗಳ ಕಾಲ ಮಾತನಾಡುತ್ತೇನೆಂದು ಸದಸ್ಯರುಗಳು ಪ್ರಾರಂಭ ಮಾಡಿದರು. ಐದು ನಿಮಿಷ ಆಯಿತು ಎಂದು ಹೇಳಿದಾಗ ಬೇರೆಯವರಿಗೆ ಬಹಳ ಸಮಯ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ ನನಗೆ ಮಾತ್ರ ಏಕೆ restrict ಮಾಡುತ್ತಿದ್ದೀರಿ ಎಂದು ಹೇಳುತ್ತಿದ್ದಾರೆ. ನನಗೆ ಇದು ಬಹಳ ಮುಜುಗರದ ಪ್ರಶ್ನೆ. ನಾನು ಸಭಾಪತಿಯಾಗಿ ಒಬ್ಬ ಸದಸ್ಯರು ಮಾತನಾಡುವುದಕ್ಕೆ ಪ್ರಾರಂಭ ಮಾಡಿ, ಐದು ನಿಮಿಷಗಳ ನಂತರ ಬೇರೆ ಸದಸ್ಯರ ಹೆಸರನ್ನು ಕರೆದುಬಿಡಬೇಕೆಂದು ಮನಸ್ಸಿನಲ್ಲಿದ್ದರೂ ಕೂಡ ಆ ರೀತಿಯಾಗಿ ನಾನು ಮಾಡುತ್ತಿಲ್ಲ. ಅದುದರಿಂದ ನನಗೆ ಸಹಕರಿಸಿದರೆ ಮಾತ್ರ ಈ ಚರ್ಚೆಯನ್ನು ಕೊನೆಗೊಳಿಸಬಹುದು.

**ಶ್ರೀ ಆರ್.ವಿ. ವೆಂಕಟೇಶ್ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ನಾನು ನಿಮಗೆ ಒಂದು ಚೀಟಿಯನ್ನು ಬರೆದು ಕಳುಹಿಸಿದೆ.

**ಸಭಾಪತಿಯವರು:–** ನೋಡಿದ್ದೇನೆ.

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೆ, ನಮ್ಮ ಪಕ್ಷದಿಂದ ಯಾರೂ ಮಾತನಾಡುತ್ತಿಲ್ಲ. ಅದುದರಿಂದ ನಮ್ಮ ಪಕ್ಷದ ಸದಸ್ಯರೆಲ್ಲರ ಸಮಯವನ್ನು ಶ್ರೀ ವಿ.ಎಸ್. ಉಗ್ರಪ್ಪನವರು ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ ಎಂದು ಚೀಟಿಯಲ್ಲಿ ಬರೆದಿದ್ದೇನೆ. ಅದುದರಿಂದ ಎಲ್ಲರ ಸಮಯವನ್ನು ಶ್ರೀ ವಿ.ಎಸ್. ಉಗ್ರಪ್ಪನವರಿಗೆ ಕೊಡಿ.

**ಸಭಾಪತಿಯವರು:–** ಎಲ್ಲರ ಸಮಯವಲ್ಲ. ಒಬ್ಬೊಬ್ಬರಿಗೆ ಐದೈದು ನಿಮಿಷಗಳು ಮಾತ್ರ.

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೆ, ನಮ್ಮ ಪಕ್ಷದ 9 ಸದಸ್ಯರುಗಳು ಮಾತನಾಡಬೇಕಾಗಿದೆ. ಒಬ್ಬರಿಗೆ 5 ನಿಮಿಷಗಳಂತೆ ಒಟ್ಟು 45 ನಿಮಿಷಗಳಾಗುತ್ತದೆ. ಆ 45 ನಿಮಿಷಗಳ ಕಾಲಾವಕಾಶವನ್ನು ಶ್ರೀ ವಿ.ಎಸ್. ಉಗ್ರಪ್ಪನವರಿಗೆ ಕೊಡಿ.

**ಸಭಾಪತಿಯವರು:–** ನಾನು 9 ಜನರಿಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತಿಲ್ಲ.

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೆ, ನಮ್ಮ ಆಡಳಿತ ಪಕ್ಷದಿಂದಾಗಲಿ, ವಿರೋಧ ಪಕ್ಷದ ಕಡೆಯಿಂದ ಆಗಲಿ ಹೆಣ್ಣುಮಕ್ಕಳು ಈ ವಿಷಯವಾಗಿ ಮಾತನಾಡಿಲ್ಲ. ಅದುದರಿಂದ ನಮಗೂ ಅವಕಾಶವನ್ನು ಕೊಡಬೇಕು.

**ಸಭಾಪತಿಯವರು:–** ನೋಡಿ ಶ್ರೀಮತಿ ಮೋಟಮ್ಮನವರಿಗೆ ನೀವು ಹೇಳಿದ್ದು ಒಪ್ಪಿಗೆ ಇಲ್ಲ.

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೆ, ನಮ್ಮ ಪಕ್ಷದಿಂದ ಯಾರು ಮಾತನಾಡುತ್ತಿಲ್ಲ. ಅವರು ಒಬ್ಬರಿಗೆ ಮಾತ್ರ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ ಎಂದು ಚೀಟಿಯನ್ನು ಬರೆದುಕೊಟ್ಟಿದ್ದೇನೆ.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ನಾವು ಮಾತನಾಡುವವರು, ಅವರು ಆಡಳಿತವನ್ನು ಮಾಡುವವರು. ಅವರು ಏಕೆ ಮಾತನಾಡಬೇಕು?

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೆ, ಏನು ನಮ್ಮ ಪಕ್ಷದಿಂದ ಯಾರು ಮಾತನಾಡಬಾರದಾ? ವಿರೋಧ ಪಕ್ಷದ ಸದಸ್ಯರುಗಳು ಮಾತನಾಡುವುದನ್ನೇ ಕೇಳಿಕೊಂಡು ಕುಳಿತುಕೊಂಡಿರಬೇಕಾ?

**ಸಭಾಪತಿಯವರು:–** ಆಯಿತು ಕುಳಿತುಕೊಳ್ಳಿ. ಇದನ್ನೇ 10 ನಿಮಿಷಗಳ ಕಾಲ ಚರ್ಚೆ ಮಾಡುತ್ತಿರಿ. ಶ್ರೀ ವಿ.ಎಸ್. ಉಗ್ರಪ್ಪನವರೆ, ನಿಮಗೇ ಬಿಡುತ್ತಿದ್ದೇನೆ. ನಾನು ನನ್ನ ಮುಂದೆ ನಡೆದಂತೆ ಚರ್ಚೆಯನ್ನು ಸಭೆಯ ಮುಂದೆ ಇಟ್ಟೆ. ಈ ಸಭೆ ಒಪ್ಪಿತ್ತು. ಆದರೆ ಈಗ ಮಾತನಾಡುವಂತಹ ಎಲ್ಲಾ ಸದಸ್ಯರುಗಳು ಕೂಡ ನನಗೆ ಹೆಚ್ಚು ಸಮಯವನ್ನು ಮಾತನಾಡುವುದಕ್ಕೆ ಕೊಡಬೇಕೆಂದು ಎಲ್ಲರೂ ಕೂಡ ಕೇಳುತ್ತಿರುವ ಹಿನ್ನೆಲೆಯಲ್ಲಿ ನಾನು ಶ್ರೀ ರಾಮಚಂದ್ರಗೌಡರಿಗೆ ಹೇಳಿದಂತೆ ಶ್ರೀ ವಿ.ಎಸ್. ಉಗ್ರಪ್ಪನವರೆ ತಮಗೂ ಕೂಡ ಹೇಳುತ್ತಿದ್ದೇನೆ. ತಾವೇ ಎಷ್ಟು ಹೊತ್ತು ಮಾತನಾಡುತ್ತೇವೆಂದು ನಿರ್ಣಯವನ್ನು ಮಾಡಿಕೊಂಡು ಅಷ್ಟರೊಳಗೆ ಚರ್ಚೆಯನ್ನು ಮುಗಿಸಿ. ಎಷ್ಟು ಹೊತ್ತು ಮಾತನಾಡುತ್ತೀರಿ?

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನಮ್ಮ ಸರ್ಕಾರಿ ಮುಖ್ಯಸಚೇತಕರು ಹೇಳಿದರಲ್ಲಾ.

**ಸಭಾಪತಿಯವರು:–** ನೀವೇ ಮೂರು ಗಂಟೆಗಳ ಕಾಲ ಮಾತನಾಡಿ. ನಾನು ಒಪ್ಪುವುದಿಲ್ಲ.

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೆ, ಈ ರೀತಿಯ ಸ್ವತಂತ್ರವನ್ನು ಎಲ್ಲಾ ಸದಸ್ಯರುಗಳಿಗೂ ಕೂಡ ಕೊಡಬೇಕಾಗುತ್ತದೆ.

**ಸಭಾಪತಿಯವರು:–** ಹೌದು. ಈಗಾಗಲೇ ಕೊಟ್ಟಿದ್ದೇನೆ. ಈಗ ಇ. ಕೃಷ್ಣಪ್ಪನವರಿಗೆ, ಶ್ರೀ ರಾಮದಂದ್ರಗೌಡರಿಗೆ ಕೊಟ್ಟೆ. ಅವರೊಬ್ಬರಿಗೆ ಮಾತ್ರ ಕೊಟ್ಟಾಗ ಏಕೆ ನಿಮ್ಮ ಕಣ್ಣು ಕೆಂಪಾಗುತ್ತದೆ? ಎಲ್ಲರಿಗೂ ಕೊಡುತ್ತೇನೆ. ಎಲ್ಲರಿಗೂ ಅರ್ಧ ಗಂಟೆ, 45 ನಿಮಿಷಗಳ ಕಾಲ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಇನ್ನು ಮೂರು ದಿವಸಗಳ ಕಾಲ ಸಭೆಯನ್ನು ನಡೆಸೋಣ. ಯಾವುದೇ ತೊಂದರೆ ಇಲ್ಲ. O.K. no problem.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ನಾವುಗಳೆಲ್ಲರೂ ಐದೈದು ನಿಮಿಷಗಳ ಕಾಲ ಮಾತನಾಡುತ್ತೇವೆ. ಕೊನೆಯಲ್ಲಿ ಶ್ರೀ ವಿ.ಎಸ್. ಉಗ್ರಪ್ಪನವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಮಾನ್ಯ ಮುಖ್ಯಮಂತ್ರಿಗಳು ಸಾಕು ನಿಲ್ಲಿಸಿ ಎಂದು ಹೇಳುವವರೆಗೂ ಶ್ರೀ ವಿ.ಎಸ್. ಉಗ್ರಪ್ಪನವರು ಮಾತನಾಡುತ್ತಿರಲಿ.

**ಸಭಾಪತಿಯವರು:–** ಸಭೆ ಮತ್ತು ಸರ್ಕಾರ ಒಪ್ಪುವುದಾದರೆ ಎಲ್ಲರಿಗೂ ಕೂಡ ಎಷ್ಟು ಹೊತ್ತು ಮಾತನಾಡುವುದಕ್ಕೆ ಬೇಕೋ ಅಷ್ಟು ಹೊತ್ತು ಅವಕಾಶವನ್ನು ಕೊಡೋಣ. ಈ ಚರ್ಚೆಯನ್ನು ಇನ್ನು ಮೂರು ದಿವಸ ನಡೆಸೋಣ. ಯಾರು ಬೇಡ ಎಂದು ಹೇಳಿದ್ದು. ಸರ್ಕಾರ ಒಪ್ಪುವುದಾದರೆ ನನ್ನದು ಏನಿದೆ? ನಾನು ಸಭೆಯನ್ನು ನಡೆಸುವವನು ಅಷ್ಟೇ.

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೆ, ನಮ್ಮ ಪಕ್ಷದ 9 ಜನ ಸದಸ್ಯರಿಗೆ ಎಷ್ಟು ಸಮಯವನ್ನು ಕೊಡಬೇಕೆಂದು ಇದ್ದಿರೋ ಅಷ್ಟೂ ಸಮಯವನ್ನು ಶ್ರೀ ವಿ.ಎಸ್. ಉಗ್ರಪ್ಪನವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ.

**ಸಭಾಪತಿಯವರು:–** ನಾನು ವಿ.ಎಸ್. ಉಗ್ರಪ್ಪನವರಿಗೆ ಬಿಟ್ಟಿದ್ದೇನೆ.

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೆ, ಈಗ ವಿರೋಧ ಪಕ್ಷದ ಕಡೆಯ ಸದಸ್ಯರುಗಳು ಯಾರ್ಯಾರು ಮಾತನಾಡಬೇಕೆಂದು ಇದ್ದಾರೆ ಅವರೆಲ್ಲರಿಗೂ ಕೂಡ ಅವಕಾಶ ಕೊಟ್ಟು ಕೊನೆಯಲ್ಲಿ ನಮ್ಮ ಪಕ್ಷದ ಸದಸ್ಯರಿಗೆ ಕೊಡಬೇಕಾಗಿರುವಂತಹ ಸಮಯವನ್ನು ಶ್ರೀ ವಿ.ಎಸ್. ಉಗ್ರಪ್ಪನವರಿಗೆ ಅಷ್ಟೂ ಸಮಯವನ್ನು ಕೊಟ್ಟುಬಿಡಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ತಮ್ಮ ಭಾವನೆಯನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ನಾನು ಆದಷ್ಟು ಬೇಗ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ನನ್ನ ಸ್ನೇಹಿತರುಗಳು ಸಹಕರಿಸಿದರೆ ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಏನೇ ಆಗಲಿ. ನಮ್ಮ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಗ್ರಾಮ ಮಟ್ಟದಲ್ಲಿ, ನಗರ ಅಥವಾ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಹಾಗು ಕೇಂದ್ರ ಮಟ್ಟದಲ್ಲಿ ಸುಮಾರು ಐದು ಗೌರ್ನಮೆಂಟ್ಸ್ ಇದೆ. ಅದರಲ್ಲಿಯೂ ಸಹಾ ನಗರ ಪಾಲಿಕೆಗಳು ಮತ್ತು ಪಂಚಾಯತ್ ವ್ಯವಸ್ಥೆಯ local self governments. ಈ local self governments ಎಲ್ಲಿಯವರೆಗೆ ಸಹಾ ಅರ್ಥಪೂರ್ಣವಾಗುವುದಿಲ್ಲ ಅಲ್ಲಿಯವರೆಗೂ ಈ ದೇಶ ಅಭಿವೃದ್ಧಿಯಾಗುವುದಿಲ್ಲ ಎನ್ನುವಂತಹ ಮಾತನ್ನು ಶ್ರೀ ಮಹಾತ್ಮ ಗಾಂಧೀಜಿಯವರು ಆನೇಕ ಸಾರಿ ಹೇಳಿದ್ದಾರೆ. ಬಹುಶಃ ಶ್ರೀ ಮಹಾತ್ಮ ಗಾಂಧೀಜಿಯವರ ಅನಿಸಿಕೆಗಳನ್ನು ನಾವೆಲ್ಲರೂ ಕೂಡ ಅರ್ಥ ಮಾಡಿಕೊಂಡಿದ್ದೇವೆಂದು ಭಾವಿಸಿದ್ದೇನೆ. ಇಷ್ಟೆಲ್ಲಾ ಅದರೂ ಕೂಡ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ನಡೆಸುವುದಕ್ಕೆ ಆನೇಕ ಸರ್ಕಾರಗಳು ಆನೇಕ ಸಂದರ್ಭಗಳಲ್ಲಿ ಅವಧಿ ಮುಗಿದ ಮೇಲೆ ಐದು ವರ್ಷಗಳು, ಆರು ವರ್ಷಗಳು ಒಂದು ಹಂತದಲ್ಲಿ ಹತ್ತು ವರ್ಷಗಳ ಕಾಲ ಚುನಾವಣೆಗಳನ್ನು ನಡೆಸದೇ ಇರುವುದನ್ನು ನಾವು ಇತಿಹಾಸದಲ್ಲಿ ಕಾಣಬಹುದು. ಬಹುಶಃ ಇದೆಲ್ಲವನ್ನೂ ಗಮನಿಸಿದಂತಹ ಕೇಂದ್ರ ಸರ್ಕಾರ ದಿವಂಗತ ರಾಜೀವ್ ಗಾಂಧಿಯವರ ಕಾಲದಲ್ಲಿ, ದಿವಂಗತ ನರಸಿಂಹರಾವ್‌ರವರ ಕಾಲದಲ್ಲಿ ಸಂವಿಧಾನದ 73 ಮತ್ತು 74ನೇ ಪರಿಚ್ಛೇದಕ್ಕೆ ತಿದ್ದುಪಡಿಯನ್ನು ತರುವುದರ ಮೂಲಕ Article 243 ಗೆ ಮೊದಲನೆಯದಾಗಿ ಐದು ವರ್ಷಗಳಲ್ಲಿ ಚುನಾವಣೆಗಳು ನಡೆಬೇಕು ಎನ್ನುವಂತಹ mandate ಮಾಡಿರತಕ್ಕಂತಹ ಕೀರ್ತಿ, ಬಹುಶಃ ಯಾವುದಾದರು ನಾಯಕರಿಗೆ ಅಥವಾ ಯಾವುದಾದರು ಪಕ್ಷಕ್ಕೆ ಹೋಗುವುದಾದರೆ ಅದು ದಿವಂಗತ ರಾಜೀವ್ ಗಾಂಧಿಯವರಿಗೆ ಮತ್ತು ದಿವಂಗತ ನರಸಿಂಹರಾವ್‌ರವರಿಗೆ ಮತ್ತು ಕಾಂಗ್ರೆಸ್ ಪಕ್ಷಕ್ಕೆ ಹೋಗಬೇಕಾಗುತ್ತದೆ ಎನ್ನುವುದನ್ನು ತಮ್ಮ ಮುಖಾಂತರ ಹೇಳಬಯಸುತ್ತೇನೆ.

**ಶ್ರೀ ಎಂ.ಆರ್. ಸೀತಾರಾಂ:–** ಮಾನ್ಯ ಸಭಾಪತಿಯವರೆ, ಈಗ interruption ಏಕೆ ಮಾಡುತ್ತಾರೆ. ನಾವು ಅವರಿಂದಲೇ ಕಲಿತಿರುವುದು. ಹೋದಸಾರಿ ನೀವು 4 ವರ್ಷ ಮಾಡಿದ್ದೀರಿ. ಈಗ ಇನ್ನೊಂದು 4 ವರ್ಷಗಳ ಕಾಲ ಎಳೆಯೋಣವೆಂದು ನಾವು ಪ್ರಯತ್ನ ಮಾಡುತ್ತಿದ್ದೇವೆ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಮಾನ್ಯ ಸಭಾಪತಿಯವರೆ, 2006ನೇ ಇಸವಿಯಲ್ಲಿ ಬಿಜೆಪಿ ಸರ್ಕಾರ ನಮ್ಮ ರಾಜ್ಯದಲ್ಲಿ ಅಧಿಕಾರದಲ್ಲಿರಲಿಲ್ಲ.

**ಸಭಾಪತಿಯವರು:–** ಈಗ ಮಾನ್ಯ ವಿ.ಎಸ್.ಉಗ್ರಪ್ಪನವರಿಗೆ ಮಾತನಾಡುವುದಕ್ಕೆ ಬಿಡುತ್ತೀರೋ, ಇಲ್ಲ ಮಧ್ಯ ಮಧ್ಯ ಬಾಯಿ ಹಾಕುತ್ತೀರೋ? ದಯಮಾಡಿ ಅದನ್ನು ನಾನು ಒಪ್ಪುವುದಿಲ್ಲ. ಮಧ್ಯದಲ್ಲಿ ಬಾಯಿ ಹಾಕಿದರೆ ನಾನು ಹೆಸರುಗಳನ್ನು ಹೇಳಬೇಕಾಗುತ್ತದೆ ಅಷ್ಟೇ. ಯಾರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ ಅವರು ಮಾತನಾಡುವಾಗ ಅವರುಗಳ ಅಭಿಪ್ರಾಯುವನ್ನು ಹೇಳುತ್ತಾರೆ. ಆಮೇಲೆ ನಿಮಗೆ ಅವಕಾಶ ಸಿಕ್ಕಿದಾಗ rebut ಮಾಡಿ. ಮಧ್ಯದಲ್ಲಿ ಬಾಯಿ ಹಾಕುವುದಕ್ಕೆ ಒಪ್ಪುವುದಿಲ್ಲ. ಅವರು

(1–30 ಗಂಟೆ)

ಮಾತನಾಡುವುದಕ್ಕೆ ಬಿಡಿ. ಅವರು ಮಾತನಾಡಿ ಮುಗಿಸಲಿ. ಪ್ರತಿಯೊಂದು ಹೆಜ್ಜೆ, ಹೆಜ್ಜೆಗೂ, ಮಾತು ಮಾತಿಗೆ ಬಾಯಿ ಹಾಕಿದರೆ ಸಭೆ ನಡೆಸುವುದಕ್ಕಾಗುವುದಿಲ್ಲ. ಅವರು ಏನು ಬೇಕಾದರೂ ಹೇಳಲಿ ಬಿಡಿ. ಅವರು ಹೇಳಿದ್ದನ್ನು ಕೇಳುವುದಕ್ಕೆ ಇಷ್ಟವಿಲ್ಲದಿದ್ದರೆ ಸುಮ್ಮನೆ ಕುಳಿತುಕೊಳ್ಳಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, Article 243 P ಇದರಲ್ಲಿ 'metropolitan area' ಎಂದು ಹೇಳಿದರೆ ಅದರಲ್ಲಿ definition clause ನಲ್ಲಿ ಏನು ಹೇಳುತ್ತಾರೆಂದರೆ 'Metropolitan area means 'an area having a population of ten lakhs or more…' ಎಂದು ಇದೆ. ನಾನು ಅದನ್ನು ಬೆಳಸುವುದಕ್ಕೆ ಹೋಗುವುದಿಲ್ಲ. ಇದರ ಜೊತೆಗೆ ಮುನಿಸಿಪಲ್ ಕೌನ್ಸಿಲ್, ವಾರ್ಡ್‌ಗಳ ಬಗ್ಗೆ ಕೂಡ ಪ್ರಸ್ತಾಪ ಮಾಡುತ್ತಾರೆ. Article 243U ನಲ್ಲಿ 'Duration of Municipalities' ಎನ್ನುವುದರ ಬಗ್ಗೆ ಹೇಳುವುದರ ಜೊತೆಗೆ, ಇವೆಲ್ಲದರ ಜೊತೆಗೆ ಆರ್ಟಿಕಲ್ 243ರ ಕೆಳಗಡೆ XII Schedule ನಲ್ಲಿ ಕಾರ್ಪೊರೇಷನ್‌ಗಳಾಗಲಿ, ಮುನಿಸಿಪಾಲಿಟೀಸ್‌ಗಳಾಗಲಿ ಯಾವ್ಯಾವ ಜವಾಬ್ದಾರಿಗಳಿದೆ ಎನ್ನುವುದನ್ನು ಸ್ಪಷ್ಟಪಡಿಸಿದ್ದಾರೆ. ಅದರಲ್ಲಿ 18 ಜವಾಬ್ಧಾರಿಗಳನ್ನು ಸಂವಿಧಾನದಲ್ಲಿ ಕೊಟ್ಟಿದ್ದಾರೆ. It may be Urban planning, Regulation of land-use and construction of buildings, Planning for economic and social development, Roads and bridges, Water supply for domestic, industrial and other purposes, Public health, sanitation, conservancy and solid waste management, Fire services, Urban forestry, protection of the environment and promotion of ecological aspects, Safeguarding the interests of weaker sections of society, Slum improvement and upgradation, Urban poverty alleviation, Provision of urban amenities and facilities such as parks, gardens, play-grounds,

Promotion of cultural, educational and aesthetic aspects, Burials and burial grounds; cremations, cremation grounds, etc., Cattle ponds; prevention of cruelty to animals, Vital statistics including registration of births and deaths, Public amenities including street lighting, parking lots, bus stops and public conveniences, Regulation of slaughter houses and tanneries. ಅದರಲ್ಲಿ ಈ ಮೇಲ್ಕಂಡಂತೆ ಇದೆ. These are the responsibilities and duties of the corporation. ಈ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಎಷ್ಟರ ಮಟ್ಟಿಗೆ ಬಿಬಿಎಂಪಿ ಇದನ್ನು ನಿರ್ವಹಣೆ ಮಾಡಿದೆ ಎನ್ನುವಂತಹ ಪ್ರಶ್ನೆಯನ್ನು ಹಾಕಿಕೊಂಡಾಗ ನನ್ನಂಥವನಿಗೆ ಸಿಗತಕ್ಕಂತಹ ಉತ್ತರ ಅತ್ಯಂತ ನಿರಾಶಾದಾಯಕವಾಗಿರತಕ್ಕಂಥದ್ದು. ಏಕೆ ನಿರಾಶಾದಾಯಕವಾದಂತಹ ಉತ್ತರ ಸಿಗುತ್ತದೆಂದರೆ it is on two issues. ಮೊದಲನೆಯದಾಗಿ ಇದೊಂದು ಬಹು ದೊಡ್ಡ ಕಾರ್ಪೊರೇಷನ್ ಆಗಿರತಕ್ಕಂತಹ ಹಿನ್ನೆಲೆಯಲ್ಲಿ ಮತ್ತೊಂದು ಆಡಳಿತದ ಮೇಲೆ ನಿಯಂತ್ರಣವನ್ನು ಮಾಡದೇ ಇರುವುದಕ್ಕೆ ಆಗದೇ ಇರುವಂತಹ ಪರಿಸ್ಥಿತಿ ಬಿಬಿಎಂಪಿ ಯಲ್ಲಿ ಇರತಕ್ಕಂತಹ ಹಿನ್ನೆಲೆಯಲ್ಲಿ ಮತ್ತೆ ಭ್ರಷ್ಟಾಚಾರದ ಗಂಗೋತ್ರಿಯಲ್ಲಿ ಹರಿದಿರತಕ್ಕಂತಹ ಹಿನ್ನೆಲೆಯಲ್ಲಿ ಬಹುಶಃ ಬಿಬಿಎಂಪಿ ಯನ್ನು ಅನಿವಾರ್ಯ ಪರಿಸ್ಥಿತಿಯಲ್ಲಿ divide ಮಾಡಬೇಕು ಎನ್ನುವಂತಹ ಉದ್ದೇಶದಿಂದ ಈ ಬಿಲ್ ಅನ್ನು ತೆಗೆದುಕೊಂಡು ಬಂದಿದ್ದಾರೆ. ಈ ಬಿಲ್‌ನಲ್ಲಿ reasonings ಅನ್ನು assign ಮಾಡಬೇಕಾದರೆ ಸ್ಪಷ್ಟವಾಗಿ ಹೇಳಿದ್ದಾರೆ. ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ. ಬೆಂಗಳೂರು ನಗರಪಾಲಿಕೆ ಜನಸಂಖ್ಯೆ 80 ಲಕ್ಷವನ್ನು ಮೀರಿದೆ. ಆದ್ದರಿಂದ ರಾಜ್ಯ ಅಥವಾ ಕೇಂದ್ರ ಸರ್ಕಾರದ ಯೋಜನೆಗಳು ಕಾರ್ಯಗತಗೊಳ್ಳುವುದನ್ನು ಮೇಲ್ವಿಚಾರಣೆ ಮಾಡುವುದು ಕಷ್ಟಕರವಾಗಿದೆ. ಬೆಂಗಳೂರು ಮಹಾನಗರ ಪಾಲಿಕೆಯ ಸುಗಮ ಆಡಳಿತ ನಿರ್ವಹಣೆಯ ಉದ್ದೇಶಕ್ಕಾಗಿ ಸರ್ಕಾರವು ನೇಮಿಸಿದ ತಜ್ಞರ ಸಮಿತಿಯು ಸಹಾ ಮಧ್ಯಂತರ ವರದಿಯನ್ನು ಬೆಂಗಳೂರು ಮಹಾನಗರ ಪಾಲಿಕೆಯನ್ನು ಮೂರು ಭಾಗಗಳನ್ನಾಗಿ ಮಾಡಲು ಶಿಫಾರಸ್ಸು ಮಾಡಿದೆ. ಆದ್ದರಿಂದ ಬೆಂಗಳೂರು ಮಹಾನಗರ ಪಾಲಿಕೆಯನ್ನು ಎರಡು ಅಥವಾ ಮೂರು ನಗರಪಾಲಿಕೆಗಳನ್ನಾಗಿ ಪುನರ್‌ರಚನೆ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. These are the reasons assigned by the government for this bill. ಈ ಕಾರಣಗಳು ಎಷ್ಟರ ಮಟ್ಟಿಗೆ ಸರಿ ಇದೆ ಎನ್ನುವ ಪ್ರಶ್ನೆ ನಮ್ಮ ಮುಂದಿರುವಂಥದ್ದು. ನೋಡಿ ನಾವುಗಳ ಬಹಳ ವಾದಗಳನ್ನು ಮಾಡುತ್ತಿದ್ದೇವೆ. ನಾಡಪ್ರಭು ಕೆಂಪೇಗೌಡರ ಆ ಹೆಸರಿಗೆ ಧಕ್ಕೆ ಬರಬಹುದೇ ಎನ್ನುವುದು. ಬಹುಶಃ ನಾಡಪ್ರಭು ಕೆಂಪೇಗೌಡರು 1957ನೇ ಇಸವಿಯಲ್ಲಿ ದೇವನಹಳ್ಳಿ ಆಚೆ ಇರುವ ಅಹುತಿ ಅವರ ಮೂಲ.

ಅಲ್ಲಿಂದ ಯಲಹಂಕಕ್ಕೆ ಬಂದು, ಯಲಹಂಕ ಭಾಗದಲ್ಲಿ ಅವರ ಆಡಳಿತ ಇತ್ತು, ಉತ್ತಮ ಕೋಟೆಯನ್ನು ಕಟ್ಟುವುದಕ್ಕೆ ಒಂದು ಜಾಗಬೇಕು ಎನ್ನುವ ದೃಷ್ಟಿಯಿಂದ ಬೆಂಗಳೂರು ಆವತ್ತಿನ ದಿವಸ ಬೆಂದಕಾಳೂರು ಎಂದು ಏನಿತ್ತು, ಬೆಂದಕಾಳೂರಿಗೆ ನಮಗಿಂತಲೂ ಹೆಚ್ಚು ಅನುಭವ ಅವರಿಗಿತ್ತು ಎಂದು ಅನ್ನಿಸುತ್ತದೆ. ಅವರಿಗೆ ದೂರದೃಷ್ಟಿ statesmanship ಇತ್ತು ಎಂದು ಅನ್ನಿಸುತ್ತದೆ. ಏಕೆಂದರೆ ಬೆಂಗಳೂರು ನಗರ ಇದಕ್ಕಿಂತಲೂ ಹೆಚ್ಚು ಬೆಳೆದರೆ ಈ ನಗರವನ್ನು ಅಭಿವೃದ್ಧಿ ಪತದತ್ತ ಕೊಂಡೊಯ್ಯುವಂಥದ್ದು ದುಸ್ತರ ಎನ್ನುವ ಭಾವನೆಯಿಂದ ನಾಲ್ಕು ಕಡೆ ನಾಲ್ಕು ಗೋಪುರಗಳನ್ನು ಅವರು ಸೃಷ್ಟಿ ಮಾಡಿದರು. ಆ ನಾಲ್ಕು ಗೋಪುರಗಳಲ್ಲಿ ಒಂದು ಕೆಂಪಾಂಬುದಿ ಕೆರೆ ಬಳಿ, ಇನ್ನೊಂದು ಲಾಲ್‌ಭಾಗ್ ಕಡೆ ಮತ್ತೊಂದು ಮೇಖ್ರಿ ವೃತ್ತದ ಬಳಿ ಮತ್ತು ಇನ್ನೊಂದು ಹಲಸೂರು ಬಳಿ. ಯಾವ ಸ್ಥಿತಿ ಇತ್ತು ಎಂದರೆ, ಈ ನಾಲ್ಕು ಗೋಪುರಗಳಿಗೆ ಸೀಮತವಾಗಿರುವಂತಹ ಆ ಬೆಂದಕಾಳೂರು, ನಂತರದ ದಿನಗಳಲ್ಲಿ ಬೆಂಗಳೂರು ಮಾರ್ಪಾಡು ಅಗಿರತಕ್ಕಂಥದ್ದನ್ನು ಕಾಣಬಹುದು. 1809ನೇ ಇಸವಿಯಲ್ಲಿ ಏನು ಈ ಗೋಪುರಗಳು ಹೊರಗಡೆ ಇರುವಂಥದ್ದು cantonment area ನಿರ್ಮಾಣವಾಯಿತು. ಈ ಕೆಂಪೇಗೌಡರ ಪೇಟೆ ಮತ್ತು ದಂಡು ಪ್ರದೇಶದ ಮಧ್ಯೆ ಹಾದುಹೋಗಬೇಕಾದರೆ ಅರಣ್ಯ ಇತ್ತು. ಇವತ್ತು ಏನು ನಾವು ಕಬ್ಬನ್ ಪಾರ್ಕ್ ಎಂದು ಹೇಳುತ್ತೇವೆ. ಈ ಕಬ್ಬನ್ ಪಾರ್ಕ್ ಅನ್ನು ದಾಟಿ ಹೋಗಬೇಕಾದರೆ ಅವತ್ತಿನ ದಿವಸ ಸುಂಕವನ್ನು ಕಟ್ಟಬೇಕಾಗಿತ್ತು. ಸುಂಕ ಕಟ್ಟಿ ಬರುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು ಎಂದು ಹೇಳುವುದಕ್ಕೆ ಬಯಸುತ್ತಿದ್ದೇನೆ. ಆದಾದಮೇಲೆ 1949ನೇ ಇಸವಿಯಲ್ಲಿ ಡಿಸೆಂಬರ್ 8 ರಂದು ಪೇಟೆ ಹಾಗೂ ದಂಡು ಪ್ರದೇಶಗಳು ನಗರಪಾಲಿಕೆ ಆಡಳಿತದಲ್ಲಿ ಸೇರಿಕೊಂಡಿತ್ತು. 1949ನೇ ಇಸವಿಯ ಕಾಯ್ದೆ ಪ್ರಕಾರ ಏನಾಯಿತು, ಈಗ ಏನು ಸುಮಾರು 478 – 479 ವರ್ಷಗಳ ನಂತರ ಬೆಂಗಳೂರು 400 ಪಟ್ಟು ಹೆಚ್ಚಿಗೆ ಬೆಳೆದಿರುವುದನ್ನು ನಾವು ಗಮನಿಸಬಹುದು. ಇವತ್ತಿನ ಪರಿಸ್ಥಿತಿಯಲ್ಲಿ ಬೆಂಗಳೂರು ನಗರ 800 ಚದುರ ಕಿಲೋ ಮೀಟರ್‌ಗಳಿದೆ. ಬಹುಶಃ ಪೀಣ್ಯದಿಂದ ಯಾವ ಹೆಚ್‌ಎಸ್‌ಆರ್ ಲೇಔಟ್‌ಗೆ ಹೋಗಬೇಕಾದರೆ ಕನಿಷ್ಟ 4 ಗಂಟೆಗಳಿಗೂ ಹೆಚ್ಚು ಸಮಯವನ್ನು ತೆಗೆದುಕೊಳ್ಳುವಂತಹ ಸಂದರ್ಭ ಇದೆ. ಕಡಿಮೆ ಎಂದರೆ 2 ಗಂಟೆಗಳು ತೆಗೆದುಕೊಳ್ಳುತ್ತದೆ. ಯಾವ ಮೇಯರ್ ಎಲ್ಲಿಯಾದರು ಯಾವುದಾದರು ಘಟನೆ ಸಂಭವಿಸಿದರೆ ಅವರು ಹೆಚ್‌ಎಸ್‌ಆರ್ ಲೇಔಟ್‌ನಲ್ಲಿದ್ದವರು ಪೀಣ್ಯಕ್ಕೆ ಹೋಗಿ ತಲುಪಬೇಕಾದರೆ ಮೇಯರ್ ಇರಬಹುದು ಅಥವಾ ಕಮೀಷನರ್ ಇರಬಹುದು ಹೇಗೆ ಸಾಧ್ಯವಿದೆ? ಇದನ್ನು ನಾವುಗಳು ಗಮನಿಸಬೇಕಾಗುತ್ತದೆ. ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಬೆಂಗಳೂರು ನಗರದ ಜನಸಂಖ್ಯೆಯನ್ನು ತೆಗೆದುಕೊಂಡಾಗ 1901ರ ಜನಗಣತಿಯ ಪ್ರಕಾರ 1,59,046 ಇತ್ತು. 2011ನೇ ಇಸವಿಯ ಜನಗಣತಿಯ ಪ್ರಕಾರವಾಗಿ 800 ಚದುರ ಕಿಲೋ ಮೀಟರ್ ಇರುವಂತಹ ಈ ಬೆಂಗಳೂರು

ನಗರದಲ್ಲಿ 84,25,970 ಜನಸಂಖ್ಯೆ ಇದೆ ಎಂದು ಮಾಹಿತಿಯನ್ನು ಕೊಡುತ್ತಾರೆ. Census ಮಾಹಿತಿಯ ರೀತ್ಯಾ ಜನಸಂಖ್ಯೆ ಮತ್ತು ಈ ಪ್ರದೇಶ 2007ನೇ ಇಸವಿಯಲ್ಲಿ ಏನು 226 ಕಿಲೋ ಮೀಟರ್ ಈ ಬೆಂಗಳೂರು ನಗರ ಇತ್ತು. 2007ನೇ ಇಸವಿಯಲ್ಲಿ 7 ಸಿಎಂಸಿ, ಒಂದು ಟಿಎಂಸಿ (ಟೌನ್ ಮುನಿಸಿಪಾಲಿಟಿ) ಮತ್ತು 110 ಗ್ರಾಮಗಳನ್ನು ಸೇರಿಸುವುದರ ಮುಖಾಂತರ ಇದರ ವಿಸ್ತೀರ್ಣವನ್ನು 800 ಚದುರ ಕಿಲೋ ಮೀಟರ್‌ಗೆ ಹೆಚ್ಚಿಸಿದರು. ಇದನ್ನು ಏಕೆ ಜಾಸ್ತಿ ಮಾಡಿದರು? ತರಾತುರಿಯಲ್ಲಿ ಯಾರದ್ದಾದರೂ ಅವತ್ತಿನ ದಿವಸ ಅಭಿಪ್ರಾಯವನ್ನು ಕೇಳಿದ್ದರಾ ಎನ್ನುವಂತಹ ಪ್ರಶ್ನೆಯನ್ನು ಹಾಕಿಕೊಂಡಾಗ ನನಗೆ ಸಿಗುವಂತಹ ಉತ್ತರ ಯಾರು ಹೇಳಿದರೂ ಕೂಡ ಒಪ್ಪಲಿಲ್ಲ, ತರಾತುರಿಯಲ್ಲಿ ಮಾಡಿದರು. ಅದರ ಪರಿಣಾಮ ಇವತ್ತು ಏನಾಗಿದೆ ಒಂದು ಕಡೆ ಮನೆಗಳು ಜಾಸ್ತಿಯಾಗಿದೆ. ತೆರಿಗೆ ಕಡಿಮೆಯಾಗುತ್ತಿದೆ. ತೆರಿಗೆ ಸಿಗುವಂಥದ್ದು ಇದ್ದರೂ ಕೂಡ ನಾನು ಮಾನ್ಯ ರಾಮಚಂದ್ರಗೌಡರನ್ನು ತಮ್ಮ ಮುಖಾಂತರ ಕೇಳುವುದೇನೆಂದರೆ ನಾನು ಹೆಚ್‌ಎಸ್‌ಆರ್ ಲೇಔಟ್‌ನಲ್ಲಿ walk ಹೋದಾಗ ನೋಡುತ್ತೇನೆ. More than 60% of the houses and buildings which are constructed are contrary to the provisions of law. ಯಾರು setback ಬಿಟ್ಟಿಲ್ಲ. ಯಾರು ಸಹಾ ಎಷ್ಟು ನಿಗದಿ ಮಾಡಿದರೋ ಆ ರೀತಿಯಾಗಿ ಕಟ್ಟಿಲ್ಲ. ಅದನ್ನು ನಿಯಂತ್ರಣ ಮಾಡುವವರು ಯಾರು? ಕಾರ್ಪೊರೇಷನ್‌ರವರು.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಯಾರು ಬೆಂಗಳೂರು ನಗರದಲ್ಲಿ ಕಾನೂನು ಪ್ರಕಾರವಾಗಿ ಮನೆಯನ್ನು ಕಟ್ಟಿದರೆ ಒಂದು ಸವರನ್ ಗೋಲ್ಡ್ ಕೊಡುತ್ತೇನೆಂದು ಹೇಳಿದ್ದೇನೆ. ಆದರೆ ಅದನ್ನು ತೆಗೆದುಕೊಂಡು ಹೋಗುವುದಕ್ಕೆ ಇದುವರೆಗೆ ಯಾರೂ ಬಂದಿಲ್ಲ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನಿನ್ನೆ ರಾತ್ರಿ 11 ಗಂಟೆಯಲ್ಲಿ ಹೆಚ್‌ಎಸ್‌ಆರ್ ಲೇಔಟ್‌ನ ಬಿಡಿಎ ಕಾಂಪ್ಲೆಕ್ಸ್‌ನಲ್ಲಿ walk ಮಾಡುತ್ತಿದೆ. ಅಲ್ಲಿ ಎರಡು ಹೊಟೇಲ್‌ಗಳಿದೆ. ಆ corridor ನಿಂದ ಹಿಡಿದು ಹೊರಗಡೆ ಸಹಾ ನಾನು ಬೇಕು ಎಂದು ಹೇಳಿ ನನ್ನ ಜೊತೆಯಲ್ಲಿದ್ದಂತಹ ನನ್ನ ಸ್ನೇಹಿತರಿಗೆ ಅಂದಾಜು ಎಷ್ಟು ಇರಬಹುದೆಂದು ಲೆಕ್ಕ ಹಾಕಿ ಎಂದು ಹೇಳಿದೆ. ನಾವು ಓಡಾಡುವಂತಹ corridor ನಲ್ಲಿ 1,000 ಅಡಿಗೂ ಹೆಚ್ಚು ಅಕ್ರಮಿಸಿಕೊಂಡು permanent structures ಅನ್ನು ಮಾಡಿದ್ದಾರೆ. ತೆಗೆದುಕೊಂಡಿರುವಂಥದ್ದು 500 ಅಡಿಗಳಾದರೆ ಅವರು ಹೊಟೇಲ್ ನಡೆಸುತ್ತಿರುವುದು ಸುಮಾರು 1,500 ರಿಂದ 2,000 ಅಡಿಗಳಲ್ಲಿ ಇವತ್ತು ಹೊಟೇಲ್‌ನ್ನು ನಡೆಸುತ್ತಿದ್ದಾರೆ. ಯಾರು ಇದನ್ನು ಗಮನಿಸುತ್ತಾರೆ?

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಇದನ್ನು ಎಷ್ಟು ದಿವಸಗಳಿಂದ ಮಾಡುತ್ತಿದ್ದಾರೆ?

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಇದನ್ನು ಒಂದು ವರ್ಷದಿಂದ ಮಾಡುತ್ತಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಹಾಗಾದರೆ ಸರಿ.

**ಸಭಾಪತಿಯವರು:–** ಮಾನ್ಯ ವಿ.ಎಸ್. ಉಗ್ರಪ್ಪನವರೆ, ನೀವು ಪ್ರಸ್ತಾಪ ಮಾಡುತ್ತಿರುವ ವಿಷಯ ಸರಿಯಾಗಿದೆ. ಅದರ ಬಗ್ಗೆ ಚರ್ಚೆ ಮಾಡೋಣ. ಆದರೆ ನನ್ನ ಮನಸ್ಸಿನಲ್ಲಿ ಒಂದು ಪ್ರಶ್ನೆ ಏನು ಬಂತು ಎಂದರೆ ಶ್ರೀ ವಿ.ಎಸ್. ಉಗ್ರಪ್ಪನವರು ರಾತ್ರಿ 11 ಗಂಟೆಯಲ್ಲೆಲ್ಲಾ ಓಡಾಡುವುದನ್ನು ಯಾವಾಗ ಅಭ್ಯಾಸ ಮಾಡಿದರು ಎಂದು. ನನಗೆ ಅವರು ಗೊತ್ತು. ಇದೇನು ರಾತ್ರಿ 11 ಗಂಟೆಯಲ್ಲಿ ಓಡಾಡುವುದು ಏನು ಕಥೆ ಎಂದು ಅಷ್ಟೇ. ವಿಷಯ ಮುಂದಕ್ಕೆ ಹೋಗಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ತಾವು ಬಹಳ ಒಳ್ಳೆಯ ಪ್ರಶ್ನೆ ಕೇಳಿದಿರಿ.

**ಶ್ರೀಮತಿ ವಿಮಲಾಗೌಡ:–** ಮುಂಬರುವ ಬಿ.ಬಿ.ಎಂ.ಪಿ. ಚುನಾವಣೆಯಲ್ಲಿ ನಮ್ಮ ಹೆಚ್.ಎಸ್.ಆರ್. ಲೇಔಟ್‌ಗೆ ಸೇರಿಕೊಂಡಿರುವಂತಹ ಬೊಮ್ಮನಹಳ್ಳಿ ಕ್ಷೇತ್ರದಿಂದ ಸ್ಪರ್ಧಿಸಬಹುದು.

**ಸಭಾಪತಿಯವರು:–** ಅದೆಲ್ಲಾ ಆದರೆ ಪರವಾಗಿಲ್ಲ, ಆದರೆ ಬೇರೆ ಏನಾದರೂ... ಉಗ್ರಪ್ಪನವರು ಹಾಗೂ ನನಗೂ ಬಹಳ ಹಳೆಯ ಪರಿಚಯ. ಹಾಗಾಗಿ ಏನು ಕತೆ ಎಂದು ಕೇಳಿದೆ ಅಷ್ಟೇ. ಅದಕ್ಕೆ ಉಗ್ರಪ್ಪನವರಿಂದ ಉತ್ತರ ಬೇಡ, ಅವರು ತಮ್ಮ ಚರ್ಚೆಯನ್ನು ಮುಂದುವರೆಸಬೇಕಾಗುತ್ತದೆ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ತಾವು ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದಿರಿ.

**ಸಭಾಪತಿಯವರು:–** ಬೇಡ, ಅದಕ್ಕೆ ಉತ್ತರ ಬೇಡ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ತಾವು ಕೇಳಿದ ಮೇಲೆ ಅವರು ಅದಕ್ಕೆ ಉತ್ತರ ಕೊಡದೆ ಬಿಡುವುದೇ ಇಲ್ಲ. ಈಗ ನೀವು ಪ್ರಶ್ನೆ ಕೇಳಿದ್ದೀರಿ, ಅದಕ್ಕೆ ಅವರ ಉತ್ತರವನ್ನು ಸಹ ಕೇಳಿಸಿಕೊಳ್ಳಲೇಬೇಕು.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಏಕೆ ಈ ವಿಚಾರವನ್ನು ಹೇಳಬಯಸುತ್ತಿದ್ದೇನೆಂದರೆ, ಬೆಳಗಿನ ವೇಳೆಯಲ್ಲಿ ನಾನು ಅಗರ ಕೆರೆ ಪ್ರದೇಶದಲ್ಲಿ ವಾಕಿಂಗ್ ಹೋಗುತ್ತಿದ್ದೆ. ಬೆಳಿಗ್ಗೆ ವಾಕಿಂಗ್ ಹೋಗುವುದಕ್ಕೆ ಸಾಧ್ಯವಾಗದಿದ್ದರೆ ರಾತ್ರಿ ದೂರದರ್ಶನದಲ್ಲಿ ವಾರ್ತೆ ಇನ್ನಿತರ ಕಾರ್ಯಕ್ರಮಗಳನ್ನು ವೀಕ್ಷಿಸಿದ ನಂತರ ಹೊರಗಡೆ ಡಿಸ್ಟರ್ಬೆನ್ಸಸ್ ಕಡಿಮೆಯಾಗಿರುತ್ತದೆ ಎನ್ನುವ ಕಾರಣಕ್ಕೆ ನಾನು ಈ ಮೊದಲು ಸ್ವಲ್ಪ ಹೊತ್ತು ಸುತ್ತಾಡಿ ಬರುತ್ತಿದ್ದೆ. ಆದರೆ ಈಗ ಅಗರ ಕೆರೆ ಪ್ರದೇಶದಲ್ಲಿ ಏಕೆ ವಾಕಿಂಗ್ ಹೋಗುತ್ತಿಲ್ಲವೆಂದರೆ, ಅದು ಬಹಳ ಆಸಕ್ತಿಯುತವಾದಂತಹ ವಿಚಾರವಾಗಿದೆ. ಆ ಕೆರೆಯ ಒಟ್ಟು ವಿಸ್ತೀರ್ಣ 160 ಎಕರೆಯಾಗಿದ್ದು, ಈಗ ಒತ್ತುವರಿಯಾದ ನಂತರ ಉಳಿದುಕೊಂಡಿರುವುದು 100 ಎಕರೆ ಮಾತ್ರ. ಆ ಕೆರೆಗೆ ಬರುತ್ತಿದ್ದಂತಹ ಕೊಚ್ಚೆ ನೀರನ್ನು ಡೈವರ್ಟ್ ಮಾಡುವುದಕ್ಕೆ ಈಗಾಗಲೇ 18 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ 30 ಅಡಿ ಆಳದಲ್ಲಿ ಪೈಪ್‌ಲೈನ್ ಮಾಡುವಂತಹ ಕಾಮಗಾರಿಯನ್ನು ಕೈಗೊಂಡಿದ್ದಾರೆ. ಇದಲ್ಲದೆ ಆ ಕೆರೆಗೆ 35 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಎಸ್.ಟಿ.ಪಿ. ಹಾಕಬೇಕೆಂದು ಒಂದಿಷ್ಟು ಜನರು ಒತ್ತಡ ಹಾಕುತ್ತಿದ್ದಾರೆ. 100 ಎಕರೆ ವಿಸ್ತೀರ್ಣದ ಕೆರೆಯನ್ನು ತುಂಬಿಸುವುದಕ್ಕೆ 35 ಕೋಟಿ ರೂಪಾಯಿಗಳಷ್ಟು ಹಣವನ್ನು ವೆಚ್ಚ ಮಾಡಿ ಎಸ್.ಟಿ.ಪಿ. ಹಾಕಿದರೆ, ನಾನು ನಮ್ಮ 4 ಜನ ಸ್ನೇಹಿತರು ಸೇರಿ ಕಳೆದ ವರ್ಷ 2 ರಾತ್ರಿ ಆ ಕೆರೆಗೆ ಮಳೆನೀರನ್ನು ತುಂಬಿಸಿದೆವು, ಆದರೆ ಪಟ್ಟುಹಿಡಿದು ನನ್ನ ಮೇಲೆಯೇ ಹೈಕೋರ್ಟ್‌ನಲ್ಲಿ ಒಂದು ಪ್ರಕರಣವನ್ನು ದಾಖಲಿಸಿ, ಉಗ್ರಪ್ಪನವರು ಎಸ್.ಟಿ.ಪಿ. ವ್ಯವಸ್ಥೆಯನ್ನು ಮಾಡುವುದಕ್ಕೆ ತೊಂದರೆ ಕೊಡುತ್ತಿದ್ದಾರೆ ಎಂದು ದೂರಿದ್ದಾರೆ. ನಾನು ಅವರನ್ನು ಕೇಳಿದೆ, ಎಸ್.ಟಿಪಿ. ಹಾಕಿದರೆ, 5 ಎಕರೆ ಜಾಗ ಎಂದರೆ ಹೆಚ್.ಎಸ್.ಆರ್. ಲೇಔಟ್‌ನಲ್ಲಿ 100 ಕೋಟಿ ಬೆಲೆಬಾಳುತ್ತದೆ, ಜೊತೆಗೆ ಎಸ್.ಟಿ.ಪಿ. ವ್ಯವಸ್ಥೆಗೆ ತಗಲುವ ವೆಚ್ಚ 35 ಕೋಟಿ ರೂಪಾಯಿಗಳು, ಇದರ ಜೊತೆಗೆ ಒಂದು ದಿವಸಕ್ಕೆ ಆಗುವಂತಹ ವೆಚ್ಚ 1 ಲಕ್ಷ ರೂಪಾಯಿಗಳು, ಅವರು 50 ಸಾವಿರ ಎಂದು ವರದಿಯಲ್ಲಿ ತಿಳಿಸಿದ್ದಾರೆ, ಆದರೆ ಒಂದು ದಿನಕ್ಕೆ 1 ಲಕ್ಷ ರೂಪಾಯಿಗಳಷ್ಟು ಖರ್ಚು ಬರುತ್ತದೆ. ಅಲ್ಲಿ ಬೀದಿ ದೀಪಗಳು ಮತ್ತು ಕುಳಿತುಕೊಳ್ಳಲು ಅನುಕೂಲವಾಗುವಂತೆ ಬೆಂಚ್‌ಗಳನ್ನು ಹಾಕಿಸಬೇಕೆಂದು ಕಳೆದ 5 ವರ್ಷಗಳಿಂದ ಪ್ರಯತ್ನ ಮಾಡುತ್ತಿದ್ದರೂ ಸಾಧ್ಯವಾಗುತ್ತಿಲ್ಲ.

ಕಾರ್ಪೊರೇಷನ್‌ನವರು ದಿನಕ್ಕೆ 1 ಲಕ್ಷ ರೂಪಾಯಿಗಳಷ್ಟು ಹಣವನ್ನು ವೆಚ್ಚ ಮಾಡುತ್ತಾರೆ, ಆದರೆ ಆ ಎಸ್.ಟಿ.ಪಿ. ವ್ಯವಸ್ಥೆಗಾಗಿ ಖರ್ಚು ಮಾಡಲು ಉದ್ದೇಶಿಸಿರುವಷ್ಟು ಹಣವನ್ನು ನಮ್ಮ ವೈ.ಎನ್. ಹೊಸಕೋಟೆ, ಮತ್ತಿತರ ಗುಡ್ಡಗಾಡಿನಿಂದ ಕೂಡಿದ ಗ್ರಾಮೀಣ ಪ್ರದೇಶಕ್ಕೆ ಕೊಟ್ಟರೆ ಕನಿಷ್ಟವೆಂದರೂ 10 ಸಾವಿರ ಎಕರೆಗಳಷ್ಟು ದೊಡ್ಡ ಕೆರೆಗಳನ್ನು ನಿರ್ಮಿಸುವುದಕ್ಕೆ ಅವಕಾಶವಿದೆ ಎಂದು ನಾನು ಹೇಳಿದೆ. ಈಗ

ಅಗರ ಕರೆ ಪ್ರದೇಶದಲ್ಲಿನ ಪರಿಸ್ಥಿತಿ ಏನಾಗಿದೆ ಎಂದರೆ, ಕೆಲವರು ನನ್ನ ಹತ್ತಿರ ಬಂದಿದ್ದರು, ಸದನದಲ್ಲಿ ಆ ಬಗ್ಗೆ ಪ್ರಸ್ತಾಪಿಸಿದ್ದು ಸಹ ದಾಖಲೆಗಳಲ್ಲಿದೆ. ಒಬ್ಬ ಅಧಿಕಾರಿ ನನ್ನಲ್ಲಿಗೆ ಬಂದು ಸಾರ್, ನಿಮಗೆ ಏನು ಕೊಡಬೇಕೋ ಅದನ್ನು ಕೊಡುತ್ತೇವೆ, ದಯಮಾಡಿ ಇದಕ್ಕೆ ತಾವು ಕ್ಲಿಯರೆನ್ಸ್ ಕೊಡಿ ಎಂದು ವಿನಂತಿಸಿಕೊಂಡಾಗ ನಾನು ಆತನಿಗೆ ಏನು ಹೇಳಿದೆನೆಂದರೆ, 'ಹೋಗಿ, ನೀವೇನಾದರೂ ಇನ್ನೂ ಒಂದೈದು ನಿಮಿಷ ಇಲ್ಲಿದ್ದರೆ ಪೊಲೀಸ್ ಕರೆಸಿ ಒದ್ದು ಒಳಗೆ ಹಾಕಿಸುತ್ತೇನೆ' ಎಂದು ಆ ಅಧಿಕಾರಿಗೆ ಎಚ್ಚರಿಕೆಯನ್ನು ಕೊಟ್ಟಿದ್ದೇನೆ. ಹೀಗಾಗಿ ಆ ಕಾರಣದಿಂದ ಇವತ್ತು ಅಗರ ಕೆರೆ ಪ್ರದೇಶದಲ್ಲಿ ನಾನು ಸಂಚರಿಸಿದಾಗಲೆಲ್ಲಾ 'ಏನ್ಸಾರ್, ಕೇಸ್ ಏನಾಯ್ತು ಸಾರ್' ಎಂದು ಕೇಳುವವರು ಜಾಸ್ತಿಯಾಗಿದ್ದಾರೆ. ಹಾಗಾಗಿ ನಾನು ಈಗ ಆ ಪ್ರದೇಶದಲ್ಲಿ ಹೆಚ್ಚು ವಾಕ್ ಮಾಡುತ್ತಿಲ್ಲ. ಬಿ.ಬಿ.ಎಂ.ಪಿ.ಯಲ್ಲಿ ಈ ರೀತಿಯ ಲೋಪಗಳು ಸಹ ನಡೆಯುತ್ತವೆ ಎಂಬುದನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ.

ಬಿ.ಬಿ.ಎಂ.ಪಿ.ಯನ್ನು ಡಿವಿಜ಼ನ್ ಮಾಡುವುದರಿಂದ ಬೆಂಗಳೂರಿನ ನಿರ್ಮಾತೃ ಕೆಂಪೇಗೌಡರ ಹೆಸರಿಗೆ ತೊಂದರೆಯಾಗುತ್ತದೆ ಎಂದು ನನ್ನ ಸನ್ಮಿತ್ರರು ಬಹಳ ಜನರು ಹೇಳುತ್ತಾರೆ. ಹೇಗೆ ತೊಂದರೆಯಾಗುತ್ತದೆ? ಅವರು ಮೂಲತ: ಅವತಿ ವಂಶಸ್ಥರಾಗಿದ್ದು, ಅವರ ರಾಜ್ಯ ಪ್ರಾರಂಭವಾಗಿದ್ದು ಯಲಹಂಕ, ನಂತರ ಉತ್ತಮ ಕೋಟೆಯನ್ನು ಕಟ್ಟುವುದಕ್ಕಾಗಿ ಈ ಬೆಂದಕಾಳೂರನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಒಂದು ಕಡೆ ಮಾಗಡಿ ಕೆಂಪೇಗೌಡರು ಬೇರೆ, ಯಲಹಂಕದ ಕೆಂಪೇಗೌಡರು ಬೇರೆ ಎನ್ನುವಂತಹ ವಾದ ಕೂಡ ಇದೆ. ಅದನ್ನು ನಾನು ಹೆಚ್ಚು ಬೆಳೆಸುವುದಕ್ಕೆ ಹೋಗುವುದಿಲ್ಲ. ಆದರೆ ನಾನು ಹೆಚ್.ಎಸ್.ಆರ್. ಲೇಔಟ್‌ನಲ್ಲಿ ವಾಸಿಸುತ್ತಿರುವ ನಮ್ಮ ನೆರೆಹೊರೆಯವರೇ ಆದಂತಹ ಅಕ್ಕ ವಿಮಲಾಗೌಡರನ್ನು ಕೇಳಬಯಸುವುದೇನೆಂದರೆ, ಕೆಂಪೇಗೌಡರು ಯಾವಾಗ ನಿಮ್ಮ ಗಮನಕ್ಕೆ ಬಂದರು? ಕೆಂಪೇಗೌಡರ ಹೆಸರನ್ನು ಉಳಿಸುವುದಕ್ಕೆ ಈ ರಾಜ್ಯದ ಇತಿಹಾಸದಲ್ಲಿ ಯಾರಾದರೂ ಸಹ ಕ್ರಮ ತೆಗೆದುಕೊಂಡಿದ್ದರೆ, ಬೆಂಗಳೂರಿನ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ 'ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ' ಎಂದು ಹೆಸರಿಟ್ಟಿದ್ದು ಯಾರು? ಅದರ ಕೀರ್ತಿ ಇವತ್ತು ಕಾಂಗ್ರೆಸ್‌ಗೆ ಹೋಗಬೇಕಾಗುತ್ತದೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಬೆಂಗಳೂರಿನ ಬಸ್ ನಿಲ್ದಾಣಕ್ಕೆ 'ಕೆಂಪೇಗೌಡ ಬಸ್ ನಿಲ್ದಾಣ' ಎಂದು ಯಾರಾದರೂ ಹೆಸರಿಟ್ಟಿದ್ದರೆ ಅದು ಕಾಂಗ್ರೆಸ್‌ನವರು ಎಂಬುದನ್ನು ಸಹ ನಾವು ಇವತ್ತು ಅರ್ಥ ಮಾಡಿಕೊಳ್ಳಬೇಕು.

ಮಾನ್ಯ ಗುಂಡೂರಾವ್ ಅವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ಕೆಂಪೇಗೌಡರ ಹೆಸರಿನಲ್ಲಿ ಮೆಡಿಕಲ್ ಕಾಲೇಜ್ ತೆರೆಯುವುದಕ್ಕೆ ಯಾರಾದರೂ ಮಂಜೂರಾತಿ ಕೊಟ್ಟಿದ್ದರೆ ಅದು ಕಾಂಗ್ರೆಸ್ ಎಂಬುದನ್ನು ಸಹ ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇವತ್ತು ಇಲ್ಲಿ ಮ್ಯೂಸಿಯಂ ಒಂದನ್ನೇನು ಪ್ರಾರಂಭಿಸಿದ್ದಾರೆ, ಅದನ್ನು ಕೆಂಪೇಗೌಡರ ಹೆಸರಿನಲ್ಲಿ ಪ್ರಾರಂಭಿಸಿದಂತಹ ಕೀರ್ತಿ ಸಹ ಕಾಂಗ್ರೆಸ್ ಪಕ್ಷಕ್ಕೆ ಹೋಗಬೇಕಾಗುತ್ತದೆ. ನಾನು ಎಲ್ಲ ಸನ್ಮಿತ್ರರನ್ನು ಸಹ ಅತ್ಯಂತ ವಿನಯವಾಗಿ ಕೇಳಬಯಸುವುದೇನೆಂದರೆ, ...

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಮ್ಯೂಸಿಯಂ ನಿಮ್ಮ ಅವಧಿಯಲ್ಲಿ ಮಾಡಿದ್ದಲ್ಲ, ಅದನ್ನು ಶ್ರೀ ವೆಂಕಟೇಶ್ ಮೂರ್ತಿಯವರು ಮೇಯರ್ ಆಗಿದ್ದಂತಹ ಸಂದರ್ಭದಲ್ಲಿ ಪ್ರಾರಂಭಿಸಲಾಯ್ತು, ನೀವು ಸುಮ್ಮನೆ ಏಕೆ ಸುಳ್ಳು ಹೇಳುತ್ತೀರಿ?

**ಶ್ರೀ ವಿ.ಎಸ್. ಉಗ್ರಪ್ಪ:–** ನೋಡಿ, ಆಗ ಇದ್ದಂತಹ ಸರ್ಕಾರ ಯಾವುದು, ಯಾರಿಂದ ಅನುದಾನ ಬಂದಿದೆ ಎಂಬುದನ್ನು ತಾವು ಗಮನಿಸಬೇಕಾಗುತ್ತದೆ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಬಿ.ಜೆ.ಪಿ. ಸರ್ಕಾರ ಇತ್ತು, ನೀವು ಏಕೆ ಈ ರೀತಿ ಸುಳ್ಳು ಹೇಳುತ್ತೀರಿ? ಏನೇನೋ ಕತೆ ಹೇಳುತ್ತೀರಿ.

**ಶ್ರೀ ವಿ.ಎಸ್. ಉಗ್ರಪ್ಪ:–** ನೀವು ರೆಕಾರ್ಡ್ಸ್ ನೋಡಿ ಹೇಳಿ.

**ಶ್ರೀ ಹೆಚ್.ಎಂ. ರೇವಣ್ಣ:–** ಅದು ongoing scheme ನಲ್ಲಿ ಬರುತ್ತದೆ.

**ಶ್ರೀ ವಿ. ಸೋಮಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ದಾಖಲೆಗೆ ತಪ್ಪು ಮಾಹಿತಿ ಹೋಗಬಾರದು. ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮಾಡತಕ್ಕಂಥದ್ದಕ್ಕೆ ಪ್ರಾಯಶಃ ಏನು ಉಗ್ರಪ್ಪನವರು ಹೇಳುತ್ತಿದ್ದಾರೆ, ಸರ್ಕಾರ ಎಂದರೆ ಇದು ಕೇವಲ ಕಾಂಗ್ರೆಸ್ ಸರ್ಕಾರ ಎಂದು ಮಾತ್ರವಲ್ಲ, ಸನ್ಮಾನ್ಯ ಅಟಲ್ ಬಿಹಾರಿ ವಾಜಪೇಯಿ ಅವರು ಅದನ್ನು ಮಾಡಿದ ಮೇಲೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮಾಡಬೇಕು ಎಂದು ಅಂದಿನ ಕೇಂದ್ರದ ಸಚಿವರಾಗಿದ್ದಂತಹ ಸನ್ಮಾನ್ಯ ಅನಂತ ಕುಮಾರ್‌ರವರು ಅದನ್ನು ಮೊದಲನೆಯ ಬಾರಿಗೆ ಪ್ರಸ್ತಾಪ ಮಾಡಿ ಸರ್ಕಾರದಿಂದ ಅದರ ಬಗ್ಗೆ ಬ್ಯಾಂಕ್ವೆಟ್ ಹಾಲ್‌ನಲ್ಲಿ ತೀರ್ಮಾನ ಆಗಿದೆ. ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ, ನಾಡಪ್ರಭು ಕೆಂಪೇಗೌಡರು ಮಾಗಡಿಯವರೇ ಬೇರೆ, ಬೆಂಗಳೂರಿನವರೇ ಬೇರೆ ಎನ್ನುವಂತಹ

ಒಂದು ಅನುಮಾನ ಇದೆ ಎಂಬುದನ್ನು ಮಾನ್ಯ ಉಗ್ರಪ್ಪನವರು ಸ್ಪಷ್ಟವಾಗಿ ಹೇಳಿಬಿಡಲಿ. ದಯಮಾಡಿ ಈ ರೀತಿಯಾಗಿ ಎಲ್ಲಿಯೋ ಒಂದು ಕಡೆ ಒಂದು ರೀತಿಯ ಸಂಶಯವನ್ನು ಸೃಷ್ಠಿ ಮಾಡುವುದು ಸರಿಯಲ್ಲ.

ಮಾನ್ಯ ರೇವಣ್ಣನವರು ಇವತ್ತು ಮಾಗಡಿ ತಾಲ್ಲೂಕಿನಲ್ಲಿ ತಮ್ಮದೇ ಆದಂತಹ ಪ್ರಭಾವದಿಂದಾಗಿ ಮೂರು–ನಾಲ್ಕು ಬಾರಿ ಚುನಾವಣೆಯಲ್ಲಿ ಜಯಗಳಿಸಿದ್ದಾರೆ. ನಾಡಪ್ರಭು ಕೆಂಪೇಗೌಡರೇ ಅಲ್ಲಿದ್ದಂತಹ ಕೆಂಪೇಗೌಡರು ಕೂಡ, ಬೆಂಗಳೂರಿನ ಯಲಹಂಕದಲ್ಲಿದ್ದವರು. ಆದರೆ ಒಂದು ವಿಚಾರವೆಂದರೆ ಅವರ ದೂರದೃಷ್ಟಿ, ಅವರ vision, ಅದರ ಉದ್ದೇಶವೇನು? 1600 ವರ್ಷಗಳ ಇತಿಹಾಸ ಇರುವಂತಹ ಚೆನ್ನೈ ಒಂದು ನಗರ ಇರಬಹುದು, ಬೆಂಗಳೂರು ನಗರಕ್ಕೆ ಒಂದು ಇತಿಹಾಸ ಇದೆ ಎನ್ನುವಂತಹ ವಿಚಾರ ಮಾನ್ಯ ಉಗ್ರಪ್ಪನವರಿಗೆ ಸಹ ಗೊತ್ತಿದೆ. ಇಡೀ ಭಾರತ ದೇಶದಲ್ಲಿ ಯಾವುದಾದರೂ ಒಂದೇ ಒಂದು ನಗರಕ್ಕೆ ಇತಿಹಾಸ ಇದ್ದರೆ ಅದು ಬೆಂಗಳೂರು ನಗರಕ್ಕೆ ಮಾತ್ರ. ಆದ್ದರಿಂದ ಅವರು ಬೆಂಗಳೂರಿನಲ್ಲಿ ಇಬ್ಬರು ಕೆಂಪೇಗೌಡರಿದ್ದರು ಎಂದು ಹೇಳಿದರೆ ಅದು ಎಲ್ಲಿಗೆ ಹೋಗುತ್ತದೆ ಹೇಳಿ ನೋಡೋಣ.

**ಸಭಾಪತಿಯವರು:–** ಈಗ ಅದರ ಬಗ್ಗೆ ಗೊಂದಲ ನಿರ್ಮಾಣ ಮಾಡುವುದು ಬೇಡ.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಆ ವಿಚಾರದಲ್ಲಿ ಯಾರೂ ಸಹ ಸಂಶಯಗಳಿಗೆ ಅವಕಾಶ ಕೊಡುವುದು ಬೇಡ. ಕೆಂಪೇಗೌಡರು ಒಬ್ಬರೇ. ದಿವಂಗತ ಮುಖ್ಯಮಂತ್ರಿ ಮಾನ್ಯ ಗುಂಡೂರಾವ್ ಅವರ vision ನಲ್ಲೂ ಅದೇ ನಾಡಪ್ರಭು ಕೆಂಪೇಗೌಡರಿದ್ದಾರೆ. ಆದ್ದರಿಂದ ಕೆಂಪೇಗೌಡರ ಹೆಸರಿಗೆ ಬಾಧಕವಾಗಬಾರದು ಎನ್ನುವ ದೃಷ್ಟಿಯಿಂದ ನಾವು ಇದನ್ನೆಲ್ಲಾ ಹೇಳುತ್ತಿದ್ದೇವೆಯೇ ವಿನಃ ಬೇರೆ ಏನೇನೂ ಇಲ್ಲ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಇಷ್ಟು ಮಾತ್ರ ಹೇಳುತ್ತೇನೆ, ಇವತ್ತು ಈ ವಿಧೇಯಕವನ್ನು ತರುವುದರ ಮೂಲಕ ಯಾವುದೇ ದೃಷ್ಟಿಕೋನದಲ್ಲಿ ಯೋಚನೆ ಮಾಡಿದರೂ ಸಹ ಕೆಂಪೇಗೌಡರಿಗೆ ಅಪಮಾನ ಮಾಡುವುದಾಗಲಿ ಅಥವಾ ಕೆಂಪೇಗೌಡರ ಬ್ರಾಂಡ್ ನೇಮ್‌ಗೆ ಧಕ್ಕೆ ತರುವಂತಹ ಉದ್ದೇಶ ಸರ್ಕಾರಕ್ಕಿಲ್ಲ ಎಂಬುದನ್ನು ನಾನು ಸ್ಪಷ್ಟವಾಗಿ ಸರ್ಕಾರದ ಮಾಹಿತಿಗಳ ಹಿನ್ನೆಲೆಯಲ್ಲಿ ಹೇಳಬಯಸುತ್ತೇನೆ. ಅಷ್ಟೇ ಅಲ್ಲದೆ ಬೆಂಗಳೂರಿಗೆ ಇವತ್ತು ಏನಾದರೂ 'ಸಿಲಿಕಾನ್ ಸಿಟಿ' ಎನ್ನುವಂತಹ ಹೆಸರಿದ್ದರೆ, ಬೆಂಗಳೂರಿಗೆ ಇಡೀ ಪ್ರಪಂಚದ ಭೂಪಟದಲ್ಲಿ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಇವತ್ತೇನಾದರೂ ಸಹ ಐ.ಟಿ. ಇಂಡಸ್ಟ್ರೀಸ್‌ನ್ನು ಆಕರ್ಷಿಸುವ ಮೂಲಕ ಇವತ್ತು ಬೆಂಗಳೂರಿನ ಆಡಳಿತ ವ್ಯವಸ್ಥೆಗೆ ಹೆಚ್ಚು ಆದಾಯವನ್ನು ತರುವಂತಹ, ಅಂತರರಾಷ್ಟ್ರೀಯ ಭೂಪಟದಲ್ಲಿ ತನ್ನದೇ ಆಗಿರುವಂತಹ

ಸ್ಥಾನಮಾನವನ್ನು ತಂದುಕೊಡುವುದಕ್ಕೆ 1999 ರಿಂದ 2004ರವರೆಗೆ ಸನ್ಮಾನ್ಯ ಎಸ್.ಎಂ. ಕೃಷ್ಣರವರ ನೇತೃತ್ವದ ಸರ್ಕಾರದ ಕ್ರಮಗಳು ಅತ್ಯಂತ ಪ್ರಮುಖವಾದವುಗಳು ಎಂಬುದನ್ನು ಸಹ ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಉಗ್ರಪ್ಪನವರೇ, ತಾವು ಪದೇ ಪದೇ ಐ.ಟಿ. ಬಗ್ಗೆ ಏನು ಪ್ರಸ್ತಾಪ ಮಾಡುತ್ತೀರಿ, ಈ ಉದ್ಯಮದಿಂದ ನಮ್ಮ ರಾಜ್ಯ ಸರ್ಕಾರಕ್ಕೆ ಏನಾದರೂ ಆದಾಯ ಬರುತ್ತಿದೆಯೇ? ಅವರಿಗೆ ಇಷ್ಟೆಲ್ಲಾ ಮೂಲಸೌಕರ್ಯಗಳನ್ನು ಕಲ್ಪಿಸಿಕೊಡುತ್ತೀರಿ, ಅವರಿಂದ ನಮ್ಮ ರಾಜ್ಯ ಸರ್ಕಾರಕ್ಕೆ ಆದಾಯವೇನಾದರೂ ಬರುತ್ತಿದೆಯೇ? ಈ ಬಗ್ಗೆ ನಮಗೆ ಮಾಹಿತಿ ಬೇಕಾಗುತ್ತದೆ. ಆದ್ದರಿಂದ ದಯಮಾಡಿ ಅದನ್ನು ಮಾನ್ಯ ಉಗ್ರಪ್ಪನವರು ಸ್ಪಷ್ಟೀಕರಿಸಬೇಕಾಗುತ್ತದೆ.

**ಸಭಾಪತಿಯವರು:–** ಅವರು ಹೇಗೆ ಹೇಳುತ್ತಾರೆ, ಅವರಿಗೇನು ಸಂಬಂಧ? ಅವರು ಮಂತ್ರಿಗಳಲ್ಲ. ಸಾಕು, ಈಗ ಆ ಬಗ್ಗೆ ಚರ್ಚೆ ಬೇಡ. ಮಾನ್ಯ ಉಗ್ರಪ್ಪನವರೇ, ತಾವು ತಮ್ಮ ಚರ್ಚೆಯನ್ನು ಮುಂದುವರೆಸಿ. ಆ ಪ್ರಶ್ನೆಗೆ ಸಂಬಂಧಿಸಿದಂತೆ ತಾವು ಉತ್ತರವನ್ನು ಹೇಳಬೇಕಾಗಿಲ್ಲ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಉತ್ತರ ಹೇಳುವುದಕ್ಕೆ ಹೋಗುವುದಿಲ್ಲ, ಆದರೆ ಇಷ್ಟನ್ನು ಮಾತ್ರ ಹೇಳಬಯಸುತ್ತೇನೆ. ಐ.ಟಿ. ಹಿನ್ನೆಲೆಯಲ್ಲಿ ಹೇಳಬೇಕೆಂದರೆ ಸಾವಿರಾರು ಜನ, ಲಕ್ಷಾಂತರ ಜನರು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸುಮಾರು 12 ಲಕ್ಷ ಜನರಿಗೆ ಇವತ್ತು ಉದ್ಯೋಗ ಸೃಷ್ಟಿಯಾಗಿದೆ. ಇದರಲ್ಲಿ ಬಹುತೇಕ ಶೇಕಡ 50 ರಿಂದ 60ರಷ್ಟು ಜನರು ಸ್ಥಳೀಯರೇ ಇದ್ದಾರೆ. ಸರ್ವೀಸ್ ಟ್ಯಾಕ್ಸ್ ಹಾಗೂ ಇನ್ನಿತರ ಟ್ಯಾಕ್ಸ್ ಸರ್ಕಾರಕ್ಕೆ ಬರುತ್ತಿರುವುದರ ಬಗ್ಗೆ ವಿವರಗಳನ್ನು ಬೇಕಾದರೆ ಸರ್ಕಾರಕ್ಕೆ ಕೊಡಬಯಸುತ್ತೇನೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಕಾಂಗ್ರೆಸ್ ಎಲ್ಲಾ ಸಂದರ್ಭಗಳಲ್ಲಿ ಬೆಂಗಳೂರನ್ನು ಅಂದರೆ ಈ ರಾಜ್ಯದ ರಾಜಧಾನಿಯಾಗಿರುವಂತಹ ಬೆಂಗಳೂರನ್ನು ಎಲ್ಲಾ ರೀತಿಯಲ್ಲಿ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ತನ್ನ ಸ್ಥಾನವನ್ನು ಮೇಲಕ್ಕೆ ಕೊಂಡೊಯ್ಯುವಂತಹ ಪ್ರಾಮಾಣಿಕ ಪ್ರಯತ್ನಗಳು ಇವತ್ತು ನಡೆದಿವೆ. ಅದರ ಹಿನ್ನೆಲೆಯಲ್ಲಿ ಬೆಂಗಳೂರಿನ ಅನೇಕ ಫ್ಲೈಓವರ್ ಇರಬಹುದು, ಪಾರ್ಕ್ ಇರಬಹುದು, ಅಂಡರ್‌ಪಾಸಸ್ ಇರಬಹುದು, ಸಮುದಾಯ ಭವನಗಳಿರಬಹುದು, water bodies ಇರಬಹುದು ಇವುಗಳನ್ನು ಕಾಂಗ್ರೆಸ್ಸಿನ ಆಡಳಿತದಲ್ಲಿ ಮಾಡಿರುವಂಥದ್ದನ್ನು ನಾವು ಇತಿಹಾಸದಲ್ಲಿ ಕಾಣಬಹುದು. ನಾನು ಇವತ್ತು ನನ್ನ ಸನ್ಮಿತ್ರರನ್ನು ಕೇಳಬಯಸುತ್ತೇನೆ, 2008 ರಿಂದ 2013ರರವರೆಗೂ ತಾವು ಆಡಳಿತದಲ್ಲಿ ಇದ್ದಿರಲ್ಲ, ಯಾವುದಾದರೂ ಒಂದು ಫ್ಲೈಓವರ್ ಅನ್ನು ತಾವು ಮಾಡಿದ್ದೀರಾ?

ಯಾವುದಾದರೂ ಒಂದು ಪಾರ್ಕ್ ಅನ್ನು ಹೊಸದಾಗಿ ಸೃಷ್ಟಿ ಮಾಡಿ ಅಭಿವೃದ್ಧಿಪಡಿಸಿದ್ದೀರಾ? ಯಾವುದಾದರೂ ಒಂದು ಸಮುದಾಯ ಭವನ ಕಟ್ಟಿದ್ದೀರಾ? ಯಾವುದು ಕಾಂಗ್ರೆಸ್ ಆಡಳಿತದಲ್ಲಿ ಅಭಿವೃದ್ಧಿ ಮಾಡಿದ್ದೆವೋ ಅದು ನಾವು ಮಾಡಿದ್ದೇವೆ ಎಂದು ಹೆಸರನ್ನು ಹೇಳುವಂತಹ ಪ್ರಯತ್ನ ...

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡುತ್ತಿದ್ದಾರೆ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಮಾನ್ಯ ಸಭಾಪತಿಯವರೇ, ಮೆಟ್ರೋ ಪ್ರಾಜೆಕ್ಟ್ಯಾರದ್ದು?

**(ಗೊಂದಲ)**

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯಸಭಾಪತಿಯವರೇ, ನಾನು ಸದನಕ್ಕೆ ಯಾವುದೇ ತಪ್ಪು ಮಾಹಿತಿಯನ್ನು ಕೊಡುತ್ತಿಲ್ಲ. ನೀವುಯಾವುದನ್ನು ಮಾಡಿದ್ದೀರಿ ಹೇಳಿ.

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷ ಕುಳಿತುಕೊಳ್ಳಿ. ಈಗ ಚರ್ಚೆ ಆಗುತ್ತಿರುವುದು ಈ ವಿಧೇಯಕದ ಬಗ್ಗೆ. ಬೆಂಗಳೂರನ್ನು ಎರಡಕ್ಕಿಂತ ಜಾಸ್ತಿ ಭಾಗಗಳಾಗಿ ವಿಂಗಡಿಸಬೇಕು ಎನ್ನುವುದಕ್ಕೆ ಕಾರಣಗಳನ್ನು ಹೇಳಿ ಸರ್ಕಾರ ಒಂದು ಮಸೂದೆಯನ್ನು ಸದನದ ಮುಂದೆ ಇಟ್ಟಿದೆ. ಈ ಮಸೂದೆ ಬೇಕೋ ಬೇಡವೋ ಎನ್ನುವುದರ ಬಗ್ಗೆ ಮಾತನಾಡಬೇಕು. ಪ್ರಾಸಂಗಿಕವಾಗಿ ಒಂದೆರಡು ಬೇರೆ ಮಾತುಗಳನ್ನಾಡಬಹುದೇ ಹೊರತು ಹಳೆಯ ಚರ್ಚೆ, ಹಳೆಯ ಚರಿತ್ರೆ, ಅವುಗಳ ಬಗ್ಗೆ ಇದನ್ನು ನಾವು ಮಾಡಿದೆವು, ಅದನ್ನು ನಾವು ಮಾಡಿದೆವು ಎನ್ನುವುದರ ಬಗ್ಗೆ ಚರ್ಚೆ ಬೇಡ. ಬೆಂಗಳೂರನ್ನು ಎರಡು ಅಥವಾ ಎರಡಕ್ಕಿಂತ ಹೆಚ್ಚಿಗೆ ಭಾಗಗಳಾಗಿ ಏಕೆ ವಿಭಜನೆ ಮಾಡಬೇಕು ಎನ್ನುವುದರ ಬಗ್ಗೆ ಸರ್ಕಾರ ಕಾರಣಗಳನ್ನು ಕೊಟ್ಟಿದೆ. ಆ ಕಾರಣಗಳು ಸರಿಇದ್ದರೆ ಸರಿಎನ್ನಿ, ತಪ್ಪಿದ್ದರೆ ತಪ್ಪೆನ್ನಿ. ಅಥವಾ ನಿಮ್ಮ ಅಭಿಪ್ರಾಯ ಏನಿದೆ ಹೇಳಿ. ಪ್ರಾಸಂಗಿಕವಾಗಿ ಬೇರೆ ವಿಷಯಗಳನ್ನು ಹೇಳುವುದುತಪ್ಪೆಂದು ನಾನು ಹೇಳುವುದಿಲ್ಲ. ಆದರೆ ದಯಮಾಡಿ ಚರ್ಚೆ ದಾರಿತಪ್ಪುವುದು ಬೇಡ. ಬೆಂಗಳೂರನ್ನು ವಿಭಜನೆ ಮಾಡಬೇಕು ಎನ್ನುವುದರ ವಿಧೇಯಕದ ಬಗ್ಗೆಯೇ ನಮ್ಮ ನಮ್ಮ ಮಾತುಗಳನ್ನು ಸೀಮಿತಗೊಳಿಸಿ ಕೊಂಡರೆಚರ್ಚೆ ಮುಗಿಯುತ್ತದೆ. ಇಲ್ಲದಿದ್ದರೆ ಮುಗಿಯುವುದೇ ಇಲ್ಲ. ಚರ್ಚೆ ಎಲ್ಲಿಗೋ ಹೋಗುತ್ತದೆ. ಚರಿತ್ರೆ ವಿಷಯಗಳನ್ನು ನಾವು ಏಕೆ ಚರ್ಚೆ ಮಾಡೋಣ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಧನ್ಯವಾದಗಳು. ನಾನು ಪ್ರಾರಂಭದಲ್ಲಿಯೇ ಹೇಳಿದೆ, ಸಂವಿಧಾನದ 12th Schedule ನಲ್ಲಿ ಯಾವ 18 ಜವಾಬ್ದಾರಿಗಳಿವೆ, ಅವುಗಳನ್ನು 5 ವರ್ಷ ಇದ್ದಂತಹ ಬಿಬಿಎಂಪಿ ಈಡೇರಿಸುವುದಕ್ಕೆ ಆಗಿದೆಯೇ? ನಾನು ಅದಕ್ಕೆ ಹೇಳಿದ್ದು ಈ 18 ಜವಾಬ್ದಾರಿಗಳನ್ನು ಈಡೇರಿಸುವಂಥದ್ದರಲ್ಲಿ ವಿಫಲವಾಗಿರುವಂತಹ ಹಿನ್ನೆಲೆಯಲ್ಲಿ ಈ ಅನಿವಾರ್ಯತೆ ಇವತ್ತು ಸೃಷ್ಟಿಯಾಗಿದೆ. ಇದನ್ನು ಎಸ್ಟಾಬ್ಲಿಶ್ ಮಾಡುವಂಥದ್ದಕ್ಕೆ ನಾನು ಪ್ರಯತ್ನ ಮಾಡುತ್ತಿದ್ದೇನೆ. ಮಾನ್ಯ ಸಭಾಪತಿಯವರೇ, ಒಂದು ಹಂತದಲ್ಲಿ ಭಾರತ ದೇಶದಲ್ಲಿ ಎಲ್ಲಿಯಾದರೂ ಗಾರ್ಡನ್ ಸಿಟಿ ಇದೆಯೇ ಎಂದು ಪ್ರಶ್ನೆ ಮಾಡಿದರೆ ಅದು ಬೆಂಗಳೂರು ಸಿಟಿ ಎಂದು ಇತ್ತು. ನನ್ನ ಅನೇಕ ಜನ ಮಾಧ್ಯಮ ಮಿತ್ರರು ಒಂದು ಹಂತದಲ್ಲಿ it is a city of garbage, it is a city of rapes ಎಂದು ಕೆಲವರು ಹೇಳಿದರು. Newyork Times ಪತ್ರಿಕೆಯಲ್ಲಿಯೂ ಸಹ ಈ ವಿಷಯ ವರದಿಯಾಗಿತ್ತು. ಆದರೆ ನಾನು ಅತ್ಯಂತ ಜವಾಬ್ದಾರಿಯಿಂದ ಈ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ, ಇವತ್ತು ಬೆಂಗಳೂರು ನಗರದಲ್ಲಿ garbage ನ್ನು ನಿಯಂತ್ರಣದಲ್ಲಿಡುವುದಕ್ಕೆ, ಹೆಣ್ಣು ಮಕ್ಕಳ ಮೇಲೆ ಆಗುತ್ತಿದ್ದಂತಹ ಅತ್ಯಾಚಾರಗಳನ್ನು ಪರಿಣಾಮಕಾರಿಯಾಗಿ ತಡೆದಿರುವಂತಹ ಕೀರ್ತಿ ಇವತ್ತು ಯಾವುದಾದರೂ ಹೋಗಬೇಕು ಎನ್ನುವುದಾದರೆ ಅದು ಮಾನ್ಯ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರಕ್ಕೆ ಹೋಗಬೇಕು ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಶ್ರೀ ಜಗ್ಗೇಶ್ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಇಲ್ಲಿ ಬೆಂಗಳೂರನ್ನು ಎರಡು ಅಥವಾ ಮೂರು ಭಾಗಗಳನ್ನಾಗಿ ವಿಭಜನೆ ಮಾಡಬೇಕೇ ಬೇಡವೇ ಎಂಬುದರ ಬಗ್ಗೆ ಅಧಿವೇಶನದಲ್ಲಿ ಚರ್ಚೆ ನಡೆಯುತ್ತಿರುವಂತಹ ಸಂದರ್ಭದಲ್ಲಿ ನೀವು ಸುತ್ತಿ ಬಳಸಿ ಶಾಲೆಗೆ ಹೋಗುವಂತಹ ಮಕ್ಕಳು ಇಳಿದು ಮಜಾ ತೆಗೆದುಕೊಳ್ಳುತ್ತಾರಲ್ಲ, ಆ ರೀತಿ ದಾರಿ ತಪ್ಪಿಸುತ್ತಿದ್ದೀರಿ. ಆ ರೀತಿ ಮಾಡದೆ ನೇರವಾಗಿ ಬೆಂಗಳೂರನ್ನು ವಿಭಜನೆ ಮಾಡಬೇಕೇ ಅಥವಾ ಬೇಡವೇ ಎನ್ನುವುದರ ಚರ್ಚೆ ಮಾಡಿ. ನಾವು ಮೂರು ದಿವಸದಿಂದ ಬಹಳ ತಾಳ್ಮೆಯಿಂದ ಅಧಿವೇಶನದಲ್ಲಿ ಭಾಗವಹಿಸುತ್ತಿದ್ದೇವೆ. ನಾವು ಹೊಸಬರು ಇದರ ಬಗ್ಗೆ ತಿಳಿದುಕೊಳ್ಳಬೇಕೆಂದು ಕುಳಿತುಕೊಂಡಿದ್ದೇವೆ. ಒಬ್ಬೊಬ್ಬರು ಎರಡು ಮೂರು ಗಂಟೆಗಳ ಕಾಲ ಮಾತನಾಡುತ್ತಿದ್ದಾರೆ ಆದರೆ ಇದ್ಯಾವುದು ನಮಗೆ ಅರ್ಥವಾಗುತ್ತಿಲ್ಲ. ಇವರೆಲ್ಲರೂ ಓಟ್ ಬ್ಯಾಂಕಿಂಗ್‌ಗೋಸ್ಕರ ಮಾತನಾಡುತ್ತಿದ್ದಾರೆಯೇ ಅಥವಾ ಕನ್ನಡಿಗರ ಅಸ್ತಿತ್ವವನ್ನು ಉಳಿಸುವುದಕ್ಕೋಸ್ಕರ ಮಾತನಾಡುತ್ತಿದ್ದಾರೆಯೇ ಎಂದು ತಿಳಿಯುತ್ತಿಲ್ಲ. ಏಕೆಂದರೆ, ಕರ್ನಾಟಕದ ಬಗ್ಗೆ ಬೆಳಗಾವಿಯಲ್ಲಿ ಏನು ಮಾತನಾಡುತ್ತಾರೆ, ಕೊಡಗಿನಲ್ಲಿ ಏನು ಮಾತನಾಡುತ್ತಾರೆಂದು ಇವರಿಗೆಲ್ಲಾ ತಿಳಿದಿರಬೇಕು. ಬೆಂಗಳೂರನ್ನು ಯಾವ ರೀತಿ ಕನ್ನಡಿಗರಿಗೋಸ್ಕರ ಉಳಿಸಿಕೊಳ್ಳಬೇಕು

ಎನ್ನುವುದರ ಬಗ್ಗೆಯಾರೂ ಸಹ ಮಾತನಾಡುತ್ತಿಲ್ಲ, ನಾನು ಅದರ ಬಗ್ಗೆ ಬಹಳ ದೀರ್ಘವಾಗಿ ಕುಳಿತುಕೊಂಡು ಯೋಚನೆ ಮಾಡುತ್ತಿದ್ದೇನೆ. ಎಲ್ಲರೂ ಆಡಳಿತ, ಕಳ್ಳತನ ಮಾಡಿದರು ಆದಕಾರಣ ಬೆಂಗಳೂರನ್ನು ವಿಭಜನೆ ಮಾಡಬೇಕೆಂದು ಮಾತನಾಡುತ್ತಿದ್ದಾರಲ್ಲ, ಯಾರಾದರು ಒಬ್ಬರು ಬದ್ಧತೆಯಿಂದ ಬೆಂಗಳೂರಿನಲ್ಲಿ ಒಬ್ಬ ಕನ್ನಡಿಗರಿಗೂ ತೊಂದರೆಯಾಗದೆ ಇರುವ ರೀತಿಯಲ್ಲಿ ಮಾಡಬೇಕು ಎನ್ನುವುದರ ಬಗ್ಗೆ ಯಾರಾದರು ಒಬ್ಬರಾದರು ಯೋಚನೆ ಮಾಡುತ್ತಿದ್ದಾರೆಯೇ ಎಂದು ನನಗೆ ಬಹಳವಾಗಿ ಕಾಡುತ್ತಿದೆ. ನನಗೆ ಮೈಯೆಲ್ಲಾ ಉರಿಯುತ್ತಿದೆ. ಎಲ್ಲರಿಗೂ ಓಟ್ ಬ್ಯಾಂಕಿಂಗ್ ಮಾಡಬೇಕೆನ್ನುವುದರ ಬಗ್ಗೆ ಆಸೆ ಇದೆ. ಆದರೆ ಕನ್ನಡದ ನೆಲ ಭಾಷಾಭಿಮಾನ ಇಲ್ಲದೆ ಎಷ್ಟು ಕೆಟ್ಟು ಹೋಗಿದೆ ಎಂಬುದನ್ನು ಇವರೆಲ್ಲರೂ ಅರ್ಥ ಮಾಡಿಕೊಳ್ಳಬೇಕಾಗಿದೆ. ಇವತ್ತು ಸುತ್ತಿಬಳಸಿ ನಾವು ಪಾರ್ಕ್ ಮಾಡಿದೆವು, ಅಲ್ಲೆಲ್ಲೋ ನಾವು ಮೊದಲು ಕೆರೆಕಟ್ಟಿದೆವು, ಲಾಸ್ಟ್ ಅವರು ಕಟ್ಟಿದರು ಎಂದು ಹೇಳುವುದಲ್ಲ. ಹೌದು ಸರ್ 60 ವರ್ಷದಲ್ಲಿ ಕಾಂಗ್ರೆಸ್ ಪಕ್ಷವೇಜಾಸ್ತಿ ಆಡಳಿತ ಮಾಡಿರುವುದರಿಂದ ಆ ಪಕ್ಷದಲ್ಲಿ ಈ ಹಿಂದೆ ನಾನೂ ಇದ್ದ ಕಾರಣ ಈ ಪಕ್ಷದವರೇ ಹೆಚ್ಚಿಗೆ ಕೆಲಸ ಮಾಡಿದ್ದಾರೆಂದು ನಾನೂ ಸಹ ಅವರು ಹೇಳುವಂತಹ ಮಾತನ್ನು ಒಪ್ಪುತ್ತೇನೆ. ಆದರೆ ಇಲ್ಲಿ ಆ ಪ್ರಶ್ನೆ ಬರುತ್ತಿಲ್ಲ. ಒಬ್ಬ ಕನ್ನಡಿಗನ ಅಸ್ತಿತ್ವ ಮುಂದೆ ಏನಾಗುತ್ತದೆ ಎನ್ನುವುದರ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ಇಲ್ಲಿರುವಂತಹ ಯಾವ ಸದಸ್ಯರು ಸಹ ಕನ್ನಡದ ಧ್ವನಿಯಾಗಿ ಒಬ್ಬರೂ ಸಹ ಮಾತನಾಡುತ್ತಿಲ್ಲ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಬಹಳ ಆಸೆಯಿಂದ ಕನ್ನಡವನ್ನು ಕಡ್ಡಾಯ ಮಾಡಬೇಕೆಂದು ಹೇಳಿದಾಗ ಯಾರೂ ಸಹ ಅದನ್ನು ಸ್ವೀಕಾರ ಮಾಡಿಕೊಳ್ಳುವುದಕ್ಕೆ ತಯಾರಿಲ್ಲ. ಅದರ ಬಗ್ಗೆ ಯಾರ ಧ್ವನಿಯೂ ಬರುತ್ತಿಲ್ಲ. ಅದು ಬಿಟ್ಟು ಆಡಳಿತ, ನಾವು ಇಷ್ಟು ಮಾಡಿದೆವು, ಅಷ್ಟು ಮಾಡಿದೆವು ಎಂದು ಮಾತನಾಡುತ್ತಿದ್ದಾರೆ ಅಷ್ಟೆ. ನಮಗೂ ಮಾತನಾಡಬೇಕೆಂಬ ಆಸೆ ಇದೆ. ನಾವೂ ಸಹ ಈ ಬೆಂಗಳೂರಿಗೆ ಸಂಬಂಧಪಟ್ಟವರೆ. ನೀವು ಹೇಳುತ್ತಿರುವಂತಹ ವಿವರಣೆ ಹೇಗಿದೆ ಎಂದರೆ...

**ಶ್ರೀ ಎಂ.ಆರ್. ಸೀತಾರಾಂ:–** ಮಾನ್ಯ ಸಭಾಪತಿಯವರೇ, ಈ ವಿಷಯಗಳನ್ನು ಅವರು ಮಾತನಾಡುವಂತಹ ಸಮಯದಲ್ಲಿ ಬೇಕಾದರೆ ಹೇಳಲಿ.

**ಸಭಾಪತಿಯವರು:–** ಅವರು ಹೇಳಲಿ ಬಿಡಿ. ಅವರು ಮಾತನಾಡುವುದನ್ನೇ ಕೇಳುವುದಿಲ್ಲ ಎಂದರೆ ಹೇಗೆ? ಮಧ್ಯದಲ್ಲಿ ಎರಡು ಮಾತನಾಡುತ್ತಾರೆ ಬಿಡಿ.

**ಶ್ರೀ ಜಗ್ಗೇಶ್:–** ಮಾನ್ಯ ಸಭಾಪತಿಯವರೇ, ನಾನು ಹೇಳುವುದಿಷ್ಟೆ, ಪರ ಅಥವಾ ವಿರೋಧ, ಇದರ ಬಗ್ಗೆ ಮಾತನಾಡಬೇಕು.

**ಶ್ರೀ ಎಂ.ಆರ್. ಸೀತಾರಾಂ:–** ಈಗ ಅವರು ಕನ್ನಡದ ಬಗ್ಗೆ ಮಾತನಾಡುತ್ತಿದ್ದಾರೆ ನಂತರ ಇನ್ನೊಂದು ವಿಷಯದ ಬಗ್ಗೆ ಮಾತನಾಡುತ್ತಾರೆ.

**ಶ್ರೀ ಜಗ್ಗೇಶ್:–** ಇದೇನು ಬೇರೆ ವಿಷಯವಲ್ಲ. ಇದು ಕರ್ನಾಟಕಕ್ಕೆ ಸೇರಿರುವಂತಹ ವಿಷಯ ಸ್ವಾಮಿ ಇದು.

**(ಗೊಂದಲ)**

**ಸಭಾಪತಿಯವರು:–** ಆಯಿತು ಮುಗಿಸಿ. ಮಾನ್ಯ ಉಗ್ರಪ್ಪನವರೆ, ತಾವು ಮುಂದುವರೆಸಿ, ಅದಕ್ಕೇನು ಚರ್ಚೆ ಬೇಡ. ಈ ಬಿಲ್ ಬೇಕೋ ಬೇಡವೋ ಎನ್ನುವುದರ ಬಗ್ಗೆ ಮಾತ್ರ ಹೇಳಿಬಿಡಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಬೆಂಗಳೂರಿನ ಅಭಿವೃದ್ಧಿಗೆ ಕಾಂಗ್ರೆಸ್ ಸರ್ಕಾರ ಏನೆಲ್ಲಾ ಒತ್ತು ಕೊಡುತ್ತಾ ಬಂತು. ಸನ್ಮಾನ್ಯ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಕಳೆದ ವರ್ಷ ರಸ್ತೆ ಅಭಿವೃದ್ಧಿಗೋಸ್ಕರ ಬಿಬಿಎಂಪಿಗೆ 300 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಹೊಸ ಪ್ರದೇಶಗಳಾದಂತಹ 110 ಹಳ್ಳಿಗಳಿಗೆ ಮೂಲಭೂತ ಸೌಕರ್ಯಗಳಿಗೋಸ್ಕರ 250 ಕೋಟಿ ರೂಪಾಯಿಗಳನ್ನು ಕೊಟ್ಟಿರುವಂಥದ್ದನ್ನು ನೋಡಬಹುದು. ಅದೇ ರೀತಿ ನಗರೋತ್ಥಾನದಲ್ಲಿ ಕಳೆದ ವರ್ಷ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಈ ವರ್ಷ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿರುವಂತಹ ಕೀರ್ತಿ ಏನಾದರು ಇದ್ದರೆ ಅದು ಮಾನ್ಯ ಸಿದ್ದರಾಮಯ್ಯನವರಿಗೆ ಹೋಗಬೇಕಾಗುತ್ತದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ಪುನಃ ಈಗ ಬಜೆಟ್ ಮೇಲೆ ಭಾಷಣ ಆಗುತ್ತಿದೆ. ನೀವು ವಿಧೇಯಕದ ಬಗ್ಗೆ ಮಾತನಾಡಿ ಎಂದು ಹೇಳಿದ್ದೀರಿ, ಅದು ಬಿಟ್ಟು ಚುನಾವಣಾ ಪ್ರಚಾರದ ರೀತಿಯಲ್ಲಿ ಭಾಷಣ ಮಾಡಿದರೆ ಹೇಗೆ?

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, it is the inherent power of the Member to speak. ಹೀಗೇನೇ ಮಾತನಾಡಬೇಕೆಂದು ನಿರ್ದೇಶನ ಕೊಡುವಂತಹ ಅಧಿಕಾರ ಇವರಿಗೆ ಇದೆಯೇ? You cannot direct him to speak as per your whims and fancies.

**(ಗೊಂದಲ)**

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಬಿಜೆಪಿ ಶಾಸಕರು ಇರುವ ಕಡೆ ನೀವು ಸರಿಯಾಗಿ ಹಣವನ್ನೇ ಬಿಡುಗಡೆ ಮಾಡುವುದಿಲ್ಲ ಅದನ್ನು ಹೇಳಬೇಕಲ್ಲವೆ?

**ಶ್ರೀ ಹೆಚ್.ಎಂ. ರೇವಣ್ಣ:–** ರಾತ್ರಿ ಸಮಯದಲ್ಲಿ ಬಜೆಟ್ ಮಾಡುವುದಕ್ಕೆ ಹೋಗಿದ್ದಿರಲ್ಲ ಅದನ್ನು ಸಹ ಹೇಳಬೇಕಲ್ಲವೆ?

**ಸಭಾಪತಿಯವರು:–** ಆಯಿತು ಕುಳಿತುಕೊಳ್ಳಿ. ಮಾನ್ಯ ಉಗ್ರಪ್ಪನವರೆ, ನೀವು ಇನ್ನೂ ಎಷ್ಟು ಸಮಯ ಮಾತನಾಡುತ್ತೀರಿ?

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಇನ್ನು 30 ನಿಮಿಷ ಮಾತನಾಡುತ್ತೇನೆ.

**ಸಭಾಪತಿಯವರು:–** ಹಾಗಾದರೆ ಊಟಕ್ಕೆ ಏನು ಮಾಡೋಣ?

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ, 10 ನಿಮಿಷ ಆಗಲಿ, 5 ನಿಮಿಷ ಆಗಲಿ ಅವರಿಗೆ ಕೊಡಿ. ಆದರೆ ಸರಿಯಾದ ಸಮಯಕ್ಕೆ ಊಟವಾದರೂ ಮಾಡೋಣ.

**ಸಭಾಪತಿಯವರು:–** ಅದಕ್ಕೆ ಅವರು ಒಪ್ಪಬೇಕಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಮುಗಿಸಿಬಿಡಿ.

**ಸಭಾಪತಿಯವರು:–** ಹೇಗೆ ಮುಗಿಸುವುದಕ್ಕೆ ಆಗುತ್ತದೆ? ಇನ್ನು ಸುಮಾರು 15 ಜನರು ಸುಮಾರು 20 –20 ನಿಮಿಷ ಮಾತನಾಡುವವರು ಇದ್ದಾರೆ. ನಾಳೆ ನಾಡಿದ್ದವರೆಗೂ ಮುಗಿಸೋಣ. ಎಲ್ಲರೂ ಚೀಟಿ ಕಳಿಸಿದ್ದಾರೆ ಅವರೆಲ್ಲರೂ ಮಾತನಾಡಬೇಕಲ್ಲವೆ?

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಇನ್ನು 15–20 ನಿಮಿಷದಲ್ಲಿ ಮುಗಿಸಿಬಿಡುತ್ತೇನೆ.

**ಸಭಾಪತಿಯವರು:–** ಈಗ ಸಮಯ 2 ಗಂಟೆಯಾಗಿದೆ. ನೀವೇನಾದರು 15 ನಿಮಿಷದೊಳಗೆ ಮುಗಿಸುತ್ತೇನೆಂದರೆ ನಾನು ಊಟಕ್ಕೆ adjourn ಮಾಡುತ್ತೇನೆ.

**(2–00 ಗಂಟೆ)**

**ಸಭಾಪತಿಯವರು:–** ಸದನದ ನಿಯಂತ್ರಣ ನನಗೆ ಬಿಟ್ಟರೆ ನಾನು ಮಾಡಿಸಿ ಕೊಡುತ್ತೇನೆ. ಇನ್ನು 15–20 ಜನರು ಮಾತನಾಡುವವರಿದ್ದಾರೆ, ಇನ್ನು 15 ದಿವಸಗಳ ಕಾಲ ಅಧಿವೇಶನ ನಡೆಸಬೇಕಾಗುತ್ತದೆ.

**ಶ್ರೀ ಕೆ.ಬಿ. ಶಾಣಪ್ಪ:–** ಅದು ನಿಮಗೆ ಬಿಟ್ಟದ್ದು.,You are the supreme authority of this House.

**ಸಭಾಪತಿಯವರು:–** 10 ನಿಮಿಷ, 15 ನಿಮಿಷ, ಅರ್ಧ ಗಂಟೆ ಕಾಲಾವಕಾಶ ಕೊಡಿ ಎಂದು ಕೇಳಿಕೊಂಡಿದ್ದಾರೆ. ಇನ್ನು 16 ಜನ ಮಾತನಾಡುವವರಿದ್ದಾರೆ.

**ಶ್ರೀ ಕೆ.ಬಿ. ಶಾಣಪ್ಪ:–** There should be some end for it. There will be certainty for any sitting. ಆದರೆ ಇಲ್ಲಿ uncertainty ಇದೆ.

**ಸಭಾಪತಿಯವರು:–** ಮಾತನಾಡುವವರಿಗೆ ಸಮಯದ ನಿಗಧಿಯೇ ಇಲ್ಲ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಗಳೇ, ಈಗ ನಗರೋತ್ಥಾನಕ್ಕೆ ಕಳೆದ ವರ್ಷ 1000 ಕೋಟಿ ರೂ.ಗಳನ್ನು ಈ ವರ್ಷ 1000 ಕೋಟಿ ರೂಪಾಯಿಗಳನ್ನು ಮತ್ತು Solid Waste Management 250 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದನ್ನು ನಾವು ನೋಡಬಹುದು. ಇಷ್ಟೆಲ್ಲಾ ಆದರೂ ಸಹ ಭಾರತೀಯ ಜನತಾ ಪಕ್ಷದ ಆಡಳಿತದಲ್ಲಿದ್ದ ಬಿಬಿಎಂಪಿ ಇದನ್ನೆಲ್ಲ ಬಳಕೆ ಮಾಡಿಕೊಂಡು ಬೆಂಗಳೂರು ನಗರವನ್ನು ಅಭಿವೃದ್ಧಿ ಮಾಡುವ ಹಿನ್ನೆಲೆಯಲ್ಲಿ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡದೇ ಬೆಂಗಳೂರನ್ನು ಅಭಿವೃದ್ಧಿಯ ಪಥದ ಕಡೆಗೆ ಕೊಂಡೊಯ್ಯುವುದಲ್ಲದೇ ಬೆಂಗಳೂರನ್ನು ಯಾವ ಸ್ಥಿತಿಗೆ ತಂದಿದ್ದರು ಎಂದರೆ ನಗರಪಾಲಿಕೆಯ ಸ್ವತ್ತುಗಳ ಮೇಲೆ 3580 ಕೋಟಿ ರೂಪಾಯಿಗಳ ಮೇಲೆ ಸಾಲವನ್ನು ಮಾಡಿ, ಕೃಷ್ಣರಾಜ ಮಾರುಕಟ್ಟೆಯನ್ನು ಅಡ ಇಟ್ಟಿದ್ದಾರೆ. ಮಲ್ಲೇಶ್ವರಂ ಮಾರುಕಟ್ಟೆಯನ್ನು ಅಡ ಇಟ್ಟಿದ್ದಾರೆ. ಜಾನ್‌ಸನ್ ಮಾರುಕಟ್ಟೆಯನ್ನು ಅಡ ಇಟ್ಟಿದ್ದಾರೆ. ದಾಸಪ್ಪ ಕಟ್ಟಡವನ್ನು ಅಡ ಇಟ್ಟಿದ್ದಾರೆ. ಜಯನಗರದ ಕಾಂಪ್ಲೆಕ್ಸ್ ಅನ್ನು ಕೂಡ ಇದೇ ರೀತಿ ಮಾಡಿದ್ದಾರೆ. ಆಗ ಏಕೆ ಕೆಂಪೇಗೌಡರಿಗೆ ಅಪಮಾನ ಆಗುತ್ತಿದೆ ಎಂದು ಇದರ ವಿರುದ್ಧ ಧನಿಯನ್ನು ಎತ್ತಲಿಲ್ಲ.

**ಶ್ರೀ ಆರ್.ವಿ. ವೆಂಕಟೇಶ್:–** ಇವರು ಮಾಡಿದ ಸಾಲಕ್ಕೆ ಬಡ್ಡಿ ಕಟ್ಟಲಿಕ್ಕೆ ಇದನ್ನೆಲ್ಲ ಮಾಡಲಾಗುತ್ತಿದೆ. ಹಿಂದಿನ ಸರ್ಕಾರ ಮಾಡಿದ 9000 ಕೋಟಿ ಸಾಲವನ್ನು ನಾವು ನಿಭಾಯಿಸುತ್ತಿದ್ದೇವೆ.

**(ಗೊಂದಲ)**

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಗಳೇ, ಎಷ್ಟರಮಟ್ಟಿಗೆ ಇವರು ಇದನ್ನು ಮಾಡುತ್ತಾರೆಂದರೆ ನರ್ಮ್ ಯೋಜನೆಯಲ್ಲಿ ಖರೀದಿಸುವ Marco polo ಬಸ್‌ಗಳು 8 ತಿಂಗಳುಗಳಲ್ಲಿಯೇ ಶೆಡ್‌ಗೆ ಹೋಗುತ್ತವೆ. ಇದು ಯಾರ ಅವಧಿಯಲ್ಲಿ ನಡೆದಿದೆ.

**ಸಭಾಪತಿಯವರು:–** ಇಲ್ಲಿ ಏನು ಚರ್ಚೆ ನಡೆಯುತ್ತಿದೆ, ವಿಭಜನೆ ಆಗಬೇಕೋ ಅಥವಾ ಬೇಡವೋ ಎನ್ನುವುದನ್ನು ಮಾತ್ರ ಹೇಳಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಗಳೇ, ನಾನು ಹೇಳುವುದೇನೆಂದರೆ ರಾಜೇಂದ್ರ ಕಠಾರಿಯವರ ವರದಿಯ ಪ್ರಕಾರ ಬಿಬಿಎಂಪಿಯಲ್ಲಿ ಕಾನೂನಿಯ ರೀತ್ಯಾ ಆಡಳಿತ ನಡೆಯುತ್ತಾ ಇಲ್ಲ. ಕಾನೂನಿನ ರೀತ್ಯಾ ಸಂಪನ್ಮೂಲಗಳ ಬಳಕೆ ಆಗುತ್ತಿಲ್ಲ. ಭ್ರಷ್ಟಾಚಾರದ ಗಂಗೋತ್ರಿ ನಡೆದಿದೆ. ನಾನು ವಿರೋಧ ಪಕ್ಷದ ನಾಯಕನಾಗಿದ್ದ ಸಂದರ್ಭದಲ್ಲಿ ಮಧ್ಯ ರಾತ್ರಿ 12 ಗಂಟೆಯಲ್ಲಿ ನಾವು ಕಾರ್ಪೊರೇಷನ್‌ನ ಪ್ರಧಾನ ಕಚೇರಿಗೆ ದಾಳಿಯನ್ನು ಮಾಡಿದ್ದೆವು. ಅಲ್ಲಿ ರಾತ್ರಿ Work Code ಕೆಲಸಗಳನ್ನು ಲ್ಯಾಪ್ಸ್ ಮಾಡಿದ್ದರು. ಇದರ ಜೊತೆಗೆ ಸದನದಲ್ಲಿ ಅದರ ಬಗ್ಗೆ ಚರ್ಚೆ ನಡೆಸಿ, ಸಿಐಡಿ ತನಿಖೆಗೆ ಆದೇಶ ನೀಡಲಾಗಿತ್ತು. ಅದಕ್ಕೆ ಕೋರ್ಟ್‌ಗೆ ಹೋಗಿ ಸ್ಟೇ ತೆಗೆದುಕೊಂಡಿದ್ದರೂ ಸಹ ಅದನ್ನು ವೆಕೇಟ್ ಮಾಡಿಸುವುದಕ್ಕೆ ಬಿಬಿಎಂಪಿಯವರು ಪ್ರಯತ್ನ ನಡೆಸಿಲ್ಲ. ಈ ರೀತಿಯ ಪ್ರಯತ್ನಗಳನ್ನು ಮಾಡದೇ ಇರುವ ಹಿನ್ನೆಲೆಯಲ್ಲಿ ರಾಜೇಂದ್ರ ಕಠಾರಿಯರವರು ಸ್ಪಷ್ಟವಾಗಿ ಒಂದು ವರದಿಯನ್ನು ನೀಡಿದ್ದಾರೆ.

**(ಗೊಂದಲ)**

**ಸಭಾಪತಿಯವರು:–** ನೀವು ಮಧ್ಯೆ ಬಾಯಿ ಹಾಕದಿದ್ದಲ್ಲಿ ಅವರು ಬೇಗ ಮುಗಿಸುತ್ತಾರೆ. ಇಲ್ಲದಿದ್ದರೆ ಅವರು 5 ಗಂಟೆ ತನಕ ಅವರೇ ಮಾತನಾಡುತ್ತಾರೆ, ನಿಮ್ಮ ಆಸೆ ಅದೇ ಆಗಿದ್ದಲ್ಲಿ ನಡೆಸಿ. ಸುಮ್ಮನಿರಿ.

**ಶ್ರೀ ನಾರಾಯಣ ಸಾ. ಬಾಂಡಗೆ:–** ತಾವೇ ಹೇಳಿದ್ದೀರಿ, ಬಿಲ್ ಬಗ್ಗೆ ಮಾತ್ರ ಮಾತನಾಡಬೇಕೆಂದು, ಆದರೆ ಅವರು ಏನು ಬೇಕಾದರೂ ಮಾತನಾಡಬಹುದೇ?

**(ಗೊಂದಲ)**

**ಶ್ರೀ ಆರ್.ವಿ. ವೆಂಕಟೇಶ್:–** ನೀವು ಏನು ಬೇಕಾದರೂ ಮಾತನಾಡಬಹುದು, ಅವರು ಮಾತನಾಡಬಾರದೇ?

**ಶ್ರೀ ಎಸ್.ಆರ್. ಪಾಟೀಲ್:–** ಸೋಮಣ್ಣನವರು ಮೂರುವರೆ ಗಂಟೆಗಳ ಕಾಲ ಮಾತನಾಡಿದ್ದಾರೆ. ಆಗ ಅವರು ಬಿಲ್‌ಗೆ ಸೀಮಿತವಾಗಿಯೇ ಮಾತನಾಡಿದ್ದಾರಾ?

**(ಗೊಂದಲ)**

**ಸಭಾಪತಿಯವರು:–** ಎಲ್ಲರೂ ಸುಮ್ಮನೆ ಇರಿ, ಸುಮ್ಮನಿರುವುದಕ್ಕೆ ನಿಮಗೆ ಏನು ಕೊಡಬೇಕು?

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಗಳೇ, ಕಠಾರಿಯ ಅವರ ವರದಿಯ ಪ್ರಕಾರ ಒಂದು ಕಡೆ ಬಿಬಿಎಂಪಿ ಯಥಾಸ್ಥಿತಿಯಲ್ಲಿದ್ದರೆ ಅದನ್ನು ಉತ್ತಮ ಸ್ಥಿತಿಯಲ್ಲಿಡುವುದಕ್ಕೆ ಆಗುವುದಿಲ್ಲವೆಂದಿದೆ. ಬಿ.ಎಸ್. ಪಾಟೀಲರ ಎರಡು ವರದಿಗಳ ಹಿನ್ನೆಲೆಯಲ್ಲಿ ಬಿಬಿಎಂಪಿ ಅನ್ನು 2–3 ಭಾಗಗಳನ್ನಾಗಿ ಮಾಡಬೇಕೆಂದು ಅವರು ಶಿಫಾರಸ್ಸು ಮಾಡಿದ್ದಾರೆ. ಬಹಳಷ್ಟು ಜನರು ಇದನ್ನು ವಿಭಜನೆ ಮಾಡಬೇಕೆಂದು ಮಾತನಾಡಿದ್ದಾರೆ. ಈ ಪ್ರಕ್ರಿಯೆ ಹೇಗೆ ಪ್ರಾರಂಭ ಆಗಿದೆ ಎಂದರೆ ನಮ್ಮ ರಾಜ್ಯಗಳಲ್ಲಿ ಜಿಲ್ಲೆಗಳನ್ನು ವಿಭಜನೆ ಮಾಡಲಾಯಿತು. ಮೈಸೂರು ಜಿಲ್ಲೆಯಿಂದ ಚಾಮರಾಜನಗರವನ್ನು ವಿಭಜನೆ ಮಾಡಲಾಯಿತು. ಮಂಗಳೂರಿನಿಂದ ಉಡುಪಿ ಜಿಲ್ಲೆ ಆಯಿತು. ಧಾರವಾಡ ಗುಲ್ಬರ್ಗಾ ವಿಭಜನೆ ಆಯಿತು. ರಾಯಚೂರು, ಕೊಪ್ಪಳ, ಕೋಲಾರ ರಾಮನಗರ ಜಿಲ್ಲೆಗಳಾಗಿವೆ, ಇದರ ಜೊತೆಗೆ 45–48 ಹೊಸ ತಾಲ್ಲೂಕುಗಳನ್ನು ಮಾಡಬೇಕೆಂದಿದೆ. ಉತ್ತಮ ಆಡಳಿತವನ್ನು ನಡೆಸುವುದಕ್ಕೆ ಭ್ರಷ್ಟಾಚಾರವನ್ನು ತಡೆಗಟ್ಟುವುದಕ್ಕೆ ಅಧಿಕಾರವನ್ನು ವಿಕೇಂದ್ರೀಕರಣ ಮಾಡುವ ದೃಷ್ಟಿಯಿಂದ ವಿಭಜನೆ ಅಗತ್ಯವಾಗಿದೆ. ಇನ್ನು ರಾಷ್ಟ್ರ ಮಟ್ಟದಲ್ಲಿ ನೋಡಿದರೆ ಉತ್ತರಪ್ರದೇಶವನ್ನು ಉತ್ತರಾಂಚಲ್ ಮಾಡಿದ್ದಾರೆ., ಬಿಹಾರ್‌ನಲ್ಲಿ ರಾಂಚಿಯನ್ನು ಮತ್ತೊಂದು ಕ್ಯಾಪಿಟಲ್ ಮಾಡಿದ್ದಾರೆ, ಜಾರ್ಖಂಡ್ ಮಾಡಿದ್ದಾರೆ. ಇದನ್ನೆಲ್ಲ ಭಾರತೀಯ ಜನತಾ ಪಕ್ಷದ ಸರ್ಕಾರ ಏಕೆ ಮಾಡಿತು ಎಂದರೆ ಇದರಲ್ಲಿ ಒಂದು ಸದುದ್ದೇಶವಿತ್ತು. ಆಡಳಿತವನ್ನು ನಿಯಂತ್ರಣ ಮಾಡತಕ್ಕ ದೃಷ್ಟಿಯಿಂದ ಅಭಿವೃದ್ಧಿಯನ್ನು ಮಾಡತಕ್ಕ ದೃಷ್ಟಿಯಿಂದ ಇದನ್ನು ಮಾಡಬೇಕಾಗುತ್ತದೆ. ಸ್ವಾತಂತ್ರ್ಯ ಬಂದಾಗ ನಮ್ಮ ದೇಶದ ಜನಸಂಖ್ಯೆ 32 ಕೋಟಿ ಇದ್ದದ್ದು ಇಂದು 130 ಕೋಟಿ ಆಗಿದೆ. ಅದರ ಹಿನ್ನಲೆಯಲ್ಲಿ ಇವತ್ತು ಕೆಲವು ರಾಜ್ಯಗಳು ವಿಭಜನೆಗೊಂಡಿವೆ. ಬೆಂಗಳೂರು ನಗರದಲ್ಲಿ 1991ರಲ್ಲಿ 41,30,000 ಜನಸಂಖ್ಯೆ ಇತ್ತು., ಇವತ್ತು ಸುಮಾರು 1 ಕೋಟಿಯಷ್ಟು ಜನಸಂಖ್ಯೆ ಇಲ್ಲಿದೆ. ಆದ್ದರಿಂದ ಸರ್ಕಾರ ಸದುದ್ದೇಶದಿಂದ 3 ಕಾರ್ಪೊರೇಷನ್‌ಗಳನ್ನು ಮಾಡಿದಲ್ಲಿ ಅನುಕೂಲವಾಗುತ್ತದೆ.

ಮುಂಬೈ ನಗರದಲ್ಲಿ 437 ಚದರ ಕಿ.ಮೀ ವ್ಯಾಪ್ತಿಗೆ ಮುಂಬೈ ಮಹಾನಗರಪಾಲಿಕೆ ಇದೆ. ಅದೇ ಮುಂಬೈ ಉಪನಗರ 446 ಚದರ ಕಿ.ಮೀ ವ್ಯಾಪ್ತಿಯನ್ನು ಹೊಂದಿದೆ. ದೆಹಲಿಯಲ್ಲಿ ಉತ್ತರ, ದಕ್ಷಿಣ ಮತ್ತು ಪೂರ್ವ ನಗರಪಾಲಿಕೆಗಳಿವೆ. ಆ ದೃಷ್ಟಿಯಿಂದ ನನಗೆ ಅನಿಸುವುದೇನೆಂದರೆ ಈ ರೀತಿ ಡಿವೈಡ್ ಮಾಡುವುದರಿಂದ ಉತ್ತಮ ಆಡಳಿತವನ್ನು ನೀಡಲಿಕ್ಕೆ ಸಾಧ್ಯವಿದೆ. ಭ್ರಷ್ಟಾಚಾರವನ್ನು ತಡೆಯಲಿಕ್ಕೆ ಸಾಧ್ಯವಿದೆ. ಇವು ಎಲ್ಲವುಗಳಿಗೆ ಪೂರಕವಾಗುವ ಹಿನ್ನೆಲೆಯಲ್ಲಿ ಸರ್ಕಾರಚಿಂತನೆ ಮಾಡಿರುವುದು ಸೂಕ್ತವಿದೆ. ಇದರಿಂದ ಬ್ರಾಂಡ್ ನೇಮ್‌ಗೂ ತೊಂದರೆಯಾಗುವುದಿಲ್ಲ, ಕೆಂಪೇಗೌಡರ ಹೆಸರಿಗೂ ಯಾವುದೇ ತೊಂದರೆಯಾಗುವುದಿಲ್ಲ. ಇಲ್ಲಿ ಸೆಲೆಕ್ಟ್‌ಕಮಿಟಿ ಬಗ್ಗೆ ಮಾತನಾಡಲಾಯಿತು. ಅದರ ಬಗ್ಗೆ ಸಂದರ್ಭ ಬಂದಾಗ ನಾನು ಮಾತನಾಡುತ್ತೇನೆ. ದಯಮಾಡಿ ನಾನು ನನ್ನ ಎಲ್ಲ ಮಿತ್ರರಲ್ಲಿ ವಿನಂತಿ ಮಾಡಿಕೊಳ್ಳುವುದು, ಪ್ರಾಯೋಗಿಕವಾಗಿ 110 ಹಳ್ಳಿಗಳನ್ನು 8–9 ಮುನ್ಸಿಪಾಲಿಟಿಗಳನ್ನು ಸೇರಿಸಿದಾಗ ಏನು ಇತ್ತು, ಹಾಗೆ ಇದನ್ನು ಇವತ್ತು ಸರ್ಕಾರ ಸದ್ದುದ್ದೇಶದಿಂದ ತಂದಿರುವುದು. ತಾವು ಹೇಳುವ ಹಾಗೆ ಮುಂದೆ ಬರುವಂತಹ ದಿನಗಳಲ್ಲಿ ಅಭಿವೃದ್ಧಿಯಾಗಲು ಸಾಧ್ಯತೆ ಇಲ್ಲ ಎನ್ನುವುದಾದರೆ ಅವತ್ತಿನ ಸರ್ಕಾರ ಅದರ ಬಗ್ಗೆ ಚಿಂತನೆ ಮಾಡಲು ಅವಕಾಶವಿರುತ್ತದೆ. ಆದ್ದರಿಂದ ಈ ವಿಧೇಯಕಕ್ಕೆ ಎಲ್ಲರೂ ಬೆಂಬಲ ಕೊಡಬೇಕೆಂದು ಕೇಳಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ. ನಮಸ್ಕಾರಗಳು.

**ಸಭಾಪತಿಯವರು:–** ಒಂದು ವಿಷಯವನ್ನು ಸಭೆಯ ಮುಂದೆ ಹೇಳಲು ಇಷ್ಟಪಡುತ್ತೇನೆ. ಭೋಜನದ ನಂತರ ಸಭೆಎಷ್ಟುಗಂಟೆಗೆ ಸೇರುತ್ತದೆಎನ್ನುವುದನ್ನು ಹೇಳುತ್ತೇನೆ. ಈ ಚರ್ಚೆಎಷ್ಟೊತ್ತಿಗೆ ಸೇರಿದರು4ಗಂಟೆಗೆ ಮುಗಿಯುತ್ತದೆ. 4 ಗಂಟೆಗೆ ಸರಿಯಾಗಿ ಈ ಬಿಲ್ ಬಗ್ಗೆ ನಡೆದಚರ್ಚೆಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರಕೊಡುತ್ತಾರೆ. ಮುಂದೆ ಮತಕ್ಕೆ ಹಾಕಿ ಅದನ್ನು ಒಪ್ಪಿಕೊಳ್ಳುವುದು ಬಿಡುವುದು ಅದು ಸಭೆಗೆ ಬಿಟ್ಟಿದು. 3–15ಕ್ಕೆ ಮತ್ತೆ ಸಭೆ ಸೇರಿದ ಮೇಲೆ 4–00 ಗಂಟೆಯವರೆಗೆ ಇನ್ನು ಎರಡು ಮೂರು ಸದಸ್ಯರಿಗೆ ಮಾತನಾಡಲು ಅವಕಾಶ ಕೊಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳೇ ಪ್ರಪೋಸಲ್ ಹೇಳಿದ್ದಾರೆ.

**ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಗಳೆ, ಈ ಸದನದಲ್ಲಿ ಈ ವಿಷಯ ಮುಗಿದ ಮೇಲೆ ಕೆಳಮನೆಗೆ ಹೋಗಬೇಕಾಗುತ್ತದೆ.

**ಸಭಾಪತಿಯವರು:–** ನೀವು ಹೇಗೆ ಹೇಳುತ್ತೀರಿ ಹಾಗೆ.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಗಳೆ, ಇದರ ಬಗ್ಗೆ ಬಿಜೆಪಿಯವರು, ಜೆಡಿಎಸ್‌ನವರು ಸಾಕಷ್ಟು ಮಾತನಾಡಿದ್ದಾರೆ. ಶರವಣ ಮಾತನಾಡಿದ್ದಾರೆ, ಪಟೇಲ್‌ಶಿವರಾಂರವರೆ, ನೀವು ಏಕೆ ಬೆಂಗಳೂರಿನ ತಂಟೆಗೆ ಬರುತ್ತೀರಿ ಬಿಡಿ ಬೇಡ.

**ಸಭಾಪತಿಯವರು:–** ಚರ್ಚೆ ಮುಗಿದಿದೆ ಎಂದು ನಾನು ಹೇಳಲೇ? ಮುಖ್ಯಮಂತ್ರಿಗಳೆ ಭೋಜನ ವಿರಾಮದ ನಂತರ ತಾವು ಉತ್ತರ ಕೊಡುತ್ತೀರಾ?

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಗಳೆ, 3–15ಕ್ಕೆ ಭೋಜನ ವಿರಾಮದ ನಂತರ ಸಭೆ ಸೇರಿದಾಗ ಉತ್ತರವನ್ನು ಪ್ರಾರಂಭ ಮಾಡಿ ಮುಗಿಸಿಬಿಡೋಣ. ಕೆಳಮನೆಯವರಿಗೆ ಏನೂ ಕಾರ್ಯಕ್ರಮವಿಲ್ಲ, ನಮಗೋಸ್ಕರ ಅವರು ಕಾಯುತ್ತಿದ್ದಾರೆ.

**ಸಭಾಪತಿಯವರು:–** ವಿಧೇಯಕದ ಮೇಲಿನ ಚರ್ಚೆ ಮುಗಿದಿದೆ. ಭೋಜನ ವಿರಾಮದ ನಂತರ ಸರ್ಕಾರ ಉತ್ತರಕೊಡುತ್ತದೆ. ಮುಂದೆ ಕಾರ್ಯವಿಧಾನ ಹೇಗೆಇರುತ್ತದೆ ಹಾಗೆ ನಡೆಸಿಕೊಂಡು ಹೋಗಲಾಗುತ್ತದೆ. ಈಗ ಭೋಜನಕ್ಕಾಗಿ ಸದನವನ್ನು ಮಧ್ಯಾಹ್ನ 3–15ಗಂಟೆಯವರೆಗೆ ಮುಂದೂಡಲಾಗಿದೆ.

**(ಮಧ್ಯಾಹ್ನ 2–14 ಗಂಟೆಗೆ ಮುಂದೂಡಲ್ಪಟ್ಟ ಸದನವು ಮತ್ತೆ ಭೋಜನ ವಿರಾಮಕ್ಕಾಗಿ 3 ಗಂಟೆ 35 ನಿಮಿಷಗಳಿಗೆ ಸಮಾವೇಶಗೊಂಡಿತು. ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಸಭಾಪತಿಯವರು:–** ಈಗ ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ವಿಧೇಯಕದ ಮೇಲೆ ನಡೆದ ಚರ್ಚೆಗೆ ಸರ್ಕಾರದಿಂದ ಉತ್ತರ.

**ಶ್ರೀಮತಿ ವಿಮಲಾಗೌಡ:–** ಸನ್ಮಾನ್ಯ ಸಭಾಪತಿಯವರೇ, ನಾವು ಒಂದಿಬ್ಬರು ಸದಸ್ಯರು ಈ ವಿಚಾರದ ಮೇಲೆ ಮಾತನಾಡುವವರಿದ್ದೇವೆ.

**ಸಭಾಪತಿಯವರು:–** ಈಗ ಮಾತನಾಡಲು ಯಾರಿಗೂ ಅವಕಾಶವಿಲ್ಲವೆಂದು ನಾನು ಮೊದಲೇ ಹೇಳಿದ್ದೇನೆ. ಕರ್ನಾಟಕ ನಗರಪಾಲಿಕೆಗಳ (ತಿದ್ದುಪಡಿ) ವಿಧೇಯಕ, 2015ರ ಮೇಲಿನ ಚರ್ಚೆ ಮುಕ್ತಾಯವಾಗಿದೆ. ಈಗ ಸರ್ಕಾರದ ವತಿಯಿಂದ ಉತ್ತರ.

**ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಬೆಂಗಳೂರು ಮಹಾನಗರಪಾಲಿಕೆಯ ಜನಸಂಖ್ಯೆ 80 ಲಕ್ಷ ಮೀರಿರುವ ಹಿನ್ನೆಲೆಯಲ್ಲಿ ಯೋಜನೆಗಳನ್ನು ಕಾರ್ಯಗತಗೊಳಿಸುವುದು ಮತ್ತು ಮೇಲ್ವಿಚಾರಣೆ ಮಾಡುವುದು ಅತ್ಯಂತ ಕಷ್ಟಕರವಾದ ಸಂಗತಿಯಾಗಿದೆ. ಬೆಂಗಳೂರು ಮಹಾನಗರಪಾಲಿಕೆ ಸರಿಯಾಗಿ ಆಡಳಿತ ನಡೆಸಬೇಕೆನ್ನುವ ಹಿನ್ನೆಲೆಯಲ್ಲಿ ಈ ವಿಧೇಯಕವನ್ನು ತರಲಾಗಿದೆ. ಬಿ.ಬಿ.ಎಂ.ಪಿ. ವಿಭಜನೆ ಎನ್ನುವುದು ಈ ಸದನದ ಹೊರಗೆ ಬಹಳಷ್ಟು ಚಿಂತಕರ ಅಭಿಪ್ರಾಯವೂ ಆಗಿತ್ತು. ಬೆಂಗಳೂರಿನ ಅಭಿವೃದ್ಧಿ, ಬೆಂಗಳೂರಿಗೆ ಒಳ್ಳೆಯ ಆಡಳಿತವನ್ನು ನೀಡಬೇಕೆನ್ನುವ ಘನ ಉದ್ದೇಶದಿಂದ ಎಲ್ಲ ರಾಜಕೀಯ ಪಕ್ಷಗಳು ಈ ವಿಚಾರದಲ್ಲಿ ಧ್ವನಿಗೂಡಿಸಿವೆ. ಬೆಂಗಳೂರು ನಗರ ಬೃಹತ್ ಪ್ರಮಾಣದಲ್ಲಿ ಬೆಳೆದಿದೆ. ಅದರ ಆಡಳಿತವನ್ನು ನಿರ್ವಹಿಸುವುದು ಕಷ್ಟಕರವಾಗಿದೆ. ಇದರಲ್ಲಿ ಬದಲಾವಣೆಯಾಗಬೇಕು ಎನ್ನುವುದನ್ನು ಚುನಾವಣೆಗಿಂತ ಪೂರ್ವದಲ್ಲಿ ನಮ್ಮ ಚುನಾವಣೆಯ ಪ್ರಣಾಳಿಕೆಯಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ. ಬೆಂಗಳೂರು ಅಭಿವೃದ್ಧಿಯ ಬಗ್ಗೆ ನಮ್ಮೊಬ್ಬರಿಗೆ ಮಾತ್ರವಲ್ಲ, ಅವರುಗಳಿಗೂ ಕಾಳಜಿ ಇದೆ. ಅವರುಗಳು ಸಹ ಎಲ್ಲೋ ಒಂದು ಕಡೆ ಇದು ವಿಭಜನೆಯಾಗಬೇಕು, ಇದರ ನಿರ್ವಹಣೆ ಕಷ್ಟವಾಗಿದೆ ಎನ್ನುವ ರೀತಿಯಲ್ಲಿ ಅವರ ಚುನಾವಣೆಯ ಪ್ರಣಾಳಿಕೆಯಲ್ಲಿಯೂ ಸಹ ಮಾತನಾಡಿದ್ದಾರೆ. ಹಿಂದಿನ ಸರ್ಕಾರ ಅಧಿಕಾರದಲ್ಲಿದ್ದಾಗಲೂ ಈ ವಿಚಾರ ಪ್ರಸ್ತಾಪದಲ್ಲಿತ್ತು. ಹಿಂದೆ ಪ್ರಸ್ತಾಪದಲ್ಲಿದ್ದ ವಿಚಾರವನ್ನು ನಾವು ಕೈಗೆತ್ತಿಗೊಂಡಿದ್ದೇವೆ. ಈ ಮಧ್ಯೆ ಬಿ.ಬಿ.ಎಂ.ಪಿ.ಯ ಆಡಳಿತ ಯಾವ ರೀತಿಯಲ್ಲಿತ್ತು ಎನ್ನುವುದನ್ನು ನಾವೆಲ್ಲರೂ ನೋಡಿದ್ದೇವೆ. ನ್ಯಾಯಾಲಯ ಬಿ.ಬಿ.ಎಂ.ಪಿ.ಯನ್ನು ತರಾಟೆಗೆ ತೆಗೆದುಕೊಂಡಿರುವ ಹತ್ತಾರು ನಿದರ್ಶನಗಳಿವೆ. ಅದು ಕಸ ವಿಲೇವಾರಿ ಮಾಡುವ ವಿಚಾರದಲ್ಲಿರಬಹುದು ಅಥವಾ ಚರಂಡಿಗಳ ನಿರ್ಮಾಣದ ಬಗ್ಗೆ ಇರಬಹುದು ಯಾವುದೇ ವ್ಯವಸ್ಥೆ ಸರಿ ಇರಲಿಲ್ಲ. ಅದರಲ್ಲೂ ವಿಶೇಷವಾಗಿ ಮಳೆ ಬಂದ ಸಂದರ್ಭದಲ್ಲಿ ಅಧಿಕಾರಿಗಳು ಪರದಾಡುತ್ತಿರುತ್ತಾರೆ. ಜನರಿಗೆ ತೊಂದರೆಯಾಗುತ್ತಿರುವುದನ್ನು ನಾವು ಮಾಧ್ಯಮಗಳಲ್ಲಿ ನೋಡಿ ಗಾಬರಿಯಾಗುತ್ತೇವೆ. ಈ ವ್ಯವಸ್ಥೆಯನ್ನು ಸರಿಪಡಿಸುವ ಜವಾಬ್ದಾರಿ, ಅದಕ್ಕಾಗಿಯೇ ಸಂವಿಧಾನಬದ್ಧವಾಗಿ ಮತ್ತು ಕಾನೂನಾತ್ಮಕವಾಗಿ ರಚಿತಗೊಂಡಿರುವ ಬಿ.ಬಿ.ಎಂ.ಪಿ.ಯ ಮೇಲಿದೆ. ಸರ್ಕಾರ ಎಷ್ಟೋ ಸಾರಿ ಮಧ್ಯ ಪ್ರವೇಶ ಮಾಡಿ ಹಣ ಸಹಾಯ ಮಾಡಿದಾಗಲು ಸಹ ಯಾವುದೇ ಸುಧಾರಣೆಗಳಾಗಿಲ್ಲ. ಕಳೆದ 5 ವರ್ಷಗಳಲ್ಲಿ 3 ವರ್ಷಗಳ ಕಾಲ ಬಿ.ಜೆ.ಪಿ. ಪಕ್ಷ ಅಧಿಕಾರ ನಿರ್ವಹಿಸಿದ ಸಂದರ್ಭದಲ್ಲಿ, ಪ್ರತಿ ವರ್ಷವೂ ಹೆಚ್ಚು ಕಡಿಮೆ 1000 ಕೋಟಿ, 900 ಕೋಟಿ, 1100 ಕೋಟಿ ರೂಪಾಯಿಗಳನ್ನು ಬಿ.ಬಿ.ಎಂ.ಪಿ.ಗೆ ಕೊಡುತ್ತಾ ಬಂದಿದ್ದರು. ನಾವೂ ಅದೇ ಪರಿಪಾಠವನ್ನು ಮುಂದುವರಿಸಿಕೊಂಡು ಹೋಗಿ ಈ ವರ್ಷ 1129 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಈ ರೀತಿ ಹಣವನ್ನು ಕೊಟ್ಟಾಗಲೂ ಸಹ ಅದರ ಆಡಳಿತ ನಿರ್ವಹಣೆ ಎಷ್ಟರಮಟ್ಟಿಗೆ ಆಯಿತು ಎನ್ನುವುದರ ಬಗ್ಗೆ ಹೇಳುವುದಾದರೆ, ಬಿ.ಬಿ.ಎಂ.ಪಿ.ಯ ಅನೇಕ

ಕಡತಗಳು ಮಾಯವಾಗಿವೆ ಮತ್ತು ಸಾಕಷ್ಟು ಅವ್ಯವಹಾರಗಳಾಗಿವೆ ಎನ್ನುವ ಆರೋಪಗಳು ಬಂದವು. ಆ ಹಿನ್ನೆಲೆಯಲ್ಲಿ ಈ ವಿಚಾರಗಳನ್ನು ನಮ್ಮ ಸರ್ಕಾರ ಸಿ.ಐ.ಡಿ.ಗೆ ರೆಫರ್ ಮಾಡಿದೆ ಮತ್ತು ತಜ್ಞ ಅಧಿಕಾರಿಗಳ ಸಮಿತಿಯನ್ನು ರಚನೆ ಮಾಡಿ, ಆ ಸಮಿತಿಯಿಂದ ವಾಸ್ತವಾಂಶಗಳನ್ನು ಪಡೆಯಲಾಗಿದೆ. ಆ ಸಮಿತಿಯು ನೀಡಿರುವ ವಾಸ್ತವಾಂಶಗಳೇನು ಎನ್ನುವುದು ಪತ್ರಿಕೆಗಳಲ್ಲಿ ಬಂದಿದೆ, ಅದನ್ನು ಮಾನ್ಯ ಸದಸ್ಯರುಗಳು ಓದಿದ್ದಾರೆಂದು ನಾನು ಭಾವಿಸಿದ್ದೇನೆ. ಆ ವಾಸ್ತವಾಂಶಗಳನ್ನು ಆಧರಿಸಿ ಬಿ.ಬಿ.ಎಂ.ಪಿ.ಯ ಆಡಳಿತ ನಿರ್ವಹಣೆ ಕಷ್ಟ ಎನ್ನುವುದು ಮನವರಿಕೆ ಆಯಿತು. ಸುಮಾರು 9000 ಕೋಟಿ ರೂಪಾಯಿಗಳಿಗೂ ಹೆಚ್ಚು ಪೆಂಡಿಂಗ್ ಬಿಲ್‌ಗಳು ಇವೆ. ಒಂದು ಕಡೆ ಸರ್ಕಾರ ಆಯವ್ಯಯದಲ್ಲಿ ಹಣ ನೀಡಿದೆ ಮತ್ತೊಂದು ಕಡೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಇಷ್ಟೆಲ್ಲ ಆದರೂ ಸಹ ಬಿಲ್‌ಗಳು ಪೆಂಡಿಂಗ್‌ನಲ್ಲಿವೆ. ಇವೆಲ್ಲವುಗಳನ್ನು ನೋಡಿ ಇವುಗಳಿಗೆ ಒಂದು ರೀತಿಯಲ್ಲಿ ಮಂಗಳ ಹಾಡಬೇಕೆನ್ನುವ ದೃಷ್ಟಿಯಿಂದ ಸರ್ಕಾರ ಒಂದು ನಿರ್ಧಾರವನ್ನು ತೆಗೆದುಕೊಂಡಿತು. ಸರ್ಕಾರ ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕೆನ್ನುವ ದೃಷ್ಟಿಯಿಂದ ಅದನ್ನು ವಿಸರ್ಜನೆ ಮಾಡುವಂಥ ತೀರ್ಮಾನವನ್ನು ಮಾಡುತ್ತಾರೆ. ವಿಸರ್ಜನೆಯಾದ ನಂತರ ಅದು ನ್ಯಾಯಾಲಯದಲ್ಲಿಯೂ ಸಹ ಪ್ರಶ್ನಿಸಲ್ಪಟ್ಟಿತು. ಚುನಾವಣೆಯನ್ನು ನಡೆಸಬೇಕೆಂದು ಏಕ ಪೀಠ ಕೊಟ್ಟಂಥ ತೀರ್ಪಿಗೆ, ಈಗಾಗಲೇ Division Bench ಕೊಟ್ಟಂಥ ತೀರ್ಪು ಅದು ಸ್ವಲ್ಪಮಟ್ಟಿಗೆ ಪೂರಕವಾಗಿದೆ. ಎಲ್ಲೋ ಒಂದು ಕಡೆಗೆ ಆಡಳಿತದಲ್ಲಿ ಸುಧಾರಣೆಯನ್ನು ತರಬೇಕು ಎನ್ನತಕ್ಕಂಥಾದ್ದಕ್ಕೆ ನ್ಯಾಯಾಂಗದ ಸಹಮತಿ ಇದೆ ಎನ್ನುವುದು ನಮ್ಮೆಲ್ಲರಿಗೂ ಅರ್ಥವಾಗತಕ್ಕಂಥಾದ್ದು. ಈ ಹಿನ್ನೆಲೆಯಲ್ಲಿ ನಾವು ಬೆಂಗಳೂರನ್ನು ಯಾವ ರೀತಿಯಾಗಿ ಅಭಿವೃದ್ಧಿ ಮಾಡಬೇಕು ಎನ್ನತಕ್ಕಂಥಾದ್ದರ ಬಗ್ಗೆ ಸಂವಿಧಾನಾತ್ಮಕವಾಗಿ ನಮ್ಮಲ್ಲಿರತಕ್ಕಂಥ ತೊಂದರೆಗಳೇನು? ಸಂವಿಧಾನಾತ್ಮಕವಾಗಿ ಒಂದು ಕಡೆ Karnataka Municipal Corporations Act ಇರುತ್ತದೆ. ಇನ್ನೊಂದು ಕಡೆಗೆ ಸಂವಿಧಾನದಲ್ಲಿಯೇ ಇವತ್ತು 74ನೇ ತಿದ್ದುಪಡಿಯೊಂದಿಗೆ ಅನೇಕ ಬದಲಾವಣೆಯನ್ನು ತಂದರು. ಬದಲಾವಣೆ ಎಂದರೆ ಆಡಳಿತ ಪಾರದರ್ಶಕವಾಗಿರಬೇಕು, ಅದು ಜನರಿಗೆ ಸ್ಪಂದಿಸುವಂತಿರಬೇಕು ಎನ್ನತಕ್ಕಂಥಾದ್ದು ಮುಖ್ಯವಾದ ಉದ್ದೇಶವಾಗಿದೆ. ಆದರೆ ಏನೇ ಮಾಡಬೇಕಾದರೂ ಸಹ ಅದಕ್ಕೆ ನಿಯಮಾವಳಿಗಳನ್ನು ಅಥವಾ ನಿಯಮಾವಳಿ ರೂಪದಲ್ಲಿಯೇ ನಾವದನ್ನು ಜಾರಿಗೊಳಿಸತಕ್ಕಂಥ ಅನಿವಾರ್ಯತೆ ಇತ್ತು. ನಾವು ಅನೇಕ ತರಹವಾದಂಥ ಟೀಕೆಗಳನ್ನು ಕೇಳಿದೆವು. ಸನ್ಮಾನ್ಯ ಸೋಮಣ್ಣನವರು ಬಹಳ ಸುದೀರ್ಘವಾಗಿ ಮಾತನಾಡಿದರು. ಬಹುಶಃ ಎಲ್ಲೋ ಒಂದು ಕಡೆಗೆ ಆತಂಕವಿದೆ. ಬೆಂಗಳೂರಿಗೆ ತನ್ನದೇ ಆಗಿರತಕ್ಕಂಥ ಇತಿಹಾಸವಿದೆ, ಪರಂಪರೆ ಇದೆ, ವಿಶಿಷ್ಟವಾಗಿರತಕ್ಕಂಥ ರೀತಿಯಲ್ಲಿದೆ ಎನ್ನತಕ್ಕಂಥದ್ದರ ಜೊತೆಗೆ ಕೆಂಪೇಗೌಡರು ನಿರ್ಮಾಣ ಮಾಡಿದಂಥ ಬೆಂಗಳೂರು ಎಲ್ಲಿಗೆ ಹೋಯಿತು ಎಂದರೆ, ಕೆಂಪಾಬುದಿ ಕೆರೆ ಬಳಿ, ಲಾಲ್‌ಬಾಗ್ ಕೆರೆ ಬಳಿ, ಮೇಕ್ರಿ ವೃತ್ತದ ಬಳಿ ಮತ್ತು ಅಲಸೂರು ಬಳಿ ಅವರು ನಿರ್ಮಾಣ

ಮಾಡಿದಂಥ ಬೆಂಗಳೂರಿನ ನಾಲ್ಕು ಗಡಿಗಳು ಅಥವಾ ಎಲ್ಲೆ ಏನಿತ್ತು, ಅವರ ದೂರದೃಷ್ಟಿತ್ವವನ್ನು ನಾವು ಮೆಚ್ಚಬೇಕಾಗುತ್ತದೆ. ಬೆಂಗಳೂರು ಅಷ್ಟಕ್ಕೆ ಸೀಮಿತವಾಗಿರಬೇಕು ಎನ್ನತಕ್ಕಂಥ ಉದ್ದೇಶವನ್ನು ಅವರು ಹೊಂದಿದ್ದರು. ಆದರೆ ಮುಂದೆ ಏನಾಯಿತು ಎಂದರೆ ಬೆಂಗಳೂರು ಬೆಳೆಯುತ್ತಾ ಎಲ್ಲಿಗೆ ಹೋಯಿತು ಎಂದರೆ 1901ರಿಂದ ತೆಗೆದುಕೊಂಡರೆ ಸುಮಾರು 120 ವರ್ಷಗಳ ಕೆಳಗೆ ಬೆಂಗಳೂರಿನ ಜನಸಂಖ್ಯೆ ಇದ್ದದ್ದು ಕೇವಲ ಒಂದು ಲಕ್ಷದ ಐವತ್ತೊಂಭತ್ತು ಸಾವಿರದ ನಲವತ್ತಾರು ಮಾತ್ರ ಇತ್ತು. ಆದರೆ ಇವತ್ತು ಬೆಂಗಳೂರಿನ ಜನಸಂಖ್ಯೆ ಎಷ್ಟಾಗಿದೆ. ಇವತ್ತು 2001ನೇ ಜನಗಣತಿ ಬೇರೆ, 2011ರ ಜನಗಣತಿ ಬೇರೆ ಮತ್ತು ಈಗ ಜನಗಣತಿ ನಡೆಯುತ್ತಿರುವಂಥ ಸಂದರ್ಭದಲ್ಲಿ ನಮಗೆ ಅಂಕಿ-ಅಂಶಗಳು ಸಹ ಸಿಗುತ್ತವೆ. ಬೆಂಗಳೂರಿನ ಜನಸಂಖ್ಯೆ ಎಷ್ಟಿದೆ ಎಂದರೆ 2011ರಲ್ಲಿ ಬಹುಶಃ 85 ಲಕ್ಷ ಇದ್ದರೆ, ನಂತರ ಒಂದು ಕೋಟಿಗೂ ಮೀರಿದ ಜನಸಂಖ್ಯೆ ಇದೆ ಎನ್ನತಕ್ಕಂಥಾ ಅಂದಾಜು ಇದೆ. ಅಧಿಕೃತವಾದಂಥ ಅಂಕಿ-ಅಂಶಗಳು ಸಹ ಸಿಗುತ್ತವೆ. ಇಷ್ಟೆಲ್ಲಾ ಮಾಡಬೇಕಾದಾಗ ಇದರ ಬಗ್ಗೆ ಯೋಚನೆ ಮಾಡಿದ್ದೇನು? 2007ನೇ ಇಸವಿಯಲ್ಲಿ ಬೆಂಗಳೂರಿನ ಸುತ್ತಮುತ್ತ ಇರತಕ್ಕಂಥ 110 ಹಳ್ಳಿಗಳು ಮತ್ತು 7 ಸಿಎಂಸಿ ಗಳನ್ನು ಬೆಂಗಳೂರಿಗೆ merge ಮಾಡತಕ್ಕಂಥ ಕೆಲಸವನ್ನು ಮಾಡಿದರು. ಆ ಕೆಲಸವನ್ನು ಮಾಡಬೇಕಾದಾಗ ಎಲ್ಲೋ ಒಂದು ಕಡೆಗೆ ನಾವು ಯೋಚನೆಯನ್ನು ಮಾಡಬೇಕು. ಅದನ್ನು ಸೇರಿಸುವುದರಿಂದ ಅದರ ಪರಿಣಾಮವೇನಾಗುತ್ತದೆ ಎಂಬುದನ್ನು ನಾವು ಯೋಚನೆ ಮಾಡಲಿಲ್ಲ. ಕಾನೂನಾತ್ಮಕವಾಗಿ ಬದಲಾವಣೆಯನ್ನು ತಂದು ಮರ್ಜ್ ಮಾಡಿದರು. ಮರ್ಜ್ ಮಾಡಿದ ನಂತರ ಅದಕ್ಕೆ 5 ವರ್ಷಗಳ ಅವಕಾಶವನ್ನು ಕೊಟ್ಟರು. ಐದು ವರ್ಷಗಳ ಅವಕಾಶದಲ್ಲಿ ಏನಾದರೂ ಒಳ್ಳೆಯ ಹೆಸರು ಬರಲಿಕ್ಕೆ ಸಾಧ್ಯವಾಯಿತೇ?

ಒಂದು ಕಡೆ ನಾವು ಬೆಂಗಳೂರನ್ನು ಯಾವ ರೀತಿಯಾಗಿ ವ್ಯಾಖ್ಯಾನಿಸುತ್ತೇವೆಂದರೆ, ಪ್ರಪಂಚದಲ್ಲಿಯೇ ಎಲ್ಲರೂ ಸಹ ಬೆಂಗಳೂರಿನ ಕಡೆಗೆ ನೋಡುವಂಥ ಒಂದು ವಾತಾವರಣವಿದೆ. ಈ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನಕ್ಕಾಗಿ ಸರ್ಕಾರಗಳು ಕೊಟ್ಟಂಥ ಒತ್ತಿನಿಂದಾಗಿ ಇದು ಅಂತರಾಷ್ಟ್ರೀಯ ಖ್ಯಾತಿಯನ್ನು ಪಡೆಯಿತು. ಬೆಂಗಳೂರು ಅಂತರರಾಷ್ಟ್ರೀಯ ಖ್ಯಾತಿಯನ್ನು ಪಡೆದಂಥ ಸಂದರ್ಭದಲ್ಲಿ, ನಾನು ಹಿಂದೆಯೂ ಸಹ ಪ್ರಾಸ್ತಾವಿಕವಾಗಿ ಹೇಳುವಂಥ ಸಂದರ್ಭದಲ್ಲಿ ಹೇಳಿದ್ದೆ. ಇವತ್ತು ಪ್ರಪಂಚದಾದ್ಯಂತ ಮುಂದುವರೆದ ರಾಷ್ಟ್ರಗಳ ಪ್ರಧಾನ ಮಂತ್ರಿಗಳು ಈ ದೇಶಕ್ಕೆ ಬರಬೇಕಾದಾಗ ಶಿಷ್ಟಾಚಾರವನ್ನು ಬಿಟ್ಟು ಬೆಂಗಳೂರಿಗೆ ಬಂದು ತದನಂತರ ದೆಹಲಿಗೆ ಹೋಗಿರತಕ್ಕಂಥಾದ್ದನ್ನು ನಾವು ನೋಡುತ್ತೇವೆ. ಅದು ಬೆಂಗಳೂರಿಗೆ ಇರತಕ್ಕಂಥ ಒಂದು ಹಿರಿಮೆಯಾಗಿದೆ ಮತ್ತು ಅದಕ್ಕೆ ಇರತಕ್ಕಂಥ ಒಂದು ಕ್ರೆಡಿಟ್ ಆಗಿದೆ. ಆ ರೀತಿ ಇದ್ದಂಥ ಬೆಂಗಳೂರಿಗೆ ಯಾವ ರೀತಿಯಾದಂಥ ವ್ಯಾಖ್ಯಾನವಾಯಿತು?

ಅಮೆರಿಕಾ ಪತ್ರಿಕೆಯಲ್ಲಿ ಇದೊಂದು Garbage City ಎಂದು ವ್ಯಾಖ್ಯಾನ ಮಾಡಿದರು. Garden City ಹೋಗಿ Garbage City ಆಯಿತು. ಇಷ್ಟು ಅಪಕೀರ್ತಿಗೆ ಬೆಂಗಳೂರು ಒಳಗಾದಂಥ ಸಂದರ್ಭದಲ್ಲಿ ಯಾರೇ ಆದರೂ ಸಹ ಸರ್ಕಾರದಲ್ಲಿ ಕುಳಿತು ಅದರ ಬಗ್ಗೆ ಯೋಚನೆಯನ್ನು ಮಾಡಬೇಕಾಗುತ್ತದೆ. ಇದಕ್ಕೆ ಏನಾದರೂ ಒಂದು ಕಾಯಕಲ್ಪವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದನ್ನು ನಾವು ನೋಡಬೇಕಾಗುತ್ತದೆ. ಆ ಹಿನ್ನೆಲೆಯಲ್ಲಿ ಒಂದು ಚಿಂತನೆ ಬಂದಿದ್ದು ಎಂದರೆ, ಅನೇಕ ಜನರು ಮಾತನಾಡುವಂಥ ಸಂದರ್ಭದಲ್ಲಿಯೂ ಬೆಂಗಳೂರಿನ ಬಗ್ಗೆ ಒಂದು ಭಯವನ್ನು, ಎಲ್ಲೋ ಒಂದು ಕಡೆ ಸಮಗ್ರತೆಯನ್ನು ಕಾಪಾಡತಕ್ಕಂಥ ದೃಷ್ಟಿಯಿಂದ ಇದಕ್ಕೆ ಧಕ್ಕೆ ಬರುತ್ತದೆ ಎನ್ನತಕ್ಕಂಥಾದ್ದನ್ನು ಹೇಳಿದ್ದಾರೆ. ನಾವು ಆಡಳಿತವನ್ನು ಸುಧಾರಣೆ ಮಾಡುವುದಕ್ಕೆ ಹೊರಟಿದ್ದೇವೆ. ಆಡಳಿತ ಸುಧಾರಣೆ ಎಂದರೆ ಸಮಗ್ರತೆಗೆ ಯಾವುದೇ ಬೇರೆ ರೀತಿಯಲ್ಲಿ ಲೇಪನ ಮಾಡುವುದಲ್ಲ. ಸಮಗ್ರವಾಗಿ ಬೆಂಗಳೂರು ಇದ್ದೇ ಇರುತ್ತದೆ. ಕೆಂಪೇಗೌಡರು ನಿರ್ಮಾಣ ಮಾಡಿದಂಥ ಬೆಂಗಳೂರಿಗೆ ಯಾವುದೇ ರೀತಿಯಲ್ಲಿ ಆ ಅಖಂಡತೆಗೆ ಚ್ಯುತಿ ಬರದೇ ಇರುವ ರೀತಿಯಲ್ಲಿ ಇವತ್ತು ಕೆಲಸವನ್ನು ಮಾಡಬೇಕೆಂಬುದು ನಮ್ಮ ಒಂದು ತೀರ್ಮಾನವಾಗಿದೆ.  ಬಹಳ ಮುಖ್ಯವಾಗಿ ನಮ್ಮಲ್ಲಿ 2007ರಲ್ಲಿ ಒಂದು ತಿದ್ದುಪಡಿಯನ್ನು ತಂದರು. ಆ ತಿದ್ದುಪಡಿಯಲ್ಲಿ ನೀವು ಯಾವುದೇ ಪ್ರದೇಶವನ್ನು ಸೇರಿಸಬಹುದು ಅಥವಾ ತೆಗೆಯಬಹುದು ಎಂದು ಇದೆ. ಆದರೆ ವಿಭಾಗ ಮಾಡಬೇಕಾದರೆ ಮಸೂದೆ ಅನಿವಾರ್ಯವಾಗಿದೆ. ಮಸೂದೆ ಅನಿವಾರ್ಯವಾಗಿತ್ತು ಎನ್ನುವ ಕಾರಣಕ್ಕೋಸ್ಕರ ಇವತ್ತು ಈ ರೀತಿಯಾಗಿ ಮಸೂದೆಯನ್ನು ತಂದುಇದರ ಬಗ್ಗೆ ಒಂದು ಪ್ರಯತ್ನವನ್ನು ಮಾಡಿ ಇವತ್ತು ನಾವು ವಿಧಾನ ಸಭೆಯಲ್ಲಿ ತಂದಿರತಕ್ಕಂಥಾದ್ದು. ನಮ್ಮ ಘನ ಉದ್ದೇಶವೇನು ಎನ್ನತಕ್ಕಂಥಾದ್ದನ್ನು ದಯಮಾಡಿ ಅರ್ಥ ಮಾಡಿಕೊಳ್ಳಬೇಕು. ಬಹಳಷ್ಟು ಜನ ಮಾತನಾಡಿರತಕ್ಕಂಥವರು ಟೀಕೆಗಳನ್ನು ಮಾಡಿದರು, ಸಲಹೆಗಳನ್ನು ಕೊಟ್ಟಿದ್ದಾರೆ ಮತ್ತು ಅದರ ಜೊತೆಗೆ ಬೆಂಗಳೂರು ಹೇಗಿರಬೇಕು ಎನ್ನತಕ್ಕಂಥಾದ್ದರ ಬಗ್ಗೆ ಒಂದು ರೀತಿಯಾದಂಥ ಆತಂಕ, ಭಯ ಎಲ್ಲವೂ ಸಹ ಇತ್ತು.  ಅದು ಏನಾಗುತ್ತದೆಯೋ ಎಂದು ಹೇಳಿ ಬೆಂಗಳೂರನ್ನು ಬೆಳಗಾಂಗೆ ಹೋಲಿಸಿ ಇದು ಇನ್ನೇನು ಆಗಿಬಿಡುತ್ತದೋ ಎನ್ನತಕ್ಕಂಥ ಆತಂಕವನ್ನು ವ್ಯಕ್ತಪಡಿಸಿರತಕ್ಕಂಥ ಹಿನ್ನೆಲೆಯಲ್ಲಿ ಬಹುಶಃ ಸರ್ಕಾರದ ಉದ್ದೇಶ ಅದಲ್ಲ.  ಅದನ್ನು ನಾವು ಮೊದಲಿನಿಂದಲೂ ಸಹ ಹೇಳಿದ್ದೇವೆ ಮತ್ತು ನಮ್ಮ ಪಕ್ಷದ ವತಿಯಿಂದಲೂ ಸಹ ಸಾಕಷ್ಟು ಚರ್ಚೆಯಾಗಿದೆ. ಇದಕ್ಕೆ ಏನಾದರೂ ಕಾಯಕಲ್ಪ ಮಾಡಬೇಕು ಎನ್ನುವಂಥ ಘನ ಉದ್ದೇಶ ಬಿಟ್ಟರೆ ಬೇರೆ ಏನೂ ಇಲ್ಲ. ಆದರೆ ನಮ್ಮ ಗುರಿ ಮಾತ್ರ ಅಚಲವಾಗಿರತಕ್ಕಂಥಾದ್ದು.  ಸಂವಿಧಾನದ ಅನುಚ್ಛೇದ 243 (ಯು), 243 (ಟಿ) ನಲ್ಲಿರತಕ್ಕಂಥಾದ್ದರ ಬಗ್ಗೆ ನಾನು ಸೂಕ್ಷ್ಮವಾಗಿ ಹೇಳಬೇಕೆಂದರೆ, ನಮ್ಮ ಉದ್ದೇಶವೇನೆಂದರೆ, ಪರಿಣಾಮಕಾರಿಯಾಗಿ ವಿಕೇಂದ್ರೀಕರಣ ಮತ್ತು ಸದಾ ಗಮನವನ್ನು ಹರಿಸತಕ್ಕಂಥ ಒಂದು ಆಡಳಿತ ಬೆಂಗಳೂರಿನಲ್ಲಿ ಇರಬೇಕು

ಎನ್ನುವುದಾಗಿದೆ. ಪಾರದರ್ಶಕತೆಗೆ ಉತ್ತರದಾಯಿತ್ವವನ್ನು ಹೆಚ್ಚಿಸಬೇಕು. ನಾಗರೀಕನಿಗೆ ಉತ್ತರದಾಯಿತ್ವ ಹೊಂದಿ ಹೆಚ್ಚು ಜವಾಬ್ದಾರಿಯುತವಾದ ಮತ್ತು ಪರಿಣಾಮಕಾರಿಯಾದ ಮಹಾನಗರದ ಆಡಳಿತವನ್ನು ಒದಗಿಸಬೇಕು. ಸಮುದಾಯದ ಅನುಕೂಲಕ್ಕಾಗಿ ಪೌರ ಸೇವೆಯನ್ನು ಒದಗಿಸಲು ವಾರ್ಡ್ ಸಮಿತಿಗಳು, ನೆರೆ ಹೊರೆಯ ಸಮಿತಿಗಳಿಂದ ಸ್ವಯಂ ಮೇಲ್ವಿಚಾರಣೆಯನ್ನು ನಡೆಸುವುದರ ಮುಖೇನ ಅದಕ್ಕೆ ಅರ್ಥಪೂರ್ಣವಾದ ಕಾರ್ಯತತ್ಪರತೆಯನ್ನು ತಂದು ಕೊಡುವುದು. ಸೋಮಣ್ಣನವರು ಬೆಂಗಳೂರಿನವರಾಗಿರುವುದರಿಂದ ಅವರಿಗೆ ಗೊತ್ತಿರಬಹುದು. ಅವರು ಬೆಂಗಳೂರಿನಲ್ಲಿ ಹುಟ್ಟಿ ಬೆಳೆದು ಇಲ್ಲಿಯೇ ಶಾಸಕರಾಗಿ ಪ್ರತಿನಿಧಿಸಿದವರು ಮತ್ತು ಬೆಂಗಳೂರಿನ ಮಂತ್ರಿಗಳಾಗಿದ್ದಂಥವರು. ಅಂತಹ ಸಂದರ್ಭದಲ್ಲಿ ಇವತ್ತು 192 ವಾರ್ಡ್‌ಗಳಿದ್ದು 800 ಚದುರ ಕಿ.ಮೀ. ವಿಸ್ತೀರ್ಣ ಇರತಕ್ಕಂಥ ಬೆಂಗಳೂರಿನಲ್ಲಿ ಒಂದು ಕೋಟಿಗೂ ಹೆಚ್ಚು ಜನಸಂಖ್ಯೆ ಇರತಕ್ಕಂಥಾದ್ದರಲ್ಲಿ 2010ನೇ ಇಸವಿಯಲ್ಲಿ ನಡೆದಂಥ ಚುನಾವಣೆಯಲ್ಲಿ ಮಾಡಿದಂಥಾದ್ದರಲ್ಲಿ 192 ವಾರ್ಡ್‌ಗಳ ಬಗ್ಗೆ ನಾನು ಮೊನ್ನೆಯೂ ಸಹ ಪ್ರಸ್ತಾಪ ಮಾಡುತ್ತಾ ಹೇಳಿದ್ದೇನೆ. ಒಂದು ವಾರ್ಡ್ 95,000 ಜನಸಂಖ್ಯೆ, ಇನ್ನೊಂದು ವಾರ್ಡ್ 25,00085,000 ಜನಸಂಖ್ಯೆ ಇದೆ. ಅವರದೇ ಪಕ್ಷಕ್ಕೆ ಸೇರಿದ ಬಹಳಷ್ಟು ಜನ ಕಾರ್ಪೊರೇಟರ್ಸ್ ಸಹ ಇದು ಬಹಳ ತಪ್ಪಾಗುತ್ತಿದೆ ಎನ್ನತಕ್ಕಂಥಾದ್ದನ್ನು ನಮಗೆ ಅನೇಕ ಬಾರಿ ಭೇಟಿ ಮಾಡಿ ಹೇಳಿದರು. ಏನೆಂದರೆ, ನೀವು ಕೊಡತಕ್ಕಂಥ ಅಲೋಕೇಶನ್ ವಾರ್ಡ್‌ವಾರು ಕೊಡುತ್ತೀರಿ. ಆದರೆ 95,000 ಜನಸಂಖ್ಯೆ ಎಲ್ಲಿ, 25,000 ಜನಸಂಖ್ಯೆ ಎಲ್ಲಿ? ಅವರಿಗೆ ಜಾಸ್ತಿ ಅನುದಾನ ಹೋಗುತ್ತದೆ, ನಮಗೆ ಕಡಿಮೆಯಾಗುತ್ತದೆ ಎಂದರು. ಈ ರೀತಿಯಾಗಿ ತಾರತಮ್ಯವಾಗಿರತಕ್ಕಂಥಾದ್ದು. ಆದರೆ ಸಂವಿಧಾನದಲ್ಲಿ ಹೇಳುತ್ತದೆ ಮತ್ತು ನಮ್ಮ ಕಾನೂನಿನಲ್ಲಿ ಏನು ತಿದ್ದುಪಡಿಯನ್ನು ಮಾಡಿದ್ದೇವೆಂದರೆ, ಎಲ್ಲಾ ಕ್ಷೇತ್ರಗಳು as far as possible even ಇರಬೇಕು, unevenness ಇರಬಾರದು. ಅದು comprehensive ಆಗಿ ಇರಬೇಕು. ಎಲ್ಲದಕ್ಕೂ ಸಹ ಒಂದು ಹಿಡಿತ ಇರತಕ್ಕಂಥ ರೀತಿಯಲ್ಲಿರಬೇಕು ಎನ್ನುವ ಉದ್ದೇಶವಿತ್ತು. ಈ ಉದ್ದೇಶವನ್ನು ಈಡೇರಿಸಬೇಕಾದರೆ 2006ರಲ್ಲಿ . . . ಇವತ್ತು ಉಚ್ಛನ್ಯಾಯಾಲಯದಲ್ಲಿ ಇದು ಚರ್ಚೆಗೆ ಬಂದಾಗ ಸರ್ಕಾರಕ್ಕೆ ಒಂದು ಆದೇಶವನ್ನು ಕೊಟ್ಟರು. ವಾರ್ಡ್‌ಗಳನ್ನು bifurcate ಮಾಡುವ ಸಂದರ್ಭದಲ್ಲಿ ಸರ್ಕಾರ ನಿಯಮಗಳನ್ನು ರಚಿಸಬೇಕು, ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು ಎಂದು ತಿಳಿಸಿತು. 2001ರಲ್ಲಿ ಚುನಾವಣೆ ಮಾಡಬೇಕಾದ ಸಂದರ್ಭದಲ್ಲಿ, ಕೋರ್ಟ್ ಕೊಡುವಂತಹ ಆದೇಶಗಳನ್ನು ಪರಿಪಾಲನೆ ಮಾಡಿ, ನಾವೇ ಒಂದು ನಿಯಂತ್ರಣ ಹಾಕಿಕೊಂಡು ರಿಸರ್ವೇಷನ್ ಮಾಡಬೇಕಾಗಿತ್ತು, 2011ರಲ್ಲೂ ರಿಸರ್ವೇಶನ್ ಆಗಲೇ ಇಲ್ಲ. 10 ವರ್ಷಗಳಾದರೂ ನಿಯಮಗಳನ್ನು ಮಾಡಲಿಲ್ಲ. ಆ ನಿಯಮಗಳನ್ನು ಮಾಡಬೇಕು ಎನ್ನುವುದು ಸಂವಿಧಾನದಲ್ಲಿ mandatory ಆಗಿದೆ,

ಕಾನೂನಿನಲ್ಲಿ mandatory ಆಗಿದೆ. ಹಾಗಾಗಿ ಕಾನೂನನ್ನು ರಚಿಸಬೇಕಾಗಿ ಬಂತು. ಆದರೆ ಆ ಕಾನೂನು ಇದುವರೆಗೂ ರಚನೆ ಆಗಿಲ್ಲ. ನಮ್ಮ ಸರ್ಕಾರ ಬಂದಮೇಲೆ, ಸುಪ್ರೀಮ್ ಕೋರ್ಟ್ 2006ರಲ್ಲಿ ಕೊಟ್ಟ ಪ್ರಕ್ರಿಯೆಗೆ ಈಗಾಗಲೇ ಚಾಲನೆಯನ್ನು ಕೊಟ್ಟಿದೆ. ಈಗ ರಿಸರ್ವೇಶನ್ ಆಗಬೇಕು. ರಿಸರ್ವೇಶನ್ ಆಗಬೇಕಾದಾಗ ಯಾವರೀತಿ ಹಂಚಿಕೆ ಆಗಬೇಕು? ಅದರಲ್ಲಿ ಯಾರ ಹಸ್ತಕ್ಷೇಪವೂ ಇರಬಾರದು. ಅದು ಸಮಾಧಾನಕರವಾಗಿ, ನ್ಯಾಯವಾಗಿ ಎಲ್ಲರಿಗೂ ಕೂಡ ಸಾಮಾಜಿಕ ನ್ಯಾಯ ಸಿಗುವ ಹಿನ್ನೆಲೆಯಲ್ಲಿ reservations are inevitable. ಅದು ಮಾಡಲೇಬೇಕಾದ ಅನಿವಾರ್ಯತೆ ಕೂಡ ಇದೆ. ಇನ್ನೊಂದು ಬಹಳ ಮುಖ್ಯ ವಿಷಯ ಎಂದರೆ, ದೃಢವಾದ ಸಾಮಾಜಿಕ ಬಂಧನ ಮತ್ತು ಬಡತನದ ಬಗ್ಗೆ ಕಾಳಜಿ ವಹಿಸುವುದು, ಬಡತನವನ್ನು ಹೋಗಲಾಡಿಸುವ ಪ್ರಯತ್ನ ಮಾಡುವಂಥದ್ದು. ಸೇವೆಗಳ ಗುಣಮಟ್ಟವನ್ನು ಹೆಚ್ಚಿಸುವುದು. ಆರ್ಥಿಕ ಅಭಿವೃದ್ಧಿ ಸಾಧಿಸುವ ಸಲುವಾಗಿ ಇದನ್ನು ಪುನರ್‌ರಚನೆ ಮಾಡುವುದು ಅನಿವಾರ್ಯ ಎನ್ನುವ ರೀತಿಯಲ್ಲಿ ಸರ್ಕಾರಕ್ಕೆ ಅಭಿಪ್ರಾಯ ಬಂತು. ಹೊರಹೊಮ್ಮುತ್ತಿರುವ ವಿಶ್ವದ ಶೈಲಿಗಳು ಸಾಂಸ್ಥಿಕವಾಗಿ ಮತ್ತು ಕ್ರಮಬದ್ಧವಾದ ಮಾರ್ಪಾಟುಗಳನ್ನು ಮಾಡಬೇಕೆನ್ನುವ ಉದ್ದೇಶ ಇಟ್ಟುಕೊಂಡು ಎರಡು ಅಥವಾ ಮೂರು ಭಾಗಗಳನ್ನು ಮಾಡಬೇಕು ಎನ್ನುವುದನ್ನು ನಮ್ಮ ನಿಯಮದಲ್ಲಿ ತಂದು ಅದಕ್ಕೋಸ್ಕರ ಅಧಿವೇಶನವನ್ನು ಕರೆದೆವು. ಈ ಒಂದು ವಿಚಾರಕ್ಕೋಸ್ಕರವಾಗಿಯೇ ವಿಶೇಷ ಸದನವನ್ನು ಕರೆದಿದ್ದೇವೆ. ಬೇರೆ ಯಾವುದೇ ವಿಚಾರಕ್ಕೂ ಅಲ್ಲ. ವಿಧಾನಸಭೆಯಲ್ಲಿ ಅದು ಚರ್ಚೆಯಾಯಿತು, ಚರ್ಚೆ ಆದ ಸಂದರ್ಭದಲ್ಲಿ ವಿರೋಧ ಪಕ್ಷದ ಎಲ್ಲ ಮುಖಂಡರು ಚರ್ಚೆಯಲ್ಲಿ ಭಾಗವಹಿಸಿ ಅನೇಕ ರೀತಿಯ ಸಲಹೆಗಳನ್ನು ನೀಡಿದರು. ಆ ಸಲಹೆಗಳ ಹಿನ್ನೆಲೆಯಲ್ಲಿ . . . ಇದರ ಜೊತೆಗೆ ಜನಸಾಮಾನ್ಯರ ಅಭಿಪ್ರಾಯಗಳನ್ನೂ ಕೂಡ . . .ಎಲ್ಲೋ ಒಂದು ಕಡೆ ಬಿ.ಬಿ.ಎಂ.ಪಿ ಎನ್ನುವುದು ನಮ್ಮ ನಿರೀಕ್ಷೆಗೆ ಬರುತ್ತಿಲ್ಲ, ನಮ್ಮ ನಿರೀಕ್ಷೆಗೆ ತಕ್ಕ ಹಾಗೆ ಇಲ್ಲ ಎನ್ನುವ ಕೂಗು ಎಲ್ಲಾ ಸಂದರ್ಭಗಳು ಕೇಳಿ ಬರುತ್ತಿತ್ತು. ನಮ್ಮಲ್ಲಿ ಏನಾಗಿದೆ ಎಂದರೆ, B.W.S.S.B.ಇರಬಹುದು, ಬೆಸ್ಕಾಂ ಇರಬಹುದು ಇವೆಲ್ಲದರ ಮೇಲೆ ನಿಯಂತ್ರಣ ಇದೆಯೇ ಎನ್ನುವುದನ್ನು ಆ ಮನೆಯಲ್ಲೂ ಕೇಳಿದರು, ಈ ಮನೆಯಲ್ಲಿ ಕೇಳಿದರು. ಇವೆಲ್ಲದರ ಮೇಲೆ ಒಂದು ಹಿಡಿತ ಬರಬೇಕು. ಅದನ್ನು ನಿಯಮ 74ರ ತಿದ್ದುಪಡಿಯಂತೆ ಅದಕ್ಕೆ ಎಲ್ಲಾ ರೀತಿಯ ಕಾಯಕಲ್ಪವನ್ನು ಮಾಡಬೇಕು ಎನ್ನುವ ದೃಷ್ಟಿಯನ್ನಿಟ್ಟುಕೊಂಡು, ಸುಧಾರಣೆಗಳನ್ನು ತರಬೇಕು ಎನ್ನುವ ದೃಷ್ಟಿಯಿಂದ ನಾವು ಈ ಮಸೂದೆಯನ್ನು ಮಂಡನೆ ಮಾಡಿದ್ದೇವೆ. ಇಲ್ಲಿ ಇಸ್ರೋ ಇದೆ, ಕೈಗಾರಿಕಾ ಪ್ರದೇಶಗಳಿವೆ, ಮಹಾದೇವಪುರ, ಕೃಷ್ಣರಾಜಪುರ, ಬೊಮ್ಮನಹಳ್ಳಿ ವಲಯದಲ್ಲಿ ವಿಸ್ತೃತವಾದ ಸ್ಥಳಾವಕಾಶಗಳು, ವಾಣಿಜ್ಯ ಉದ್ಯಮ ಅಭಿವೃದ್ಧಿ ಸಾಧಿಸುವ ತಂತ್ರಜ್ಞಾನ ಮತ್ತು ಸೇವಾ ವಲಯದಲ್ಲಿ ಬೆಳವಣಿಗೆ ಸಾಧಿಸಲು ಅವಕಾಶ ಇದೆ. ದಾಸರಹಳ್ಳಿ ವಲಯದಲ್ಲಿ ಪೀಣ್ಯದ ಕೈಗಾರಿಕಾ ಪ್ರದೇಶದಿಂದ ಪ್ರಭಾವಿತವಾಗುವ, ಬೆಂಗಳೂರು ಕೇಂದ್ರ ಒಳಪ್ರದೇಶವನ್ನು ಸೇರಿಸುವ

ರಾಷ್ಟ್ರೀಯ ಹೆದ್ದಾರಿ–4 ಬೆಂಗಳೂರಿನ ಉತ್ತರದಲ್ಲಿದೆ. ಅದೇರೀತಿ ರಾಷ್ಟ್ರೀಯ ಹೆದ್ದಾರಿ–7ರ ಹೊರ ವಲಯದಲ್ಲಿರುವ ಯಲಹಂಕ, ಬ್ಯಾಟರಾಯನಪುರ ಮತ್ತು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾಣ ನಿಲ್ದಾಣ ಇವುಗಳು ಒಂದು ರೀತಿಯಲ್ಲಿ ವಿಶ್ವಕ್ಕೆ ಸಂಪರ್ಕಿಸುವಂತಹ ಸಾಧನಗಳಾಗಿವೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ನಾವು ಬೆಂಗಳೂರನ್ನು ಈ ರೀತಿ ಕೂಡ ವ್ಯಾಖ್ಯಾನಿಸಬಹುದು. ಬೆಂಗಳೂರನ್ನು ಮೂರು ಭಾಗ ಮಾಡಬೇಕು ಎನ್ನುವ ಪರಿಕಲ್ಪನೆ ಇದೆ. ಆರ್ಟಿಕಲ್ 243(ಯು), ಆರ್ಟಿಕಲ್ 243(ಟಿ) ಇವುಗಳಲ್ಲಿ ವಾರ್ಡುಗಳನ್ನು ಯಾವರೀತಿ ಪುನರ್‌ರಚನೆ ಮಾಡಬೇಕು ಎನ್ನುವುದರ ಬಗ್ಗೆ ಉಲ್ಲೇಖ ಇದೆ, ವ್ಯಾಖ್ಯಾನ ಇದೆ. ಇದನ್ನು ನಾವು ತತ್ವಶಃ ಅನುಷ್ಠಾನ ಮಾಡಬೇಕಾಗಿದೆ. ಬೆಂಗಳೂರು ಚಿರಕಾಲ ಉಳಿಯಬೇಕು, ಉಜ್ವಲವಾದ ಭವಿಷ್ಯಕ್ಕೋಸ್ಕರ ಪರಿಣಾಮಕಾರಿಯಾಗಿ ಮಹಾನಗರಪಾಲಿಕೆಯ ಆಡಳಿತವನ್ನು ರೂಪಿಸಬೇಕಾಗಿದೆ. ನಾಡಪ್ರಭು ಕೆಂಪೇಗೌಡರಿಂದ ಸ್ಥಾಪಿಸಲ್ಪಟ್ಟ ಈ ಬೆಂಗಳೂರಿನ ಸಮಗ್ರತೆಯನ್ನು ಕಾಪಾಡಬೇಕು ಎನ್ನುವ ಕಾರಣಕ್ಕೋಸ್ಕರ, ಗತವೈಭವವನ್ನು ಮರಳಿ ತರಬೇಕು ಎನ್ನುವ ಉದ್ದೇಶದಿಂದ ನಾವು ಈ ಮಸೂದೆಯನ್ನು ಮಂಡನೆ ಮಾಡಿದ್ದೇವೆ. ಇದಕ್ಕೋಸ್ಕರವೇ ವಿಶೇಷ ಸದನವನ್ನು ಕರೆದಿದ್ದೇವೆ. ವಿಧಾನಸಭೆಯಿಂದ ಇಲ್ಲಿಗೆ ಬಿಲ್ ಬಂದಮೇಲೆ ಎರಡು ದಿವಸ ಸಂಪೂರ್ಣವಾಗಿ ಇದರ ಬಗ್ಗೆ ಚರ್ಚೆ ಮಾಡಿದ್ದೇವೆ. ತಾವುಗಳು ಸರ್ಕಾರಕ್ಕೆ ಅನೇಕ ರೀತಿಯ ಸಲಹೆಗಳನ್ನು ಕೊಟ್ಟಿದ್ದೀರಿ. ಟೀಕೆಗಳನ್ನು ಮಾಡುವುದರ ಮುಖೇನ ಸರ್ಕಾರವನ್ನು ಎಚ್ಚರಿಸಿದ್ದೀರಿ. ಮೂರು ಭಾಗಗಳನ್ನಾಗಿ ಮಾಡಬೇಕಾಗುತ್ತದೆ ಎನ್ನುವುದರ ಬಗ್ಗೆ ನ್ಯಾಯಾಲಯಕ್ಕೆ ಮನವಿ ಮಾಡಿದ ಸಂದರ್ಭದಲ್ಲಿ ಅದು, ಈ ವಿಚಾರ ಸರ್ಕಾರದ ವಿವೇಚನೆಗೆ ಬಿಟ್ಟಿದ್ದು ಎನ್ನುವ ತೀರ್ಪು ಕೊಟ್ಟಿರುವುದನ್ನು ನೋಡಿದ್ದೇವೆ. ನ್ಯಾಯಾಲಯಗಳು ಏನೇ ಹೇಳಲಿ, ಆಡಳಿತ ಎನ್ನುವುದು ಸರ್ಕಾರದ ವಿವೇಚನೆಗೆ ಬಿಟ್ಟ ವಿಷಯವಾಗಿರುತ್ತದೆ. ಆಗಿರುವ ಅನೇಕ ಅನುಭವಗಳ ಹಿನ್ನೆಲೆಯಲ್ಲಿ ಮೂರು ಭಾಗಗಳನ್ನಾಗಿ ಮಾಡುವುದು ಒಳ್ಳೆಯದು ಎನ್ನುವುದಕ್ಕೆ ಆಧಾರ ಇಟ್ಟುಕೊಂಡು, ವರದಿಯನ್ನು ಇಟ್ಟುಕೊಂಡು ಮುಂದುವರೆಯುತ್ತಿದ್ದೇವೆ. ನಿನ್ನೆ ದಿವಸ ನಮ್ಮ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದ್ದಾರೆ. ಸಾರ್ವಜನಿಕರ ಅಭಿಪ್ರಾಯವನ್ನು ಕೇಳುವುದಕ್ಕೆ ಸಂಬಂಧಪಟ್ಟಂತೆ ಒಂದು ವೇದಿಕೆ ಮಾಡಬೇಕೆಂದು ಹೇಳಿದ್ದಾರೆ. ಸಾರ್ವಜನಿಕರ ಮಾತಿಗೆ ಮನ್ನಣೆ ಇರಬೇಕಾಗುತ್ತದೆ ಎನ್ನುವ ಮಾತನ್ನೂ ಕೂಡ ಹೇಳಿದ್ದಾರೆ. ದಯಮಾಡಿ ನಾನು ಈ ಸಂದರ್ಭದಲ್ಲಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಮಸೂದೆಯನ್ನು ಪಾಸ್ ಮಾಡಿ ಕೊಡಬೇಕು. ಬೆಂಗಳೂರು ಅತಿ ಮುಖ್ಯವಾದ ನಗರವಾಗಿರುವುದರಿಂದ, ಅದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದೆ ಎನ್ನುವುದಕ್ಕಿಂತಲೂ ಹೆಚ್ಚಾಗಿ, ರಾಜ್ಯಕ್ಕೆ ಬರುವ ಶೇಕಡ 40ರಷ್ಟು ಹೆಚ್ಚು ಆದಾಯ ಇದರಿಂದ ಬರುತ್ತದೆ. ಬೆಳಿಗ್ಗೆ ಮಾತನಾಡಬೇಕಾದರೆ ಮಾನ್ಯ ರಾಮಚಂದ್ರಗೌಡರು, ಐಟಿ ಕಂಪನಿಗಳು ಸಾಕಷ್ಟು ಬೆಳೆದಿವೆ,

ಇದರಿಂದ ನಮಗೇನು ಪ್ರಯೋಜನ, ಇದರಿಂದ ಏನಾಗುತ್ತದೆ ಎಂದು ಕೇಳಿದರು. ಮಾನ್ಯ ಸಭಾಪತಿಗಳೆ, ಇಲ್ಲಿಯವರೆಗೆ, 67 ವರ್ಷದಲ್ಲಿ ನಾವು ಸೃಷ್ಟಿ ಮಾಡಿರುವ ಉದ್ಯೋಗ ಕೇವಲ 6 ಲಕ್ಷದ 42 ಸಾವಿರ. ಆದರೆ ಐಟಿ ಕಂಪನಿಗಳು ಕಳೆದ 10–15 ವರ್ಷದಲ್ಲಿ ನೇರವಾಗಿ 11 ಲಕ್ಷ ಉದ್ಯೋಗಗಳನ್ನು ಮತ್ತು ಪರೋಕ್ಷವಾಗಿ ಸುಮಾರು 10ಲಕ್ಷಕ್ಕೂ ಹೆಚ್ಚು ಉದ್ಯೋಗಗಳನ್ನು ಸೃಷ್ಟಿ ಮಾಡಿದೆ. ಒಟ್ಟು ಸುಮಾರು 21 ಲಕ್ಷ ಉದ್ಯೋಗ ಸೃಷ್ಟಿಯ ಹಿನ್ನೆಲೆಯಲ್ಲಿ ಆಗುತ್ತಿರುವ ಆರ್ಥಿಕ ಚಟುವಟಿಕೆಗಳು, ಕಮರ್ಷಿಯಲ್ ಟ್ಯಾಕ್ಸ್ ಅಥವಾ ಇನ್ನೊಂದು ಟ್ಯಾಕ್ಸ್‌ಗಳು ಬರುತ್ತಿರುವುದಕ್ಕೆ ಇದೂ ಒಂದು ಮುಖ್ಯ ಕಾರಣವಾಗಿದೆ. ಬಹುಶಃ ನಮಗೆ ಇದು ಐಟಿ ನಗರ ಎನ್ನುವ ಒಂದೇ ಕಾರಣಕ್ಕೆ ಮಾನ್ಯ ವಾಜಪೇಯಿಯವರು ಬಂದ ಸಂದರ್ಭದಲ್ಲಿ ಇಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮಾಡುವುದಕ್ಕೆ ಸ್ಪಂದಿಸಿದರು. ಇದರ ಜೊತೆಗೆ, ಬೆಂಗಳೂರಿಗಿರುವ brand name ಏನಿದೆ ಅದಕ್ಕೆ ಇವೆಲ್ಲವೂ ಪೂರಕವಾಗಿವೆ. ಹಾಗಾಗಿ ಎಲ್ಲೋ ಒಂದು ಕಡೆ Garbage City, ಗಲೀಜು ಸಿಟಿ ಎಂದು ವ್ಯಾಖ್ಯಾನಿಸುವ ಬದಲು ಅದಕ್ಕೆ ಒಂದು ಕಾಯಕಲ್ಪವನ್ನು ಮಾಡಬೇಕು ಎನ್ನುವುದು ಸರ್ಕಾರದ ಉದ್ದೇಶವಾಗಿದೆ, ಸರ್ಕಾರದ ಪ್ರಯತ್ನವಾಗಿದೆ. ಆ ಹಿನ್ನೆಲೆಯಲ್ಲಿ ಈ ಮಸೂದೆಯನ್ನು ತಾವು ಪಾಸ್ ಮಾಡಬೇಕು, ಒಪ್ಪಿಕೊಳ್ಳಬೇಕು ಎಂದು ಕೇಳುತ್ತೇನೆ. ಇದಕ್ಕೋಸ್ಕರವೇ ವಿಶೇಷ ಅಧಿವೇಶನವನ್ನು ಕರೆಯಲಾಗಿದೆ. ಯಾವುದೇ ಬೇರೆ ಕಾರ್ಯಕಲಾಪಗಳು ಇಲ್ಲದೇ ನೇರವಾಗಿ ಇದೊಂದೇ ವಿಷಯವನ್ನು ಚರ್ಚೆ ಮಾಡಲು ವಿಶೇಷ ಸದನವನ್ನು ಕರೆಯಲಾಗಿದೆ. ಸದರಿ ಮಸೂದೆಗೆ ಈಗಾಗಲೇ ಕೆಳಮನೆ ಒಪ್ಪಿಗೆ ಕೊಟ್ಟಿದೆ. ಈ ಸದನ ಇದನ್ನು ಮಾನ್ಯತೆ ಮಾಡಬೇಕು. ನಿಮ್ಮ ಏನೇ ಸಲಹೆ ಇರಲಿ, ನಿಮ್ಮ ಸಲಹೆಗಳನ್ನು ಅತ್ಯಂತ ಮುಕ್ತಕಂಠದಿಂದ, ತೆರೆದ ಮನಸ್ಸಿನಿಂದ ಕೇಳುತ್ತೇವೆ ಎಂದು ಕೇಳಿಕೊಂಡು ದಯಮಾಡಿ ಈ ಮಸೂದೆಗೆ ಒಪ್ಪಿಗೆ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಸಭಾಪತಿಗಳು:–** ಪ್ರಶ್ನೆ ಏನೆಂದರೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ವಿಧೇಯಕ 2015 ನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು. ಪ್ರಸ್ತಾವದ ಪರವಾಗಿರುವವರು ಹೌದು ಎಂದು ಸೂಚಿಸಬೇಕು . . .

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಗಳೆ, ಈಗ ಚರ್ಚೆ ಮುಗಿಯಿತೇ? . . .

**ಸಭಾಪತಿಗಳು:–** ಚರ್ಚೆಯೂ ಮುಗಿಯಿತು, ಉತ್ತರವೂ ಮುಗಿಯಿತು.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾತನಾಡುವುದು ಇನ್ನೂ ತುಂಬಾ ಇದೆ . . .

**ಶ್ರೀ ಸಿದ್ದರಾಮಯ್ಯ:–** ನೀವು ಮಾತನಾಡಲು ಎಷ್ಟೇ ವಿಷಯವನ್ನು ಇಟ್ಟುಕೊಂಡಿರಿ. ಅದಕ್ಕೆ ನಮ್ಮ ತಕರಾರು ಇಲ್ಲ, ವಿರೋಧ ಇಲ್ಲ. ವಿರೋಧ ಮಾಡಬೇಕು ಎನ್ನುವ ಉದ್ದೇಶದಿಂದಲೇ ವಿರೋಧ ಮಾಡುತ್ತಿದ್ದೀರಿ.

**(4–00 ಗಂಟೆ)**

ಆದರೆ ಇದನ್ನು ವಿರೋಧ ಮಾಡಬೇಕಾದಂಥ ಅಗತ್ಯವಿಲ್ಲವೆಂದು ಅವರಿಗೆ ಹೇಳೋಣವೆಂದುಕೊಂಡಿದ್ದೇನೆ.

**ಸಭಾಪತಿಯವರು:–** ಈಗ ಪ್ರಸ್ತಾವದ ಪರವಾಗಿರುವವರು ಹೌದು ಎಂದು ಹೇಳಿದ್ದಾರೆ. ಮಧ್ಯದಲ್ಲಿ ಎರಡು ಮಾತು ಹೇಳಬೇಕೆಂದಿದ್ದರಿಂದ ನಾನು ಅವಕಾಶ ಕೊಟ್ಟೆ. ನಿಮ್ಮ ಮಾತು ಆದ ನಂತರ ನಾನು ಅಲ್ಲಿಂದ ಮುಂದಕ್ಕೆ ತೆಗೆದುಕೊಂಡು ಹೋಗುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಒಂದೇ ಒಂದು ಮನವಿಯನ್ನು ಮಾಡುತ್ತೇನೆ. ನಂತರ ಬೇಕಾದರೆ ಅವರು ತಮ್ಮ ಮಾತುಗಳನ್ನು ಮುಂದುವರೆಸಲಿ.

**ಶ್ರೀ ಬಿ. ರಾಮಕೃಷ್ಣ:–** ಮಂಡಿಸಿದ ನಂತರ ಹೇಗೆ ವಾಪಸ್ ತೆಗೆದುಕೊಳ್ಳುತ್ತೀರಿ?

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಒಂದೇ ಒಂದು ಮನವಿಯನ್ನು ಮಾಡುತ್ತೇನೆ. ಮಾನ್ಯ ಕಾನೂನು ಮಂತ್ರಿಗಳು ತುಂಬಾ ಸ್ಪಷ್ಟವಾಗಿ ಅವರ ಭಾವನೆಗಳನ್ನು ಹೇಳಿದ್ದಾರೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಂಗಳೂರಿಗೆ ಒಂದು ವಿಶೇಷವಾದ ಹೆಸರಿದೆ. ಬೆಂಗಳೂರು ಎಂದ ತಕ್ಷಣ ಇಡೀ ದೇಶದಲ್ಲಿ ಕನ್ನಡ ಭಾಷೆಗೆ ಆದ್ಯತೆ ಇದೆ ಎನ್ನುವಂಥ ಒಂದು ಹೆಗ್ಗಳಿಕೆ ನಮಗಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಸರ್ಕಾರ ಮೂರು ಭಾಗ ಮಾಡಿದರೆ ಏನಾಗುತ್ತದೆಂದರೆ, ತಮಿಳು ಬೆಂಗಳೂರಿಗೆ ಬರಬೇಕಾ, ತೆಲುಗು ಬೆಂಗಳೂರಿಗೆ ಬರಬೇಕಾ, ಉರ್ದು ಬೆಂಗಳೂರಿಗೆ ಬರಬೇಕೇ ಎನ್ನುವಂಥ ಭಾವನೆಗಳು ಬರುತ್ತವೆ. ಖಂಡಿತ ಇಂತಹ ಭಾವನೆಗಳು ಬರುತ್ತವೆ. ಕನ್ನಡ ಭಾಷೆ ಬೆಂಗಳೂರಿನಲ್ಲಿ ಮರೆತು ಹೋಗುತ್ತದೆ.

**ಶ್ರೀ ಸಿದ್ದರಾಮಯ್ಯ:–** ಆ ತರಹದ ಊಹೆಗಳನ್ನು ಏಕೆ ಮಾಡಿಕೊಳ್ಳುತ್ತೀರಿ?

**ಶ್ರೀ ಕೆ.ಎಸ್. ಈಶ್ವರಪ್ಪ:–** ಇದು ಊಹೆಯಲ್ಲ, ನೀವು ಜನಗಣತಿಯಲ್ಲಿ ಅಂಕಿ–ಅಂಶಗಳನ್ನು ಸಂಗ್ರಹ ಮಾಡುತ್ತಿದ್ದೀರಿ ಅಲ್ಲವೇ? ಅನ್ಯಾಯವಾಗಿ ಬೆಂಗಳೂರನ್ನು ಬೇರೆ ಬೇರೆ ಅನ್ಯ ಭಾಷೆಗಳಿಗೆ ಬಿಟ್ಟು ಕೊಡುತ್ತೀರಿ. ಕನ್ನಡ ಭಾಷೆ ಪೂರ ವಾಪಸ್ ಹೋಗುತ್ತದೆ.

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನೀವು ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವುದಕ್ಕೆ ಅವಕಾಶವನ್ನು ಕಲ್ಪಿಸಿದ್ದೀರಿ. ಅಲ್ಲಿಂದ ಮುಂದೆ ನೀವು ಹೋಗಬೇಕು. ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿದ ನಂತರ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮಾತನಾಡಲಿಕ್ಕೆ ಅವಕಾಶ ಇದ್ದೇ ಇದೆ. ಅವರು ಮಾತನಾಡಲಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿದ ನಂತರ ಮಾತನಾಡಿ ಎಂದರೆ ಮಾತನಾಡುತ್ತೇನೆ.

**ಶ್ರೀ ಸಿದ್ದರಾಮಯ್ಯ:–** ನೀವು ನಂತರ ಮಾತನಾಡಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಆಗಬಹುದು.

**ಶ್ರೀ ಸಿದ್ದರಾಮಯ್ಯ:–** ನೀವು ಈ ಚರ್ಚೆಯಲ್ಲಿ ಭಾಗವಹಿಸಲಿಲ್ಲ ಅಲ್ಲವೇ?

**ಶ್ರೀ ಕೆ.ಎಸ್. ಈಶ್ವರಪ್ಪ:–** ಇಲ್ಲ, ನಾನು ಮಾತನಾಡಿಲ್ಲ. ಏಕೆಂದರೆ ಬೆಂಗಳೂರಿನಲ್ಲಿರುವವರು ಅವರ ವೈಯಕ್ತಿಕ ಅನುಭವದಿಂದ ಮಾತನಾಡುತ್ತಾರೆ. ಅವರು ಕಾರ್ಪೋರೇಟರ್ಸ್ ಆಗಿದ್ದಾರೆ, ಶಾಸಕರಾಗಿದ್ದಾರೆ, ಮಂತ್ರಿಗಳಾಗಿದ್ದಾರೆ. ಅವರ ಅನುಭವದಿಂದ ಬೆಂಗಳೂರನ್ನು ಉಳಿಸಬೇಕು, ಕನ್ನಡ ಭಾಷೆಯನ್ನು ಉಳಿಸಬೇಕೆಂದು ಈ ಸರ್ಕಾರಕ್ಕೆ ಏನೇನು ಹೇಳಬೇಕೋ ಎಲ್ಲವನ್ನು ಹೇಳಿದ್ದಾರೆ. ಸರ್ಕಾರದ ತಲೆಯೊಳಗೆ ಅದರ ಬಗ್ಗೆ ಶೇಕಡ ಒಂದರಷ್ಟು ಹೋಗಲಿಲ್ಲವೆಂದರೆ, ನಾವು ಏನು ಮಾಡುವುದಕ್ಕಾಗುತ್ತದೆ? ಮಾನ್ಯ ಕಾನೂನು ಸಚಿವರು ಪುನಃ ಅದನ್ನೇ ಪುನರಾವರ್ತನೆ ಮಾಡಿದರು. ನೀವು ನಂತರ ಮಾತನಾಡಿ ಎಂದರೆ ಮಾತನಾಡುತ್ತೇನೆ.

**ಶ್ರೀ ಬಿ. ರಾಮಕೃಷ್ಣ:–** ಮಂಡಿಸಿಬಿಟ್ಟು ವಾಪಸ್ ಏಕೆ ಹಿಂದಕ್ಕೆ ಹೋಗುತ್ತಿದ್ದೀರಿ ಎಂದು ಕೇಳುತ್ತಿದ್ದೇನೆ?

**ಸಭಾಪತಿಯವರು:–** ಈಗ ಇದು ಪರ್ಯಾಲೋಚನೆಯ ಹಂತದಲ್ಲಿದೆ. ನಂತರ ಬೇಕಾದರೆ ಮಾತನಾಡಬಹುದು.

**ಶ್ರೀ ಬಿ. ರಾಮಕೃಷ್ಣ:–** ಪರ್ಯಾಲೋಚನೆ ಮಾಡಿ ಹೌದು ಎಂದು ಹೇಳಿಸಿಬಿಟ್ಟು, ಮತ್ತೆ ನೀವು ಚರ್ಚೆಗೆ ಅವಕಾಶ ಕೊಟ್ಟರೆ ಇದರ ಅರ್ಥವೇನು?

**ಸಭಾಪತಿಯವರು:–** ಚರ್ಚೆಗೆ ಅವಕಾಶ ಕೊಡಲ್ಲ. ಚರ್ಚೆ ಮುಗಿದಿದೆ.

**ಶ್ರೀ ಸಿದ್ದರಾಮಯ್ಯ:–** ಚರ್ಚೆ ಇಲ್ಲ.

**ಶ್ರೀ ಬಿ. ರಾಮಕೃಷ್ಣ:–** ಹೌದು ಎಂದು ಅವರ ಕೈಯಲ್ಲಿ ಹೇಳಿಸಿಬಿಟ್ಟು ಪುನಃ ಹಿಂದಕ್ಕೆ ಹೋದರೆ ಆಗುತ್ತದೆಯೇ?

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ಈ ಹಂತದಲ್ಲಿ ಮಾಡಲಿಕ್ಕೆ ಆಗುವುದಿಲ್ಲ.

**ಶ್ರೀ ಬಿ. ರಾಮಕೃಷ್ಣ:–** ಹೌದು ಎಂದು ಹೇಳಿಸಿ ಪುನಃ ಹಿಂದಕ್ಕೆ ಹೋಗುತ್ತಿದ್ದೀರಿ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಅದನ್ನು ಮುಗಿಸಿಬಿಡಿ. ಹಾಗಿದ್ದ ಮೇಲೆ ಮುಖ್ಯಮಂತ್ರಿಗಳೇ ಮಾತನಾಡಬಹುದಾಗಿತ್ತಲ್ಲಾ?

**Sri SIDDARAMAIAH:-** In continuation of the reply given by the Law Minister…

**(ಗೊಂದಲ)**

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಕಾನೂನು ಸಚಿವರು ಉತ್ತರ ಕೊಡುವುದಕ್ಕಿಂತ ಮುಖ್ಯಮಂತ್ರಿಗಳೇ ಮಾತನಾಡಬಹುದಾಗಿತ್ತಲ್ಲಾ?

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೇ, ಈಗಾಗಲೇ ತಾವು ಮತಕ್ಕೆ ಹಾಕಿದ್ದೀರಿ, ಅವರು ಹೌದು ಎಂದು ಹೇಳಿದ್ದಾರೆ. ಈಗ ನಾವೇನು ಮಾಡಬೇಕೆಂಬುದನ್ನು ತಾವು ಹೇಳಬೇಕು.

**ಶ್ರೀ ಸಿದ್ದರಾಮಯ್ಯ:–** ಅವರಿಗೆ ಅಧಿಕಾರವಿದೆ.

**Sri K.B. SHANAPPA:-** Procedure, irregular ಆಗಿಬಿಡುತ್ತದೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, you have got inherent power.

**Sri SIDDARAMAIAH:-** Sir, you have got inherent power and you can take any decision.

**ಶ್ರೀ ಕೆ.ಎಸ್. ಈಶ್ವರಪ್ಪ:-** ತಮಗೆ ಅಧಿಕಾರವಿದೆ ಎಂದು ಹೇಳಿ ಈಗ ದಾರಿ ತಪ್ಪಿಸುತ್ತಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರು ತಮ್ಮ ಅಧಿಕಾರವನ್ನು ಬಳಸಿಕೊಂಡು ಮಾನ್ಯ ಮುಖ್ಯಮಂತ್ರಿಗಳಿಗೆ ಮಾತನಾಡಲಿಕ್ಕೆ ಅವಕಾಶವನ್ನು ಕಲ್ಪಿಸಿದ್ದಾರೆ.

**Sri SIDDARAMAIAH:-** Why are you curtailing the inherent power of Hon'ble Chairman.

(ಗೊಂದಲ)

**ಶ್ರೀ ಕೆ.ಎಸ್. ಈಶ್ವರಪ್ಪ:-** ನೀವು ದಾರಿ ತಪ್ಪಿಸುತ್ತಿದ್ದೀರಿ, ಇದು ಮುಖ್ಯಮಂತ್ರಿ ಸ್ಥಾನದ ದುರುಪಯೋಗ.

**Sri SIDDARAMAIAH:-** Sir, you have got inherent power and you can revive any decision.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರಿಗೆ unfettered powers ಇದೆ. ಅವರು ಮಧ್ಯದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಮಾತನಾಡಲಿಕ್ಕೆ ಅವಕಾಶವನ್ನು ಕಲ್ಪಿಸಿದ್ದಾರೆ. ನೀವು ಕೇಳುವ ಸೌಜನ್ಯವನ್ನು ತೋರಿಸಿ.

**ಶ್ರೀ ಸಿದ್ದರಾಮಯ್ಯ:-** ಶಾಣಪ್ಪನವರೆ, ನೀವು ಸೀನಿಯರ್ ಮೆಂಬರ್, ಹೀಗಾದರೆ ಹೇಗೆ?

**ಶ್ರೀ ಕೆ.ಬಿ. ಶಾಣಪ್ಪ:-** ನಾನು ಸಹ ಅದನ್ನೇ ಹೇಳುತ್ತಿದ್ದೇನೆ. ಸೀನಿಯರ್ ಮಾತನ್ನು ಕೇಳಿ. ನೀವು 'ಹೌದು' ಎಂದು ಹೇಳಿದ ಮೇಲೆ, ನಾವು 'ಹೌದು' ಎನ್ನಬೇಕೋ 'ಇಲ್ಲ' ಎನ್ನಬೇಕೋ ಎನ್ನುವ ಬಗ್ಗೆ ನಮ್ಮ ಅಭಿಪ್ರಾಯವನ್ನು ಕೇಳಿ. In between how can you intervene in this?

**ಶ್ರೀ ಸಿದ್ದರಾಮಯ್ಯ:–** ನೀವು 'ಹೌದು' ಎನ್ನಬೇಕೋ 'ಇಲ್ಲ' ಎನ್ನಬೇಕೋ ಎನ್ನುವ ಬಗ್ಗೆ ಆಯ್ಕೆ ನಿಮ್ಮ ಬಳಿ ಇದೆ. ನಿಮಗೆ option ಇದೆ. ನೀವು 'ಹೌದು' ಎಂದಾದರೂ ಹೇಳಿ, 'ಇಲ್ಲ' ಎಂದಾದರೂ ಹೇಳಿ. ಅವರು ಏನು ಹೇಳುತ್ತಾರೋ ಹೇಳಲಿ, ನಂತರ ನೋಡೋಣ.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು....

**ಸಭಾಪತಿಯವರು:–** ಆಯಿತು ಬಿಡಿ, ಅದನ್ನೇ ಎಷ್ಟು ಚರ್ಚೆ ಮಾಡುತ್ತೀರಾ? ನಾನು ಅವರಿಗೆ ಎರಡು ನಿಮಿಷಗಳ ಕಾಲ ಮಾತನಾಡಿ ಎಂದು ಹೇಳಿದ್ದೇನೆ.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಹೊಸ ಸಂಪ್ರದಾಯವನ್ನು ಏಕೆ ಹಾಕುತ್ತೀರಿ? ಅವರು ರಾಜ್ಯದ ಮುಖ್ಯಮಂತ್ರಿಗಳು. 'ಹೌದು' ಎಂದು ಹೇಳಿದ ಮೇಲೆ... ತಮಗೆ ಒಪ್ಪಿಗೆಯೇ?

**(ಗೊಂದಲ)**

**ಸಭಾಪತಿಯವರು:–** ಮಾತನಾಡಲಿ ಬಿಡಿ, ಒಳ್ಳೆಯ ತಮಾಷೆ ಆಯಿತಲ್ಲಾ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸೋಮಣ್ಣನವರೆ, ನೀವು ಮಾತನಾಡುವುದೇ ಹೊಸ ಸಂಪ್ರದಾಯ.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿಯೇ ಇದ್ದರು. ಕಾನೂನು ಸಚಿವರು ಸವಿಸ್ತಾರವಾಗಿ ಅವರದೇ ಆದ ಧಾಟಿಯಲ್ಲಿ ಹೇಳಿದರು. ಅದಾದ ನಂತರ ತಾವು ಮತಕ್ಕೆ ಹಾಕಿದಿರಿ. ಮತಕ್ಕೆ ಹಾಕಿ 'ಹೌದು' ಎಂದು ಹೇಳಿದ ಮೇಲೆ ತಾವು 'ಖಂಡ ಖಂಡವಾಗಿ' ತೆಗೆದುಕೊಳ್ಳುವಂಥ ಸಂದರ್ಭದಲ್ಲಿ ಮಧ್ಯದಲ್ಲಿ ಮಾತನಾಡಿ ಎಂದಾಗ ಇದು ಯಾವ ಸಂಪ್ರದಾಯ?

**(ಗೊಂದಲ)**

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೆ, ಹೊಸ ಗೊಂದಲವನ್ನು ಸೃಷ್ಟಿ ಮಾಡುತ್ತಿದ್ದೀರಿ? ಅವರು ಹೇಳಲಿ.

**ಶ್ರೀ ಸಿದ್ದರಾಮಯ್ಯ:–** ಅವರು ತೀರ್ಮಾನವನ್ನು ತೆಗೆದುಕೊಳ್ಳಲಿ.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೇ, ನೀವು ಮತಕ್ಕೆ ಹಾಕಿ ಹೌದು ಎಂದು ಹೇಳಿದ ಮೇಲೆ ಇದು ಎಂತಹದ್ದು? ಇದು ಯಾವ ಕಾನೂನಿನಲ್ಲಿದೆ ದಯಮಾಡಿ ಹೇಳಿ.

**ಸಭಾಪತಿಯವರು:–** ಒಂದು ನಿಮಿಷ ಎಲ್ಲರೂ ಕುಳಿತುಕೊಳ್ಳಿ. ಈಗ ಚರ್ಚೆಗೆ ಉತ್ತರವನ್ನು ಸರ್ಕಾರದ ಪರವಾಗಿ ಮಾನ್ಯ ಕಾನೂನು ಸಚಿವರು ಕೊಟ್ಟ ಮೇಲೆ ನಾನಿದನ್ನು ಪರ್ಯಾಲೋಚನೆ ಮಾಡಬೇಕೆಂದು ಮತಕ್ಕೆ ಹಾಕಿದ್ದು ಹೌದು. ಪ್ರಸ್ತಾವದ ಪರವಾಗಿರುವವರು 'ಹೌದು' ಎಂದು ಹೇಳಿ ಎಂದೆ, ಹೇಳಿದರು. ಆ ಸಮಯದಲ್ಲಿ ಅಂದರೆ ವೋಟಿಂಗ್ ಆಗುತ್ತಿರುವಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರು ಎಂದರೆ, ನಾನೂ ಇನ್ನು ಎರಡು ಮಾತುಗಳನ್ನು ಹೇಳಬೇಕಾಗಿತ್ತು, ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ ಎಂದು ಕೇಳಿದರು. ಆಗ ನಾನು ಇದರ ಪರವಾಗಿರುವವರು 'ಹೌದು' ಎಂದು ಸೂಚಿಸಬೇಕು ಎಂದು ಹೇಳಿದಾಗ ಕೆಲವರು 'ಹೌದು' ಎಂದು ಹೇಳಿದರು, ಕೆಲವರು ಸುಮ್ಮನೆ ಕುಳಿತಿದ್ದರು. ಅವರು ಇಲ್ಲವೆಂದು ಹೇಳಲಿಲ್ಲ. ನಾನು ಇಲ್ಲವೆಂದು ಕೇಳಲಿಲ್ಲ. ಸುಮ್ಮನೆ ಕುಳಿತಿದ್ದರು. ಆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ನಾನೂ ಸಹ ಎರಡು ಮಾತುಗಳನ್ನು ಸೇರಿಸಬೇಕಾಗಿದೆ ನನಗೆ ಅವಕಾಶವನ್ನು ಕೊಡಿ ಎಂದು ಕೇಳಿದರು. ಸಾಮಾನ್ಯವಾಗಿ ವಿಧೇಯಕದ ಬಗ್ಗೆ ವೋಟಿಂಗ್ ಆಗುವಾಗ ಅದನ್ನು ಡಿವಿಜನ್‌ಗೆ ಪ್ರೆಸ್ ಮಾಡಬಹುದು ಅಥವಾ ಮಧ್ಯದಲ್ಲಿಯೇ ಯಾವಾಗ ಬೇಕಾದರೂ ಅದನ್ನು ಡಿವಿಜನ್‌ಗೆ ಪ್ರೆಸ್ ಮಾಡಬಹುದು ಅಥವಾ ಅದನ್ನು defeat ಮಾಡಬಹುದು ಅಥವಾ ಅದನ್ನು 'ಹೌದು' ಎಂದು ಹೇಳಿ ಒಪ್ಪಿಕೊಳ್ಳಬಹುದು. ಆದರೆ ಮಧ್ಯದಲ್ಲಿ ಮಾನ್ಯ ಮುಖ್ಯಮಂತ್ರಿಗಳೇ ನಾನು ಮಾತನಾಡಬೇಕು, ನನಗೊಂದು ಅವಕಾಶವನ್ನು ಕೊಡಿ ಎಂದು ಕೇಳಿರುವ ಹಿನ್ನೆಲೆಯಲ್ಲಿ ನಾನು ಒಂದೆರಡು ನಿಮಿಷಗಳ ಕಾಲ ನೀವು ಮಾತನಾಡುವ ಹಾಗಿದ್ದರೆ ಮಾತನಾಡಿ ಎಂದು ಹೇಳಿದ್ದು ಹೌದು. ಅವರಿಗೆ ಅವಕಾಶವನ್ನು ಕೊಟ್ಟಿದ್ದೇನೆ. ಮಾತನಾಡಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಇದು ಹೊಸ ಸಂಪ್ರದಾಯವಾಗುತ್ತದೆ, ಬೇಡ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರು ನಾನು ಮಾತನಾಡುವುದು ಬೇಡ ಎಂದು ಹೇಳಿದರೆ ನಾನು ಮಾತನಾಡುವುದಿಲ್ಲ. ಅವರು ಮಾತನಾಡಿ ಎಂದರೆ ನಾನು ಮಾತನಾಡುತ್ತೇನೆ. ಈಗ ಅವರು ಮಾತನಾಡುವುದಕ್ಕೆ ಹೇಳುತ್ತಿದ್ದಾರೆ, ನಾನು ಮಾತನಾಡಲೋ ಬೇಡವೋ ನಿಮ್ಮ ಅಭಿಪ್ರಾಯವನ್ನು ಹೇಳಿ. ಮಾನ್ಯ ಶಾಣಪ್ಪನವರೆ, ಅವರು ಅನುಮತಿಯನ್ನು ಕೊಟ್ಟ ನಂತರ ಮಾತನಾಡಬೇಕೋ ಬೇಡವೋ?

**ಶ್ರೀ ಬಸವರಾಜ ಹೊರಟ್ಟಿ:–** ಮಾತನಾಡಿ.

**ಶ್ರೀ ಸಿದ್ದರಾಮಯ್ಯ:-** ಶಾಣಪ್ಪನವರೇ, ನಾನು ಮಾತನಾಡುವಾಗ ನೀವು ಅಡ್ಡ ಬರದೇ ಇದ್ದರೆ ಸಾಕು. ಬೇರೆ ಯಾರು ಅಡ್ಡ ಬಂದರು ಪರವಾಗಿಲ್ಲ. ಮಾನ್ಯ ಬಸವರಾಜ ಹೊರಟ್ಟಿಯವರು ಅಡ್ಡ ಬಂದರೂ ಪರವಾಗಿಲ್ಲ.

ಮಾನ್ಯ ಸಭಾಪತಿಯವರೇ, ನಿಮ್ಮ ತೀರ್ಮಾನಗಳಿಗೆ, ನಿಮ್ಮ ಆದೇಶಗಳಿಗೆ ನಾವೆಲ್ಲರೂ ಸಹ ತಲೆಬಾಗುತ್ತೇವೆ. ಅದರ ಬಗ್ಗೆ ಎರಡನೆ ಮಾತಿಲ್ಲ. ಈ ಸದನದಲ್ಲಿ.... ಅವರಿಂದಲೇ ನಾವು ಇದನ್ನೆಲ್ಲಾ ಕಲಿತಿರುವುದು. ಏಕೆಂದರೆ ಅವರು ನನಗಿಂತ ಮುಂಚೆ ಸದಸ್ಯರಾಗಿ ಬಂದಿದ್ದಾರೆ. ಅವರೇ ನನಗೆ ಹೇಳಿಕೊಟ್ಟಿದ್ದು. ಅವರೇ ಹೇಳಿಕೊಟ್ಟು ಈಗ ಕಲಿಯಬೇಕು ಎಂದರೆ ಹೇಗೆ? I leave this to Mr.Horatti. ಇವರದೇ ವಿವೇಚನೆಗೆ ಬಿಟ್ಟರೆ ಈ ತರಹ ಮಾತನಾಡಲ್ಲ. ಆಗ ನಾವು ಹೇಳತಕ್ಕಂಥಾದ್ದು, ನಮ್ಮ ನಿಲುವೆಲ್ಲಾ ಸರಿ ಎಂದು ಒಪ್ಪಿಕೊಳ್ಳುತ್ತಾರೆ. ಪಾಪ, ಅವರಿಗೆ ಇನ್ನೊಬ್ಬರು ಬೇರೆಯವರಿಂದ instructions ಇದೆ. ಆದ್ದರಿಂದ ಹೀಗೆ ಹೇಳುತ್ತಾರೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಅವರಿಗೆ ಹೇಗೆ ಹೈಕಮ್ಯಾಂಡ್ ಇದೆಯೋ ಅದೇ ರೀತಿ ನಮಗೂ ಇದೆ. We are abiding by the party decision. ನಮ್ಮ ಪಕ್ಷದ ವತಿಯಿಂದ ಯಾವ ಸೂಚನೆ ಇರುತ್ತದೋ ಆ ರೀತಿಯಲ್ಲಿ ಮಾಡುತ್ತೇವೆ.

**ಶ್ರೀ ಬಿ. ರಾಮಕೃಷ್ಣ:-** ಸನ್ಮಾನ್ಯ ಮುಖ್ಯಮಂತ್ರಿಗಳುಯಾರ ಆದೇಶದ ಮೇಲೆ . . .

**ಶ್ರೀ ಸಿದ್ದರಾಮಯ್ಯ:-** ಸನ್ಮಾನ್ಯ ಸಭಾಪತಿಯವರೆ, ನಮ್ಮ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಬಹಳ ದೀರ್ಘವಾಗಿ, ಉತ್ತರವನ್ನು ಕೊಟ್ಟಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:-** ಸುದೀರ್ಘವಾಗಿಉತ್ತರವನ್ನುಕೊಟ್ಟಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** ಸುದೀರ್ಘವಾಗಿ ಉತ್ತರವನ್ನು ಕೊಟ್ಟಿದ್ದಾರೆ. ನಿಮ್ಮ ಪದವನ್ನೇ ಬಳಸೋಣ. ನಾವು Karnataka Municipal Corporations Act, 1976 ಕ್ಕೆ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಈಗ ಇರತಕ್ಕಂತಹ ಬಿಬಿಎಂಪಿಯನ್ನು ತೆಗೆದು ಹಾಕಿ, ಈಗ ಇರತಕ್ಕಂತಹ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ವಿಭಜನೆ ಮಾಡಬೇಕೆನ್ನುವುದು ನಮ್ಮ ಸರ್ಕಾರದ ಉದ್ದೇಶ. ಈ ಒಂದು ಉದ್ದೇಶ ಏನಿದೆ, ತಕ್ಷಣವೇ ತೆಗೆದುಕೊಂಡ ಉದ್ದೇಶ ಅಲ್ಲ. ಈಗ ಕಳೆದ ಒಂದೆರಡು ತಿಂಗಳುಗಳಲ್ಲಿ ಮೂರು ತಿಂಗಳಿನಲ್ಲಿ, ಆರು ತಿಂಗಳಿನಲ್ಲಿ ಉದ್ಭವ ಆಗಿರುವಂತಹದ್ದಲ್ಲ. ನಾವು ಏನು 2013 ರಲ್ಲಿ ಚುನಾವಣೆಗಿಂತ ಮುಂಚಿತವಾಗಿ ಚುನಾವಣಾ ಪ್ರಣಾಳಿಕೆಯನ್ನು ಮಾಡಿದೆವು, ಆ

ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ it is one of the promises made to the people of Karnataka and also to the people of Bangalore City. ಎರಡು ವರ್ಷಗಳು ಕಳೆದಿದೆ. ಚುನಾಯಿತ ಸಂಸ್ಥೆ ಏನಿತ್ತು, ಅದರ ಅವಧಿ 2010 ರಿಂದ 2015ನೇ ಏಪ್ರಿಲ್ 22 ರವರೆಗೆ ಇತ್ತು. ನಮ್ಮ ಸರ್ಕಾರ ಬಂದ ತಕ್ಷಣವೇ ಅದನ್ನು ಮಾಡಬಹುದಾಗಿತ್ತು. ಸೂಪರ್‌ಸೀಡ್ ಮಾಡಿ, ಈಗ ನಾವು ಏನು ಪ್ರಾಮಿಸ್ ಮಾಡಿದ್ದೇವೆ, ಈ ಪ್ರಾಮಿಸ್ ಅನ್ನು ನಾವು ಫುಲ್‌ಫಿಲ್ ಮಾಡಲಿಕ್ಕೆ ಪ್ರಯತ್ನ ಮಾಡಬಹುದಾಗಿತ್ತು. ಆದರೆ, ಪ್ರಜಾಪ್ರಭುತ್ವದ ವ್ಯವಸ್ಥೆಯೊಳಗಡೆ ಒಂದು ಚುನಾಯಿತ . . .

(ಗೊಂದಲ)

**ಶ್ರೀ ಬಸವರಾಜ ಹೊರಟ್ಟಿ:–** ಎರಡು ವರ್ಷಗಳು ಮುಗಿಸಿದ್ದೀರಿ.

**ಶ್ರೀ ಸಿದ್ದರಾಮಯ್ಯ:–** ಎತಕ್ಕೆ ಈ ರೀತಿ ಹೇಳುತ್ತಿದ್ದೀರಿ, ಶ್ರೀಯುತ ಹೊರಟ್ಟಿಯವರೆ?

**ಶ್ರೀ ಕೆ.ಬಿ. ಶಾಣಪ್ಪ:–** ಬಹಳ lenience ಕೊಟ್ಟುಬಿಟ್ಟಿದ್ದೀರಿ.

**ಶ್ರೀ ಸಿದ್ದರಾಮಯ್ಯ:–** ಕೊಟ್ಟಿದ್ದೇವೆ ಅಲ್ಲವೇ? ಸ್ವಲ್ಪ ಹೊರಟ್ಟಿಯವರಿಗೆ ಶ್ರೀಯುತ ಶಾಣಪ್ಪನವರು ಹೇಳಬೇಕು. ಒಬ್ಬರನ್ನೇ ಕರೆದುಕೊಂಡು ಬುದ್ಧಿವಾದ ಹೇಳಿ. ಹೀಗಾಗಿ, ಈ ವಿಚಾರದಲ್ಲಿ ಇದ್ದಕ್ಕಿದ್ದಂತೆ ಇದರ ಬಗ್ಗೆ ನಾವು ಏನೋ ಮಾಡುತ್ತೇವೆಂದು ಹೊರಟಿರುವುದಲ್ಲ. It has been discussed in the public domain. ಇದರ ಬಗ್ಗೆ ಅನೇಕ ಕಡೆಗಳಲ್ಲಿ ಚರ್ಚೆಯಾಗಿದೆ. ಇದು ನಮ್ಮ ಒಬ್ಬರದ್ದೇ ಅಪೇಕ್ಷೆಅಲ್ಲ. ಬಿಜೆಪಿಯವರು ಸಹ ಅವರ ಪ್ರಣಾಳಿಕೆಯಲ್ಲಿ ಹೇಳಿದ್ದರು. ಅದರ ಬಗ್ಗೆ ದೊಡ್ಡ ವ್ಯಾಖ್ಯಾನ ಆಗಿದೆ. ನಾನು ಹೇಳುವುದಕ್ಕೆ ಹೋಗುವುದಿಲ್ಲ. ಪುನರ್‌ರಚನೆ ಅಂದರೆ ಅದಲ್ಲವೆಂದು ಮಾನ್ಯ ಸದಸ್ಯರಾದ ಶ್ರೀಯುತ ಸೋಮಣ್ಣನವರು ಬಹಳ ದೊಡ್ಡದಾಗಿ ವ್ಯಾಖ್ಯಾನ ಮಾಡಿದರು. ಅದು ಪುನರ್ ರಚನೆ ಅಲ್ಲ, ಆಡಳಿತದಲ್ಲಿ ಸುಧಾರಣೆ ತರುವುದು ಎಂದು ಹೇಳಿದ್ದಾರೆಂದು ಹೇಳಿದರು.

(ಗೊಂದಲ)

**ಸಭಾಪತಿಯವರು:–** ಪದ ಪದಕ್ಕೂ ಮಧ್ಯದಲ್ಲಿ ಬಾಯಿ ಹಾಕಿ ತೊಂದರೆ ಕೊಡಬೇಡಿ. ಅವರು ಹೇಳಲಿ ಬಿಡಿ. ನೀವು ಹೇಳುವುದನ್ನೆಲ್ಲಾ ಅವರು ಒಪ್ಪಿಬಿಡುತ್ತಾರಾ?

**ಶ್ರೀ ಸಿದ್ದರಾಮಯ್ಯ:–** ಸ್ವಲ್ಪ ನಾನು ಹೇಳುವುದನ್ನು ಕೇಳಿ.

(ಗೊಂದಲ)

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಸೋಮಣ್ಣನವರ ಹೆಸರನ್ನು ಏತಕ್ಕೆ ಹೇಳುತ್ತಿದ್ದೀರಿ?

**ಶ್ರೀ ಸಿದ್ದರಾಮಯ್ಯ:–** ನಾನು ಪ್ರೀತಿಯಿಂದ ಸೋಮಣ್ಣನವರ ಹೆಸರನ್ನು ಹೇಳಿದರೆ ನೀವು ಏತಕ್ಕೆ ಆಕ್ಷೇಪಣೆ ಮಾಡುತ್ತೀರಿ? ನನಗೂ ಮತ್ತು ಶ್ರೀಯುತ ಸೋಮಣ್ಣನವರಿಗೆ ಎಂತಹ ಸುಮಧುರವಾದಂತಹ ಬಾಂಧವ್ಯ ಇದೆ, ಅನೇಕ ಬಾರಿ ನನ್ನ ಹತ್ತಿರ ಬಂದು ಸಲಹೆಗಳನ್ನೆಲ್ಲಾ ತೆಗೆದುಕೊಂಡು ನನ್ನ ಸಲಹೆಗಳ ಪ್ರಕಾರವೇ ಶ್ರೀಯುತ ಸೋಮಣ್ಣನವರು ಕೆಲಸವನ್ನು ಮಾಡಿದ್ದಾರೆ. ಅದನ್ನೆಲ್ಲಾ ಶ್ರೀಯುತ ಸೋಮಣ್ಣನವರು ಮರೆತುಬಿಟ್ಟಿದ್ದಾರೆ.

**ಶ್ರೀ ಬಿ. ರಾಮಕೃಷ್ಣ:–** ಶ್ರೀಯುತ ಹೊರಟ್ಟಿಯವರು ಬೇಸರ ಮಾಡಿಕೊಳ್ಳುತ್ತಾರೆ.

**ಶ್ರೀ ಸಿದ್ದರಾಮಯ್ಯ:–** ಶ್ರೀಯುತ ಹೊರಟ್ಟಿಯವರು ಬೇಸರ ಮಾಡಿಕೊಳ್ಳುವುದಿಲ್ಲ. ನೀವು ಬೇಸರ ಮಾಡಿಕೊಳ್ಳಬೇಡಿ. ನೀವು ಏತಕ್ಕೆ ಬೇಸರ ಮಾಡಿಕೊಳ್ಳುತ್ತೀರಿ?

**ಶ್ರೀ ಬಿ. ರಾಮಕೃಷ್ಣ:–** ತಾವು ಸೋಮಣ್ಣನವರಿಗೆ ಸಲಹೆಗಳನ್ನು ಕೊಟ್ಟೆ ಎಂದರೆ ಶ್ರೀಯುತ ಹೊರಟ್ಟಿಯವರು ಬೇಸರ ಮಾಡಿಕೊಳ್ಳುತ್ತಾರೆಂದು ಹೇಳಿದೆ.

**ಶ್ರೀ ಸಿದ್ದರಾಮಯ್ಯ:–** ಶ್ರೀಯುತ ಹೊರಟ್ಟಿಯವರು ಸಹ good friend of mine. ಶ್ರೀಯುತ ಸೋಮಣ್ಣನವರು, ಶ್ರೀ ಕೆ.ಬಿ. ಶಾಣಪ್ಪನವರು they are good friends of mine. ಇಲ್ಲವೆಂದು ಆ ಮೂರು ಜನರು ಹೇಳಲಿ ನೋಡೋಣ. ಅದೇ ರೀತಿಯಲ್ಲಿ ನಮ್ಮದು ಮತ್ತು ಶ್ರೀಯುತ ಈಶ್ವರಪ್ಪನವರದ್ದು ಯಾವ ರೀತಿ ಎಂದರೆ love and hate relationship. ಶ್ರೀಯುತ ಶಾಣಪ್ಪನವರಿಗೆ ಗೊತ್ತಿರುವಂತೆ ನಾನು ಯಾವಾಗಲೂ ಸತ್ಯವನ್ನೇ ಹೇಳುವುದು. ಕೆಲವು ಬಾರಿ ಸತ್ಯಗಳು ಕಹಿಯಾಗುತ್ತವೆ.

**ಶ್ರೀ ಕೆ.ಬಿ. ಶಾಣಪ್ಪ:–** ತಾವು ಬಹಳ ಚೆನ್ನಾಗಿ ಹೇಳಿದಿರಿ. ಬಹಳ ವಿಷಯಗಳು ನನಗೆ ಗೊತ್ತಿರಲಿಲ್ಲ.

**ಶ್ರೀ ಸಿದ್ದರಾಮಯ್ಯ:-** ಗೊತ್ತಾಗುವುದು ಬೇಡ. ಆದ್ದರಿಂದ, ಬಿಜೆಪಿಯವರು ಕೂಡ 2013 ರ ಚುನಾವಣಾ ಪ್ರಣಾಳಿಕೆಯಲ್ಲಿ ಈ ಬಗ್ಗೆ ಹೇಳಿದ್ದಾರೆ. ನಾನು ಅದನ್ನು ಓದಿ ಹೇಳುವುದು ಅಗತ್ಯವಿಲ್ಲವೆಂದು ತಿಳಿದುಕೊಂಡಿದ್ದೇನೆ. They all admit it. Admit ಮಾಡಿಕೊಳ್ಳುತ್ತಾರೆಂದು ನಾನು ಭಾವಿಸಿಕೊಳ್ಳುತ್ತೇನೆ. ಅವರು ಕೂಡ ಪುನರ್‌ರಚನೆ ಬಗ್ಗೆ ಮಾತನಾಡಿದ್ದಾರೆ. ಇದು ಹೊಸ ವಿಚಾರವೇ ಮಾನ್ಯ ಸಭಾಪತಿಯವರೆ. It is not a new idea. ಅವರು ಸಹ ಒಂದು ರಾಜಕೀಯ ಪಕ್ಷವಾಗಿ ಹೇಳಿದ್ದಾರೆ. ಅವರು 5 ವರ್ಷಗಳ ಕಾಲ ಅಧಿಕಾರ ಮಾಡಿ, ತಮ್ಮ ಅನುಭವದ ಮೇಲೆ ಈ ವಿಚಾರವನ್ನು ಹೇಳಿರುವುದನ್ನು ಈಗ ರಾಜಕೀಯ ಕಾರಣಕ್ಕೋಸ್ಕರವಾಗಿ ನಾವು ತಂದಿರುವಂತಹ ಈ ತಿದ್ದುಪಡಿಯನ್ನು ವಿರೋಧ ಮಾಡುತ್ತಿದ್ದಾರೆ. ಒಂದು ಕಡೆ ಒಂದು ಸೆಮಿನಾರ್‌ನಲ್ಲಿ ಮಾನ್ಯ ಜಗದೀಶ್ ಶೆಟ್ಟರ್‌ರವರು ಹೇಳಿದ್ದಾರೆ. ಶ್ರೀಯುತ ರವೀಂದ್ರರವರು ನಮ್ಮ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾಗಿದ್ದರು. ಕಾರ್ಪೋರೇಷನ್ ಕಮಿಷನರ್ ಕೂಡ ಆಗಿದ್ದರು. ಅವರು ಮುಖ್ಯಮಂತ್ರಿಗಳಿಗೆ ಸಲಹೆಗಾರರಾಗಿದ್ದರು. ಅವರು 2013 ರಲ್ಲಿ ಒಂದು ಸೆಮಿನಾರ್ ಮಾಡಿದ್ದಾರೆ. ಆ ಒಂದು ಸೆಮಿನಾರ್‌ನಲ್ಲಿ ಶ್ರೀಯುತ ಜಗದೀಶ್ ಶೆಟ್ಟರ್‌ರವರು ಕೂಡ ಕರ್ನಾಟಕದ ಮುಖ್ಯಮಂತ್ರಿಗಳಾಗಿ ಭಾಗವಹಿಸಿದ್ದಾರೆ. ಇದು proceedings of the seminar on re-organization of Bangalore. ಆಮೇಲೆ ರಾಮನಾಥನ್ ಎಂದು ಹೇಳಿ ನಿವೃತ್ತ ಐಎಎಸ್ ಅಧಿಕಾರಿಗಳು. ಇವರು ಸಹ ಮುಖ್ಯಮಂತ್ರಿಗಳಿಗೆ restructuring of the Bruhat Bangalore Mahanagara Palike ಎಂದು ಹೇಳಿ ಒಂದು ಪತ್ರವನ್ನು ಬರೆಯುತ್ತಾರೆ. ಇದು ಆ ಒಂದು ಪ್ರೊಸೀಡಿಂಗ್ಸ್. ಇದು ಯಾವಾಗ ನಡೆದಿದೆ ಎಂದರೆ 19-01-2013 ರಲ್ಲಿ ನಡೆದಿದೆ. ಅದರಲ್ಲಿ ಗೌರವಾನ್ವಿತ ಮುಖ್ಯಮಂತ್ರಿಗಳಾದಂತಹ ಶ್ರೀ ಜಗದೀಶ್ ಶೆಟ್ಟರ್‌ರವರು ಮತ್ತು ರವೀಂದ್ರರವರು ಸೇರಿದಂತೆ ಅದರಲ್ಲಿ ಮಾತನಾಡಿದವರೆಲ್ಲರೂ ಏನು ಹೇಳಿದ್ದಾರೆಂದರೆ ಬೆಂಗಳೂರು unwieldy ಆಗಿದೆ. ಅದನ್ನು 2 ಅಥವಾ 3 ಕಾರ್ಪೋರೇಷನ್‌ಗಳನ್ನಾಗಿ ಮಾಡಬೇಕೆಂದು ಹೇಳಿದ್ದಾರೆ. Hon'ble Chief Minister highlighted the following points: "Mr. Jagadeeshshettar:- The proposal to bifurcate BBMP and re-organize is necessary to provide better amenities to people. In this direction it is a good place for debate and the matters have to be thoroughly discussed and decisions arrived at..."

**ಶ್ರೀ ವಿ. ಸೋಮಣ್ಣ:-** ಇದನ್ನು ಡಿಬೇಟ್ ಎಂದು ಹೇಳಿದ್ದಾರಷ್ಟೆ.

**ಶ್ರೀ ಸಿದ್ದರಾಮಯ್ಯ:–** ನಾನು ಇಲ್ಲವೆಂದು ಹೇಳಲಿಲ್ಲ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ, ಹೇಳಲಿ.

**(ಗೊಂದಲ)**

**(ಎರಡೂ ಕಡೆಯ ಹಲವಾರು ಸದಸ್ಯರುಗಳು ಒಮ್ಮೆಲೆ ಮಾತನಾಡತೊಡಗಿದರು)**

**ಸಭಾಪತಿಯವರು:–** ಅವರು ಏನು ಹೇಳುತ್ತಾರೆಯೋ ಹೇಳಲಿ. ಅವರಿಗೆ ಅವಕಾಶ ಮಾಡಿ ಕೊಡಿ. ಅವರು ಏನು ಹೇಳುತ್ತಾರೆಯೋ ಕೇಳೋಣ. ಅವರು ಏನೋ ಕೆಲವು ಅಂಶಗಳ ಬಗ್ಗೆ ಓದುತ್ತಿದ್ದಾರೆ. ಓದಲಿ ಬಿಡಿ. ಆಯಿತು ಎಲ್ಲರೂ ಕುಳಿತುಕೊಳ್ಳಿ. ಏನು ಮಾಡಬೇಕೆಂಬುದು ನಿಮ್ಮ ಆಸೆ. ನಿಮ್ಮ ಇಷ್ಟ ಏನು? ನಾನು ಏನು ಮಾಡಬೇಕು. ಅವರು ಏನು ಹೇಳುತ್ತಾರೆಯೋ ಹೇಳಲಿ. ಬಿಡಿ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಇವರಿಗೆ ಸತ್ಯ ಕೇಳುವುದಕ್ಕೆ ಮನಸ್ಸು ಇಲ್ಲ.

**ಸಭಾಪತಿಯವರು:–** ಹಾಗಾದರೆ, ಮಾನ್ಯ ಮುಖ್ಯಮಂತ್ರಿಯವರು ಮಾತನಾಡುವುದು ಬೇಡವೇ?

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಸತ್ಯ ಹೇಳಿದ್ದಕ್ಕೆ ನಿಮಗೆ ನೋವಾಯಿತೇ?

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಗಳೇ ಮಾನ್ಯ ಮುಖ್ಯಮಂತ್ರಿಯವರು ಹೇಳುತ್ತಿರುವ ವಿಷಯಗಳ ಬಗ್ಗೆ ಸೆಮಿನಾರ್‌ನಲ್ಲಿ ಚರ್ಚೆಯಾಗಿರುವುದರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ. ಇದು ಸತ್ಯ. ನಾನು ಇಲ್ಲವೆಂದು ಹೇಳುವುದಿಲ್ಲ. ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿರುವ ವೈಯಕ್ತಿಕ ಅಭಿಪ್ರಾಯ ಇದೆಯಲ್ಲಾ ಅದು ಸರ್ಕಾರದ ಆದೇಶ ಅಲ್ಲ. ಸರ್ಕಾರ ಅಂದರೆ ಸಚಿವ ಸಂಪುಟ ಇದೆ. ಅಲ್ಲಿ ಚರ್ಚೆ ಮಾಡಬೇಕು. ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಈ ಬಗ್ಗೆ ವಿಧೇಯಕ ತರಬೇಕು ಆ ವಿಧೇಯಕ

ಎರಡೂ ಸದನಗಳಲ್ಲಿ ಪಾಸಾಗಬೇಕು. ಉದಾಹರಣೆಗೆ ಹೇಳುವುದಾದರೆ, ಹಿಂದೆ ಶ್ರೀ ಕೃಷ್ಣ ಮಠದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಾಗಲೀ, ಮಾನ್ಯ ಜಯಚಂದ್ರ ಅವರು ವೈಭವದ ಮದುವೆಗಳನ್ನು ನಿಲ್ಲಿಸುತ್ತೇವೆಂದು ಹೇಳಿ ಹೇಳಿಕೆ ನೀಡಿದರಲ್ಲಾ ಅದು ಆದೇಶವಾ? ಅದೇ ರೀತಿಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಕೃಷ್ಣ ಮಠವನ್ನು ಸ್ವಾಧೀನ ಮಾಡಿಕೊಳ್ಳುತ್ತೇವೆಂದು ಹೇಳಿದರು. ಆದರೆ ಇವೆಲ್ಲವೂ ಆದೇಶವೇ? ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಚಿವ ಸಂಪುಟದಲ್ಲಿ ಚರ್ಚೆ ಮಾಡಿ ಇಲ್ಲಿ ವಿಧೇಯಕವನ್ನು ತಂದು ಚರ್ಚೆ ಮಾಡಿ ಒಂದು ತೀರ್ಮಾನವನ್ನು ಮಾಡಿ ಆ ವಿಧೇಯಕವನ್ನು ಪಾಸ್ ಮಾಡಿಕೊಳ್ಳಬೇಕು. ಮಾನ್ಯ ಜಗದೀಶ್ ಶೆಟ್ಟರ್ ಅವರು ಯಾವುದೋ ಒಂದು ಸೆಮಿನಾರ್‌ನಲ್ಲಿ ಹೇಳಿದ್ದನ್ನು ಇಲ್ಲಿ . . . . . .

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಅವರು ಈ ಬಗ್ಗೆ ಡಿಬೇಟ್ ಆಗಬೇಕೆಂದು ಹೇಳಿದ್ದಾರೆ. ಇದನ್ನು ಇಟ್ಟುಕೊಂಡು ಮಾನ್ಯ ಜಗದೀಶ್ ಶೆಟ್ಟರ್ ಅವರು ಹೇಳಿ ಬಿಟ್ಟರು, ಹೇಳಿ ಬಿಟ್ಟರು ಎಂದು ಹೇಳುತ್ತಿದ್ದಾರೆ.

**ಶ್ರೀ ಆರ್.ವಿ. ವೆಂಕಟೇಶ್:–** ಈ ರಾಜ್ಯದ ಮುಖ್ಯಮಂತ್ರಿಯಾಗಿ ಅವರು ಹೇಳಿಕೆಯನ್ನು ಕೊಟ್ಟಿರುವುದು.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಸ್ವಲ್ಪ ತಡೆಯಣ್ಣಾ ಈ ರೀತಿ ಮಾಡಿದರೆ ಹೇಗೆ?

**ಡಾ. ಸಿ.ಎನ್. ಅಶ್ವಥ್ ನಾರಾಯಣ್:–** ಪುನರ್ ವಿಂಗಡಣೆ ಮತ್ತು ಪುನರ್ ರಚನೆಯ ಅರ್ಥವೇ ಇವರಿಗೆ ಗೊತ್ತಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಅಲ್ಲೊಂದು ಪೀಸ್ ಇಲ್ಲೊಂದು ಪೀಸ್ ತೆಗೆದುಕೊಂಡು ಇವರು ಮನೆ ಕಟ್ಟುವುದಕ್ಕೆ ಹೊರಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೇ ದಯವಿಟ್ಟು ಅದು ಆಗುವುದಿಲ್ಲ. ಇಲ್ಲಿ ಪದ್ಧತಿ ಇದೆ. ಒಬ್ಬೊಬ್ಬ ಮಂತ್ರಿಗಳೂ ಅವರವರ ಇಲಾಖೆ ಸುಧಾರಣೆ ಆಗಬಹುದೆಂಬ ಕಲ್ಪನೆಯಿಂದ ಅನೇಕ ಇಷ್ಯೂಗಳನ್ನು ಸಾರ್ವಜನಿಕರ ಮುಂದೆ ಬಿಡುತ್ತಾರೆ. ಇದು ತಪ್ಪು ಎಂದು ನಾನು ಹೇಳುವುದಿಲ್ಲ. ಮಾನ್ಯ ಜಯಚಂದ್ರ ಅವರು ವೈಭವದ ಮದುವೆಗಳನ್ನು ನಿಲ್ಲಿಸುತ್ತೇವೆ, ದುಂದುವೆಚ್ಚವನ್ನು ನಿಲ್ಲಿಸುತ್ತೇವೆಂದು ಹೇಳಿ ಹೇಳಿಕೆ ನೀಡಿ ಈ ಬಗ್ಗೆ ಸರ್ಕಾರ ವಿಧೇಯಕವನ್ನು ತರುತ್ತದೆ ಎಂದು ಹೇಳಿದರಲ್ಲಾ ಅವರ ಆ ಒಂದು ಚಿಂತನೆಗೆ ಸರ್ಕಾರ ಬೈಂಡ್ ಆದ ಹಾಗೇನು? ಅವರು ವೈಭವದ

ಮದುವೆ ನಿಲ್ಲಿಸಿದಿರಾ? ಈ ವಿಚಾರ ಸಚಿವ ಸಂಪುಟದ ಮುಂದೆ ಬಂದು ಇಲ್ಲಿ ವಿಧೇಯಕವನ್ನು ತಂದು ಪಾಸ್ ಮಾಡಬೇಕಾಗುತ್ತದೆ.

**(ಗೊಂದಲ)**

**ಡಾ: ಮತ್ತಿಕಟ್ಟಿ ವೀರಣ್ಣ:–** ಈ ರೀತಿ ಮಾತನಾಡಿದರೆ ಸರಿಯಾಗುವುದಿಲ್ಲ.

**ಸಭಾಪತಿಯವರು:–** ಅವರು ವಾದ ಮಾಡಲಿ ಬಿಡಿ. ಅವರು ಏಕೆ ಇದನ್ನು ಮಾಡುತ್ತಿದ್ದೇವೆಂದು ಹೇಳುತ್ತಾರೆ. ಅದನ್ನು ಅವರು ಹೇಳಲಿ ಬಿಡಿ. ಏಕೆ ಬೇಡವೆಂದು ನೀವು ಹೇಳುತ್ತೀರಿ. ಅದೇ ರೀತಿಯಲ್ಲಿ ಏಕೆ ಇದು ಬೇಕು ಎಂದು ಅವರು ಹೇಳುತ್ತಾರೆ. ನಂತರ ಆ ಬಗ್ಗೆ ಸಭೆಯಲ್ಲಿ ನಿರ್ಣಯವಾಗುತ್ತದೆ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಮುಖ್ಯಮಂತ್ರಿಗಳ ಮುಖಾಂತರ ಇಡೀ ರಾಜ್ಯದ ಪತ್ರಿಕೆಯಲ್ಲಿ ಬರುತ್ತದೆ. ಇದು ಭಾರತೀಯ ಜನತಾ ಪಕ್ಷದ ಅಭಿಪ್ರಾಯ ಎಂದು ಅವರು ಹೇಳುತ್ತಿದ್ದಾರೆ. ಇದು ಭಾರತೀಯ ಜನತಾ ಪಕ್ಷದ ಸರ್ಕಾರದ ಭಾವನೆಗಳು ಅಲ್ಲ. ಒಬ್ಬೊಬ್ಬ ಮಂತ್ರಿ ಅವರವರ ಭಾವನೆಯನ್ನು ಮತ್ತು ಮುಖ್ಯಮಂತ್ರಿಗಳು ಅವರ ಭಾವನೆಯನ್ನು ಹೇಳಿದರೆ ಅದು ಸಚಿವ ಸಂಪುಟದ ತೀರ್ಮಾನವಲ್ಲ, ಸರ್ಕಾರದ ತೀರ್ಮಾನವಲ್ಲ ಎಂಬುದನ್ನು ನಾನು ಹೇಳುವುದಕ್ಕೆ ಹೊರಟಿದ್ದೇನೆ ಅಷ್ಟೆ. ಇದನ್ನು ನಾನು ಅವರ ಗಮನಕ್ಕೆ ತರುತ್ತಿದ್ದೇನೆ ಅಷ್ಟೆ.

**(ಗೊಂದಲ)**

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಡಿವಿಜನ್ ಆಗಲೀ.

**ಶ್ರೀ ಸಿದ್ದರಾಮಯ್ಯ:–** ನಾನು ಹಿಂದಿನ ಬಿ.ಜೆ.ಪಿ ಸರ್ಕಾರದ ತೀರ್ಮಾನವೆಂದು ಹೇಳಿದೆನಾ? ಮಾನ್ಯ ಜಗದೀಶ್ ಶೆಟ್ಟರ್ ಅವರ ಆವತ್ತಿನ ಅಭಿಪ್ರಾಯ ಈ ರೀತಿ ಇತ್ತು ಎಂದು ಹೇಳಿದೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಅದು ಡಿಬೇಟ್. ಡಿಬೇಟ್ ಮಾಡಿ ಎಂದು ಅವರು ಹೇಳಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಗಳೇ, as Chief Minister of Karnataka, he participated in the Seminar. What is the subject in the Seminar? The subject is

re-organization of Bangalore City, BBMP. ಅದರಲ್ಲಿ ಅವರು ಈ ರೀತಿಯ ಅಭಿಪ್ರಾಯವನ್ನು ಹೇಳಿದ್ದಾರೆಂದು ನಾನು ಹೇಳಿದೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಡಿಬೇಟ್ ಮಾಡಿ ಎಂದು ಹೇಳಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಹೌದಪ್ಪಾ, ನಾನು ಇಲ್ಲಾ ಎಂದು ಹೇಳಿದ ಮೇಲೂ ಮತ್ತೆ ಅದನ್ನೇ ಹೇಳುತ್ತಿರಲ್ಲಾ?

**ಶ್ರೀ ಕೆ.ಎಸ್. ಈಶ್ವರಪ್ಪ:–** ಅದು ಹೇಗಾಗುತ್ತಿದೆ ಎಂದರೆ, ಹಿಂದಿನ ಭಾರತೀಯ ಜನತಾ ಪಕ್ಷದ ಸರ್ಕಾರ ಇದನ್ನು ತೀರ್ಮಾನ ಮಾಡಿತ್ತು ಎನ್ನುವಂತಹ ರೂಪ ನಿಮ್ಮ ಬಾಯಲ್ಲಿ ಬರುತ್ತಿದೆ. ಆದರೆ ಅದನ್ನು ನೇರವಾಗಿ ಬಾಯಿ ಬಿಟ್ಟು ಹೇಳಿಲ್ಲ ಅಷ್ಟೇ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಜಗದೀಶ್ ಶೆಟ್ಟರ್ ಅವರ ಸರ್ಕಾರ ಇದನ್ನು ತೀರ್ಮಾನ ಮಾಡಿತ್ತು ಎಂದು ನಾನು ಹೇಳಲಿಲ್ಲ. ಒಂದು ಸೆಮಿನಾರ್ ನಡೆಯಿತು. ಆ ಸೆಮಿನಾರ್‌ನಲ್ಲಿ ಬೃಹತ್ ಬೆಂಗಳೂರು ಮಹಾನಗರಪಾಲಿಕೆಯನ್ನು ಪುನರ್ ರಚನೆ ಮಾಡುವುದರ ಬಗ್ಗೆ ವಿಷಯ ಚರ್ಚೆಗೆ ಇತ್ತು. ಈ ಸೆಮಿನಾರ್ ಅನ್ನು ಯಾರು ಕಂಡಕ್ಟ್ ಮಾಡಿದ್ದರು? Mr.Ravindra, former Chief Secretary to the Government of Karnataka who is Advisor to Mr.Jagadish Shettar, Hon'ble Chief Minister of Karnataka. ಅಷ್ಟೇ ಹೇಳಿರುವುದು. These are all the facts.

**(ಗೊಂದಲ)**

**ಶ್ರೀ ಕೆ.ಬಿ. ಶಾಣಪ್ಪ:–** ಇವತ್ತು ಇದನ್ನು ಇವರೂ, ಮತ್ತು ನಾವು ಎಲ್ಲರೂ ಇದನ್ನು ಬೇಡವೆಂದು ಹೇಳುತ್ತಿದ್ದೇವೆ.

**Sri SIDDARAMAIAH:-** Admitted facts need not be proved. ನೀವು ಹೇಳುವುದು ಸರಿಯಾಗಿ ಇದೆ.

**ಡಾ: ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಶಾಣಪ್ಪನವರೆ, ಐ.ಐ.ಟಿ. . . . .

**(ಗೊಂದಲ)**

**ಶ್ರೀ ರಾಮಚಂದ್ರಗೌಡ:–** ಮಧ್ಯಾಹ್ನ ಊಟಕ್ಕೆ ಕೂತಾಗ ಮುದ್ದೆ ಬಡಿಸಿದರೆ ಊಟ ಮಾಡುವರು. ಬೆಳಿಗ್ಗೆ ತಿಂಡಿಗೆ ಮುದ್ದೆಯನ್ನು ತೆಗೆದುಕೊಂಡು ಬಂದರೆ ಬೇಡವೆಂದು ಹೇಳುತ್ತಾರೆ. ಅಂದರೆ ಯಾವ್ಯಾವ ಹೊತ್ತಿನಲ್ಲಿ ಯಾವ್ಯಾವ ಕಾಲದಲ್ಲಿ ಏನೇನು ತಿನ್ನಬೇಕೋ ಅದನ್ನೇ ತಿನ್ನಬೇಕು. ಅದೇ ರೀತಿಯಲ್ಲಿ ಯಾವ್ಯಾವ ಕಾಲದಲ್ಲಿ ಏನೇನು ಮಾಡಬೇಕೋ ಅದನ್ನೇ ಮಾಡಬೇಕಾಗುತ್ತದೆ. ಅದೇ ರೀತಿಯಲ್ಲಿ ಸೆಮಿನಾರ್‌ನಲ್ಲಿ ಏನು ಹೇಳಬೇಕೋ ಅದನ್ನು ಹೇಳಿರಬಹುದು. . . . .

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಇಲ್ಲಿ ಇದ್ದಾಗ ಒಂದು ಅಲ್ಲಿಗೆ ಹೋದಾಗ ಒಂದು ರೀತಿ ಹೇಳುವುದು ಸರಿಯಲ್ಲ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಮಾನ್ಯ ಸಭಾಪತಿಯವರೆ, . . . .

**ಶ್ರೀ ಸಿದ್ದರಾಮಯ್ಯ:–** ನಾನು ಏನು ಹೇಳಬೇಕೋ ಅದನ್ನು ಹೇಳಿಬಿಡುತ್ತೇನೆ. ಆಮೇಲೆ ನೀವು ಏನು ಹೇಳಬೇಕೋ ಹೇಳಿ. ದಯವಿಟ್ಟು ನಾನು ಹೇಳುವುದನ್ನು ಕೇಳಿ. ರೀ ಅಶ್ವತ್‌ನಾರಾಯಣ ಅವರೇ, ನೀವು ಸುಮ್ಮನೆ ಕುಳಿತುಕೊಂಡು ಬಿಡಿ. ನೀವು ನಮ್ಮ ಪಕ್ಕದ ಜಿಲ್ಲೆಯವರು ಈ ರೀತಿ ಆಡಿದರೆ ಹೇಗೆ? ವಿವೇಚನೆ ಇರತಕ್ಕಂತಹ ಒಬ್ಬ ಜವಾಬ್ದಾರಿ ಸದಸ್ಯ. ಇದು ಡಿಬೇಟ್ ಆಗಬೇಕೆಂದು ಹೇಳಿರುವುದು ನಿಜವೇ ಆಗಿದೆ. ಇದು 2007 ರಲ್ಲಿ ಆದದ್ದು. ಆದರೆ ಇದನ್ನು ಹೇಳುತ್ತಾ, ಹೇಳುತ್ತಾ ಏನು ಹೇಳುತ್ತಾರೆಂದರೆ, ***"While forming BBMP in 2008, the then existed coalition Government, though many areas have been accessed to BBMP during its formation, as there was no public debate."*** ಅಂದರೆ, ಹಿಂದೆ coalition Government 110 ಹಳ್ಳಿಗಳನ್ನು ಸೇರಿಸಿಕೊಂಡದ್ದು ಮತ್ತು 7 ನಗರಸಭೆಗಳನ್ನು ಸೇರಿಸಿಕೊಂಡದ್ದು ಒಂದು ಪುರಸಭೆಯನ್ನು ಸೇರಿಸಿಕೊಂಡದ್ದು ಏನು ಇದೆ, ಈ ಬಗ್ಗೆ ಆಗ ಚರ್ಚೆಯಾಗಲಿಲ್ಲ. ಪಬ್ಲಿಕ್ ಡಿಬೇಟ್ ಆಗಲಿಲ್ಲ.

**ಶ್ರೀ ವಿ. ಸೋಮಣ್ಣ:–** ಆಯಿತು. ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಿ. ಇದಾದ ಮೇಲೆ ಈ ಕಾಯಿದೆಯನ್ನು ಸ್ಥಗಿತಗೊಳಿಸಿ ಚರ್ಚೆಗೆ ಬಿಡುತ್ತೀರಾ?

**ಶ್ರೀ ಹೆಚ್.ಎಂ. ರೇವಣ್ಣ:–** ಈ ರೀತಿ ಹೇಳುವುದು ಸರಿಯಾಗುವುದಿಲ್ಲ.

(ಗೊಂದಲ)

**ಶ್ರೀ ಎಂ.ಆರ್. ಸೀತಾರಾಂ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು . . . .

**ಶ್ರೀ ಸಿದ್ದರಾಮಯ್ಯ:–** ನಾನು ಮಾತನಾಡಿದ ಮೇಲೆ ಆಮೇಲೆ ನೀವು ಮಾತನಾಡಿ.

**ಸಭಾಪತಿಯವರು:–** ಮಾನ್ಯ ಸೀತಾರಾಂ ಅವರೇ ದಯಮಾಡಿ ತಾವು ಕುಳಿತುಕೊಳ್ಳಿ. I will manage.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸದಸ್ಯರಾದ ಸೋಮಣ್ಣನವರು ಮಾತನಾಡುವಾಗ ಮಧ್ಯದಲ್ಲಿ ನಾನು ಏನಾದರೂ ಮಾತನಾಡಿದೆನಾ? ನಾನು ಬಹಳ ತಾಳ್ಮೆಯಿಂದ ನೀವು ಹೇಳುವುದನ್ನೆಲ್ಲಾ ಕೇಳಿದ್ದೇನೆ. ನಾನು ಎಲ್ಲಿಗೂ ಹೋಗುವುದಿಲ್ಲ ಇಲ್ಲೇ ಇರುತ್ತೇನೆ. ನೀವು ಎಲ್ಲೆಲ್ಲಿ ಹೋಗಿದ್ದಿರಿ ಎಂಬುದನ್ನು ನಾನು ಹೇಳುತ್ತಿದ್ದೇನೆ ಅಷ್ಟೆ. ನಾನೇನು ಬೇರೆ ಏನು ಹೇಳುವುದಕ್ಕೆ ಹೋಗುತ್ತೇನಾ? ನಾನು ಆ ರೀತಿ ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಅವರು ಏನು ಹೇಳಿದರೆಂದರೆ, ***"During its formation, there was no public debate, due to which many issues and problems cropped up and lacked effective administration. There should be a thorough debate during this proposal of bifurcation so that similar situations do not occur."*** ಮಾನ್ಯ ಮಧುಸೂದನ್ ಅವರು ತಲೆ ಕುಣಿಸುತ್ತಿರುವುದರಿಂದ ಇದು ಅವರಿಗೆ ಅರ್ಥವಾಯಿತೆಂದು ನಾನು ಅಂದುಕೊಂಡಿದ್ದೇನೆ.

**ಶ್ರೀ ಗೋ. ಮಧುಸೂದನ್:–** ನೀವು ಸರಿಯಾದ ಪಾಯಿಂಟಿಗೆ ಇಲ್ಲಿಯತನಕ ಬಂದಿರಲಿಲ್ಲ. ಈಗ ಬಂದಿರುವುದಕ್ಕೆ ನಾನು ಆ ರೀತಿ ಹೇಳಿದ್ದು ಅಷ್ಟೆ.

(4–30 ಗಂಟೆ)

**ಶ್ರೀ ಸಿದ್ದರಾಮಯ್ಯ:–** ನನಗೆ ಯಾವುದೇ ಫ್ಯಾಕ್ಟ್ಸ್ ಅನ್ನು ತಿರುಚಬೇಕೆನ್ನುವ ಉದ್ದೇಶ ಇಲ್ಲ. ನಾನು misrepresentation ಕೂಡ ಮಾಡುವುದಿಲ್ಲ. ಇದ್ದರೆ ಹೂಂ ಎಂದು ಹೇಳಿ, ಇಲ್ಲದಿದ್ದರೆ ಇಲ್ಲ ಎಂದು ಹೇಳಿ. ಅದಕ್ಕೆ ಸುಮ್ಮನೆ ಗಲಾಟೆ ಏಕೆ? ಇದು ಒಂದು ಸೆಮಿನಾರ್‌ನಲ್ಲಿ ನಡೆದಿದೆ ಎಂದು ಹೇಳಿದ್ದೇನೆ. ಜಗದೀಶ್ ಶೆಟ್ಟರ್‌ರವರು ಇಲ್ಲ ಎಂದು ಹೇಳಿದ್ದಾರೆಂದರೆ ಬೇಡ ಬಿಡಿ.

**ಶ್ರೀ ಬಸವರಾಜ ಹೊರಟ್ಟಿ:–**ಮಾನ್ಯ ಸಭಾಪತಿಯವರೆ, ಮುಖ್ಯಮಂತ್ರಿಗಳು ಹೆಚ್ಚು ತಲೆ ಕೆಡಿಸಿಕೊಳ್ಳುವುದು ಬೇಡ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ನಾನೇನಾದರೂ ತಲೆಕೆಡಿಸಿಕೊಂಡರೆ it is on the advice of Mr.Horatti.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ಯಾರದೋ ಮಾತು ಕೇಳಿ ಈಗ ಅವರ ತಲೆ ಕೆಟ್ಟಿದೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಇಲ್ಲದೇ ಇರುವುದನ್ನು ಹೇಳಬೇಕೆಂದು ನನ್ನ ಉದ್ದೇಶವೇನೂ ಇಲ್ಲ. ಹಿಂದೆ ನಡೆದಿರುವುದನ್ನು ಸದನದ ಗಮನಕ್ಕೆ ತರತಕ್ಕಂಥ ಪ್ರಯತ್ನ ಮಾಡಿದ್ದೇನೆ. ಅದು ಒಂದು ಭಾಗ. ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದು ಅಡ್ಮಿಟೆಡ್ ಫ್ಯಾಕ್ಟ್ ಅಲ್ಲವೇ? ಅದು ಪಕ್ಷದ ಅಭಿಪ್ರಾಯ ಅಲ್ಲ. ಅದು ವೈಯಕ್ತಿಕ ಅಭಿಪ್ರಾಯ ಎಂದು ಹೇಳುವುದಕ್ಕಾಗುತ್ತದೆಯೇ? It cannot be stated like that and it cannot be denied also because there is a promise in the Manifesto. The admitted facts need not be proved.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮೂರು ಮಾಡುತ್ತೇವೆಂದು ಹೇಳಿದ್ದೇವೆಯೇ?

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ರೀಸ್ಟ್ರಕ್ಚರಿಂಗ್ ಅಂದರೇನು ಎಂದು ಹೇಳಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ರೀಸ್ಟ್ರಕ್ಚರಿಂಗ್ ಅಂದರೇನು ಎಂದು ಡಿಕ್ಷನರಿಯಲ್ಲಿ ನೋಡಿ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ನಾನು ತಿಳಿದುಕೊಂಡ ಹಾಗೆ

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಅವರು ತಿಳಿದುಕೊಂಡ ಹಾಗೆ dictionary ಯಲ್ಲಿ ರೀಸ್ಟ್ರಕ್ಚರಿಂಗ್ ಅಂದರೆ ಮೂರು ಭಾಗ, ಅದರಲ್ಲೂ ಬೆಂಗಳೂರು ಮೂರು ಭಾಗವೇ?

**(ಗೊಂದಲ)**

**ಶ್ರೀ ಸಿದ್ಧರಾಮಯ್ಯ:-** ಮಾನ್ಯ ಸಭಾಪತಿಯವರೆ, ಆಯಿತು ಈಗ. ಅವರ ಪ್ರಣಾಳಿಕೆಯಲ್ಲಿ ಆ ರೀತಿ ಹೇಳಿದೆ. ಅದು ನನ್ನ ಹತ್ತಿರ ಇದೆ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನನ್ನ ಹತ್ತಿರ ಕೂಡ ಇದೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ನಿಮ್ಮ ಹತ್ತಿರ ಇದೆ. ನಾನು ಕೂಡ ತರಿಸಿಕೊಂಡಿದ್ದೇನೆ. ನನ್ನ ಹತ್ತಿರ ಕೂಡ ಇದೆ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಅದಕ್ಕೆ ಬೇರೆ ಬೇರೆ ಅರ್ಥ ಕೊಟ್ಟು ರಾಜ್ಯದಲ್ಲಿ ಒಂದು ಸುಳ್ಳು ಅಭಿಪ್ರಾಯ ಸೃಷ್ಟಿ ಮಾಡುವ ಪ್ರಯತ್ನವನ್ನು ನೀವು ಮಾಡುತ್ತಿದ್ದೀರಿ. ಇದು ಸರಿಯಲ್ಲ.

**(ಗೊಂದಲ)**

**ಸಭಾಪತಿಯವರು:-** ಈಗ ಆಯಿತು ಬೇಗ ಮುಗಿಸಿ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:-** ಸಭಾಪತಿಯವರು ಆಯಿತು ಮುಗಿಸಿ ಎಂದು ಹೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಇಲ್ಲ ಇಲ್ಲ. ಸಭಾಪತಿಯವರು ಎಷ್ಟು ಸಮಯ ಕೊಡುತ್ತಾರೆ ಅಷ್ಟು ಹೊತ್ತು ನಾನು ಮಾತನಾಡುತ್ತೇನೆ. ಅವರು ಮುಂದುವರೆಸಿ ಮುಗಿಸಿ ಎಂದು ಹೇಳಿದರು.

**(ಗೊಂದಲ)**

**ಸಭಾಪತಿಯವರು:–** ನಾನು ಮುಗಿಸಿ ಎಂದು ಹೇಳಿದ್ದೇನೆ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನೋಡಿ ಮುಗಿಸಿ ಎಂದು ಹೇಳಿದರು.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಅವರ ಬಾಯಿಯಿಂದ ನೀವು ಏಕೆ ಹೇಳಿಸುತ್ತೀರಿ?

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮತ್ತೊಂದು ಸುಳ್ಳು.

**(ಗೊಂದಲ)**

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಈಶ್ವರಪ್ಪನವರು ಏಕೆ ಸುಳ್ಳಿನ ಬಗ್ಗೆ ಮಾತನಾಡುತ್ತಾರೆ?

**(ಗೊಂದಲ)**

**ಸಭಾಪತಿಯವರು:–** ಮುಖ್ಯಮಂತ್ರಿಗಳು ನಿಂತಿರುವಾಗ ನೀವು ಏಕೆ ಮಧ್ಯ ಬಾಯಿ ಹಾಕುತ್ತೀರಿ? ಅವರು ಏನು ಬೇಕಾದರು ಹೇಳಲಿ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಕಾನೂನು ಸಚಿವರು ಬಹಳಷ್ಟು ಸುದೀರ್ಘವಾಗಿ ಉತ್ತರವನ್ನು ಕೊಟ್ಟಿದ್ದರೂ ಕೂಡ ಅನೇಕ ಜನ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿರತಕ್ಕಂಥದ್ದನ್ನು ಕೆಲವು ವಿಷಯಗಳನ್ನು ಬಿಟ್ಟು ಬಿಟ್ಟಿದ್ದಾರೆ. ಅವುಗಳನ್ನು cover ಮಾಡೋಣ ಎಂದು ಮಾತ್ರ ನಿಂತಿದ್ದೇನೆ. ಅಲ್ಲಿ ಶರವಣರವರು ಕೂತಿದ್ದಾರೆ, ಇಲ್ಲಿ ಸೋಮಣ್ಣನವರು ಮಾತನಾಡಿದ್ದಾರೆ.ಯಾರೋ ಸಿದ್ಧರಾಮಯ್ಯನವರಿಗೆ ದಾರಿ ತಪ್ಪಿಸಿಬಿಟ್ಟಿದ್ದಾರೆಂದು ಹೇಳಿದ್ದಾರೆ.ದಾರಿ ತಪ್ಪಿ

ಅವರು ಈ ರೀತಿಯ ತಿದ್ದುಪಡಿಯನ್ನು ತಂದಿದ್ದಾರೆಂದು ಹೇಳಿದ್ದಾರೆ. ಇವರು ಪ್ರಣಾಳಿಕೆಯಲ್ಲಿ ಹೇಳುವಾಗ ದಾರಿ ತಪ್ಪಿದ್ದಾರಾ?

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಅವರು ಮತ್ತೆ ಅಲ್ಲೇ ಬರುತ್ತಾರೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ನಾವು ಪ್ರಣಾಳಿಕೆಯಲ್ಲಿ ಹೇಳುವಾಗ ದಾರಿ ತಪ್ಪಿದ್ದೆವಾ? ಪ್ರಣಾಳಿಕೆ ಸಿದ್ಧರಾಮಯ್ಯ ಒಬ್ಬರದೇ ಅಲ್ಲ. ಪ್ರಣಾಳಿಕೆ ಈಶ್ವರಪ್ಪ ಒಬ್ಬರದೇ ಅಲ್ಲ. ಅದು ಇಡೀ ಪಕ್ಷದ ಪ್ರಣಾಳಿಕೆ.

**(ಗೊಂದಲ)**

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೆ, ಅದನ್ನೇ ಹತ್ತು ಹತ್ತು ಬಾರಿ ಹೇಳಿದರೆ ಹೇಗೆ?

**(ಗೊಂದಲ)**

**ಸಭಾಪತಿಯವರು:–** ಮುಖ್ಯಮಂತ್ರಿಯವರು ಮಾತನಾಡುವಾಗ ನಾನು ಬೇಡ ಎಂದು ಹೇಳುವುದಕ್ಕಾಗುತ್ತದೆಯೇ?

**(ಗೊಂದಲ)**

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೆ, ಅದನ್ನೇ ಹತ್ತು ಬಾರಿ ಹೇಳಿದ್ದೀರಿ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಕೊನೆಗೆ ಏನು ತೀರ್ಮಾನ ಮಾಡುತ್ತಿದ್ದೀರೆಂದು ಹೇಳಿ ಸಾಕು.

**(ಗೊಂದಲ)**

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೆ, ನಿಮ್ಮ ಪ್ರಣಾಳಿಕೆಯ ಬಗ್ಗೆ ಹೇಳಿ. ಎಲ್ಲಿಯಾದರು ಮೂರು ಮಾಡುತ್ತೇವೆಂದು ಹೇಳಿದ್ದೀರಾ? ನಿಮ್ಮ ಪ್ರಣಾಳಿಕೆಯನ್ನು ತೆಗೆದು ಓದಿ. ನಿಮ್ಮ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯನ್ನು ಮೂರು ಭಾಗ ಮಾಡುತ್ತದೆಂದು ಹೇಳಿದ್ದೀರಾ?

**(ಗೊಂದಲ)**

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಮಾನ್ಯ ಸಭಾಪತಿಯವರೆ, ಪುನರ್ ರಚನೆ, ಪುನರ್ ವಿಂಗಡಣೆ, ರೀಸ್ಟ್ರಕ್ಚರ್ ಎಂದು ಹೇಳಿದೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ನನಗೆ ಇವರೆಲ್ಲಾ ಡಿಸ್ಟರ್ಬ್ ಮಾಡುತ್ತಿದ್ದಾರೆ. ಇಲ್ಲದಿದ್ದರೆ ನಾನು ಇಲ್ಲಿಯವರೆಗೆ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತಿದ್ದೆ.

**(ಗೊಂದಲ)**

**ಸಭಾಪತಿಯವರು:–** ಎಲ್ಲರು ಕುಳಿತುಕೊಳ್ಳಿ ಅವರು ತಮ್ಮ ಮಾತುಗಳನ್ನು ಮುಕ್ತಾಯ ಮಾಡುತ್ತಿದ್ದಾರೆ. ನಾನು ಅವರಿಗೆ ಮುಗಿಸಿ ಎಂದು ಹೇಳಿದ್ದೇನೆ. ಈಗಲೂ ಮುಗಿಸಿ ಎಂದು ಹೇಳುತ್ತಿದ್ದೇನೆ. ಅವರಿಗೆ ಮುಗಿಸುವುದಕ್ಕೆ ಬಿಡಿ.

**(ಗೊಂದಲ)**

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೆ, ಕೆಳಮನೆಯಲ್ಲಿ ಮಾನ್ಯ ಜಗದೀಶ್ ಶೆಟ್ಟರ್‌ರವರು ನಾನು ಹಾಗೆ ಹೇಳಿಲ್ಲ ಎಂದು ಸ್ಪಷ್ಟೀಕರಣ ನೀಡಿದ್ದಾರೆ. ಅದನ್ನು ಮುಖ್ಯಮಂತ್ರಿಗಳಿಗೆ ಹೇಳಿದ್ದಾರೆ.ಆದರು ಇಲ್ಲಿ ಪದೇ ಪದೇ ಹೇಳುವುದು ಸರಿಯಲ್ಲ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ನಾನು ಜಗದೀಶ್ ಶೆಟ್ಟರ್‌ರವರ ಮೇಲೆ ಯಾವುದೇ ಅಲಿಗೇಶನ್ ಮಾಡಿಲ್ಲ. I have not made any allegation against Mr.Jagadish Shettar. Whatever that is said in the seminar, I have

just repeated it. ಅವರು ಏನು ಹೇಳಿದ್ದಾರೆ ಅದನ್ನು ಹೇಳಿದ್ದೇನೆ ಹೊರತು I have not made any allegation against Mr.Jagadish Shettar.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನೀವು ಅವರಿಗೆ ಹೇಳಿ. ಅವರು ಹೇಗೆ ಮಾತನಾಡುತ್ತಾರೆ.

**(ಗೊಂದಲ)**

**ಸಭಾಪತಿಯವರು:–** ಮುಖ್ಯಮಂತ್ರಿಗಳು ಮಾತನಾಡುವಾಗ ನಾನು ಬೇಡ ಎಂದು ಹೇಳುವುದಕ್ಕಾಗುತ್ತದೆಯೇ?

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಹಾಗಾದರೆ ಅವರು ಏನು ಬೇಕಾದರು ಮಾತನಾಡುವುದಕ್ಕಾಗುತ್ತದೆಯೇ? ಅವರು ಮುಖ್ಯಮಂತ್ರಿ ಎನ್ನುವ ಒಂದೇ ಒಂದು ಕಾರಣಕ್ಕೆ ಆ ಸ್ಥಾನದ ದುರುಪಯೋಗ ಮಾಡಿಕೊಂಡು ಏನು ಬೇಕಾದರು ಮಾತನಾಡಬಹುದೇನು? ಅವರ ಮಾತುಗಳನ್ನು ಕೇಳಿಕೊಂಡು ನಾವು ಸುಮ್ಮನೆ ಕುಳಿತುಕೊಳ್ಳಬೇಕೇನು?

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ನೀವು ಅವರಿಗೆ ಸ್ವಲ್ಪ ಹೇಳಿ. ನಾನು ಮಾತನಾಡುತ್ತಿದ್ದರೆ ಮಾತನಾಡುವುದಕ್ಕೆ ಬಿಡುವುದಿಲ್ಲವೆಂದರೇನು? ನಾನು ಮಾತನಾಡಬೇಕೋ ಬೇಡವೋ ಎಂದು ನೀವು ಹೇಳಿಬಿಡಿ. ಅವರು ಮಾತನಾಡುವಾಗ ನಾವು ಸುಮ್ಮನೆ ಕೇಳಲಿಲ್ಲವೇ?

**(ಗೊಂದಲ)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೆ, ಅವರು ಮುಖ್ಯಮಂತ್ರಿಗಳು ಎನ್ನುವ ಕಾರಣಕ್ಕಾಗಿ ಏನು ಬೇಕಾದರು ಮಾತನಾಡುವುದಕ್ಕಾಗುವುದಿಲ್ಲ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನಾನು ತಮಗೆ ತುಂಬಾ ಸ್ಪಷ್ಟವಾಗಿ ಒಂದು ಮಾತನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ವಿಧೇಯಕವನ್ನು ಮಂಡನೆ ಮಾಡಿ ಈ ರೀತಿ ಬಿಲ್ ಬಗ್ಗೆ ಹೌದು ಎಂದು ಹೇಳಿಸಿ ಈ ರೀತಿ ಭಾಷಣ ಮಾಡುವುದಕ್ಕೆ ಇತಿಹಾಸದಲ್ಲಿ ಅವಕಾಶ ಕಲ್ಪಿಸಿಲ್ಲ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ಅವರಲ್ಲಿ ಕೂಡ ಮೂರು ಮೂರು ಗಂಟೆ ಒಬ್ಬೊಬ್ಬ ಸದಸ್ಯರು ಮಾತನಾಡಿದ್ದಾರೆ. ನಾವು ಆಗ ಸುಮ್ಮನೆ ಕುಳಿತು ಕೇಳಲಿಲ್ಲವೇ?

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಆಯಿತು ಈಗ ಎರಡು ನಿಮಿಷದಲ್ಲಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

**(ಗೊಂದಲ)**

**ಸಭಾಪತಿಯವರು:–** ಆಯಿತು ಎಲ್ಲರು ಕುಳಿತುಕೊಳ್ಳಿ. ಅವರು ಈಗ ಮುಗಿಸುತ್ತಾರೆ. ಅವರು ಈಗ ಎರಡು ನಿಮಿಷದಲ್ಲಿ ಮುಗಿಸುತ್ತೇನೆಂದು ಹೇಳುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ನೀವು ಸ್ವಲ್ಪ ಸಮಾಧಾನವಾಗಿ ಕುಳಿತುಕೊಂಡರೆ ಹತ್ತು ನಿಮಿಷದಲ್ಲಿ ಮುಗಿಸಿಬಿಡುತ್ತೇನೆ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಹತ್ತು ನಿಮಿಷದಲ್ಲಿ ಹತ್ತು ಡಿಸ್ಪ್ಯೂಟ್ ತೆಗೆಯುತ್ತಾರೆ. ನೀವು ಡಿಸ್ಪ್ಯೂಟ್ ತೆಗೆದರೆ ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ.

**(ಗೊಂದಲ)**

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೆ, ಅವರು ಹೇಳಿದ ಹಾಗೆ ಮಾನ್ಯ ಮುಖ್ಯಮಂತ್ರಿಗಳು ಕೇಳುವುದಕ್ಕಾಗುತ್ತದೆಯೇ?

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಅವರು ಹೇಳಿದ ಹಾಗೆ ನಾವು ಕೇಳೋಣವೇ?

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಅವರು ಈ ರೀತಿ ಮಾಡಿದರೆ ನಮ್ಮವರು ಕೂಡ ಅವರಿಗೆ ಮಾತನಾಡುವುದಕ್ಕೆ ಬಿಡುವುದಿಲ್ಲ. ಹೀಗೆಯೇ ಇದು ಮುಂದುವರೆಯುತ್ತದೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ಆ ಪೋರ್ಟ್‌ಫೋಲಿಯೋ ಮುಖ್ಯಮಂತ್ರಿಗಳಿಗೆ ಬರುತ್ತದೆ. ತಾವು ಅವರಿಗೆ ಅವಕಾಶ ಕೊಟ್ಟಿದ್ದೀರಿ. ಅವರು ಮಾತನಾಡುತ್ತಿದ್ದಾರೆ. ಈಗ ಅವರು ತಮ್ಮ ಪೀಠವನ್ನೇ ಪ್ರಶ್ನೆ ಮಾಡುತ್ತಿದ್ದಾರೆ. ನನ್ನ ಬದುಕಿನಲ್ಲಿಯೇ ಈ ರೀತಿಯ ವ್ಯವಹಾರವನ್ನು ನಾನು ನೋಡಿಲ್ಲ. ಸಂಸದೀಯ ವ್ಯವಸ್ಥೆಯಲ್ಲಿ ಈ ರೀತಿ ನಾನು ನೋಡಿಯೇ ಇಲ್ಲ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ನಾನು ನನ್ನ ಮೂವತ್ತೆರಡು ವರ್ಷಗಳ ರಾಜಕೀಯ ಜೀವನದಲ್ಲಿ ಬೇಕಾದಷ್ಟು ನೋಡಿದ್ದೇನೆ. ಆದರೆ ಈ ರೀತಿ ಯಾವೊತ್ತು ನೋಡಿಲ್ಲ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಈ ರೀತಿ ಬಿಲ್‌ನಲ್ಲಿ ಮಧ್ಯ ಮಾತನಾಡಿದ್ದು ನೋಡಿದ್ದೀರಾ?

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, BBMP is coming under me. ಯಾವ ಸನ್ನಿವೇಶದಲ್ಲಿ, ಯಾವ ಹಿನ್ನೆಲೆಯಲ್ಲಿ ಈ ತಿದ್ದುಪಡಿಯನ್ನು ತಂದಿದ್ದೇವೆನ್ನುವ ವಿವರಣೆಯನ್ನು ಕೊಡುತ್ತಿದ್ದೇನೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, that portfolio is held by the Hon'ble Chief Minister.

(ಗೊಂದಲ)

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಯಾರು ಇಲ್ಲ ಎಂದು ಹೇಳಿದ್ದಾರೆ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, ತಾವು ಅವಕಾಶ ಮಾಡಿಕೊಟ್ಟಿದ್ದೀರಿ, ಮುಖ್ಯಮಂತ್ರಿಗಳು ಮಾತನಾಡುತ್ತಿದ್ದಾರೆ. ಇವರು ಮಧ್ಯ ಎದ್ದುನಿಂತು ಮಾತನಾಡಬೇಡಿ ಎಂದು ಹೇಳುವುದು ಸರಿಯೇ?

(ಗೊಂದಲ)

**Sri K.B. SHANAPPA:-** We are proud of Hon'ble Chief Minister. ಆದರೆ ಒಂದು ಬಾರಿ ಬಿಲ್ move ಮಾಡಿದ ಮೇಲೆ ನೀವು ಮಾತನಾಡುವುದಕ್ಕೆ ಬರುವುದಿಲ್ಲ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ತಾವು ಅವಕಾಶ ಕೊಟ್ಟಿದ್ದೀರಿ ನಾನು ಮಾತನಾಡುತ್ತಿದ್ದೇನೆ.

(ಗೊಂದಲ)

**ಶ್ರೀ ಕೆ.ಬಿ. ಶಾಣಪ್ಪ:-** ಮಾನ್ಯ ಸಭಾಪತಿಯವರೆ, ಅವರು ಮಾತನಾಡಬೇಕಾದರೆ ಮೊದಲೇ ಮಾತನಾಡಬೇಕಾಗಿತ್ತು.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಈಗ ಆಯಿತಲ್ಲ. ತಾವು ಅವಕಾಶ ಕೊಟ್ಟಿದ್ದೀರಿ, ನಾನು ಮಾತನಾಡುತ್ತಿದ್ದೇನೆ. ಅವರು ಸ್ವಲ್ಪ ಹೊತ್ತು ಸುಮ್ಮನೆ ಕುಳಿತುಕೊಳ್ಳಲಿ. ಅವರಿಗೆ ಸ್ವಲ್ಪ ಸಹನೆ ಇರಲಿ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ಅವರು ಸ್ವಲ್ಪ ಪೀಠಕ್ಕೆ ಗೌರವ ಕೊಡುವುದನ್ನು ಕಲಿಯಲಿ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಅವರು ಯಾವ ಪೀಠದ ಬಗ್ಗೆ ಮಾತನಾಡುತ್ತಿದ್ದಾರೆ. ಅವರು ಮೊದಲು ಮುಖ್ಯಮಂತ್ರಿಗಳಿಗೆ ಹೇಳಲಿ. ನಾವು ಪೀಠಕ್ಕೆ ಗೌರವ ಕೊಡುತ್ತಿದ್ದೇವೆ. ಆದರೆ ಮುಖ್ಯಮಂತ್ರಿಗಳಿಗೆ ಮುಗಿಸಿ ಮುಗಿಸಿ ಎಂದು ಸಭಾಪತಿಯವರು ಎಷ್ಟು ಬಾರಿ ಹೇಳಬೇಕು.ಸಭಾಪತಿಯವರು ಮುಖ್ಯಮಂತ್ರಿಯವರಿಗೆ ಮುಗಿಸಿ ಎಂದು ಹೇಳಿದ್ದಾರೆ.ಆದರೆ ಅವರು ಹಾಗೆಯೇ ಮುಂದುವರೆಸುತ್ತಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ಸತ್ಯ ಹೊರಗೆ ಬಂದ ಮೇಲೆ ನಿಮಗೆ ಡೈಜೆಸ್ಟ್ ಮಾಡಿಕೊಳ್ಳುವುದಕ್ಕೆ ಆಗುತ್ತಿಲ್ಲ. ನಿಮಗೆ ಎಷ್ಟು ಬಾರಿ ಹೇಳಬೇಕು ನನಗೆ ಅರ್ಥ ಆಗುತ್ತಿಲ್ಲ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಪ್ರತಿಯೊಂದು ಪದಕ್ಕೆ ಈ ರೀತಿ ಆಬ್ಜೆಕ್ಷನ್ ಆದರೆ ನಾನು ಹೇಗೆ ಮಾತನಾಡಬೇಕು. ಇದು ಸದನ ನಡೆಸತಕ್ಕಂಥ ರೀತಿಯಾಗುವುದಿಲ್ಲ.

**(ಗೊಂದಲ)**

**ಸಭಾಪತಿಯವರು:–** ಆಯಿತು ಈಗ ತಾವು ಮುಂದುವರೆಸಿ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಈಗ ಹತ್ತು ನಿಮಿಷ ಅವರು ಸಮಾಧಾನವಾಗಿರಲಿ, ಇವರು ಸಮಾಧಾನವಾಗಿರುತ್ತಾರೆ. ಆಮೇಲೆ ನೀವು ಏನಾದರು ಹೇಳುವುದಿದ್ದರೆ ಹೇಳಿ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಅವರು ಹೇಳಿದ್ದನ್ನು ಕೇಳುತ್ತ ಕುಳಿತುಕೊಳ್ಳಬೇಕಾ?

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಅವರು ಹೇಳಿದ್ದನ್ನು ನಾವು ಕೇಳುತ್ತ ಕುಳಿತುಕೊಳ್ಳಬೇಕಾ? ನಿಮಗೆ ಕೇಳುವುದಕ್ಕೆ ಇಷ್ಟವಿಲ್ಲವೇ? ನಾನು ಹೇಳಿದ್ದನ್ನು ಮೊದಲು ಕೇಳಿ ನಂತರ ತಾವು ಏನು ಕೇಳಬೇಕೋ ಅದನ್ನು ಕೇಳಿ. ನನ್ನನ್ನು ನಿರ್ಬಂಧ ಮಾಡುವುದಕ್ಕೆ ನಿಮಗೆ ಯಾವ ಅಧಿಕಾರ ಕೂಡ ಇಲ್ಲ. You have no right.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನಾನು ನಿಮ್ಮನ್ನು ನಿರ್ಬಂಧ ಮಾಡುತ್ತಿಲ್ಲ. ಆದರೆ ಸಭಾಪತಿಯವರು ಸಾಕು ಎಂದು ಹೇಳಿದ್ದಾರೆ. ನನಗೆ ಅಧಿಕಾರ ಇಲ್ಲ. ಆದರೆ ಸಭಾಪತಿಯವರಿಗೆ ಅಧಿಕಾರ ಇದೆ ತಾನೆ?

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ತಮಗೆ ಅಧಿಕಾರ ಇದೆ. ಆದರೆ ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ಅದಕ್ಕೆ ನಾನು ಮಾತನಾಡುತ್ತಿದ್ದೇನೆ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ತಾವು ಮುಗಿಸಿ ಎಂದು ಹೇಳಿದ್ದೀರಿ. ತಾವು ಅವರಿಗೆ ಮಾತನಾಡಲು ಅವಕಾಶ ಕೊಟ್ಟಿಲ್ಲ. ಅದನ್ನು ಅವರಿಗೆ ಹೇಳಿ.ಇದು ಸರ್ವಾಧಿಕಾರಿ ಧೋರಣೆ ಇದೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):–** ಇದು ಸರ್ವಾಧಿಕಾರ ಅಲ್ಲವೇ ಅಲ್ಲ. ಇವರಿಗೆ ಏನಾಗಿದೆ ಎಂದರೆ, . . .

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಬಿಲ್ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಿದ್ದಾರೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಇವರಿಗೆ ಏನಾಗಿದೆ ಎಂದರೆ, ನಾನು ಹೇಳಿದ್ದರಿಂದ ಬಿಜೆಪಿಯವರಿಗೆ ಮುಜುಗರವಾಯಿತು.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಿರುವುದನ್ನು ಇಡೀ ರಾಜ್ಯದ ಜನರು ನೋಡುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ನಿಮ್ಮ ಪಕ್ಷದವರು ಹೇಳಿದ್ದನ್ನೇ ನಿಮಗೆ ಹೇಳುತ್ತಿದ್ದೇನೆ. ಬಿಜೆಪಿ ಯವರ ಚುನಾವಣಾ ಪ್ರಣಾಳಿಕೆಯಲ್ಲಿಯೂ ಕೂಡ ಬಿಬಿಎಂಪಿ ಯ ಪುನರ್‌ರಚನೆ ಮಾಡುತ್ತೇವೆಂದು ಹೇಳಿದ್ದಾರೆ. ಅದನ್ನು ಅಷ್ಟಕ್ಕೆ ಬಿಟ್ಟು ಬಿಡುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಬಿಟ್ಟು ಬಿಡಿ ಸಾಕು.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಆಮೇಲೆ ಅಂದಿನ ಕಾನೂನು ಮತ್ತು ನಗರಾಭಿವೃದ್ಧಿ ಸಚಿವರಾಗಿದ್ದಂತಹ ಶ್ರೀ ಸುರೇಶ್‌ಕುಮಾರ್‌ರವರು. . .

(ಗೊಂದಲ)

ವಿರೋಧ ಪಕ್ಷದವರು ಮಾತನಾಡುವುದಕ್ಕೆ ಬಿಡುವುದಿಲ್ಲ ಎಂದರೆ ಹೇಗೆ?

(ಗೊಂದಲ)

**ಶ್ರೀ ಆರ್.ವಿ. ವೆಂಕಟೇಶ್ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದವರು ಇಲ್ಲಿ ದಬ್ಬಾಳಿಕೆಯನ್ನು ಮಾಡುತ್ತಿದ್ದಾರೆ.

(ಗೊಂದಲ)

**ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಬಿಜೆಪಿಯವರನ್ನು ನೋಡಿದರೆ ನನಗೆ ಮರುಕವೆನಿಸುತ್ತದೆ. ಇವರು ಎಂತಹ ಪರಿಸ್ಥಿತಿಗೆ ಬಂದು ತಲುಪಿದರಪ್ಪ ಅನಿಸುತ್ತಿದೆ. I feel very sorry for these people. I pity for them.

(ಗೊಂದಲ)

**ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**Sri SIDDARAMAIAH:-** Mr.Chairman Sir, the news report reads thus:

> "Mr. Kumar told *The Hindu* that the need of the hour was to go for the trifurcation of BBMP on lines of the Municipal Corporation of Delhi."

ಅಷ್ಟಕ್ಕೆ ಬಿಟ್ಟು ಬಿಡುತ್ತೇನೆ. ನಾವು ನಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದೆವು. ಭಾರತೀಯ ಜನತಾ ಪಕ್ಷದವರು ಕೂಡ ಅವರ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದರು.

**ಶ್ರೀ ಟಿ.ಎ. ಶರವಣ:–** ಮಾನ್ಯ ಸಭಾಪತಿಯವರೆ, ನಾವು ನಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿಲ್ಲ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ನೀವು ಹೇಳಿಲ್ಲ ಬಿಡಪ್ಪ. ನೀವು ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ. ಹೇಳುವುದು ಇಲ್ಲ, ಬಾಳುವುದು ಇಲ್ಲ.

(ಗೊಂದಲ)

**ಶ್ರೀ ಬಿ. ರಾಮಕೃಷ್ಣ:–** ಮಾನ್ಯ ಸಭಾಪತಿಯವರೆ, ಏನು ಜೆಡಿಎಸ್ ನವರನ್ನು ಮಾನ್ಯ ಮುಖ್ಯಮಂತ್ರಿಗಳು ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ. ಹೇಳಿದರು. ದಯಮಾಡಿ ಅದನ್ನು ಕಡತದಿಂದ ತೆಗೆಸಬೇಕು.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ನಾನು ಜೆಡಿಎಸ್‌ನವರ ಬಗ್ಗೆ ಏನೂ ಮಾತನಾಡಿಲ್ಲ. ಜೆಡಿಎಸ್‌ನವರು ಅವರ ಚುನಾವಣಾ ಪ್ರಣಾಳಿಕೆಯಲ್ಲಿಯೂ ಕೂಡ ಹೇಳಿಲ್ಲ. ಆಮೇಲೂ ಕೂಡ ಹೇಳಿಲ್ಲ.

**ಶ್ರೀ ಪಟೇಲ್ ಶಿವರಾಂ:–** ಮಾನ್ಯ ಸಭಾಪತಿಯವರೆ, ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ. ಎಂದು ಹೇಳಿರುವುದನ್ನು ಮಾನ್ಯ ಮುಖ್ಯಮಂತ್ರಿಗಳು ವಾಪಸ್ಸು ತೆಗೆದುಕೊಳ್ಳಬೇಕು.

(ಗೊಂದಲ)

**ಶ್ರೀ ಇ. ಕೃಷ್ಣಪ್ಪ:–** ಮಾನ್ಯ ಸಭಾಪತಿಯವರೆ, ಜೆಡಿಎಸ್ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದು ಸರಿಯಾದುದಲ್ಲ. ಅವರು ಆ ಪದವನ್ನು ವಾಪಸ್ಸು ತೆಗೆದುಕೊಳ್ಳಬೇಕು.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಭಾರತೀಯ ಜನತಾ ಪಕ್ಷದವರು... Mr. Eshwarappa and his friends....

(ಗೊಂದಲ)

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳು ಮುಗಿಸಲು ಅವಕಾಶ ಕೊಡಿ. ಅವರು ಮುಗಿಸದೇ ನೀವುಗಳು ಮಾತನಾಡುತ್ತೀರಾ?

(ಗೊಂದಲ)

**ಶ್ರೀ ಬಿ. ರಾಮಕೃಷ್ಣ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ. ಎನ್ನುವ ಪದವನ್ನು ವಾಪಸ್ಸು ತೆಗೆದುಕೊಳ್ಳಬೇಕು. ನಾವು ಯಾವ ರೀತಿಯಲ್ಲಿ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ.

(ಗೊಂದಲ)

**ಸಭಾಪತಿಯವರು:–** ಉದ್ದೇಶ ಏನು? ಇವತ್ತು ಓಟಿಂಗ್‌ಗೆ ಹಾಕುವುದು ಇವತ್ತಿನ ದಿವಸ ಬೇಡವೇ?

**(ಗೊಂದಲ)**

**ಸಭಾಪತಿಯವರು:–** ಎಲ್ಲರೂ ಮಾತನಾಡಿದರೆ ಹೇಗೆ?

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಶ್ರೀ ಶರವಣ ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಪಕ್ಷಕ್ಕೆ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆಯಲಾಗಿದೆ. ಹೇಳಿದ್ದಾರೆ. ಅದನ್ನು ಹೇಳಬಾರದು.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಹೋಗಲಿ ಆ ಪದವನ್ನು ಕಡತದಿಂದ ತೆಗೆದು ಹಾಕಿಬಿಡಿ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಆ ಪದವನ್ನು ಅವರು ಉಪಯೋಗ ಮಾಡಬಾರದು.

**ಶ್ರೀ ಸಿದ್ದರಾಮಯ್ಯ:–** ಅದು unparliamentary word ಅಲ್ಲ. It is not unparliamentary.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, it is not in good taste. ಆ ರೀತಿಯಾಗಿಎಲ್ಲ ಹೇಳಬಾರದು.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, it is not in good taste. ಅದು ಬೇಡ ಎಂದರೆ ಅದನ್ನು ಕಡತದಿಂದ ತೆಗೆದು ಹಾಕಿಬಿಡಿ. It is not unparliamentary. Still if they feel that it is not in good taste, let it be removed.

**(ಗೊಂದಲ)**

**ಸಭಾಪತಿಯವರು:–** ಆಯಿತು. ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಮುಗಿಸಿಬಿಡಿ.

(ಗೊಂದಲ)

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಆ ಪದವನ್ನು ಮಾನ್ಯ ಮುಖ್ಯಮಂತ್ರಿಗಳು ವಾಪಸ್ಸು ತೆಗೆದುಕೊಂಡು ಬಿಡಲಿ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಆ ಪದವನ್ನು ಕಡತದಿಂದ ತೆಗೆದು ಹಾಕಿಬಿಡಿ ಎಂದು ಹೇಳಿದ್ದೇನಲ್ಲ?

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳೆ ಅವರು ತೆಗೆದು ಹಾಕಿದ್ದಾರೆ. ನೀವು ಆ ಪದವನ್ನು ವಾಪಸ್ಸು ತೆಗೆದುಕೊಂಡು ಬಿಡಿ.

**ಸಭಾಪತಿಯವರು:–** ಆ ಪದವನ್ನು ಮಾನ್ಯ ಮುಖ್ಯಮಂತ್ರಿಗಳು ತೆಗೆದು ಹಾಕಿ ಎಂದು ಹೇಳಿದ್ದಾರೆ. ಎರಡು ಒಂದೇ ಅಗುತ್ತದೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಎರಡು ಒಂದೇ ಹೇಗೆ ಅಗುತ್ತದೆ? ತೆಗೆದು ಹಾಕಿದರೆ ಹೋಯಿತು. ಆ ಪದವನ್ನು ವಾಪಸ್ಸು ತೆಗೆದುಕೊಳ್ಳುವುದಿಲ್ಲವೇ?

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, no, no.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಏಕೆ?

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳು ಆ ಪದವನ್ನು ತೆಗೆದು ಹಾಕಿಬಿಡಿ ಎಂದು ಹೇಳಿದ್ದಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಕಡತದಿಂದ ತೆಗೆದು ಹಾಕುವುದು ಬೇರೆ, ಹೇಳಿದ್ದನ್ನು ಹೇಳಿದವರು ವಾಪಸ್ಸು ತೆಗೆದುಕೊಳ್ಳುವುದು ಬೇರೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಕಡತದಿಂದ ಅದನ್ನು ತೆಗೆದು ಹಾಕಿ ಎಂದು ಹೇಳಿದ್ದೇನೆ. ರೆಕಾರ್ಡ್‌ನಿಂದ ವಾಪಸ್ಸು ತೆಗೆದುಕೊಳ್ಳಿ.

(ಗೊಂದಲ)

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೆ, ನೀವು ಓಟಿಂಗ್ ಹಾಕಿಬಿಡಿ.

**ಸಭಾಪತಿಯವರು:–** ಅವರು ಮುಗಿಸಬೇಕು. ಅವರು ಮುಗಿಸದೇ ಓಟಿಂಗ್ ಹಾಕವುದಕ್ಕೆ ಬರುವುದಿಲ್ಲ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಮಾನ್ಯ ಕೆ.ಬಿ. ಶಾಣಪ್ಪನವರು ನೀವು ಎಲ್ಲಿಗೆ ಹೋಗಬೇಕು? ಇನ್ನು ಟೈಮ್ ಇದೆ. ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ವಿಧಾನಸಭೆಯಲ್ಲಿ ಕಾಯುತ್ತಿದ್ದಾರೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, ಶ್ರೀ ಕೆ.ಬಿ. ಶಾಣಪ್ಪನವರು ಗುಲ್ಬರ್ಗಾಕ್ಕೆ ಹೋಗುವುದಕ್ಕೆ ಟ್ರೈನ್ ಬುಕ್ ಮಾಡಿಕೊಂಡು ಬಿಟ್ಟಿದ್ದಾರೆ. ಟೈಮ್ ಆಗುತ್ತಿದೆ.

**ಶ್ರೀ ಸಿದ್ದರಾಮಯ್ಯ–** ಮಾನ್ಯ ಸಭಾಪತಿಯವರೆ, ಇವತ್ತು ಶ್ರೀ ಕೆ.ಬಿ. ಶಾಣಪ್ಪನವರು ಗುಲ್ಬರ್ಗಾಕ್ಕೆ ಹೋಗುವುದಿಲ್ಲ. ದಯಮಾಡಿ ಪುಟ್ಟಣ್ಣನವರೆ ಕೇಳಿ. 10 ನಿಮಿಷ ಎಲ್ಲರೂ ಸುಮ್ಮನೆ ಇದ್ದು ಬಿಟ್ಟರೆ ನಾನು ಮುಗಿಸಿಬಿಡುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಶ್ರೀ ಕೆ.ಬಿ. ಶಾಣಪ್ಪನವರು ಗುಲ್ಬರ್ಗಾಕ್ಕೆ ಹೋಗುವುದಕ್ಕೆ ಟ್ರೈನ್ ಬುಕ್ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಟ್ರೈನ್ ಬಿಡುತ್ತಲೇ ಇದ್ದಾರೆ.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರಿಗೆ, ಮಾನ್ಯ ಮುಖ್ಯಮಂತ್ರಿಗಳಿಗೆ ಎಲ್ಲಾ ಗೊತ್ತಿದೆ. ಅವರು 10 ನಿಮಿಷದಲ್ಲಿ ಮುಗಿಸುವುದಿಲ್ಲ. ಅವರು ಮಾತನಾಡಿದಂಥದ್ದಕ್ಕೆ ನಾವುಗಳು intervene ಅಗುತ್ತೇವೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ನಾನು 10 ನಿಮಿಷದಲ್ಲಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಕ್ಕೆ ನಾವು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಅಗದೇ 10 ನಿಮಿಷದಲ್ಲಿ ಮುಗಿಸುವುದಕ್ಕೆ ಆಗುವುದಿಲ್ಲವೆಂದು ಗೊತ್ತಿದೆ.

**ಶ್ರೀ ಸಿದ್ದರಾಮಯ್ಯ:–** ಯಾರು?

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೆ, ಅವರು ಹೇಳಿದ್ದನ್ನು ಕೇಳಿಕೊಂಡು ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುತ್ತದೆಯೇ?

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದವರು ಸ್ವಲ್ಪ ಸಹನೆಯಿಂದ ಕೇಳಿದರೆ ಸಂಸದೀಯ ವ್ಯವಸ್ಥೆಯಲ್ಲಿ ಶ್ರೀ ಕೆ.ಬಿ. ಶಾಣಪ್ಪನವರೆ, you are also a very senior leader in the politics. ನೀವು ಎಲ್ಲಾ ನೋಡಿದ್ದೀರಿ. ಸಂಸದೀಯ ವ್ಯವಸ್ಥೆಯಲ್ಲಿ ಇದೆಲ್ಲಾ ನೋಡಿರುವಂಥದ್ದೇ. ಇವೆಲ್ಲವೂ ಇರಬೇಕಾಗುತ್ತದೆ, ಮಾಡಬೇಕಾಗುತ್ತದೆ. ನಮ್ಮ ಅಭಿಪ್ರಾಯಗಳನ್ನು ನಾವು ಹೇಳುತ್ತೇವೆ. ನಿಮ್ಮಗಳ ಅಭಿಪ್ರಾಯಗಳನ್ನು ನೀವು ಹೇಳುತ್ತೀರಿ. ಆದರೆ ನಾವು ಹೇಳುವ ಅಭಿಪ್ರಾಯಗಳನ್ನು ಮೊಟಕು ಗೊಳಿಸಬಾರದು ಎನ್ನುವುದು ಸಂಸದೀಯ ವ್ಯವಹಾರಗಳಿಗೆ ವಿರುದ್ಧವಾದದ್ದು. ಆದ್ದರಿಂದ ಇದನ್ನು ಬಿಜೆಪಿಯವರು ಕೂಡ ಅವರ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದಾರೆ ಮತ್ತು ನಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿಯೂ ಕೂಡ ಹೇಳಿದ್ದೇವೆ. ಅದಕ್ಕೆ ನಾವು ಏನು ಮಾಡಿದೆವು ಎಂದರೆ ಕಾರ್ಪೊರೇಷನ್‌ನಲ್ಲಿ ಒಂದು ಚುನಾಯಿತ ಬಾಡಿ ಇದೆ. ಅದನ್ನು ನಾವು ತೆಗೆದು ಹಾಕಿಬಿಟ್ಟು, ಕಾರ್ಪೊರೇಷನ್ ಆಡಳಿತವನ್ನು ವಿಂಗಡಣೆ ಮಾಡುವುದಕ್ಕೆ ಹೋದರೆ, split ಮಾಡುವುದಕ್ಕೆ ಹೋದರೆ ಅದು ರಾಜಕೀಯದ ಕಲರ್ ಆಗಬಹುದೆಂದು ಮಾಡಲಿಲ್ಲ. ಅದಕ್ಕೆ ನಾನು ಏನು ಮಾಡಿದೆ ಎಂದರೆ, ಆಗಸ್ಟ್ 2014 ರಲ್ಲಿ ಒಂದು Expert Committee ಯನ್ನು under the Chairmanship of Mr.B.S.Patil, Ex-Chief Secretary of the State, constitute ಮಾಡಿದೆ. ಅವರೊಬ್ಬರನ್ನು ಮಾಡಿದೆ. ಜೊತೆಗೆ ಶ್ರೀ ಸಿದ್ದಯ್ಯನವರು ಅವರು ಬಿಬಿಎಂಪಿ ಯಲ್ಲಿ ಬಹಳ ವರ್ಷಗಳ ಕಾಲ ಕಮಿಷನರ್ ಆಗಿ ಕೆಲಸ ಮಾಡಿದ್ದರು, ಅನುಭವ ಇದ್ದ ಅವರನ್ನು ಒಬ್ಬರು ಸದಸ್ಯರನ್ನಾಗಿ ಮಾಡಿದೆ. ಇನ್ನೊಬ್ಬರು ಶ್ರೀ ರವಿಚಂದ್ರ ಎಂದು ಅವರು ಕೂಡ ಹಿಂದೆ Task Force ನಲ್ಲಿ ಕೆಲಸ ಮಾಡಿದ್ದರು. ಅವರಿಗೂ ಅನುಭವ ಇದ್ದುದರಿಂದ ಅವರನ್ನು ಕೂಡ ಒಬ್ಬರು ಸದಸ್ಯರನ್ನಾಗಿ ಮಾಡಿದೆ. ಇವರುಗಳು ಎರಡು ಮಧ್ಯಂತರ ವರದಿಗಳನ್ನು ಒಂದು ಡಿಸೆಂಬರ್‌ನಲ್ಲಿ ಕೊಟ್ಟಿದ್ದಾರೆ, ಇನ್ನೊಂದು ಮಾರ್ಚ್ ತಿಂಗಳಿನಲ್ಲಿ ಕೊಟ್ಟಿದ್ದಾರೆ. ಆ ಎರಡು ಮಧ್ಯಂತರ ವರದಿಯಲ್ಲಿ ಅವರು ಸುಮ್ಮಸುಮ್ಮನೆ ಮಧ್ಯಂತರ ವರದಿಗಳನ್ನು ಕೊಟ್ಟಿಲ್ಲ. ಬಹಳ ಜನರ ಜೊತೆಯಲ್ಲಿ consultation ಮಾಡಿ, ಯಾರ್‍ಯಾರು stakeholders ಇದಕ್ಕೆ ಇದ್ದಾರೆ, ಅವರೆಲ್ಲರ ಜೊತೆಯಲ್ಲಿ consultation ಮಾಡಿ, ಬಿಜೆಪಿ, ಕಾಂಗ್ರೆಸ್, ಜೆಡಿಎಸ್, ಎಂಎಲ್ಎ ಗಳ ಜೊತೆಯಲ್ಲಿ, ಅಂದರೆ ಶಾಸಕರುಗಳ ಜೊತೆಯಲ್ಲಿ, ಕಾರ್ಪೊರೇಟರ್‌ಗಳ ಜೊತೆಯಲ್ಲಿ, ಸಾರ್ವಜನಿಕರ ಜೊತೆಯಲ್ಲಿ, ಸಂಘ ಸಂಸ್ಥೆಗಳ ಜೊತೆಯಲ್ಲಿ ಎಲ್ಲರ ಜೊತೆಯಲ್ಲಿಯೂ ಕೂಡ consult ಮಾಡಿದ್ದಾರೆ. ವಿರೋಧ ಪಕ್ಷದವರು

confuse ಮಾಡಿ ಬಿಟ್ಟಿದ್ದಾರೆ. ಇಡೀ ರಾಜ್ಯದ ಜನತೆಗೆ, ಬೆಂಗಳೂರು ನಗರದ ಜನತೆಗೆ ಸರಿಯಾದ ಮಾಹಿತಿ ಹೋಗಬೇಕಲ್ಲವೇ? ಏಕೆಂದರೆ, ಎಲ್ಲರೂ ಮಾತನಾಡುವಾಗ ಶ್ರೀ ಸಿದ್ದರಾಮಯ್ಯನವರು mislead ಆಗಿ ಬಿಟ್ಟಿದ್ದಾರೆ, ದಾರಿ ತಪ್ಪಿಸಿಬಿಟ್ಟಿದ್ದಾರೆಂದು ಹೇಳಿದ್ದಾರೆ.

**ಡಾ॥ ಮತ್ತಿಕಟ್ಟಿ ವೀರಣ್ಣ:–** ಅದಕ್ಕೆ ನಾನು ಉತ್ತರ ಕೊಟ್ಟಿದ್ದೇನೆ.

**ಶ್ರೀ ಸಿದ್ದರಾಮಯ್ಯ:–** ನೀವು ಉತ್ತರ ಕೊಟ್ಟಿದ್ದೀರಿ, ಆದರೆ ಅದು ಅವರಿಗೆ ಗೊತ್ತಾಗಬೇಕಲ್ಲವೆ. ತಜ್ಞರ ಸಮಿತಿಯು ಮೂರು ಮಾರ್ಗಗಳಲ್ಲಿ ಕಾರ್ಯನಿರ್ವಹಿಸಿದೆ. ಪಾಲುದಾರರೊಡನೆ ಸಮಾಲೋಚನೆ ನಡೆಸಿದೆ, 16 ಶಾಸಕರ ಜೊತೆಯಲ್ಲಿ, 25 ಕಾರ್ಪೊರೇಟರ್‌ಗಳ ಜೊತೆಯಲ್ಲಿ, ಸರ್ಕಾರದ 20 ಸಂಸ್ಥೆಗಳ ಹಿರಿಯ ಅಧಿಕಾರಿಗಳು, 6 ಸಾಂಸ್ಥಿಕ ತಂಡಗಳು, ಬಿ.ಬಿ.ಎಂ.ಪಿ. ... ಇವರೆಲ್ಲರ ಜೊತೆಯಲ್ಲಿ ಮಾತನಾಡಿ ಕೊನೆಗೆ ಏನು ಹೇಳಿದ್ದಾರೆ ಎಂಬುದನ್ನು ಸಂಕ್ಷಿಪ್ತವಾಗಿ ಹೇಳಬಯಸುತ್ತೇನೆ. 'ಪ್ರಸ್ತುತ ಅಸ್ತಿತ್ವದಲ್ಲಿರುವ ಬಿ.ಬಿ.ಎಂ.ಪಿ. ಮಾದರಿ ಸುಸ್ಥಿರವಲ್ಲ,' ಈಗಿರುವಂತಹ ಮಾದರಿ ಸುಸ್ಥಿರವಲ್ಲ. 'ಪ್ರಸ್ತುತ ಈ ವ್ಯವಸ್ಥೆ ಪರಿಣಾಮಕಾರಿಯಾಗಿಲ್ಲ, ಎಂದು ಹೇಳಿದ್ದಾರೆ.

**ಶ್ರೀ ಸಂದೇಶ್ ನಾಗರಾಜ್:–** ಬಿ.ಬಿ.ಎಂ.ಪಿ. ಆಯುಕ್ತರಾಗಿದ್ದವರೇ ಕೊಟ್ಟಿರುವ ರಿಪೋರ್ಟ್ ಇದು.

**ಶ್ರೀ ಸಿದ್ದರಾಮಯ್ಯ:–** ಸರ್ಕಾರ ಆಯುಕ್ತರನ್ನು ನೇಮಿಸುತ್ತದೆ, ಸರ್ಕಾರ ಹೇಳಿದ ಕೆಲಸವನ್ನು ಅವರು ಮಾಡುತ್ತಾರೆ. ಆಯುಕ್ತರಾಗಿ ನೇಮಕಗೊಂಡಂತಹ ಸರ್ಕಾರಿ ಅಧಿಕಾರಿಗಳು ಬಿ.ಬಿ.ಎಂ.ಪಿ. ಸರಿಯಿಲ್ಲ, ನಾನು ಅಲ್ಲಿ ಕೆಲಸ ಮಾಡುವುದಕ್ಕೆ ಹೋಗುವುದಿಲ್ಲ ಎಂದು ಹೇಳುವುದಕ್ಕಾಗುತ್ತದೆಯೇ? ನೀವು ಸಹ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಗೊಂಡು ಬಂದಿರುವಂತಹವರು, ಆ ರೀತಿ ಹೇಳುವುದಕ್ಕಾಗುತ್ತದೆಯೇ? ಆ ರೀತಿ ಹೇಳುವುದಕ್ಕಾಗುವುದಿಲ್ಲ. ಸರ್ಕಾರಿ ಕೆಲಸದಲ್ಲಿರುವವರು ಹಾಗೆಲ್ಲಾ ಮಾಡುವುದಕ್ಕಾಗುವುದಿಲ್ಲ.

ಪ್ರಸ್ತುತ ಈ ವ್ಯವಸ್ಥೆ ಪರಿಣಾಮಕಾರಿಯಾಗಿಲ್ಲ, 2040ರ ವೇಳೆಗೆ ಇಲ್ಲಿನ ಜನಸಂಖ್ಯೆ 20 ದಶಲಕ್ಷ ಮುಟ್ಟುವ ಸಾಧ್ಯತೆ ಇರುವುದರಿಂದ, ಜನಜೀವನದ ಗುಣಮಟ್ಟದ ಕುಸಿತ ಬಹುಬೇಗನೆ ಆರಂಭವಾಗುವ ನಿರೀಕ್ಷೆ ಇದೆ. ಇದು ಅವರ ಶಿಫಾರಸ್ಸು. 20 ದಶಲಕ್ಷ ಎಂದರೆ 2 ಕೋಟಿ.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ...

**ಶ್ರೀ ಸಿದ್ದರಾಮಯ್ಯ:–** ಮಾನ್ಯ ನಾರಾಯಣಸ್ವಾಮಿಯವರೇ, ನನಗೆ ನಿಮ್ಮಷ್ಟು ಚೆನ್ನಾಗಿ, ಸ್ಫುಟವಾಗಿ ಕನ್ನಡ ಓದುವುದಕ್ಕೆ ಬರುವುದಿಲ್ಲ. ನೀವು ಕನ್ನಡವನ್ನು ಬಹಳ ಸ್ಫುಟವಾಗಿ, ವ್ಯಾಕರಣಬದ್ಧವಾಗಿ ಮಾತನಾಡುತ್ತೀರಿ. ನಾವು ಹಳ್ಳಿಯಿಂದ ಬಂದವರು, ನಮ್ಮಿಂದ ಆ ರೀತಿ ಮಾತನಾಡುವುದಕ್ಕಾಗುವುದಿಲ್ಲ. ನಾವು ಹಳ್ಳಿ ಭಾಷೆಯಲ್ಲಿ ಹೇಳಿಬಿಡುತ್ತೇವೆ.

'ಒಂದೇ ಮುನಿಸಿಪಾಲಿಟಿಯಲ್ಲಿ ಇಷ್ಟೊಂದು ಅಗಾಧವಾದ ಜನಸಂಖ್ಯೆ 10 ದಶಲಕ್ಷ ಮತ್ತು ವಿಸ್ತೀರ್ಣ 800 ಚದರ ಕಿಲೋ ಮೀಟರ್ ಇದ್ದು ಆಡಳಿತ ನಿರ್ವಹಣೆಯಾಗುತ್ತಿರುವ ಮತ್ತೊಂದು ನಗರದ ಉದಾಹರಣೆ ಇಲ್ಲ.' ಇದು ಆ ಸಮಿತಿಯವರು ಮಾಡಿರುವಂತಹ ಶಿಫಾರಸ್ಸು. 'ಕಳೆದ 5 ವರ್ಷಗಳಲ್ಲಿ 198 ಕಾರ್ಪೊರೇಟರ್‌ಗಳ ಪೈಕಿ ಶೇಕಡ 90ರಷ್ಟು ಕಾರ್ಪೊರೇಟರ್‌ಗಳಿಗೆ ಕೌನ್ಸಿಲ್ ಸಭೆಯಲ್ಲಿ ಮಾತನಾಡುವ ಒಂದೇ ಒಂದು ಅವಕಾಶವೂ ದೊರೆತಿಲ್ಲ,' ಎಂದು ಸಹ ಅವರು ಶಿಫಾರಸ್ಸು ಮಾಡಿದ್ದಾರೆ. 'ನಗರಾಭಿವೃದ್ಧಿ ವಿಷಯಗಳಿಗೆ ಸಂಬಂಧಿಸಿದ ಈಗಿನ ವ್ಯವಸ್ಥೆಯು ಯಾವುದೇ ಪರಿಣಾಮಕಾರಿ ಚರ್ಚೆ, ನಿರ್ಣಯ ಮತ್ತು ಆಡಳಿತಕ್ಕೆ ಅವಕಾಶ ನೀಡುವುದಿಲ್ಲ.'

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಮಾನ್ಯ ಮುಖ್ಯಮಂತ್ರಿಯವರು ರಾಮಾಯಣ ಓದಿದಂತಾಯಿತು.

**ಶ್ರೀ ಸಿದ್ದರಾಮಯ್ಯ:–** ಪುಟ್ಟಸ್ವಾಮಿಯವರೇ, 'ಆದುದರಿಂದ ನಮಗೆ ಬಹುಸಂಖ್ಯೆಯ ನಗರಸಭೆಗಳ ಅಗತ್ಯವಿರುವುದು ಇದರಿಂದ ಸ್ಪಷ್ಟವಾಗುತ್ತದೆ.'

ಮಾನ್ಯ ಮರಿತಿಬ್ಬೇಗೌಡರೇ, ಯಾಕೆ ಮನಸ್ಸಿಗೆ ನೋವು ಮಾಡಿಕೊಳ್ಳುತ್ತೀರಿ? ಅದೇನೋ ಹೇಳಬಯಸುತ್ತಿದ್ದೀರಲ್ಲಾ, ಹೇಳಿಬಿಡಿ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ತಂದಿರುವಂತಹ ಈ ವಿಧೇಯಕದ ಬಗ್ಗೆ ನಾವು ಕಳೆದ 3 ದಿವಸಗಳಿಂದಲೂ ಚರ್ಚೆ ಮಾಡುತ್ತಿದ್ದೇವೆ. ತಾವು ತಂದಿರುವಂಥದ್ದು ಮತ್ತು ನಾವು ಚರ್ಚೆ ಮಾಡಿರತಕ್ಕಂಥದ್ದನ್ನು ನೋಡಿದರೆ ನನಗೆ ಒಂದು ಸಣ್ಣ ಉಪಕತೆ ನೆನಪಿಗೆ ಬರುತ್ತಿದೆ. ಸ್ಕೂಲ್ ಇನ್‌ಸ್ಪೆಕ್ಟರ್ ಒಬ್ಬರು ಒಂದು ಶಾಲೆಗೆ ಭೇಟಿ ಕೊಟ್ಟಂತಹ ಸಂದರ್ಭದಲ್ಲಿ ಶಿಕ್ಷಕರನ್ನು ಕುರಿತು ಯಾವ ವಿಷಯವಾಗಿ ಪಾಠ ಮಾಡುತ್ತಿದ್ದೀರಿ ಎಂದು ಕೇಳಿದರಂತೆ, ಆ ಶಿಕ್ಷಕರು ಗಣಿತ ವಿಷಯವಾಗಿ ತರಗತಿಯನ್ನು ತೆಗೆದುಕೊಂಡಿರುವುದಾಗಿ ತಿಳಿಸಿದರಂತೆ. ಹೌದೇನು ಎಂದ ಸ್ಕೂಲ್ ಇನ್‌ಸ್ಪೆಕ್ಟರ್‌ರವರು ಒಬ್ಬ ವಿದ್ಯಾರ್ಥಿಯನ್ನು ಕುರಿತು 4 ಕ್ಕೆ 4 ನ್ನು ಕೂಡಿಸಿದರೆ ಎಷ್ಟಾಗುತ್ತದೆ ಮಗು ಎಂದು ಪ್ರಶ್ನಿಸಿದರಂತೆ. ಆ ವಿದ್ಯಾರ್ಥಿ 4400 ಎಂದು ಉತ್ತರ ಕೊಟ್ಟನಂತೆ, ಮತ್ತೊಂದು ಮಗುವನ್ನು ಕರೆದು 5ಕ್ಕೆ 5ನ್ನು ಕೂಡಿಸಿದರೆ ಎಷ್ಟು ಎಂದರಂತೆ, 5500 ಎಂದು ಆ

ವಿದ್ಯಾರ್ಥಿ ಉತ್ತರ ಕೊಟ್ಟನಂತೆ. ಮತ್ತೊಬ್ಬ ವಿದ್ಯಾರ್ಥಿಯನ್ನು ಕೇಳಿದರೆ ಅವನು ಸಹ ಅದೇ ರೀತಿ ಉತ್ತರ ಕೊಟ್ಟನಂತೆ. ಇದನ್ನು ಕೇಳಿದ ಸ್ಕೂಲ್ ಇನ್‌ಸ್ಪೆಕ್ಟರ್‌ರವರು ಏನ್ರೀ ಮೇಷ್ಟ್ರೇ, ಗಣಿತ ಪಾಠ ಮಾಡುವುದಾಗಿ ತಿಳಿಸುತ್ತೀರಿ, ಈ ವಿದ್ಯಾರ್ಥಿಗಳು ಈ ರೀತಿ ಉತ್ತರ ಕೊಡುತ್ತಿದ್ದಾರೆ ಎಂದು ಕೇಳಿದರಂತೆ. ಅದಕ್ಕೆ ಆ ಶಿಕ್ಷಕರು 'ಸಾರ್, ನಾನು ಈ ಶಾಲೆಗೆ ಶಿಕ್ಷಕನಾಗಿ ಬಂದು ಒಂದು ವರ್ಷವಾಯಿತು, ನಾನು ಬಂದಾಗ ಇದೇ ಪ್ರಶ್ನೆಗಳಿಗೆ ಈ ವಿದ್ಯಾರ್ಥಿಗಳು ಕೋಟಿ, ಕೋಟಿ ಹೇಳುತ್ತಿದ್ದರು, ಈಗ ಚೆನ್ನಾಗಿ ಪಾಠ ಮಾಡಿ ಸಾವಿರಕ್ಕೆ ತಂದಿದ್ದೇನೆ ಎಂದು ಹೇಳಿದರಂತೆ. ಆ ರೀತಿಯಾಗಿದೆ, ನಮ್ಮ ಬೆಂಗಳೂರು ನಗರಪಾಲಿಕೆಯ ವಿಭಜನೆಗೆ ಈ ವಿಧೇಯಕವನ್ನು ತಂದಿರುವುದು.

**ಶ್ರೀ ವಿ.ಎಸ್. ಉಗ್ರಪ್ಪ:–** ಬಹುಶಃ ಆ ಮೇಷ್ಟ್ರು ಮರಿತಿಬ್ಬೇಗೌಡರೇ ಇರಬೇಕು.

**ಶ್ರೀ ಸಿದ್ದರಾಮಯ್ಯ:–** ಇರಲಿ ಬಿಡಿ, ಮಾನ್ಯ ಮರಿತಿಬ್ಬೇಗೌಡರು ಹೇಳಿದಂತಹ ಉಪಕತೆ ಏನಿದೆ, ಅದಕ್ಕೂ ಇದಕ್ಕೂ ಯಾವುದೇ ಸಂಬಂಧವಿಲ್ಲ, ಅರ್ಥಾತ್ ಸಂಬಂಧವಿಲ್ಲ. ನಾನು ಏಕೆ ಹೇಳಿದೆನೆಂದರೆ, ಮಾನ್ಯ ಸದಸ್ಯರೆಲ್ಲರೂ ಏನು ಪ್ರಸ್ತಾಪ ಮಾಡಿದ್ದಾರೆ, ಸಿದ್ದರಾಮಯ್ಯನವರಿಗೆ ದಾರಿತಪ್ಪಿಸಿದ್ದಾರೆ, ಅವರ ಕ್ಯಾಬಿನೆಟ್‌ನಲ್ಲಿರುವವರು ಯಾರೂ ಅವರಿಗೆ ಸರಿಯಾಗಿ ಹೇಳಿಕೊಟ್ಟಿಲ್ಲ ಎಂದಿದ್ದಾರೆಲ್ಲಾ ಅದಕ್ಕೆ ಇದು ಹಿನ್ನೆಲೆ. ಇದನ್ನು ನಮ್ಮ ಪ್ರಣಾಳಿಕೆಯಲ್ಲಿಯೇ ಹೇಳಿದ್ದೆವು. ನಾವು ಅಧಿಕಾರಕ್ಕೆ ಬಂದ ಮೇಲೆ ಈಗ ಇರುವಂತಹ ಎಲೆಕ್ಟೆಡ್ ಬಾಡಿ ಟೈಮ್ ಮುಗಿಯಲಿ ಎನ್ನುವ ಕಾರಣಕ್ಕೋಸ್ಕರವಾಗಿ ನಾವು ಸ್ವಲ್ಪ ವಿಳಂಬ ಮಾಡಿದೆವು. ನಾವು ತಜ್ಞರ ಸಮಿತಿಯೊಂದನ್ನು ರಚನೆ ಮಾಡಿ ಅದರ ವರದಿಯನ್ನು ಪಡೆದುಕೊಂಡಿದ್ದೇವೆ. ಆ ವರದಿ ಕೊಡುವಾಗ ಅವರು ಎಲ್ಲಾ stakeholders ಜೊತೆಯಲ್ಲಿಯೂ ಸಹ ಮಾತನಾಡಿದ್ದಾರೆ. ಬೇರೆ ಬೇರೆ ದೇಶಗಳಲ್ಲಿ ಸಹ ಪರಿಸ್ಥಿತಿ ಯಾವ ರೀತಿ ಇದೆ ಎನ್ನುವುದನ್ನು ಸಹ ಆ ವರದಿಯಲ್ಲಿ ತಿಳಿಸಿದ್ದಾರೆ. ಹಾಗಾಗಿ ಇವತ್ತು ಬೆಂಗಳೂರಿನ ವಿಸ್ತೀರ್ಣ 800 ಚದರ ಕಿಲೋ ಮೀಟರ್ ಇದೆ. ಯಾವ ಕಾರಣಕ್ಕೋಸ್ಕರ ಅವತ್ತಿನ ಸಮ್ಮಿಶ್ರ ಸರ್ಕಾರ ತೀರ್ಮಾನ ತೆಗೆದುಕೊಂಡಿತೆಂಬುದು ನನಗೆ ಗೊತ್ತಿಲ್ಲ. ಆ ರೀತಿ ಮಾಡದೆ ಹೋಗಿದ್ದರೆ ಇವತ್ತು ಈ ಪರಿಸ್ಥಿತಿ ಬರುತ್ತಿರಲಿಲ್ಲ.

ಬೆಂಗಳೂರು ಮಹಾನಗರ ಪಾಲಿಕೆ ಅಂದರೆ, ಬಿ.ಎಂ.ಪಿ. ಎಂದು ಇದ್ದುದಕ್ಕೆ ಇವರು ಮತ್ತೊಂದು 'ಬಿ' ಸೇರಿಸಿ 2007ರಲ್ಲಿ ಬಿ.ಬಿ.ಎಂ.ಪಿ. ಅಂದರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಎಂದು ಮಾಡಿಬಿಟ್ಟರು. ಆ ರೀತಿ ಇವರು ಬಿ.ಎಂ.ಪಿ.ಯನ್ನು ಬಿ.ಬಿ.ಎಂ.ಪಿ.ಯನ್ನಾಗಿ ಮಾಡದೆ ಹೋಗಿದ್ದರೆ ಇವತ್ತು ಈ ಪರಿಸ್ಥಿತಿ ಉದ್ಭವವಾಗುತ್ತಿರಲಿಲ್ಲ. 2007ರಲ್ಲಿ ಇವರು ಆ ರೀತಿ ಏಕೆ ಮಾಡಿದರು ಎಂಬುದು

ನನಗೆ ಗೊತ್ತಿಲ್ಲ. ಯಾರು ಅವರಿಗೆ, ಅದನ್ನೇ ಹೇಳಿದ್ದು ಜಗದೀಶ್ ಶೆಟ್ಟರ್‌ರವರು, ಇದನ್ನು ಮಾಡುವಾಗ ಎಲ್ಲಿಯೂ ಚರ್ಚೆಯಾಗಲಿಲ್ಲ. ಚರ್ಚೆ ಆಗದಿರುವುದರಿಂದ ಇವತ್ತು ಆಡಳಿತಾತ್ಮಕವಾಗಿ ಬಹಳ ಸಮಸ್ಯೆ ಆಗಿಬಿಟ್ಟಿದೆ. 110 ಹಳ್ಳಿಗಳನ್ನು ಸೇರಿಸಿಬಿಟ್ಟರು, 226 ಚದರ ಕಿಲೋಮೀಟರ್, 100 ವಾರ್ಡ್‌ಗಳಿದ್ದಂತಹ ಪ್ರದೇಶವನ್ನು 800 ಚದರ ಕಿಲೋ ಮೀಟರ್ ಮಾಡಿಬಿಟ್ಟರು. ಹೀಗಾಗಿ 198 ವಾರ್ಡ್‌ಗಳಾಗಿಬಿಟ್ಟವು. ಆ 110 ಹಳ್ಳಿಗಳು ಸೇರದೆ ಹೋಗಿದ್ದರೆ, 7 ನಗರಸಭೆಗಳು, 1 ಪುರಸಭೆ ಸೇರದೆ ಹೋಗಿದ್ದರೆ ಇಷ್ಟೊಂದು ವ್ಯಾಪ್ತಿಯೂ ಆಗುತ್ತಿರಲಿಲ್ಲ, ಇಷ್ಟೊಂದು unwieldy ಸಹ ಆಗುತ್ತಿರಲಿಲ್ಲ. ಇವತ್ತು ಈ ಕಾರ್ಪೊರೇಷನ್‌ನಲ್ಲಿ ಇಂತಹ ಅನೇಕ ಅವ್ಯವಹಾರಗಳೇನು ನಡೆಯುತ್ತಿವೆ ಇವಕ್ಕೆಲ್ಲಾ ಕಡಿವಾಣ ಹಾಕುವುದಕ್ಕೆ ಕಷ್ಟವಾಗಿದೆ. ಅದಕ್ಕಾಗಿಯೇ ಯಾವತ್ತಿಗೂ ಕೂಡ ಸಣ್ಣದು ಚೊಕ್ಕಟವಾಗಿರುತ್ತದೆ ಎಂಬುದನ್ನು ಎಲ್ಲರೂ ಒಪ್ಪುತ್ತೇವೆ.

ಬೆಂಗಳೂರನ್ನು ಒಡೆದುಬಿಡುತ್ತಾರೆ, ಬೆಂಗಳೂರಿನ ಬ್ರಾಂಡ್ ನೇಮ್ ಹೋಗಿಬಿಡುತ್ತದೆ, ಕೆಂಪೇಗೌಡರಿಗೆ ಅಪಚಾರ ಆಗಿಬಿಡುತ್ತದೆ ಎಂದೆಲ್ಲಾ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಕೆಂಪೇಗೌಡರು ಬೆಂಗಳೂರನ್ನು ಕಟ್ಟಿದರು, ಅವರು ಬೆಂಗಳೂರಿನ ನಿರ್ಮಾತೃ. ಅವರ ಬಗ್ಗೆ ನಮಗೆ ಅಪಾರವಾದಂತಹ ಗೌರವವಿದೆ. ಆ ಕಾರಣದಿಂದಾಗಿಯೇ ನಾವೆಲ್ಲರೂ ಸೇರಿ ದೇವನಹಳ್ಳಿಯಲ್ಲಿರುವ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಎಂದು ಹೆಸರಿಟ್ಟಿದ್ದೇವೆ. ಅವರು ಎಲ್ಲಿ ಈ ಕೆಲಸವನ್ನು ಮಾಡಿದರು? ಕೆಂಪೇಗೌಡರು ಕಟ್ಟಿದಂತಹ ಬೆಂಗಳೂರು, ಆಮೇಲೆ ಕಂಟೋನ್ಮೆಂಟ್ ಏರಿಯಾ, ಇವೆಲ್ಲವೂ ಸಹ ಬೇರೆ ಬೇರೆ ಇದ್ದವುಗಳಲ್ಲವೆ ಮಾನ್ಯ ರಾಮಚಂದ್ರಗೌಡರೆ? ಕಂಟೋನ್ಮೆಂಟ್ ಏರಿಯಾ ಬೇರೆ ಇತ್ತು, ಇದೇ ಬೇರೆ ಇತ್ತು. ಇವೆರಡೂ ಒಂದಾಗಿದ್ದು 1949ರಲ್ಲಿ. 1862ರಲ್ಲಿ ಬೇರೆ ಬೇರೆ ಮುನಿಸಿಪಾಲಿಟಿಗಳಿದ್ದವು. ಅನಂತರ ಕ್ರಮೇಣ ವಿಸ್ತಾರವಾಗುತ್ತಾ ಬಂತು, ಜನಸಂಖ್ಯೆ ಇವತ್ತು ಎಲ್ಲಿಯವರೆಗೆ ಬೆಳೆದುಕೊಂಡು ಹೋಗಿದೆ? ಜನಸಂಖ್ಯೆ ಯಾವ ಯಾವ ವರ್ಷ ಎಷ್ಟೆಷ್ಟಿತ್ತು ಎಂಬುದನ್ನು ನೀವೇ ಹೇಳಿ. ನಾನು ಮತ್ತೆ ಅದನ್ನು ಪುನರಾವರ್ತನೆ ಮಾಡುವುದಕ್ಕೆ ಹೋಗುವುದಿಲ್ಲ.

**(5–00 ಗಂಟೆ)**

ಇವತ್ತು 10.1 ಮಿಲಿಯನ್ ಜನಸಂಖ್ಯೆ ಇದೆ. ಬೆಂಗಳೂರು ಕಾರ್ಪೊರೇಶನ್ ಬಗ್ಗೆ ಕಸ ವಿಲೇವಾರಿ ಆಗದೆ ಇರುವಂಥದ್ದರ ಬಗ್ಗೆ ನಾವೊಬ್ಬರೇ ಹೇಳುತ್ತಿಲ್ಲ, ಲೋಕಾಯುಕ್ತದವರು ಸಹ ಹೇಳಿದ್ದಾರೆ, ನಮ್ಮ ಉಚ್ಚನ್ಯಾಯಾಲಯದವರು ಹೇಳಿದ್ದಾರೆ, ಸಿ.ಎ.ಜಿ. ವರದಿ ಇದೆ, ಸಿ.ಐ.ಡಿ. ವರದಿ ಇದೆ, ಆಡಿಟರ್ಸ್ ವರದಿ

ಇದೆ, ಇವೆಲ್ಲವೂ ಇವೆ. ಜೊತೆಗೆ ಜನರು ಹೇಳುತ್ತಾರೆ. ಇದೆಲ್ಲವನ್ನೂ ನಾವು ಹುಟ್ಟಿಸಿಕೊಂಡು ಹೇಳಿರುವಂಥದ್ದಲ್ಲ. ಅದಕ್ಕೋಸ್ಕರವೇ ನಾವು ರಾಜೇಂದ್ರ ಕುಮಾರ್ ಕಠಾರಿಯ ಎಂಬ ಐಎಎಸ್ ಅಧಿಕಾರಿ ಅವರ ನೇತೃತ್ವದಲ್ಲಿ ಒಂದು ತನಿಖೆಯನ್ನು ಸಹ ಮಾಡಿಸಲಾಯಿತು. ಅವರು 6 findings ಕೊಟ್ಟಿರುವುದಲ್ಲದೆ ಇನ್ನೂ further ತನಿಖೆ ಆಗಬೇಕೆಂದು ಹೇಳಿದ್ದಾರೆ. ಒಂದು independent agency ಯಿಂದ ತನಿಖೆ ಆಗಬೇಕೆಂದು ಹೇಳಿದ್ದಾರೆ. ಅಲ್ಲಿ ಆಗಿರುವಂತಹ ಅವ್ಯವಹಾರಗಳು ಎಲ್ಲರಿಗೂ ತಿಳಿದಿರುವಂತಹ ವಿಷಯವೆ. ಮಾನ್ಯ ಸೋಮಣ್ಣ, ಮಾನ್ಯ ರಾಮಚಂದ್ರಗೌಡ, ಮಾನ್ಯ ಸೀತಾರಾಂ, ಮಾನ್ಯ ಶ್ರೀಮತಿ ವಿಮಲಾಗೌಡ ಹಾಗೂ ಶ್ರೀ ರಾಮಲಿಂಗಾ ರೆಡ್ಡಿ, ಶ್ರೀ ಕೆ.ಜೆ. ಜಾರ್ಜ್, ಶ್ರೀ ಗೋವಿಂದರಾಜ್, ಇವರೆಲ್ಲರಿಗೂ ಸಹ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಡೆದಿರುವಂತಹ ಅವ್ಯವಹಾರದ ಬಗ್ಗೆ ತಿಳಿದಿದೆ. ಇಲ್ಲಿ ಇರುವಂತಹ ಎಲ್ಲರಿಗೂ ಗೊತ್ತಿದೆ ನಾನು ಇಲ್ಲವೆಂದು ಹೇಳಲಿಲ್ಲ.

ಬೆಂಗಳೂರನ್ನು ಹೊಡೆದು ಹಾಕಬೇಕೆನ್ನುವುದು ನಮ್ಮ ಉದ್ದೇಶವಲ್ಲ. ಭಾರತ ದೇಶದಲ್ಲಿ ಅನೇಕ ರಾಜ್ಯಗಳಿವೆ. ಸ್ವಾತಂತ್ರ್ಯಾ ನಂತರ ಎಷ್ಟು ರಾಜ್ಯಗಳು ವಿಭಜನೆ ಆಗಿಲ್ಲ? ಉತ್ತರ ಪ್ರದೇಶ, ಬಿಹಾರ ವಿಭಜನೆಯಾಗಿದೆ, ಈಗ ಹೊಸದಾಗಿ ಹರಿಯಾಣ ವಿಭಜನೆಯಾಗಿದೆ. ಹಾಗಾದರೆ ಭಾರತದ brand name ಹೋಗಿಬಿಟ್ಟಿದೆಯೆ? ಕರ್ನಾಟಕ ರಾಜ್ಯದಲ್ಲಿ 30 ಜಿಲ್ಲೆಗಳಿವೆ. ಮಾನ್ಯ ಜೆ.ಹೆಚ್. ಪಟೇಲ್‌ರವರು ಇದ್ದಾಗ ಹೊಸದಾಗಿ 7 ಜಿಲ್ಲೆಗಳನ್ನು ವಿಭಜನೆ ಮಾಡಿದರು. ಹಾಗಾದರೆ ಕರ್ನಾಟಕ ಕನ್ನಡ ನಾಡು ಎನ್ನುವುದು ಹೊರಟು ಹೋಯಿತೆ?

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಕರ್ನಾಟಕಾನೇ ಬೇರೆ. ಆದರೆ ಇದು ಬೆಂಗಳೂರು, ರಾಜ್ಯದ ರಾಜಧಾನಿ ಸರ್.

**ಶ್ರೀ ಸಿದ್ದರಾಮಯ್ಯ:–** ಬೆಂಗಳೂರು ರಾಜಧಾನಿಯೆಂದೇ ನಾನು ಹೇಳುತ್ತಿರುವುದು. ಬೆಂಗಳೂರು ರಾಜಧಾನಿಗೆ ವಿಶೇಷವಾದಂತಹ ಒಂದು ಮಹತ್ವವಿದೆ. ಇವತ್ತು ಬೆಂಗಳೂರು ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಯನ್ನು ಪಡೆದುಕೊಂಡಿದೆ. Investors' Destination ಯಾವುದು ಎಂದರೆ ಬೆಂಗಳೂರು ಎಂದು ಹೇಳುತ್ತಾರೆ. ಅದಕ್ಕೆ ಪ್ರಾಪರ್ ಆಗಿ ಬೆಂಗಳೂರಿಗೆ ಮೂಲಭೂತ ಸೌಕರ್ಯ ಬೇಕೆ ಬೇಡವೆ ಸೋಮಣ್ಣ? ಮೂಲಭೂತ ಸೌಕರ್ಯಗಳಾದಂತಹ ಕುಡಿಯುವಂತಹ ನೀರು ಶುದ್ಧವಾಗಿರಬೇಕು. ರಸ್ತೆಗಳು ಸರಿ ಇರಬೇಕು, ಒಳಚರಂಡಿ ವ್ಯವಸ್ಥೆ ಸರಿ ಇರಬೇಕು. Traffic congestion ಇರಬಾರದು, ಇವೆಲ್ಲಾ ಇರಬೇಕೆ ಬೇಡವೆ? ಅವೆಲ್ಲಾ ಇಲ್ಲ ಎನ್ನುವ ಕಾರಣಕ್ಕೋಸ್ಕರವೆ

ಇವೆಲ್ಲಾ ಆಗಿಲ್ಲ. 5 ವರ್ಷ ಆಯಿತು? 5 ವರ್ಷದಲ್ಲಿ 110 ಹಳ್ಳಿಗಳಿಗೆ ಇವತ್ತಿನವರೆಗೂ ಏಕೆ ಕುಡಿಯುವ ನೀರನ್ನು ಕೊಡುವುದಕ್ಕೆ ಸಾಧ್ಯವಾಗಲಿಲ್ಲ? ಏಕೆ ಮೂಲಭೂತ ಸೌಕರ್ಯಗಳನ್ನು ಕೊಡುವುದಕ್ಕೆ ಆಗಲಿಲ್ಲ?

**ಶ್ರೀ ಸೋಮಣ್ಣ ಮ. ಬೇವಿನಮರದ:–** 60 ವರ್ಷವಾದರು ಮಾಡುವುದಕ್ಕೆ ಆಗಿಲ್ಲ.

**ಶ್ರೀ ಸಿದ್ದರಾಮಯ್ಯ:–** ನಿಮ್ಮನ್ನು ಸೇರಿಸಿಕೊಂಡು ಈ ರೀತಿ ಆಯಿತು, ಸೇರಿಸಿಕೊಳ್ಳದಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ. 2040ನೇ ಇಸವಿಗೆ 2 ಕೋಟಿ ಜನಸಂಖ್ಯೆ ಆಗುತ್ತದೆ. ಈಗಲೇ ಈ ಪರಿಸ್ಥಿತಿ ಇದೆ. ಇನ್ನು 2040ನೇ ಇಸವಿಗೆ ಈ ಬೆಂಗಳೂರಿನ ಪರಿಸ್ಥಿತಿ ಏನಾಗಬಹುದು, ನಾವು ಊಹಿಸಿಕೊಳ್ಳುವುದಕ್ಕಾದರೂ ಆಗುತ್ತದೆಯೆ? ನಾನು ಅದಕ್ಕೆ ನಿನ್ನೆ ಅಥವಾ ಮೊನ್ನೆ ದಿವಸ ಒಂದು ಮಾತನ್ನು ಹೇಳಿದೆ. ಏನೆಂದರೆ ನಾವು ಈ ವಿಧೇಯಕವನ್ನು ತರುವುದಕ್ಕೂ ಮುಂಚೆ ಸಾರ್ವಜನಿಕರೊಂದಿಗೆ ಮತ್ತೊಮ್ಮೆ ಚರ್ಚೆ ಮಾಡುತ್ತೇವೆ. ಏಕೆಂದರೆ, ಸಾರ್ವಜನಿಕರ ಅಭಿಪ್ರಾಯವನ್ನು ಸಹ ತೆಗೆದುಕೊಳ್ಳಬೇಕೆನ್ನುವುದು Act ನಲ್ಲಿಯೂ ಸಹ ಇದೆ. ಬೆಂಗಳೂರನ್ನು ಎರಡು ಮಾಡಬೇಕೇ, ಮೂರು ಮಾಡಬೇಕೇ ಅಥವಾ ಯಾವ ರೀತಿ ಮಾಡಬೇಕು ಎನ್ನುವುದರ ಬಗ್ಗೆ ಸಾರ್ವಜನಿಕರ ಅಭಿಪ್ರಾಯವನ್ನು ಸಹ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇನೆ. ಇಲ್ಲಿ ಇದ್ದಕ್ಕಿದ್ದಂತೆ ಏನೋ ಉದ್ಭವ ಮಾಡಿದ್ದೇವೆ ಎಂದರೆ ಹೇಗೆ?

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೇ, ನಾನು ಈ ಬಗ್ಗೆ ಒಂದು ಕ್ಲ್ಯಾರಿಫಿಕೇಶನ್ ಕೇಳಬಯಸುತ್ತೇನೆ.

**ಸಭಾಪತಿಯವರು:–** ಚರ್ಚೆ ಮುಗಿಸಬೇಕೇ ಬೇಡವೇ ಹೇಳಿ.

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೇ, ನೀವು ಎಲ್ಲಾ ಸಮಿತಿಯ ವರದಿಯ ಬಗ್ಗೆಯೂ ಹೇಳಿದಿರಿ. ಶ್ರೀ ರಾಜೇಂದ್ರ ಕುಮಾರ್ ಕಠಾರಿಯರವರು ಕೊಟ್ಟಿರುವಂತಹ ವರದಿಯ ಬಗ್ಗೆ ಹೇಳಿದಿರಿ, ಬಿ.ಎಸ್.ಪಾಟೀಲ್‌ರವರು ಕೊಟ್ಟಿರುವಂತಹ ವರದಿಯ ಬಗ್ಗೆ ಹೇಳಿದಿರಿ, ಮಾನ್ಯ ರವೀಂದ್ರರವರ ಸೆಮಿನಾರ್ ಬಗ್ಗೆ ಹೇಳಿದಿರಿ. ಎಲ್ಲಾ ವಿಷಯವನ್ನು ಹೇಳಿದಿರಿ. ಆದರೆ ಇಲ್ಲಿಯವರೆಗೂ ಒಂದೇ ಒಂದು ಸಮಿತಿಯ ವರದಿಯ ಬಗ್ಗೆ ಇದುವರೆಗೂ ಹೇಳಲಿಲ್ಲ. ಅದೇನೆಂದರೆ, ಸರ್ಕಾರ ಏನು ಒಂದು ವಿಶೇಷ ಸಮಿತಿಯನ್ನು ರಚನೆ ಮಾಡಿತ್ತು, ಆ ಸಮಿತಿಯು ಒಂದು ವರದಿಯನ್ನು ಕೊಟ್ಟಿತು. ಆ ವರದಿಯ ಪ್ರಕಾರವಾಗಿ ಈಗ ಚುನಾವಣೆ ನಡೆದರೆ ಕಾಂಗ್ರೆಸ್ಸಿಗೆ 36 ಸೀಟುಗಳು ಬರುವುದಿಲ್ಲ, ಶ್ರೀ ಡಿ.ಕೆ.ರವಿ ಸಾವಿನ ನಂತರ ....

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಮಧುಸೂದನ್‌ರವರು ಬಹಳ ಹೊತ್ತಿನಿಂದ ಯೋಚಿಸಿ ಇದನ್ನು ಸೃಷ್ಟಿಮಾಡಿಕೊಂಡು ಹೇಳುತ್ತಿದ್ದಾರೆ. ಅವರ ಕಲ್ಪನೆ ಬಹಳ ಚೆನ್ನಾಗಿದೆ. ಮಧುಸೂದನ್, ಇವತ್ತು ನಾನು ಹೇಳುತ್ತೇನೆ, ಬೆಂಗಳೂರು ಕಾರ್ಪೋರೇಶನ್‌ಗೆ ಯಾವಾಗ ಚುನಾವಣೆ ನಡೆದರೂ ಕೂಡ ನಾವೇ ಗೆಲ್ಲುವುದು. ಭಾರತೀಯ ಜನತಾ ಪಕ್ಷವಲ್ಲ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:-** ಚುನಾವಣಾ ಪ್ರಚಾರದ ಭಾಷಣಕ್ಕೋಸ್ಕರ ಮಾತನಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:-** ಹಾಗಾದರೆ ಮಧುಸೂದನ್ ಹೇಳಬಹುದೆ? ಮೊದಲು ಅವರಿಗೆ ಹೇಳಿ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳೇ, ಮುಗಿಸಿಬಿಡಿ.

**ಶ್ರೀ ಸಿದ್ದರಾಮಯ್ಯ:-** ನಾನು ಮುಗಿಸಿಬಿಡುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಒಬ್ಬ ಮುಖ್ಯಮಂತ್ರಿಗಳಾಗಿ ಇಡೀ ಕರ್ನಾಟಕ ರಾಜ್ಯದಲ್ಲಿ ಒಂದು ವಿಧೇಯಕವನ್ನು ಮಂಡನೆ ಮಾಡಿದಮೇಲೆ ವೋಟಿಂಗ್ ಆದಮೇಲೆ ನಿಮ್ಮ ಹತ್ತಿರ ಪರ್ಮಿಶನ್ ತೆಗೆದುಕೊಂಡು ಒಂದೂವರೆ ಗಂಟೆಯಿಂದ ಉತ್ತರ ಕೊಡುತ್ತಿದ್ದಾರಲ್ಲ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದಕ್ಕೆ ಪ್ರಾರಂಭ ಮಾಡಿ ಇನ್ನೂ ಹತ್ತು ನಿಮಿಷ ಕೂಡ ಆಗಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:-** ನಾನು ನಿಮಗೆ ಸವಾಲು ಹಾಕುತ್ತೇನೆ, ಮುಂದಿನ ಚುನಾವಣೆಯಲ್ಲಿ ನೀವು ನಿಂತರೆ ಗೆಲ್ಲುವುದಕ್ಕೆ ಸಾಧ್ಯವೇ ಇಲ್ಲ, ನೀವು ಸೋಲುತ್ತೀರಿ, ಮುಖ್ಯಮಂತ್ರಿ ಸ್ಥಾನವನ್ನು ಕಳೆದುಕೊಳ್ಳುತ್ತೀರಿ. ಬಿಜೆಪಿ ಮುಂದಿನ ಚುನಾವಣೆಯಲ್ಲಿ ಗೆದ್ದೇ ಗೆಲ್ಲುತ್ತೇವೆ ಅದರಲ್ಲಿ ಅನುಮಾನ ಬೇಡ. ತಕ್ಷಣವೇ ಚುನಾವಣೆ ಮಾಡಿ. ಚುನಾವಣೆ ಮಾಡುವುದಕ್ಕೆ ತಾಕತ್ತಿಲ್ಲ, ಭಾಷಣ ಮಾಡುವುದಕ್ಕೆ ಬಂದಿದ್ದಾರೆ ಇಲ್ಲಿ.

**ಶ್ರೀ ಎಸ್.ಆರ್. ಪಾಟೀಲ್:–** ಮುಂದಿನ 5 ವರ್ಷವು ನಿಮಗೆ ಅದೇ ಸ್ಥಾನ ಖಾಯಂ ಆಗಿರುತ್ತದೆ.

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ಕೇಳ್ರಿ ಇಲ್ಲಿ, ನೀವು ಐದು ವರ್ಷ ಆಡಳಿತ ಮಾಡಿ ಚುನಾವಣೆ ಆದಮೇಲೆ ನಿಮಗೆ ಅಧಿಕೃತವಾಗಿ ಅಸೆಂಬ್ಲಿಯಲ್ಲಿ ವಿರೋಧ ಪಕ್ಷದ ಸ್ಥಾನ ಕೂಡ ಸಿಗಲಿಲ್ಲ. ಎಷ್ಟು ಮಾತನಾಡುತ್ತೀರಿ ನೀವು, ಅದೇನೋ ಮಾನ್ಯ ಯಡಿಯೂರಪ್ಪನವರು ಬಂದು ಸೇರಿಕೊಂಡಮೇಲೆ ನೀವು ವಿರೋಧ ಪಕ್ಷದ ನಾಯಕರಾದಿರಿ ಇಲ್ಲದಿದ್ದರೆ ಎಲ್ರೀ ಆಗುತ್ತಿದ್ದಿರಿ ನೀವು? ನಾಚಿಕೆ ಆಗಬೇಕು ನಿಮಗೆ. ಈಗ ನಮಗೆ ಹೇಳುತ್ತಿದ್ದಾರೆ. ಮಾನ್ಯ ಸಭಾಪತಿಯವರೇ....

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಸ್ವಾತಂತ್ರ್ಯ ಬಂದಾಗಿನಿಂದ ಕಾಂಗ್ರೆಸ್ ಪಕ್ಷ ಆಡಳಿತ ಮಾಡಿಕೊಂಡು ಬಂದಿದೆ. ಆದರೆ ಇವರಿಗೆ ಒಂದು ವಿರೋಧ ಪಕ್ಷದ ಸ್ಥಾನ ಇವರಿಗೆ ಸಿಕ್ಕಿಲ್ಲ. ಅಧಿಕೃತವಾಗಿ ವಿರೋಧ ಪಕ್ಷದ ಸ್ಥಾನ ಕೂಡ ನಿಮಗೆ ಸಿಕ್ಕಿಲ್ಲ.ಇನ್ನೂ ಇವರಿಗೆ ಬುದ್ಧಿ ಬಂದಿಲ್ಲ.

**ಶ್ರೀ ಸಿದ್ದರಾಮಯ್ಯ:–** ದೆಹಲಿಯಲ್ಲಿ ಏನಾಯಿತು ಎಂದು ನೋಡಿಕೊಳ್ಳಿ. ನಿಮ್ಮ ಪ್ರಧಾನ ಮಂತ್ರಿಗಳು ದೆಹಲಿಗೆ ಹತ್ತು ಬಾರಿ ಹೋಗಿ ಚುನಾವಣಾ ಪ್ರಚಾರ ಮಾಡಿದರು, ಆದರೂ ಅವರಿಗೆ ಸಿಕ್ಕಿದ್ದು ತಿರುಪತಿ ನಾಮ (ಮೂರು ಸ್ಥಾನ), ಈಗ ನಮಗೆ ಹೇಳುತ್ತಿದ್ದೀರಲ್ಲ. ಆದುದರಿಂದ ನಾವು ...

**(ಗೊಂದಲ)**

**ಶ್ರೀ ಸಿದ್ದರಾಮಯ್ಯ:–** ನಾವು ಒಪ್ಪಿಕೊಳ್ಳುತ್ತೇವೆ, ನಾವು ದೆಹಲಿಯಲ್ಲಿ ಒಂದು ಸ್ಥಾನವನ್ನೂ ಗೆದ್ದಿಲ್ಲ. ನಮಗೆ ದೊಡ್ಡ ಹಿನ್ನಡೆಯಾಗಿದೆ. ಆದರೆ ಆದಿಕಾರಕ್ಕೆ ಬಂದ 8 ತಿಂಗಳ ಒಳಗೆ ದೆಹಲಿಯಲ್ಲಿ ಮೂರು ಜನ ಮಾತ್ರ ಗೆದ್ದರು ಎಂದು ಹೇಳುವುದಕ್ಕೆ ಆಗುತ್ತದೆಯೇ?

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳೇ ತಾವು ಮುಂದುವರೆಸಿ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ಅವರಿಗೆ ಕುಳಿತುಕೊಳ್ಳುವುದಕ್ಕೆ ಹೇಳಿ.

(ಗೊಂದಲ)

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರು ವಿಧೇಯಕದ ಬಗ್ಗೆ ಮಾತನಾಡಿ ಎಂದು ಬೇಡಿಕೊಳ್ಳುತ್ತಿದ್ದಾರೆ, ಮಾನ್ಯ ಸಭಾಪತಿಯವರಿಗೆ ನೀವು ಈ ಸ್ಥಿತಿ ತಂದು ಬಿಟ್ಟಿದ್ದೀರಿ.

**Sri K.B. SHANAPPA:** Sir, I am on a point of order.

**Sri SIDDARAMAIAH:** Point of order ಬೇಡ ಕುಳಿತುಕೊಳ್ಳಿ. ಇನ್ನು 5 ನಿಮಿಷದಲ್ಲಿ ನಾನು ಮುಗಿಸುತ್ತೇನೆ ಕುಳಿತುಕೊಳ್ಳಿ. ಇನ್ನು ಮತಕ್ಕೆ ಹಾಕಬೇಕು.

**ಶ್ರೀ ಕೆ.ಬಿ. ಶಾಣಪ್ಪ:-** ಮಾನ್ಯ ಸಭಾಪತಿಯವರೇ ನಾನು point of order raise ಮಾಡಿದರೆ ನೀವು ಮಾತನಾಡುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ನೀವು 5 ನಿಮಿಷದಲ್ಲಿ ಮುಗಿಸಿದರೆ ಸರಿ, ಇಲ್ಲವೆಂದರೆ ನಾನು point of order raise ಮಾಡುತ್ತೇನೆ.

**ಶ್ರೀ ಸಿದ್ದರಾಮಯ್ಯ:-** ಬೇಡ ಬೇಡ ಕುಳಿತುಕೊಳ್ಳಿ. Point ಇಲ್ಲ, order ಇಲ್ಲ ಕುಳಿತುಕೊಳ್ಳಿ. ನಾವು ಹೇಳುವುದೇನೆಂದರೆ ನಾವೆಲ್ಲರೂ ಇದರ ಬಗ್ಗೆ ಕೂಲಂಕಷವಾಗಿ ಚರ್ಚೆಯನ್ನು ಮಾಡಿ, ಒಂದು ತಜ್ಞರ ಸಮಿತಿಯನ್ನು ರಚಿಸಿ, ಅಧಿಕಾರಿಗಳ ಸಮಿತಿಯನ್ನು ರಚಿಸಿ, ಅವರುಗಳಿಂದ ವರದಿಯನ್ನು ತರಿಸಿಕೊಂಡು ರಾಜಕೀಯವಾಗಿ ಯಾವುದೇ ತೀರ್ಮಾನಗಳನ್ನು ಮಾಡಬಾರದು ಎನ್ನುವುದಕೋಸ್ಕರ ವೈಜ್ಞಾನಿಕವಾಗಿ ಎಲ್ಲಾ ವಿವೇಚನೆಗಳನ್ನು ಬಳಸಿ ಇದನ್ನು ಮಾಡುತ್ತಿದ್ದೇವೆ. ಬೆಂಗಳೂರು ಕಾರ್ಪೊರೇಷನ್ ಇವತ್ತು unwieldy ಆಗಿರುವುದರಿಂದ ಬೆಂಗಳೂರಿನ brand name ಹೋಗುವುದಿಲ್ಲ. ಅಥವಾ ಬಹಳಷ್ಟು ಜನರು express ಮಾಡಿರುವ ಹಾಗೆ ಕನ್ನಡಿಗರಿಗೆ ತೊಂದರೆ ಆಗುವುದಿಲ್ಲ. ಬೆಳಗಾವಿಯನ್ನು ಇಲ್ಲಿಗೆ compare ಮಾಡುವುದಕ್ಕೆ ಆಗುವುದಿಲ್ಲ. ಬೆಂಗಳೂರಿನಲ್ಲಿ ಅದ್ಯಾವುದು ಕೂಡ ಆಗುವುದಿಲ್ಲ. Bangalore is a cosmopolitan city. ಬೆಂಗಳೂರು ಕನ್ನಡಿಗರ ರಾಜಧಾನಿ. ಈ ರಾಜಧಾನಿಯ brand ಹಾಗೆಯೇ ಉಳಿಯುತ್ತದೆ. ಆದ್ದರಿಂದ ನಾವು ತಂದಿರುವ ತಿದ್ದುಪಡಿ, ಅತ್ಯಂತ ವಿವೇಚನೆಯಿಂದ, ಆಡಳಿತಾತ್ಮಕ ದೃಷ್ಟಿಯಿಂದ ಇದನ್ನು ಮಾಡುತ್ತಿದ್ದೇವೆ. ನಾವು ಬೆಂಗಳೂರನ್ನು ವಿಭಜನೆ ಮಾಡುವುದಿಲ್ಲ. ಆದರೆ ಬೆಂಗಳೂರಿನ ಆಡಳಿತವನ್ನು decentralize ಮಾಡುತ್ತಿದ್ದೇವೆ. ಇದರಿಂದ effective administration, transparent administration, effective infrastructure development, ಜನರಿಗೆ ಗುಣಮಟ್ಟದ ಜೀವನ ಒದಗಿಸಿಕೊಡುವುದಕೋಸ್ಕರವಾಗಿ ಇದನ್ನು ಮಾಡಲಾಗುತ್ತಿದೆಯೇ

ಹೊರತು ಇದರಲ್ಲಿ ಯಾವುದೇ ರಾಜಕೀಯ ದುರುದ್ದೇಶ ಇಲ್ಲ. ಮತ್ತೆ ನಾವು ಚುನಾವಣೆಯನ್ನು ಮುಂದೂಡಬೇಕೆಂದಾಗಲಿ, ಚುನಾವಣೆಗೆ ಹೆದರಿಕೊಂಡಾಗಲಿ, ಈ ಬಿಲ್ ತರಲಾಗಿದೆ ಎನ್ನುವುದು ರಾಜಕೀಯಪ್ರೇರಿತ ಆರೋಪವೇ ಹೊರತು ಅದರಲ್ಲಿ ಯಾವುದೇ ಸತ್ಯವಿಲ್ಲ. ನಾವು ಈ ಚುನಾವಣೆಯಲ್ಲಿ ಗೆದ್ದೇ ಗೆಲ್ಲುತ್ತೇವೆ. ಆದ್ದರಿಂದ ನ್ಯಾಯಾಲಯ ಕೂಡ Division Bench ನಲ್ಲಿ Single Judge ಆದೇಶವನ್ನು set aside ಮಾಡಿದ್ದಾರೆ. ಆದ್ದರಿಂದ ನಾವು ಬೆಂಗಳೂರಿನ ಜನರ ಹಿತದೃಷ್ಟಿಯಿಂದ ಬೆಂಗಳೂರು ಒಂದು brand name ಆಗಿ ಉಳಿಯಬೇಕು. Bangalore is avery important investors' destination. ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಒಳ್ಳೆಯ infrastructure ನೀಡಬೇಕು, ಗುಣಮಟ್ಟದ ಜೀವನ ನೀಡಬೇಕು., traffic congestion decrease ಆಗಬೇಕು. ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು ಮಾಡಿದ್ದೇವೆ. ಹಾಗಾಗಿ ಈ ತಿದ್ದುಪಡಿಗೆ ರಾಜಕೀಯವಾಗಿ ವಿರೋಧವನ್ನು ಮಾಡುವುದನ್ನು ಬಿಟ್ಟುಬಿಟ್ಟು ಸುಮ್ಮನೆ ಒಪ್ಪಿಕೊಂಡು ಇದನ್ನು ಮಾಡೋಣ. ಮುಂದೆ ಒಳ್ಳೆಯ ಬೆಂಗಳೂರನ್ನು ನೋಡುವ ದಿನಗಳು ಬರುತ್ತವೆ. ತಾವೆಲ್ಲರೂ ಇದಕ್ಕೆ ಒಪ್ಪಿಗೆ ನೀಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2015ರ ಕರ್ನಾಟಕ ನಗರಪಾಲಿಕೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೇ, ನಾನು ಮತ್ತು ಬಸವರಾಜ ಹೊರಟ್ಟಿಯವರು ಈ ವಿಧೇಯಕವನ್ನು ಸಮ್ಮತಿಸದಂತೆ ನಮ್ಮ ಸದನದ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 116ರ ಅನ್ವಯ ಒಂದು ಪ್ರಸ್ತಾವವನ್ನು ತಮಗೆ ಈಗಾಗಲೇ ಸಲ್ಲಿಸಿದ್ದೇವೆ. ಮಾನ್ಯ ಸಭಾಪತಿಗಳು ದಯಮಾಡಿ, ನಿಯಮ 116ರ ಅನ್ವಯ ಸಲ್ಲಿಸಿರುವ ನಮ್ಮ ಪ್ರಸ್ತಾವನೆಯನ್ನು ಪರಿಗಣಿಸಿ ಈ ವಿಧೇಯಕವನ್ನು ಪರಿಶೀಲನೆಗಾಗಿ ಸದನ ಸಮಿತಿಗೆ ಒಪ್ಪಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಗಳೇ, I am on a point of order.

**ಸಭಾಪತಿಯವರು:–** ಇಲ್ಲಿ point of order ಬರುವುದಿಲ್ಲ.

**Sri T.B. JAYACHANDRA:-** I am on a point of order.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೇ, ಇಲ್ಲಿ point of order ಬರುವುದಿಲ್ಲ ಎಂದು ಹೇಳುತ್ತಿದ್ದಾರೆ, ಅವರ ಮಾತಿಗೆ ಗೌರವ ಇಲ್ಲ ಎಂದರೆ ಹೇಗೆ?

**(ಗೊಂದಲ)**

**Sri T.B. JAYACHANDRA:** It's not correct. ...*(Interruptions)*... It's not correct. ...*(Interruptions)*... It's not correct. ...*(Interruptions)*... I am on a point of order.

**ಸಭಾಪತಿಯವರು:–** ಸಚಿವರು ಏನು ಹೇಳಬೇಕೆಂದಿದ್ದಾರೆ ಅದನ್ನು ಹೇಳಲಿ.

**Sri T.B. JAYACHANDRA:** I am on a point of order.

**ಶ್ರೀ ಕೆ.ಬಿ. ಶಾಣಪ್ಪ:–** ಹೊರಟ್ಟಿಯವರು ಮಾತನಾಡಿದ್ದಾರೆ. You have accepted it.

**ಸಭಾಪತಿಯವರು:–** ಸಚಿವರು ಏನು point of order ಹೇಳಬೇಕೆಂದಿದ್ದಾರೆ ಅದನ್ನು ಹೇಳಲಿ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಗಳೇ, ತಮಗೆ ಕಾನೂನನ್ನು ಕೇಳುತ್ತೇವೆ, whether he (Sri T.B. Jayachandra) is eligible to raise a point of order?

**Sri T.B. JAYACHANDRA:** As a Law Minister, I can.

**Sri BASAVARAJA HORATTI:** No, I will ask the Chairman. ಮಾನ್ಯ ಸಭಾಪತಿಗಳೇ, ತಾವು ರೂಲಿಂಗ್ ನೀಡಿದ ಮೇಲೆ ಸಚಿವರಿಗೆ ಮಾತನಾಡಲು ಅವಕಾಶ ಕೊಡಿ. 'Yes or No' ಎಂದು ಹೇಳಿ.

**Sri G. MADHUSUDHAN:** Sir, I am on a point of order.

**(ಗೊಂದಲ)**

**Sri BASAVARAJA HORATTI:** Whether the minister can raise a point of order when he is not a member of this House?

(ಗೊಂದಲ)

**Sri V.S. UGRAPPA:** Mr. Chairman, Sir, here is a point of order. ನನ್ನ point of order…

(ಗೊಂದಲ)

**ಸಭಾಪತಿಯವರು:–** ಈಗ ಹೊರಟ್ಟಿಯವರು ಒಂದು ವಿಚಾರದ ಬಗ್ಗೆ ನನ್ನ ರೂಲಿಂಗ್ ಅನ್ನು ಕೇಳಿದ್ದಾರೆ. ಈ ಸದನದ ಸದಸ್ಯರಲ್ಲದವರು ಸಚಿವರಾಗಿ ಇದ್ದಾರೆ. ಅವರು ಈ ಸದನದ ಸದಸ್ಯರಲ್ಲದ ಕಾರಣಕ್ಕಾಗಿ ಅವರು ಸಚಿವರಾಗಿದ್ದರೂ ಸಹ ಬೇರೆ ಎಲ್ಲಾ ವಿಚಾರದಲ್ಲಿ ಅವರಿಗೆ ಅಧಿಕಾರ ಇದೆ. ಆದರೆ point of order raise ಮಾಡುವುದಕ್ಕೆ ಈ ಸದನದ ಸದಸ್ಯರಲ್ಲದ ಕಾರಣ ಸಚಿವರಿಗೆ ಅಧಿಕಾರ ಇಲ್ಲ ಎಂದು ಹೊರಟ್ಟಿಯವರು ಪ್ರಸ್ತಾಪಿಸಿದ್ದಾರೆ. ಇದರ ಬಗ್ಗೆ ನಾನಿನ್ನು ರೂಲಿಂಗ್ ನೀಡಿರುವುದಿಲ್ಲ. ಬೆಳಗಾವಿಯ ಅಧಿವೇಶನದಲ್ಲಿಯೂ ಈ ವಿಚಾರ ಪ್ರಸ್ತಾಪ ಆದ ಹಿನ್ನಲೆಯಲ್ಲಿ ನಾನು ಇದರ ಬಗ್ಗೆ ಸಾಕಷ್ಟು ಅಧ್ಯಯನ ನಡೆಸಿ, ವಿಮರ್ಶಿಸಿ, ಹಲವಾರು references ನೋಡಿ, Kaul and Shakdher ನೋಡಿ, ರಾಜ್ಯಸಭಾ ಸಚಿವಾಲಯದೊಂದಿಗೆ ಸಮಾಲೋಚಿಸಿ ಇವತ್ತು ಇದರ ಬಗ್ಗೆ ನನ್ನ ತೀರ್ಮಾನವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. "ಈ ಸದನದ ಸದಸ್ಯರಲ್ಲದ ಸಚಿವರಿಗೆ ಈ ಸದನದ ಸದಸ್ಯರ ಎಲ್ಲಾ ರೀತಿಯ ಹಕ್ಕುಗಳು ಇರುತ್ತದೆ, except voting. Voting right ಹೊರತುಪಡಿಸಿ ಉಳಿದೆಲ್ಲ ಅಧಿಕಾರಗಳು ಸಹ ಇರುತ್ತವೆ." ಹೊರಟ್ಟಿಯವರು ಪ್ರಸ್ತಾಪಿಸಿದ ವಿಚಾರಕ್ಕೆ ನನ್ನ ಈ ತೀರ್ಮಾನವನ್ನು ಸದನದ ಗಮನಕ್ಕೆ ತರಬಯಸುತ್ತೇನೆ. You can raise a point of order but you cannot vote on that.

(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರೆಲ್ಲರೂ ಮೇಜು ಗುದ್ದುವ ಮೂಲಕ ತಮ್ಮ ಸಂತಸವನ್ನು ವ್ಯಕ್ತಪಡಿಸಿದರು.)

**Capt. GANESH KARNIK:** Sir, I am on another point of order. Under Rule 329…

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಗಳೇ, ಅವರಿಗಿಂತ ಮೊದಲು ನಾನೊಂದು point of order raise ಮಾಡುವುದಕ್ಕೆ ಅನುಮತಿ ಕೋರಿದ್ದೇನೆ. Mine is first.

**Sri H.D. REVANNA:** Let him convince the Chair on his point of order.

**Sri V.S. UGRAPPA:** Let him convince.

**Capt. GANESH KARNIK:** Rule 329(6) says, *"A member shall not raise a point of order,-*

*(c) when a question on any motion is being put to the Council or…"*

*(Interruptions)*

No, he cannot move. …*(Interruptions)*… He cannot move. …*(Interruptions)*… ಬಿಲ್ move ಮಾಡಿದ ಮೇಲೆ point of order ತರುವುದಕ್ಕೆ ಆಗುವುದಿಲ್ಲ. When a bill is moved, he cannot raise a point of order. …*(Interruptions)*… ಬಿಲ್ move ಮಾಡಿದ ಮೇಲೆ point of order ತರುವುದಕ್ಕೆ ಆಗುವುದಿಲ್ಲ. He cannot raise a point of order.

(ಗೊಂದಲ)

**Sri V.S. UGRAPPA:** Already the Chair has expressed its opinion. That has to be construed as judgment/order.

**ಶ್ರೀ ಟಿ.ಬಿ. ಜಯಚಂದ್ರ:–** ಮಾನ್ಯ ಸಭಾಪತಿಗಳೇ, ಬೆಳಗಾವಿಯ ಅಧಿವೇಶನದಲ್ಲಿಯೂ ಈ ವಿಚಾರ ಪ್ರಸ್ತಾಪ ಆಗಿತ್ತು.

**ಸಭಾಪತಿಯವರು:–** ಅದರ ವಿಚಾರ ಮುಗಿಯಿತು. ಈಗ ಮತ್ತೊಂದು ವಿಚಾರ. ಒಂದು ಬಿಲ್ introduce ಆದ ಮೇಲೆ ಅದು voting process ನಲ್ಲಿರುವಾಗ point of order ಗಳನ್ನು raise ಮಾಡುವುದಕ್ಕೆ ಬರುವುದಿಲ್ಲ ಎಂದು ಅವರು ಹೇಳುತ್ತಿದ್ದಾರೆ. ಇವತ್ತಿನ ಪರಿಸ್ಥಿತಿ ಏನಿದೆ ಎಂದರೆ

(ಗೊಂದಲ)

ಶ್ರೀ ವಿ.ಎಸ್. ಉಗ್ರಪ್ಪ:– ಇವತ್ತು ಯಾವ issue ಇದೆ, ಅವರ motion ಪ್ರಶ್ನೆ ಮಾಡತಕ್ಕ point. We will convince. I will convince the Chair.

**Sri T.B. JAYACHANDRA:** According to Rule 329 of the Rules of Procedure and Conduct of Business in the Karnataka Legislative Council, *"A point of order shall relate to the interpretation or enforcement of these rules or such Articles of the Constitution as to regulate the business of the Council and shall raise a question which is within the cognizance of the Chairman."* Now I am here raising a point. There is an interpretation with regard to the enforcement of rules and Articles of the Constitution. ಅದಕೋಸ್ಕರವೇ ನಾನು ಇವತ್ತು ಇಲ್ಲಿ ನಿಂತಿರುವುದು. ತಾವು ಹೇಳುವ ಹಾಗೆ ನಾನು ಓಟಿಂಗ್‌ನಲ್ಲಿ ಭಾಗವಹಿಸುವುದಿಲ್ಲ. ಈ ಸದನಕ್ಕೆ 110ವರ್ಷಗಳ ಇತಿಹಾಸವಿದೆ ಎಂದು ನಾವು ಹೇಳುತ್ತೇವೆ. Point of order, is particularly only to interpret the Constitutional validity and the rules also. ಯಾವುದೆ ನಿಯಮವಿರಲಿ.. ನಿಯಮ 116ರಲ್ಲಿ ಇದನ್ನು ಮೂವ್ ಮಾಡಿದ್ದಾರೆ... Rule 116 mentions about Select Committee on Bills, Rule 229 relates to Composition of Select Committee Rule 230 relates to Meeting of Select Committee and Rule 231 relates to Notice of Amendments and procedure generally in Select Committee. ರೂಲ್ 234ರನ್ನು ಪ್ರಸ್ತಾಪ ಮಾಡುವುದಕ್ಕಿಂತ ಮುಂಚೆ ಬಹಳ ಮುಖ್ಯವಾದ ಒಂದು ವಿಚಾರವನ್ನು ನಾನು ಹೇಳಲು ಇಷ್ಟಪಡುತ್ತೇನೆ. ನಮ್ಮ ಸಂವಿಧಾನದ ಪ್ರಕಾರ Article *197 relates to Restriction on powers of Legislative Council as to Bills other than Money Bills*

> *"(1) If after a Bill has been passed by the Legislative Assembly of a State having a Legislative Council and transmitted to the Legislative Council*
>
> *(a) the Bill is rejected by the Council; or "*

**ಸಭಾಪತಿಯವರು:–** ಆ ಸಂದರ್ಭ ಇಲ್ಲ ಇವತ್ತು.

**ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಗಳೆ, "*(b) more than three months elapsed from the date on which the Bill is laid before the Council, without the Bill being passed by it; or"*

**ಸಭಾಪತಿಯವರು:–** ಆ ಪರಿಸ್ಥಿತಿಯು ಇಲ್ಲ ಇವತ್ತು.

**ಶ್ರೀ ಟಿ.ಬಿ. ಜಯಚಂದ್ರ:–** ಯಾವ ದಿನಾಂಕದಿಂದ ಎಂದು ಬಂದಾಗ, ಅಲ್ಲಿ ಯಾವತ್ತು ವಿಧೇಯಕವನ್ನು ಮಂಡನೆ ಮಾಡಲಾಗಿರುತ್ತದೆ...

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಇಲ್ಲಿ ಮಂಡನೆ ಮಾಡಿರುವ ದಿನಾಂಕವನ್ನು ಪರಿಗಣಿಸಬೇಕಾಗುತ್ತದೆ.

**ಸಭಾಪತಿಯವರು:–** ಅವರು ಏನು ಹೇಳುತ್ತಾರೆ ಎನ್ನುವುದನ್ನು ಮೊದಲು ಕೇಳಿ.

**ಶ್ರೀ ಟಿ.ಬಿ. ಜಯಚಂದ್ರ:–** ಮಾನ್ಯ ಸಭಾಪತಿಗಳೆ, ಅವರು ಏನು ಹೇಳುತ್ತಾರೆ ಹೇಳಲಿ ಬಿಡಿ. ನಾನು ಮಾತನಾಡಲು ಸ್ವಲ್ಪ ಅವಕಾಶವನ್ನು ಕೊಡಿ. ಅಲ್ಲಿ ಬಿಲ್ ಮಂಡನೆಯಾಗಿರುವುದು ಮುಖ್ಯ ಎನ್ನುವುದು ಸಂವಿಧಾನದಲ್ಲಿ ಇದೆ. Article.197 ಅನ್ನು ಎಲ್ಲರೂ ಒಪ್ಪುತ್ತೀರಿ. ನಮ್ಮ ನಿಯಮಾವಳಿಗಳನ್ನು ಮಾಡಿರುವುದು ಅನುಚ್ಛೇಧ.208ರ ಪ್ರಕಾರ. ಅನುಚ್ಛೇಧ.208ರಲ್ಲಿ

*"208. Rules of procedure*

*(1) A House of the Legislature of a State may make rules for regulating subject to the provisions of this Constitution, its procedure and the conduct of its business"*

ಅಂದರೆ ಸಂವಿಧಾನದ ಚೌಕ್ಕಟ್ಟಿನ ಒಳಗೆ ನಿಯಮಗಳನ್ನು ಮಾಡಬಹುದು ಎಂದು.

"*(2) Until rules are made under clause ( 1 ), the rules of procedure and standing orders in force immediately before the commencement of this Constitution with respect to the Legislature for the corresponding Province shall have effect in relation to the Legislature of the State subject to such modifications and adaptations as may be made therein by the Speaker of the Legislative Assembly, or the Chairman of the Legislative Council, as the case may be*

*(3) In a State having a Legislative Council the Governor, after consultation with the Speaker of the Legislative Assembly and the Chairman of the legislative Council, may make rules as to the procedure with respect to communications between the two Houses."*

ಅನುಚ್ಛೇಧ.208ರ ಪ್ರಕಾರ ಸಂವಿಧಾನವು ಹೇಳಿರುವ ಪ್ರಕಾರವೇ ನಿಯಮಗಳನ್ನು ರಚಿಸಬೇಕು ಎನ್ನುವುದು ಸಂವಿಧಾನದ ಆಶಯ. ಸಂವಿಧಾನದ ಆಶಯದಂತೆ ಏನಾದರು ಆಗಿದೆಯೇ ಎಂದು ಕೇಳಿದರೆ, ನಿಯಮ 234 ಏನು ಹೇಳುತ್ತದೆ ಎಂದರೆ,

*(1) As soon as may be, after a Bill has been referred to a Select Committee, the Select Committee shall meet, from time to time, in accordance with rule 200 to consider the Bill and shall make a report thereon within the time fixed by the Council;*

*Provided that where the council has not fixed any time for the presentation of the report, the report shall be presented before the expiry of three months from the date on which….."*

**(ಗೊಂದಲ)**

ನಾನು ಓದುತ್ತಿದ್ದೇನೆ. ಸ್ವಲ್ಪ ಕೇಳಿ. ನಾನು ಇನ್ನು ಪೂರ್ತಿ ಮಾಡಿಲ್ಲ.

**(ಗೊಂದಲ)**

**ಶ್ರೀ ಆರ್.ಕೆ. ಸಿದ್ದರಾಮಣ್ಣ:–** ಇನ್ನು ಪರಿಶೀಲನಾ ಸಮಿತಿಯೇ ನೇಮಕವಾಗಿಲ್ಲ. ಅದರ ಮುಂದಿನ ವರದಿ ಬಗ್ಗೆ ಪ್ರಸ್ತಾಪ ಮಾಡುವುದು ಏನು ಇದು?

**ಶ್ರೀ ಟಿ.ಬಿ. ಜಯಚಂದ್ರ:–** ನಾನು ಇನ್ನು ಪೂರ್ತಿ ಮಾಡಿಲ್ಲ. ನಾನು ಹೇಳುವುದನ್ನು ಕೇಳಿ ಮೊದಲು.

**(ಗೊಂದಲ)**

**ಸಭಾಪತಿಯವರು:–** ಎಲ್ಲರೂ ಕುಳಿತುಕೊಳ್ಳಿ. ಒಳ್ಳೆಯ ಚರ್ಚೆಯಾಗುತ್ತಿದೆ.

**ಶ್ರೀ ಕೆ.ಬಿ. ಶಾಣಪ್ಪ:–** ಬಿಲ್ ತೆಗೆದುಕೊಂಡು ಬಂದಿಲ್ಲ.

**(ಗೊಂದಲ)**

**ಸಭಾಪತಿಯವರು:–** ಕುಳಿತುಕೊಳ್ಳಿ ಅವರು ಏನು ಹೇಳುತ್ತಾರೆ ಕೇಳೋಣ. ಸರಿ ಮಾಡೋಣ. ಕುಳಿತುಕೊಳ್ಳಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಗಳೆ, ನನ್ನ ಪಾಯಿಂಟ್ ಆಫ್ ಆರ್ಡರ್ ಇದೆ. ತಾವು ಇನ್ನು ರೂಲಿಂಗ್ ಕೊಟ್ಟಿರುವುದಿಲ್ಲ.

**ಸಭಾಪತಿಯವರು:–** ಆಯಿತು ಕುಳಿತುಕೊಳ್ಳಿ.

**ಶ್ರೀ ಟಿ.ಬಿ. ಜಯಚಂದ್ರ:–** ಮಾನ್ಯ ಸಭಾಪತಿಗಳೆ, Rule 234 (1) further reads thus;

> *"...from the date on which the Council adopted the motion for the reference of the Bill to the Select Committee or if a session*

*of the Council is not held within three months, at the next session:"*

ವಿಧಾನಸಭೆಯಲ್ಲಿ ಯಾವಾಗ ವಿಧೇಯಕ ಮಂಡನೆಯಾಗಿರುತ್ತದೆ ಅವತ್ತಿನಿಂದ ಮೂರು ತಿಂಗಳು ಎಂದು ಸಂವಿಧಾನದಲ್ಲಿ ಹೇಳಲಾಗಿದೆ. ಈ ನಿಯಮ ಏನು ಹೇಳುತ್ತದೆ. ಎಂದರೆ, *from the date on which the Council adopted...*

**(ಗೊಂದಲ)**

**ಸಭಾಪತಿಯವರು:–** ಎಲ್ಲರೂ ಕುಳಿತುಕೊಳ್ಳಿ. ಅವರು ಏನು ಹೇಳುತ್ತಾರೆ ಹೇಳಲಿ. ಅವರು ಹೇಳಲಿ ಬಿಡಿ. ರೂಲಿಂಗ್ ಕೊಡುವವನು ನಾನು. ತೀರ್ಮಾನ ಕೊಡುವವನು ನಾನು.

**ಶ್ರೀ ಬಸವರಾಜ ಹೊರಟ್ಟಿ:–** ಇದಕ್ಕೆ ಅನುಮತಿ ಕೊಡುವುದು ತಪ್ಪು ಎನ್ನಿಸುತ್ತದೆ.

**(ಗೊಂದಲ)**

**ಶ್ರೀ ಟಿ.ಬಿ. ಜಯಚಂದ್ರ:–** ಇವರ ಸಲಹೆ ನನಗೆ ಬೇಕಾಗಿಲ್ಲ. ನಾನು ಹೇಳುವುದನ್ನು ಹೇಳುತ್ತೇನೆ. ನಂತರ ಅವರು ಮಾತನಾಡಲಿ.

**ಶ್ರೀ ಎಚ್.ಎಂ. ರೇವಣ್ಣ:–** ಅವರು ಪಾಯಿಂಟ್ ಆಫ್ ಆರ್ಡರ್ ಮೇಲೆ ಮಾತನಾಡುತ್ತಿದ್ದಾರೆ. ಆ ಮೇಲೆ ನೀವು ಹೇಳಿ.

**Sri SIDDARAMAIAH:-** You have got all the opportunities. ಅವರು ಹೇಳಿದ ಮೇಲೆ ನೀವು ಹೇಳಿ.

**(ಗೊಂದಲ)**

**ಸಭಾಪತಿಯವರು:–** ಈಗ ಅವರ ಅಪೇಕ್ಷೆ ಏನು ಎನ್ನುವುದನ್ನು ಕೇಳೋಣ. ನೀವು ಮಾತನಾಡಿ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಗಳೆ, ತಾವು ಹೇಗೆ ಇದಕ್ಕೆ ಅನುಮತಿ ಕೊಡುತ್ತೀರಿ? ನೀವು ಮಾಡುವುದು ತಪ್ಪು. ಕಾನೂನು ಬಿಟ್ಟು ಹೇಗೆ ಮಾಡುತ್ತೀರಿ ನೀವು. ನೀವು ಮಾಡುತ್ತಿರುವುದೇ ತಪ್ಪು.

**ಸಭಾಪತಿಯವರು:–** ಅವರು ಏನು ಹೇಳುತ್ತಾರೆ ಕೇಳಿ. ರೂಲಿಂಗ್ ಕೊಡುವವನು ನಾನು.

**ಶ್ರೀ ಬಸವರಾಜ ಹೊರಟ್ಟಿ:–** ನೀವು ಅನುಮತಿ ಕೊಡುವುದೇ ತಪ್ಪು. ಕಾನೂನು ಬಿಟ್ಟು ಹೇಗೆ ಹೋಗುತ್ತೀರಿ ನೀವು?

**ಸಭಾಪತಿಯವರು:–** ಅವರು ಏನು ಹೇಳುತ್ತಾರೆ ಕೇಳಿ.

**ಶ್ರೀ ಬಸವರಾಜ ಹೊರಟ್ಟಿ:–** ಅದು ಹೇಗೆ ಆಗುತ್ತದೆ. ಕಾನೂನನ್ನು ಗೌರವಿಸಬೇಕು. ಇದೇನು ಮನೆಯಲ್ಲ.

**ಸಭಾಪತಿಯವರು:–** ಮಂತ್ರಿಗಳೆ ತಾವು ಪೂರ್ತಿ ಮಾಡಿ ಇಲ್ಲದಿದ್ದರೆ ನಾನು ರೂಲಿಂಗ್ ಕೊಡಬೇಕಾಗುತ್ತದೆ.

**ಶ್ರೀ ಬಸವರಾಜ ಹೊರಟ್ಟಿ:–** ಹೇಗೆ ಬೇಕು ಹಾಗೆ ಮಾಡಲು ಆಗುವುದಿಲ್ಲ.

**ಶ್ರೀ ಟಿ.ಬಿ. ಜಯಚಂದ್ರ:–** ಮಾನ್ಯ ಸಭಾಪತಿಗಳೆ, Rule 234 (1) says as follows:-

> *"Provided further that the Council may, at any time, on a motion being made, direct that the time for the presentation of the report by the Select Committee be extended to a date specified in the motion."*

ಈ ವಿಚಾರ ಸಂವಿಧಾನದಲ್ಲಿ ಇಲ್ಲ. ಇಲ್ಲಿಯ ನಿಯಮದಲ್ಲಿ ಸೇರಿದೆ.

**ಸಭಾಪತಿಯವರು:–** ಅದಕ್ಕೆ ಈಗ ಏನು ಮಾಡಬೇಕು?

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ನಾವು ಪ್ರಸ್ತಾವವನ್ನು ಮೂವ್ ಮಾಡಿದ್ದೇವೆ. ಮಾಡಲು ಆಗುವುದಿಲ್ಲ ಎಂದು ನೀವು ಹೇಳುತ್ತೀರಿ. He cannot move it.

**(ಗೊಂದಲ)**

**ಶ್ರೀ ಟಿ.ಬಿ. ಜಯಚಂದ್ರ:–** ಮಾನ್ಯ ಸಭಾಪತಿಗಳೆ, ಸಂವಿಧಾನಕ್ಕೆ ವಿರುದ್ಧವಾದ ರೀತಿಯಲ್ಲಿ ಈ ನಿಯಮಗಳನ್ನು ರಚಿಸಲು ಈ ಮನೆಗೆ ಅವಕಾಶವಿಲ್ಲ.

**(ಗೊಂದಲ)**

**ಶ್ರೀ ಅರುಣ ಶಹಾಪುರ:–** ರೂಲಿಂಗ್ ಕೊಡಿ ತಾವು.

**(ಗೊಂದಲ)**

**ಶ್ರೀ ಎಚ್.ಡಿ. ರೇವಣ್ಣ:–** ನೀವು ಹೇಳಿದ ತಕ್ಷಣ ರೂಲಿಂಗ್ ಕೊಡುತ್ತಾರೆಯೇ?

**ಶ್ರೀ ಟಿ.ಬಿ. ಜಯಚಂದ್ರ:–** ಮಾನ್ಯ ಸಭಾಪತಿಗಳೆ, ನಾನು ಕೌಲ್ ಅಂಡ್ ಶಕ್ಧರ್ ಪುಸ್ತಕದ ಪುಟ:826 ರಲ್ಲಿನ ಅಂಶಗಳನ್ನು ಓದುತ್ತೇನೆ.

**(ಗೊಂದಲ)**

**ಸಭಾಪತಿಯವರು:–** ಅವರು ಹೇಳಿ ಮುಗಿಸಿದ ಮೇಲೆ ನಾನು ರೂಲಿಂಗ್ ಕೊಡುತ್ತೇನೆ.

**(ಗೊಂದಲ)**

**ಸಭಾಪತಿಯವರು:–** ಮಂತ್ರಿಗಳು ಹೇಳಿ ಮುಗಿಸಿದ ಮೇಲೆ ನೀವು ಹೇಳಿ ನಿಮಗೆ ಅವಕಾಶ ಕೊಡುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:–** ನೀವು ಅನುಮತಿ ಕೊಟ್ಟಿರುವುದೇ ತಪ್ಪು ಎಂದು ನಾನು ಹೇಳುತ್ತೇನೆ.

**ಶ್ರೀ ಟಿ.ಬಿ. ಜಯಚಂದ್ರ:–** ಕೇಳಿದ ತಕ್ಷಣ ರೂಲಿಂಗ್ ಕೊಡಲು ಆಗುವುದಿಲ್ಲ.

**(5–30 ಗಂಟೆ)**

**(ಗೊಂದಲ)**

**ಶ್ರೀ ಟಿ.ಬಿ. ಜಯಚಂದ್ರ:–** ನಾವು ಯಾವಾಗ......

**ಶ್ರೀ ಬಸವರಾಜ ಹೊರಟ್ಟಿ:–** ಅದನ್ನೇ ನಾನುತಪ್ಪು ಎಂದು ಹೇಳುತ್ತಿದ್ದೇನೆ.

**ಸಭಾಪತಿಯವರು:–** ಅವರ ಮಾತು ಮುಗಿದ ಮೇಲೆ ತಮಗೂ ಅವಕಾಶ ಕೊಡುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:-** ತಾವು ಮಾತನಾಡಲು ಅವಕಾಶ ಕೊಟ್ಟಿದ್ದೇ ತಪ್ಪು ಎಂದು ಹೇಳುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ತಮ್ಮ ತೀರ್ಪನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಒಂದು Bill introduce ಮಾಡಿದ ಮೇಲೆ ಈ ರೀತಿ ಮಧ್ಯೆ ಚರ್ಚೆಗೆ ಅವಕಾಶ ಕೊಡುವುದು ಸಾಧ್ಯವಿಲ್ಲ.

**(ಗೊಂದಲ)**

**ಶ್ರೀ ಟಿ.ಬಿ. ಜಯಚಂದ್ರ:-** ಅವರು ಮಿಲಿಟರಿಯಲ್ಲಿದ್ದವರು ಈ ರೀತಿ ಮಾಡಿದರೆ ಹೇಗೆ? ಇದುಕಾನೂನು!.

**ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಹೇಳಿದ್ದು ನನಗೆ ಅರ್ಥವಾಯಿತು. ಇದು ಸಂವಿಧಾನದ ಪ್ರಕಾರ ತಪ್ಪು ಎಂದು ಹೇಳುತ್ತಿದ್ದೀರಿ.

**Sri T.B. JAYACHANDRA:-** Sir, you can't presume things.

**ಸಭಾಪತಿಯವರು:-** ಮಾನ್ಯ ಸಚಿವರೇ, ಅದುಏನುಎಂಬುದನ್ನು ಹೇಳಿದ್ದೀರಿ. I want you to conclude. Now, I will pass the ruling.

**(ಗೊಂದಲ)**

**Capt. GANESHKARNIK:-** Sir, we have the right to move the resolution.

**Sri T.B. JAYACHANDRA:-** Sir, page 826 of Practice and Procedure of Parliament by M.N. Kaul&S.L. Shakdher reads thus; **"*Select or Joint Committees on Bills*** - *On a motion moved in, and adopted by the House, Bills are from time to timereferred to Select Committees composed of members specifically named in the motion. Bills may likewise be referred to Joint Committees, with the concurrence of the RajyaSabha, composed of members of*

*both the Houses. Such Select or Joint Committees are ad hoc Committees which are appointed for consideration of particular Bills referred to them…"*

**(ಗೊಂದಲ)**

**ಶ್ರೀ ಆರ್.ವಿ. ವೆಂಕಟೇಶ್:–** ಅವರು ಮುಕ್ತಾಯ ಮಾಡಲು ಅವಕಾಶವನ್ನೇ ಕೊಡುತ್ತಿಲ್ಲ. ಅವರು ಮುಕ್ತಾಯ ಮಾಡಲು ವಾತಾವರಣ ಸರಿಯಿರಬೇಕಲ್ಲವೇ?

**ಶ್ರೀ ವೈ.ಎ. ನಾರಾಯಣಸ್ವಾಮಿ:–** ನಿಯಮ 116 ಒಪ್ಪಿಕೊಂಡು ಏನು ಸಾರ್......

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಎಲ್ಲವೂ ತಪ್ಪು.....

**Sri T.B. JAYACHANDRA:-** Page 826 further reads as follows; "…*Select or Joint Committees on Bills are appointed at the first stage of the second reading of a Bill in the House. At this stage, the member in-charge of the Bill mayhimself move that the Bill be referred to a Select Committee of the House or to aJoint Committee of the Houses with the concurrence of the RajyaSabha. If themotion moved by the member in-charge is that the Bill be taken into consideration,any other member may move an amendment for the reference of the Bill to a Select*or Joint Committee…"

**(ಗೊಂದಲ)**

**ಶ್ರೀ ಕೆ.ಬಿ. ಶಾಣಪ್ಪ:–** ಇದಕ್ಕೆ ಮಾನ್ಯ ಸಭಾಪತಿಯವರು ಅನುಮತಿ ಕೊಡಲೇಬಾರದು. ತಮ್ಮ ಮಾತನ್ನು ಕೇಳುತ್ತಿಲ್ಲ......

**(ಗೊಂದಲ)**

**ಸಭಾಪತಿಯವರು:–** ಆಯಿತು ಮುಗಿಸಿ, ತಾವು ಎಷ್ಟು ಸಮಯ ಹೇಳುತ್ತೀರಿ ಸಾರ್, ಪಾಯಿಂಟ್ ಆಫ್ ಆರ್ಡರ್‌ಗೆ ಇಷ್ಟು ಸಮಯ ಮಾಡಿದರೆ ಹೇಗೆ? ನಾನು ರೂಲಿಂಗ್ ಕೊಡುವುದು ಬೇಡವೇ?

**(ಗೊಂದಲ)**

**ಶ್ರೀ ಆರ್.ವಿ. ವೆಂಕಟೇಶ್:–** ಅವರು ಹೇಳುತ್ತಿರುವುದನ್ನು ತಾವು ಕೇಳಿಸಿಕೊಳ್ಳುತ್ತಿಲ್ಲ, ಆಯಿತಲ್ಲ, ಆಯಿತಲ್ಲ ಎಂದು ಹೇಳುತ್ತಿದ್ದೀರಿ.

**Sri T.B. JAYACHANDRA:-** Sir,Page 827 reads thus; "...***Membership of Select Committee-*** *The names of members proposed to be appointed on a Select Committee are set out, as already stated, in the motion of reference itself."* ಅಂದರೆ ಮೊದಲನೆಯ ಪ್ಯಾರಾದಲ್ಲಿ ಹೇಳಿರುವ ರೆಫರೆನ್ಸ್‌ಗೆ ಸೆಲೆಕ್ಟ್ ಕಮಿಟಿ ಮಾಡಲು ಹೆಸರುಗಳನ್ನು ಕೊಡಬೇಕು. "*The membership of Select Committees is not fixed. It may vary from Committee to Committee, but the normal membership is between 30 and 35…"*

**ಶ್ರೀ ಕೆ.ಬಿ. ಶಾಣಪ್ಪ:–** ಸಮಿತಿ ರಚನೆ ಆಗಿಲ್ಲ ಎಂದು ನಾವು ಹೇಳುತ್ತಿದ್ದೇವೆ.

**(ಗೊಂದಲ)**

**ಸಭಾಪತಿಯವರು:–** ತಾವು ಮುಗಿಸುವುದಿಲ್ಲವೇ? ಎಷ್ಟೊತ್ತು ಮಾತನಾಡುತ್ತೀರಿ ಸಾರ್?

**Sri T.B. JAYACHANDRA:-** Sir, *The membership of Select Committees is not fixed.* ಸಂವಿಧಾನಕ್ಕೆ ವಿರುದ್ಧವಾದ ನಿಯಮಗಳುಇವೆ,

**ಸಭಾಪತಿಯವರು:–** ಆಯಿತು. I will look into it.

**ಶ್ರೀ ಟಿ.ಬಿ. ಜಯಚಂದ್ರ:–** ಸಂವಿಧಾನಕ್ಕೆ ವಿರುದ್ಧವಾದ ನಿಯಮಗಳು ಇವೆ, ಕೌಲ್ ಅಂಡ್ ಶಕ್ಧರ್ ಪುಸ್ತಕದಲ್ಲಿ ಹೇಳಿರುವುದು, ಯಾವತ್ತೂ ಕೂಡ ಒಂದು convention... ನಾವು ಯಾವುದೇ ಸಂದರ್ಭದಲ್ಲಿಯೂ ನಿಯಮಾವಳಿಗಳಲ್ಲಿ ಇಲ್ಲದೇ ಇರುವ ಸಂದರ್ಭದಲ್ಲಿ ಲೋಕಸಭೆಯಲ್ಲಿ ಆಗಿರುವ ಹಿನ್ನೆಲೆಯಲ್ಲಿ ಅದು ಕೌಲ್ ಅಂಡ್ ಶಕ್ದರ್‌ನಲ್ಲಿ ಇದೆ. This notice is entirely defective.

**ಸಭಾಪತಿಯವರು:–** ಆಯಿತು ಬಿಡಿ, ನಾನು ರೂಲಿಂಗ್ ಕೊಡುತ್ತೇನೆ.

**ಕ್ಯಾಪ್ಟನ್‌ಗಣೇಶ್‌ಕಾರ್ಣಿಕ್:–** ನೋಟೀಸ್ ಕೊಡಬೇಕೆಂದೇನೂ ಇಲ್ಲ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಹೇಳೋದು ಬೇಡವೇ? ........ ಇಷ್ಟೊತ್ತು ಕೇಳುತ್ತೀರಾ?

**ಶ್ರೀ ಟಿ.ಬಿ. ಜಯಚಂದ್ರ:–** ಅವರು ಹೆಸರುಗಳನ್ನು ಕೊಡಬೇಕಾಗಿತ್ತು, ಅದನ್ನು ಸರ್ಕಾರ ಒಪ್ಪಬೇಕಾಗಿತ್ತು. ಯಾವುದೇ ರೀತಿಯಲ್ಲಿ ಈ ರೀತಿಯ ಡಿಫೆಕ್ಟೀವ್ ಮೋಷನ್ ಅನ್ನು ಮೂವ್ ಮಾಡುವುದಕ್ಕೆ ಬರುವುದಿಲ್ಲ, ಅದು ರಿಜೆಕ್ಟ್ ಆಗುತ್ತದೆ. ಆಟೋಮ್ಯಾಟಿಕಲಿ ಅದು ರಿಜೆಕ್ಟ್ ಆಗುತ್ತದೆ. ದಯಮಾಡಿ ಇವತ್ತು ನಮ್ಮ ಮುಂದೆ ಕೆಳಮನೆಯಿಂದ ಒರಿಜಿನೇಟ್ ಆಗಿರುವ ಬಿಲ್ ಅನ್ನು ವೋಟಿಂಗ್‌ಗೆ ಹಾಕಬೇಕೆಂದು ವಿನಂತಿ ಮಾಡುತ್ತೇನೆ.

**ಸಭಾಪತಿಯವರು:–** ಅವರು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದಾರೆ.

**Sri T.B. JAYACHANDRA:-** This is not in order andentirely defective.

**ಸಭಾಪತಿಯವರು:–** ಅವರು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿ ಅದಕ್ಕೆ ಪೂರಕವಾಗಿ ಕೆಲವಾರು ವಿಷಯಗಳನ್ನು ನನ್ನ ಗಮನಕ್ಕೆ ತಂದಿದ್ದಾರೆ. ಆದರೆ ನಾನು ಸಭಾಪತಿಯಾಗಿ ನಮ್ಮ ಮುಂದೆ ಇರುವ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಗಳ ನಿಯಮಗಳ ಪುಸ್ತಕದ ಪ್ರಕಾರ ಹೋಗುತ್ತೇನೆ. ಅದರ ಪ್ರಕಾರ ನಿಯಮ 116ರಲ್ಲಿ ಬಹಳ ಸ್ಪಷ್ಟವಾಗಿ ಹೇಳುತ್ತಾರೆ. '......*After the motion that the Bill be taken into consideration is* carried,*...'* It is carried. ಅದು' ಹೌದು ' ಎನ್ನುವವರ ಪರವಾಗಿಇದೆ. ಅದನ್ನು ಒಪ್ಪಿದ್ದಾರೆ. '.. . . .*any member may move that the Bill be referred to a Select Committee...'* ಈಗ ಇದನ್ನು ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಲು ಒಬ್ಬರಲ್ಲದೇ ಇಬ್ಬರು ಮೂವ್ ಮಾಡಿದ್ದಾರೆ. ಇಬ್ಬರು ಅದರ ಪ್ರಕಾರವೇ ಮಾಡಿದ್ದಾರೆ. '*...and if such a motion is carried...'* ಅಂದರೆ ಇನ್ನು ಕ್ಯಾರಿ ಆಗಿದೆಯೋ, ಇಲ್ಲವೊ ಗೊತ್ತಿಲ್ಲ. ಸಭೆ ಒಪ್ಪುತ್ತದೋ ಇಲ್ಲವೋ ಗೊತ್ತಿಲ್ಲ. ಇಲ್ಲಿ '*if*' ಎನ್ನುವ ಪದಉಪಯೋಗಿಸಿದ್ದಾರೆ. '....*if such a motion is carried the Bill shall be referred to a Select Committee and the rules regarding Select Committee...'* ಏನೇನು ಮಾಡಬೇಕು ಎನ್ನುವುದನ್ನು ನಿಯಮ 83ರಲ್ಲಿ ಹೇಳಿರುವ ಪ್ರಕಾರ ಮಾಡಿ ಎಂದು ಹೇಳಿದ್ದಾರೆ. ನಾನು ನಿಯಮ 83 ಮತ್ತು ನಿಯಮ 116 ಎರಡೂ ನಿಯಮಗಳನ್ನು ನೋಡಿದ್ದೇನೆ. ಈ ಹಿನ್ನೆಲೆಯಲ್ಲಿ ಈ ಪುಸ್ತಕದಲ್ಲಿರುವ ಯಾವುದೇ ನಿಯಮ ತಪ್ಪಿದ್ದರೆ......

**ಶ್ರೀ ಟಿ.ಬಿ. ಜಯಚಂದ್ರ:–** ಮಾನ್ಯ ಸಭಾಪತಿಯವರೇ......

**ಶ್ರೀ ಕೆ.ಎಸ್. ಈಶ್ವರಪ್ಪ:–** ರೂಲಿಂಗ್ ಕೊಡಬೇಕಾದರೆ ಮಾತನಾಡಬಹುದೇ?

**(ಗೊಂದಲ)**

**Mr CHAIRMAN:-** I will not allow. Now I am pronouncing my judgment. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ......

**(ಗೊಂದಲ)**

**ಸಭಾಪತಿಯವರು:–** ಈ ನಿಯಮಾವಳಿಗಳ ಪುಸ್ತಕದಲ್ಲಿ ಯಾವುದಾದರೂ ತಪ್ಪುಗಳು ಇದ್ದರೆ, ನಿಯಮಾವಳಿಗಳ ಪುಸ್ತಕ ರಾಜ್ಯಾಂಗಕ್ಕೆ ವಿರೋಧವಾಗಿದೆ ಎನ್ನುವುದು ಇದ್ದರೆ ಮಾನ್ಯ ಕಾನೂನು ಸಚಿವರು ಅಥವಾ ಯಾರೇ ಆದರೂ ಅದಕ್ಕೆ ಪ್ರತ್ಯೇಕ Motion ತಂದರೆ ಅದರ ಬಗ್ಗೆ ನಾನು consideration ಮಾಡುತ್ತೇನೆ. ಅದು ತೀರ್ಮಾನವಾಗುವವರೆಗೂ ಈ ನಿಯಮಾವಳಿಗಳ ಪುಸ್ತಕವೇ ನನಗೆ ಗೈಡ್. ಈ ನಿಯಮಾವಳಿಗಳ ಪ್ರಕಾರ it is valid. ಸೆಲೆಕ್ಟ್ ಕಮಿಟಿಗೆ ರೆಫರ್ ಆಗಿರುವ ರೆಸಲ್ಯೂಷನ್........

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರೆಲ್ಲರೂ ಸಭಾಪತಿಯವರ ತೀರ್ಪನ್ನು ಮೇಜು ಕುಟ್ಟಿ ಸ್ವಾಗತಿಸಿದರು)**

**ಶ್ರೀ ಟಿ.ಬಿ. ಜಯಚಂದ್ರ:–** ಅಂದರೆ ನಮಗೆ ಸಂವಿಧಾನವೂ ಬೇಡವೇ?, .......

**Mr CHAIRMAN:-** I will go by Rules of Procedure.

**ಶ್ರೀ ಕೆ.ಎಸ್. ಈಶ್ವರಪ್ಪ:–** ತಾವು ಕೊಡುತ್ತಿರುವ ರೂಲಿಂಗ್ ಅನ್ನು ಪ್ರಶ್ನೆ ಮಾಡುತ್ತಿದ್ದಾರೆ. ಇವರು ಕಾನೂನು ಮಂತ್ರಿಯೇ? ತಮ್ಮ ರೂಲಿಂಗ್ ಅನ್ನು ಪ್ರಶ್ನೆ ಮಾಡುತ್ತಿದ್ದಾರೆ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ,

**(ಗೊಂದಲ)**

**ಸಭಾಪತಿಯವರು:–** ಆಯಿತು, ಬಿಡಿ, ನಾನು ರೂಲಿಂಗ್ ಕೊಟ್ಟಿದ್ದೇನೆ.

ಪ್ರಸ್ತಾವ ಏನೆಂದರೆ, "ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 'ಕರ್ನಾಟಕ ನಗರಪಾಲಿಕೆಗಳ ತಿದ್ದುಪಡಿ ವಿಧೇಯಕ, 2015' ನ್ನು ಪರಿಶೀಲನಾ ಸಮಿತಿಗೆ ಒಪ್ಪಿಸಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಸದಸ್ಯರಾದ ಬಸವರಾಜ ಹೊರಟ್ಟಿಯವರು ಮಂಡಿಸಿರುವ ಪ್ರಸ್ತಾವನೆಯನ್ನು ಮತಕ್ಕೆ ಹಾಕುತ್ತಿದ್ದೇನೆ."

ಪ್ರಸ್ತಾವದ ಪರವಾಗಿರುವವರು 'ಹೌದು' ಎಂದು ಸೂಚಿಸುವುದು

ಪ್ರಸ್ತಾವದ ವಿರೋಧವಾಗಿರುವವರು 'ಇಲ್ಲ' ಎಂದು ಸೂಚಿಸುವುದು

ಪ್ರಸ್ತಾವ 'ಹೌದು' ಎನ್ನುವವರ ಪರವಾಗಿದೆ ಹಾಗೂ ಪ್ರಸ್ತಾವವು ಅಂಗೀಕೃತವಾಗಿದೆ.

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು ಹಾಗೂ ವಿಧೇಯಕವನ್ನು ಪರಿಶೀಲನಾ ಸಮಿತಿಗೆ ಒಪ್ಪಿಸಲಾಯಿತು

(ಈ ಹಂತದಲ್ಲಿ ಸದನದಲ್ಲಿ ರಾಷ್ಟ್ರಗೀತೆಯನ್ನು ನುಡಿಸಲಾಯಿತು)

(ಸದನವನ್ನು ಸಂಜೆ 5 ಗಂಟೆ 38 ನಿಮಿಷಕ್ಕೆ ಅನಿರ್ದಿಷ್ಟ ಅವಧಿಗೆ ಮುಂದೂಡಲ್ಪಟ್ಟಿತು)